ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಶಿಲ್ಪಕಲೆ

(ಶಿಲ್ಪಕಲಾ ಅಕಾಡೆಮಿಯ ೨೦೧೬-೧೨ ಸಾಲಿನ ಪ.ಜಾತಿ /ಪ.ಪಂಗಡದ ವಿಶೇಷ ಘಟಕ ಯೋಜನೆಯಡಿ ಫೆಲೋಶಿಪ್‌ಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ)



ಸಂಶೋಧಕ:
ಡಿ.ಆರ್.ಸುರೇಂದ್ರನಾಥ

ಮಾರ್ಗದರ್ಶಕರು:
ಎಲ್.ಶಿವಲಿಂಗಪ್ಪ

ಕರ್ನಾಟಕ
ಶಿಲ್ಪಕಲಾ ಅಕಾಡೆಮಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಚಾಲುಕ್ಯ ವಿಭಾಗ, ಕನ್ನಡ ಭವನ,
ಜೆ.ಸಿ.ರಸ್ತೆ, ಬೆಂಗಳೂರು-೦೨

೨೦೧೨

ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಶಿಲ್ಪಕಲೆ.

ಸಂಶೋಧಕ

ಡಿ.ಆರ್.ಸುರೇಂದ್ರನಾಥ

ಮಾರ್ಗದರ್ಶಕರು

ಎಲ್.ಶಿವಲಿಂಗಪ್ಪ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಚಾಲುಕ್ಯ ವಿಭಾಗ, ಕನ್ನಡ ಭವನ

ಜೆ. ಸಿ.ರಸ್ತೆ, ಬೆಂಗಳೂರು-೨೦೧೭

ಪ್ರಮಾಣ ಪತ್ರ

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಶಿಲ್ಪಕಲೆ ಎಂಬ ಶಿರ್ಷಿಕೆಯ ಸಂಶೋಧನ ಪ್ರಬಂಧವನ್ನು **ಶ್ರೀಎಲ್.ಶಿವಲಿಂಗಪ್ಪ** ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಫೇಲೋಶಿಪ್ ಸಂಬಂಧವಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ದಿನಾಂಕ: 16/2/18

ಸ್ಥಳ: ಚಿತ್ರದುರ್ಗ

(ಡಿ.ಆರ್.ಸುರೇಂದ್ರನಾಥ)

ಸಂಶೋಧಕ

<u>**ದೃಢೀಕರಣ**</u>

ಡಿ.ಆರ್.ಸುರೇಂದ್ರನಾಥ ಇವರು ಬರೆದು ಸಾದರಪಡಿಸಿದ **ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಶಿಲ್ಪಕಲೆ** ಎಂಬ ಶಿರ್ಷಿಕೆಯ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಫೆಲೋಶಿಪ್ ಸಂಬಂಧವಾಗಿ ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಈ ಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ:

ಸ್ಥಳ:

15/2/2018

(ಎಲ್.ಶಿವಲಿಂಗಪ್ಪ)
ಮಾರ್ಗದರ್ಶಕರು

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ : ೧
ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಭಾರತೀಯ ಪರಂಪರೆಯಲ್ಲಿ ಶಿಲ್ಪಗಳಿಗೆ ಮಹತ್ವದ ಸ್ಥಾನಮಾನವಿದೆ. ಇವುಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಪ್ರಮುಖವು. ಒಂದು ಕಾಲದಲ್ಲಿ ನಿಸರ್ಗವನ್ನು ಮತ್ತು ಅದರ ಶಕ್ತಿಯನ್ನು ನಿರಾಕಾರದಲ್ಲಿ ಪೂಜಿಸುತ್ತಿದ್ದ ಮಾನವನು ತನ್ನಲ್ಲಿರುವ ಕಲೆಯನ್ನು ಬಳಸಿ ಅದಕ್ಕೊಂದು ಆಕಾರವನ್ನು ನೀಡಿ, ದೈವೀ ಸ್ವರೂಪದ ಭಾವಾರ್ಥ ರೂಪ ಕಲ್ಪಿಸಿ ಅದನ್ನು ಪೂಜಿಸತೊಡಗಿದನು. ಹೀಗೆ ಶಿಲ್ಪಕಲೆಯ ರೂಪತಾಳಿತು ಎನ್ನಬಹುದು. ಸಂಸ್ಕೃತದ ಶಿಲ್ಪವೆಂಬ ಶಬ್ದ 'ಶೀಲ ಸಮಾಧೌ' ಎನ್ನುವ ಧಾತುವಿನಿಂದ ಒದಗಿ ಬಂತು. ಮನಸ್ಸಿನ ಏಕಾಗ್ರತೆ ಏಕತಾನತೆಯಿಂದ ಹೊರಬಂದುದೆಲ್ಲ ಶಿಲ್ಪವೆಂದು ಹೇಳಲಾಗುತ್ತದೆ. ಹಾಗೂ ಶಿಲ್ಪೋಪನಿಷತ್ತಿನಲ್ಲಿ ಬರುವ 'ಮನಸಾಯತ್ ಸೃಜ್ಯತೆ ವಿಶ್ವ ಕೃತಸ್ತತ್ ಸರ್ವ ಶಿಲ್ಪಮೇವ ಭವತಿ' ಎಂಬ ಶ್ಲೋಕವು ಬ್ರಹ್ಮನು ತನ್ನ ಮನಸ್ಸಿನಿಂದ ಮಾಡಿದುದೆಲ್ಲಾ ಶಿಲ್ಪವೇ ಎಂದು ಉಲ್ಲೇಖಿಸುತ್ತದೆ. ಅದರಂತೆ ವೇದದ ದೃಷ್ಟಿಯಲ್ಲಿ ಶಿಲ್ಪವು ಪ್ರಾರಂಭವಾದುದೇ ವಿಶ್ವಸೃಷ್ಟಿಯಿಂದ. ಈ ಸೃಷ್ಟಿಯನ್ನೇ ವೇದವು ಶಿಲ್ಪ ಎಂದು ಹೇಳುತ್ತದೆ. ಈ ಎಲ್ಲಾ ವ್ಯಾಖ್ಯೆಗಳು ಶಿಲ್ಪಿ ಎಂಬ ಶಬ್ದದ ಅರ್ಥವನ್ನು ಹುಡುಕಲು ಹೊರಟಾಗ ದೊರೆಯುತ್ತವೆ. ಈ ಹಿಂದೆ ಅನೇಕ ರೀತಿಯ ಅರ್ಥಗಳನ್ನು ನೀಡಲಾಗುತ್ತಿತ್ತು. ಉದಾಹರಣೆಗೆ ಮೂರ್ತಿಶಿಲ್ಪ, ವರ್ಣಚಿತ್ರ, ಫಲಕ ಇತ್ಯಾದಿ ಅಲ್ಲದೇ ಗೀತ, ವಾದ್ಯ, ನೃತ್ಯ ಮುಂತಾದ ಲಲಿತಕಲೆಗಳೆಲ್ಲವೂ ಇದರ ವ್ಯಾಪ್ತಿಗೆ ಸೇರುತ್ತವೆ. ಪ್ರಸ್ತುತದಲ್ಲಿ 'ಶಿಲ್ಪ' ಎಂಬುದನ್ನು ಮೂರ್ತಿ ಶಿಲ್ಪಕ್ಕೆ ಸೀಮಿತಗೊಳಿಸಲಾಗಿದ್ದು,[೧] ಬಿಂಬ, ಪ್ರತಿಮೆ, ವಿಗ್ರಹ ಎಂಬ ಪರ್ಯಾಯ ಪದಗಳನ್ನು ಬಳಸುತ್ತಾ ಬರಲಾಗುತ್ತಿದೆ.

ಶಿಲ್ಪಂ ಕರ್ಮಾಕಲಾಧಿಕಂ ಎನ್ನುವುದು ಅಮರಸಿಂಹನ ಅಮರಕೋಶದ ಅರ್ಥ ವಿವರಣೆಯಾಗಿದೆ. ಕರ್ತೃವಿನ ಅಧಿಕ ಕೌಶಲ್ಯವನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಕೂಡ ಶಿಲ್ಪವೆಂದು ಕರೆಯಲಾಗುವುದು. ಭಾರತೀಯ ಮೂರ್ತಿ ಶಿಲ್ಪ, ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಶಿಲ್ಪಶಾಸ್ತ್ರವೆಂದು ಕರೆಯಲಾಗಿದೆ. ಪ್ರಮುಖವಾಗಿ ಶಿಲ್ಪಶಾಸ್ತ್ರವು ಮೂರ್ತಿಯ ರಚನೆ ಮತ್ತು ಅವುಗಳ ಲಕ್ಷಣಗಳನ್ನು ವಿವರಿಸುತ್ತದೆ. ಮೇಲೆ ತಿಳಿಸಿದ ಹಾಗೇ ಶಿಲ್ಪ ಎಂಬ ಪದಕ್ಕೆ ಹಲವಾರು ಪರ್ಯಾಯ ಪದಗಳಿವೆ. ಬಿಂಬ, ಮೂರ್ತಿ, ವಿಗ್ರಹ ಇತ್ಯಾದಿ

ಮೂರ್ತಿಶಾಸ್ತ್ರದ ಕುರಿತು ಶಾಸ್ತ್ರೀಯ ಅಧ್ಯಯನ ಮಾಡುವುದನ್ನು ಪ್ರತಿಮಾಶಾಸ್ತ್ರವೆಂದು ಕರೆಯಲಾಗುವುದು. ಈ ಶಿಲ್ಪಶಾಸ್ತ್ರಗಳ ಅನೇಕ ಗ್ರಂಥಗಳನ್ನು ಉಲ್ಲೇಖಿಸಬಹುದಾಗಿದೆ. ಅವುಗಳಲ್ಲಿ ಭುವನ ಪ್ರದೀಪ, ಅಪರಾಜಿತ ಪೃಚ್ಛಾ(ಕ್ರಿ.ಶ.೧೧ನೇ ಶತಮಾನ), ಭೋಜನ ಸಮರಾಂಗಣ ಸೂತ್ರಧಾರ (ಕ್ರಿ.ಶ. ಸು. ೧೦-೧೧ನೇ ಶತಮಾನ), ವಿಶ್ವಕರ್ಮನ ವಿಶ್ವಕರ್ಮ ಪ್ರಕಾಶ (ಮತ್ಸ್ಯ ಪುರಾಣಕ್ಕೂ ಮೊದಲಿನ ಕಾಲ) ಚಾಲುಕ್ಯ ಮೂರನೆ ಸೋಮೇಶ್ವರನ ಮನಸೋಲ್ಲಾಸ (ಕ್ರಿ.ಶ.೧೧ನೇಶತಮಾನ), ಮಂಡನನ ರೂಪಮಂಡಲ (ಕ್ರಿ.ಶ. ಸು.೧೨ನೇ ಶತಮಾನ) ಮಯಮತ (ಕ್ರಿ.ಶ.೯-೧೨ನೇ ಶತಮಾನ), ಮಾನಸಾರ (ಕ್ರಿ.ಶ. ೫೦೦-೭೦೦), ಪಿ.ಕೆ.ಆಚಾರ್ಯ ತಂತ್ರ ಸಮುಚ್ಚಯ (ಕ್ರಿ.ಶ.೧೫ನೇ ಶತಮಾನ) ಕಾಶ್ಯಪ ಶಿಲ್ಪಶಾಸ್ತ್ರ (೧೫ನೇ ಶತಮಾನ), ವಿಮಾನಾರ್ಚ ಕಲ್ಪ, ಪದ್ಮ ಸಂಹಿತಾ, ಪ್ರಯೋಗ ಮಂಜರಿ (ಕ್ರಿ.ಶ.೧೫ನೇ ಶತಮಾನ), ವಾಸ್ತುವಿದ್ಯೆ, ಶ್ರೀಕುಮಾರನ (ಕೇರಳ), ಶಿಲ್ಪರತ್ನ(ಕ್ರಿ.ಶ.೧೬ನೇ ಶತಮಾನ) ಮುಂತಾದವು ಅತಿ ಪ್ರಮುಖವಾದ ಶಿಲ್ಪಶಾಸ್ತ್ರ ಗ್ರಂಥಗಳಾಗಿವೆ.[೨]

ಕರ್ನಾಟಕದ ಚಾರಿತ್ರಿಕ ಅವಧಿಯಲ್ಲಿ ಮೂರ್ತಿಶಿಲ್ಪದ ಬೆಳವಣಿಗೆಯಲ್ಲಿ ವಿಜಯನಗರದ ಅರಸರು ನೀಡಿದ ಪ್ರೋತ್ಸಾಹವು ಆ ಸಾಮ್ರಾಜ್ಯದ ಶಿಲ್ಪವೈಭವವನ್ನು ವೀಕ್ಷಿಸಿದಾಗ ಕಾಣಬಹುದು. ಆಗಿನ ಸಂದರ್ಭದಲ್ಲಿ ಬಳಸಿದ ಮಾಧ್ಯಮವು ಒರಟಾದ ಬೆಣಚುಕಲ್ಲು, ಆದರೂ ಅವರು ರಚಿಸಿದ ಶಿಲ್ಪಗಳ ನೋಟ, ಲವಲವಿಕೆ, ವಿಶಿಷ್ಟ ಬಗೆಯ ವಿನ್ಯಾಸವನ್ನೊಳಗೊಂಡ ಭಂಗಿಗಳು ನೋಡುಗರ ಮನಸ್ಸನ್ನು ಆಕರ್ಷಿಸದೆ ಇರಲಾರವು.

ವಿಜಯನಗರದ ಅರಸು ಮನೆತನವಾದ ಸಂಗಮವಂಶದ ದೊರೆಗಳಿಂದ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಕರ್ನಾಟಕದ ಶಿಲ್ಪ ಬೆಳವಣಿಗೆಯ ಮೇಲೆ ಪ್ರಬಲವಾದ ವರ್ಚಸ್ಸನ್ನು ಬೀರಿತು. ದ್ರಾವಿಡ ಶೈಲಿಯ ದೇವಾಲಯಗಳ ರಚನೆಗೆ ಪ್ರೇರಕವಾಯಿತು.

ಸಂಗಮನ ಮಕ್ಕಳಾದ ಹರಿಹರ, ಕಂಪಣ, ಬುಕ್ಕ, ಮುದ್ದಪ್ಪ, ಮಾರಪ್ಪ ಎಂಬ ಐದು ಜನ ಸಹೋದರರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ತಮ್ಮ ವಂಶವನ್ನು ತಂದೆ ಹೆಸರಿನಿಂದಲೇ ಗುರುತಿಸಿಕೊಂಡಿದ್ದರಿಂದ ಸಂಗಮ ವಂಶ ಎಂಬ ಹೆಸರು ಬಂದಿತು. ಇವರ ಕಾಲದಿಂದಲೇ ದೇವಾಲಯಗಳು ಮತ್ತು ಮೂರ್ತಿ ಶಿಲ್ಪಗಳು ರಚನೆಯಾದದ್ದು, ಶಾಸನಗಳಿಂದ ತಿಳಿದುಬರುತ್ತದೆ. ಮೊದಲ ಅರಸರಾದ ಹರಿಹರ ಮತ್ತು ಬುಕ್ಕರಾಯನ ಕಾಲದಲ್ಲಿ ಹಂಪಿ ಪರಿಸರದಲ್ಲಿ ದೇವಾಲಯ ಮತ್ತು ಮೂರ್ತಿಶಿಲ್ಪಗಳ ರಚನೆಯಾದುದರ ಉಲ್ಲೇಖಗಳು ಸಿಗುವುದಿಲ್ಲ.

ಆದರೆ ಬುಕ್ಕರಾಯನ ಕಾಲದಲ್ಲಿ ಶ್ರವಣಬೆಳಗೊಳದಲ್ಲಿ ಜೈನರಿಗೂ, ವೈಷ್ಣವರಿಗೂ ಕಲಹವಾದಾಗ ಅರಸನು ಅವರನ್ನು ಸಮಾಧಾನಗೊಳಿಸಿ ಎಲ್ಲಾ ಧರ್ಮಗಳು ಒಂದೇ, ಎರಡರಲ್ಲೂ ಭೇದವಿಲ್ಲ ಎಂದು ಉಪದೇಶಿಸಿ ಅವರನ್ನು ಸಂತೈಸಿಸಿದ ಘಟನೆಯು ಅವರ ಧಾರ್ಮಿಕ ನೀತಿಗೆ ಸಾಕ್ಷಿಯಾಗಿದೆ.

ಬುಕ್ಕರಾಯನ ನಂತರದಲ್ಲಿ ಆಳ್ವಿಕೆಗೆ ಬಂದ ಇಮ್ಮಡಿ ಹರಿಹರನ ಕಾಲದಲ್ಲಿ ಹಲವು ದೇವಾಲಯಗಳ ನಿರ್ಮಾಣ ಮತ್ತು ಮೂರ್ತಿಶಿಲ್ಪಗಳ ಪ್ರತಿಷ್ಠಾಪನೆಯಾದುದು ಇವರ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ.೧೩೭೯ರ ಶಾಸನವು[೩] ಶ್ರೀ ನಲಾನುಚಕ್ರವರ್ತಿ ಅಯ್ಯ ಎನ್ನುವವನು ಪಂಪಾತೀರದಲ್ಲಿ ನರಸಿಂಹದೇವರ ಮಂಟಪವನ್ನು ಕಟ್ಟಿಸಿದನೆಂದು ಹಾಗೂ ಕ್ರಿ.ಶ.೧೩೮೦ರ ಶಾಸನವು[೪] ಮಲಗೆನಾಯ್ಕನ ಮಗ ಬದ್ದೆಯನಾಯ್ಕನು ಬೇಟೆಗಾರರ ಹೆಬ್ಬಾಗಿಲಿನ ಪೂರ್ವ ದಿಕ್ಕಿನಲ್ಲಿ ಒರತೆಯ ಮೈಲಾರ ದೇವರನ್ನು ಪ್ರತಿಷ್ಠಾಪಿಸಿದನೆಂದೂ, ಕ್ರಿ.ಶ.೧೩೮೧ರ ಶಾಸನವು[೫] ಪಂಪಾಕ್ಷೇತ್ರದ ನರಸಿಂಹದೇವರ ಪಶ್ಚಿಮಕ್ಕೆ ಕ್ಷೇತ್ರಪಾಲನ ಮತ್ತು ಸಂನಂಜೆನಾಥನ ಶಿವಾಲಯವನ್ನು ಭಯರಿಸೆಟ್ಟಿಯ ಮಗ ಸಂತದ ಹಿರಿಯತಮ್ಮ ಮತ್ತು ಚಿಕ್ಕತಮ್ಮ ಮಾಡಿದರೆಂದೂ ಶಾಸನದಲ್ಲಿ ಉಲ್ಲೇಖಗಳು ದೊರೆಯುತ್ತವೆ. ಅಲ್ಲದೇ ಕ್ರಿ.ಶ.೧೩೮೬ರ ಶಾಸನವು[೬] ಪಂಪಾಕ್ಷೇತ್ರದ ಹರಿಹರನ ಮಂತ್ರ ಬೈಚಪನ ಮಗ ಇರುಗಪನು ವಿಜಯನಗರ ಕುಂಥು ಜಿನಾಲಯವನ್ನು ಶಿಲೆಯಲ್ಲಿ ನಿರ್ಮಿಸಿದನೆಂದೂ ಮತ್ತು ಕ್ರಿ.ಶ. ೧೩೯೭ರ ಶಾಸನವು ವೀರ ಹರಿಹರನ ರಾಣಿ ಬುಕ್ಕವೆಯೂ ಜಡೆಯ ಶಂಕರ ದೇವರ ದೀಪ ಮಾಲೆ ಕಂಬವನ್ನು ಮಾಡಿಸಿದ್ದನ್ನು ಉಲ್ಲೇಖಿಸುತ್ತದೆ. ಹೀಗೆ ಹರಿಹರನ ಕಾಲದಲ್ಲಿ ದೇವಾಲಯ ಮತ್ತು ಮೂರ್ತಿಶಿಲ್ಪ ಪ್ರತಿಷ್ಠಾಪನೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದನೆಂದು ಶಾಸನಗಳಿಂದ[೭] ತಿಳಿಯುತ್ತದೆ. ಹರಿಹರನ ನಂತರ ಬಂದಂತಹ ೧ನೇ ದೇವರಾಯ ಮತ್ತು ೨ನೇ ದೇವರಾಯರ ಕಾಲದಲ್ಲೂ ಈ ಕಾರ್ಯವು ಮುಂದುವರಿಯಿತು.

೧ನೇ ದೇವರಾಯನ ಕಾಲದ ಕ್ರಿ.ಶ.೧೪೧೦ರ ಶಾಸನವು[೮] ಅವನ ಮಂತ್ರಿ ಲಕ್ಷ್ಮೀಧರನು ಮಹಾಶಕ್ತಿ ಹೇರಂಭವನ್ನು ಪ್ರತಿಷ್ಠಾಪಿಸಿದ್ದನ್ನು ಉಲ್ಲೇಖಿಸುತ್ತದೆ. ಹಾಗೂ ಕ್ರಿ.ಶ. ೧೪೨೬ರ ಶಾಸನವು[೯] ದೇವರಾಯನು ವಿಜಯನಗರದ ಕ್ರಮುಕ ಪರ್ಣಾಪಣ (ಪಾನಸುಪಾರಿ ಬಜಾರ) ಬೀದಿಯಲ್ಲಿ ಪಾರ್ಶ್ವ ಚೈತ್ಯಾಲಯವನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ.

ಚಿತ್ರಕಲೆಯಷ್ಟೇ ಪುರಾತನವಾಗಿರಬಹುದಾದ ಕಲೆಯೆಂದರೆ ಶಿಲ್ಪಕಲೆ, ಚಿತ್ರಕಾರ ತನ್ನ ಸೃಷ್ಟಿಗೆ ರೇಖೆ, ಬಣ್ಣ, ಬೆಳಕು-ನೆರಳು ಇವುಗಳನ್ನು ಬಳಸಿ ಚಪ್ಪಟೆ ಅರಿವೆ, ಕಾಗದ, ಹಲಗೆ, ಅಥವಾ ಇನ್ನಾವುದೇ ವಸ್ತುವಿನ ಮೇಲೆ ತನಗೆ ಕಾಣಿಸಿದೊಂದು ಸೃಷ್ಟಿಯನ್ನು ಮಾಡುತ್ತಾನೆ. ಆ ಸೃಷ್ಟಿಯಲ್ಲಿ

ಉದ್ದ ಮತ್ತು ಅಗಲಗಳು ಕಾಣಿಸಿದರೂ ನೈಜವಸ್ತುಗಳ ದಪ್ಪವನ್ನು ದೃಶ್ಯಗಳ ಆಳವನ್ನು ಉಪಾಯದಿಂದಲೇ ಸೂಚಿಸಬೇಕಾಗುತ್ತದೆ. ಅದನ್ನು ಎಂದೂ ಇದ್ದಕ್ಕಿದ್ದಂತೆ ತೋರಿಸಲು ಬರುವುದಿಲ್ಲ. ಇಂತಹ ಸೃಷ್ಟಿಯ ರಚನಾ ಕ್ರಮವನ್ನು, ಅವಶ್ಯಕತೆಗಳನ್ನು ತಿಳಿಯುವುದು ಬಹುಮುಖ್ಯವಾಗಿದೆ. ಮನುಷ್ಯನು ಬುದ್ಧಿ ಬಲಿತು ಆತ ಸಮಾಜ ಜೀವಿಯಾಗಿ ಬಾಳ ತೊಡಗಿದ ಅನಾದಿ ಕಾಲದಿಂದಲೂ ಚಿತ್ರಗಾರಿಕೆ ಅವನ ಹವ್ಯಾಸವಾಗಿ ಬಂದಿತ್ತು[10] ಎಂಬುದು ವಾಸ್ತವವಾಗಿದೆ. ಹಾಗೆಯೇ ಮುಂದುವರಿದ ಚಿತ್ರವೂ ಶಿಲ್ಪದಲ್ಲಿ ಪ್ರಗತಿಯನ್ನು ಸಾಧಿಸಿ ಚಿತ್ರ ಮತ್ತು ಶಿಲ್ಪವು ಒಂದೇ ನಾಣ್ಯದ ಎರಡು ಮುಖಗಳಾಗಿ ಮಾರ್ಪಟ್ಟಿರುತ್ತವೆ.

ಶಿಲ್ಪ ಎಂಬುದು ವಸ್ತುಗಳ ಬಣ್ಣಕ್ಕೆ ಪ್ರಧಾನ್ಯ ಕೊಡುವುದಿಲ್ಲ. ಬಣ್ಣ ಬೇಕೇ ಇಲ್ಲ. ಇಲ್ಲಿನ ಆಕೃತಿಗಳಿಗೆ ಉದ್ದವಿದೆ, ಅಗಲವಿದೆ, ದಪ್ಪವಿದೆ. ಚಿತ್ರದಂತೆ ಅವನ್ನು ಒಂದೇ ಕಡೆ ನೋಡಬೇಕಾಗಿಲ್ಲ. ನಾವು ಕಾಣುವ ಹಲವಾರು ವಸ್ತುಗಳಿಗೆ ಉದ್ದ, ಅಗಲ, ದಪ್ಪವಿರುತ್ತವೆ. ಅಥವಾ ಎತ್ತರ, ಅಗಲ, ದಪ್ಪವಿರುತ್ತವೆ. ನಾವು ಒಂದು ಮರವನ್ನು ನೋಡಬೇಕಾದರೆ ಅದರ ಎದುರಿಂದ, ಹಿಂದಿನಿಂದ, ಮಗ್ಗುಲಿಂದ, ಮೇಲಿಂದ ಯಾವ ಕಡೆಯಿಂದಲೂ ನಿಂತು ಅದನ್ನು ನೋಡಬಹುದು. ಆಗ ಆ ಒಂದೇ ವಸ್ತು ಕಣ್ಣಿಗೆ ಬೇರೆ ಬೇರೆ ಆಕಾರಗಳ ನೋಟ ಒದಗಿಸುತ್ತದೆ. ಒಂದು ಚಿತ್ರದಲ್ಲಿ ಒಂದು ವಸ್ತುವಿನಲ್ಲಿ ನಮಗೆ ಕಾಣಿಸುವ ಆಕೃತಿಯ ಸೂಚನೆಗೆ ಹೊರಗಡೆ ಗೆರೆಗಳನ್ನು ಬರೆಯುತ್ತಾರೆ. ಕಣ್ಣನ್ನು ತೋರಿಸುವುದಕ್ಕಾಗಿ ಗೆರೆ ಬರೆಯುತ್ತಾರೆ. ಕೈ ತೋರಿಸುವುದಕ್ಕಾಗಿ ಗೆರೆ ಬರೆಯುತ್ತಾರೆ. ಮೈ ತೋರಿಸುವುದಕ್ಕಾಗಿ ಗೆರೆ ಬರೆಯುತ್ತಾರೆ. ಹಾಗೆಂದು ನಿಜಕ್ಕೂ ನಮ್ಮ ಮೈಯ ಮೇಲೆ ಏನಾದರೂ ಗೆರೆ ಬರೆದದ್ದಿವೆಯೇ? ನಮ್ಮ ಕೈಯನ್ನು ಒಂದು ಸ್ಥಿತಿಯಲ್ಲಿ ನಮ್ಮ ಕಣ್ಣಿನ ಮುಂದೆ ಹಿಡಿದು ನಿಲ್ಲಿಸಿದರೆ, ಹಸ್ತದ, ಬೆರಳುಗಳ, ಉಗುರುಗಳ ಹೊರ ಅಂಚು ನಮಗೆ ಗೆರೆಯಂತೆ ಕಾಣಿಸುತ್ತದೆ. ಅವೇ ಕೈಯನ್ನು ಆಚೆ ಹೊರಳಿಸಿದಾಗ, ತಿರುವಿ ಹಿಡಿದಾಗ ನಮ್ಮ ಕಣ್ಣಿಗೆ ಕಾಣಿಸುವ ಗೆರೆಗಳೇ ಬೇರೆ. ಚಿತ್ರ ಬರೆಯುವಾಗಲೂ ಆಕೃತಿಗಳ ಕಲ್ಪನೆ ಉಂಟು ಮಾಡಲು ಸಹಾಯ ಮಾಡುತ್ತದೆ. ಹಾಗೆ ಗೆರೆ ಪ್ರಧಾನವಾಗಿರುವ ಚಿತ್ರದ ಗುಣವನ್ನು ಹೊಂದಿರುವ ಒಂದು ಗೊಂಬೆಯನ್ನು ನಿರ್ಮಿಸುವುದಕ್ಕೂ ಬರುತ್ತದೆ. ಒಂದು ದೃಶ್ಯದಲ್ಲಿ ಕಾಣುವ ಹಕ್ಕಿ, ದನ, ಗಿಡ, ಮರ, ಬೆಟ್ಟ, ಗುಡ್ಡಗಳನ್ನು ಶಿಲ್ಪದಲ್ಲಿ ತೋರಿಸಲು ಬರುತ್ತದೆ ಒಂದು ವಸ್ತುವಿನ ಹಿಂದೆ, ಮುಂದೆ, ಆಚೆ, ಈಚೆ ಏನನ್ನೂ ತೋರಿಸದೆಯೂ ಆ ವಸ್ತುವಿನ ಆಕಾರವನ್ನಷ್ಟೇ ಒಂದು ಗೊಂಬೆಯ ಮೂಲಕ ತೋರಿಸುವುದಕ್ಕೂ ಬರುತ್ತದೆ. ಶಿಲ್ಪ ಈ

ಕೆಲಸ ಮಾಡುತ್ತದೆ. ಅದು ಯಾವುದಾದರೊಂದು ವಸ್ತುವಿನ ಆಕೃತಿಯನ್ನು ಅಥವಾ ವಸ್ತುಗಳ ಗುಂಪಿನ ಆಕೃತಿಯನ್ನು ತೋರಿಸಬಲ್ಲದು.

ಶಿಲ್ಪ ಎನ್ನುವುದು ನಿತ್ಯವೂ ತೀರಾ ಸಾಧಾರಣವಾಗಿ ಬಳಸುವ ಪದ. ಆದ್ದರಿಂದಲೇ ಏನೋ ನಾವು ನಿಜವಾಗಿ ಶಿಲ್ಪದ ವ್ಯಾಪ್ತಿಯನ್ನು ಆ ಪದದ ನಿಖರವಾದ ಅರ್ಥವನ್ನು ಗ್ರಹಿಸುವುದನ್ನು ಮರೆತಿದ್ದೇವೆ. ಶಿಲ್ಪವು ತಪಸ್ಸಿನಿಂದ ಮಾತ್ರವೇ ಸಾಧ್ಯವಾಗುವವಂತಹುದ್ದು. ಈ ತಪಸ್ಸಿಗೆ ಮೊದಲು ಸಂಕಲ್ಪ, ಸಂಕಲ್ಪದಿಂದ ಪ್ರೇರಿತವಾದ ಆಲೋಚನೆ, ಧ್ಯಾನ, ಭಾವನೆ ಇತ್ಯಾದಿಗಳನ್ನೆಲ್ಲಾ ಒಳಗೊಂಡ ತಪಸ್ಸಿನ ಫಲವೇ ಶಿಲ್ಪ ಶಬ್ದವು ಶೀಲ ಸಮಾಧೌ ಎಂಬ ಧಾತುವಿನಿಂದ ವ್ಯುತ್ಪನ್ನವಾಗಿದೆ. ಸಮಾಧಿ ಎಂಬ ಅರ್ಥವುಳ್ಳ ಶಿಲ್‌ಧಾತುವು ತಪಸ್ಸನ್ನೇ ಸೂಚಿಸುತ್ತದೆ. ಎಂದರೆ ತಪಸ್ಸಿನ ಪ್ರಭಾವದಿಂದ ನಿರ್ವಹಿಸಲ್ಪಡುತ್ತಿರಬಹುದು. ಶಿಲ್ಪ ಎಂಬುದು ಒಂದು ಅರ್ಥ. ಶಿಲ್ಪಿಯಾದವನು ತನ್ನ ತಪಸ್ಸಿನಿಂದ (ಸಂಕಲ್ಪ, ಆಲೋಚನೆ, ನಿರ್ಮಾಣ ಇತ್ಯಾದಿಗಳಿಂದ) ಶಿಲ್ಪ ನಿರ್ಮಾಣವನ್ನು ಮಾಡಿ ಕೃತಕೃತ್ಯನಾಗುತ್ತಾನೆ. ಆದ್ದರಿಂದ ಮೊದಲ ಅರ್ಥವು ಆತನಿಗೆ ಅನ್ವಯವಾಗುತ್ತದೆ. ಏಕಾಗ್ರಚಿತ್ತದಿಂದ ಶಿಲ್ಪಿಯು ನಡೆಸುವ ಶಿಲ್ಪಕರ್ಮದ ಫಲವಾಗಿ ರೂಪುಗೊಳ್ಳುವ ಶಿಲ್ಪವು ಅದನ್ನು ನೋಡುವವನಲ್ಲಿಯ ಸೌಂದರ್ಯಾರಾಧನೆಯ ಪ್ರಜ್ಞೆಯನ್ನು ಉದ್ದೀಪನಗೊಳಿಸಿ, ಅವನಿಗೆ ಸಮಾಧಿ ಸ್ಥಿತಿಯನ್ನು ತಂದುಕೊಟ್ಟು, ಆನಂದವನ್ನು ಕರುಣಿಸುತ್ತದೆ. ಆದ್ದರಿಂದ ಶಿಲ್ಪವು ಮಹತ್ತರವೂ, ಪೂಜ್ಯವೂ ಆದದು.[೧೧] ಎಂಬ ಜಿ.ಜ್ಞಾನಾನಂದರ ಮಾತು ಒಪ್ಪುವಂತದ್ದಾಗಿದೆ.

ವಿಶ್ವವಿಖ್ಯಾತ 'ಹಂಪಿ'ಯ ಸಮೀಪದಲ್ಲಿರುವ ಕಮಲಾಪುರವು ಪ್ರಾಗೈತಿಹಾಸಕ ಹಾಗೂ ಚಾರಿತ್ರಿಕ ಕಾಲಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಆಡಳಿತ ಕೇಂದ್ರವಾಗಿ ಉಪನಗರವಾಗಿ ಅಲ್ಲದೇ ಸಾಂಸ್ಕೃತಿಕವಾಗಿ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಇಲ್ಲಿನ ಪ್ರಾಚ್ಯ ಅವಶೇಷಗಳು ದೃಢಪಡಿಸಿವೆ. ಇಂದಿನ ಕಮಲಾಪುರದ ವಿವದೆಡೆ ವಿಭಿನ್ನಕಾಲದ ಕೋಟೆ – ಕೊತ್ತಲುಗಳು, ದೇವಾಲಯಗಳು ಮೂರ್ತಿಗಳು, ಭಗ್ನಾವಶೇಷಗಳು[೧೨] ಇದ್ದು, ಇದೊಂದು ಪ್ರಾಚೀನ ನೆಲೆ ಎಂಬುದನ್ನು ಸೂಚಿಸುತ್ತವೆ ಅಲ್ಲದೆ ಅಧ್ಯಯನ ಯೋಗ್ಯವಾಗಿವೆ.

ಯುನೋಸ್ಕೋ ಹಂಪಿ ಮತ್ತು ಅದರ ಸುತ್ತಲಿನ ೧೨೫ ಚ.ಅಡಿ ಪ್ರದೇಶವನ್ನು ಪರಂಪರೆಯ[೧೩] ಮತ್ತು ಸಂರಕ್ಷಿತ ತಾಣವೆಂದು ಘೋಷಿಸಿದೆ. ಇದರ ಕೇಂದ್ರ ಭಾಗದಲ್ಲಿ ಕಮಲಾಪುರ ಸಹಾ ಬರುತ್ತದೆ. ಇಲ್ಲಿರುವ ಸ್ಮಾರಕಗಳನ್ನು ಮತ್ತು ಅನ್ವೇಷಣೆ ಮತ್ತು ಉತ್ಖನನದಲ್ಲಿ

ದೊರೆತ ಪ್ರಾಚ್ಯಾವಶೇಷಗಳ ಸಂರಕ್ಷಣೆಯನ್ನು ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಗಳು ಮಾಡುತ್ತಾ ಬರುತ್ತಿರುವುದು ಶ್ಲಾಘನೀಯ. ಇಲ್ಲಿನ ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಕೊಠಡಿಯೊಳಗೆ ಇರುವ ಹಲವಾರು ಪ್ರಾಚ್ಯಾವಶೇಷಗಳನ್ನು ವ್ಯವಸ್ಥಿತವಾಗಿ ವಸ್ತು ಸಂಗ್ರಾಲಯದಂತೆ ಸಂರಕ್ಷಿಸಿಡಲಾಗಿದೆ. ಚಾರಿತ್ರಿಕವಾಗಿ ಇವು ಮಹತ್ವ ಪಡೆದಿದ್ದು, ಅವುಗಳ ಕುರಿತು ವ್ಯವಸ್ಥಿತ ಅಧ್ಯಯನ ಮಾಡುವ ಉದ್ದೇಶವಿದಾಗಿದೆ.

ಪ್ರಾಚೀನ ವಸ್ತು ಮತ್ತು ಅವಶೇಷಗಳನ್ನು ಸಂಗ್ರಹಿಸಿ ಪ್ರದರ್ಶಿಸುವ ಮೂಲಕ ನಮ್ಮ ಪರಂಪರೆಯನ್ನು ನೆನೆಸಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಮಾಡಿದ ವ್ಯವಸ್ಥೆಯೇ ವಸ್ತು ಸಂಗ್ರಹಾಲಯಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ೧೯೭೨ರಲ್ಲಿ ಹಂಪಿಯ ಗಜಶಾಲೆಯಲ್ಲಿ ಪುರಾತತ್ವ ವಸ್ತು ಸಂಗ್ರಹಾಲಯವನ್ನು ಪ್ರಾರಂಭ ಮಾಡಿತು. ಅನಂತರ ವಸ್ತು ಸಂಗ್ರಹಾಲಯವು ಕಮಲಾಪುರದ ಎಚ್.ಪಿ.ಸಿ.ರಸ್ತೆಯ ಹೊಸ ಕಟ್ಟಡಕ್ಕೆ ೧೯೮೪ರಲ್ಲಿ ಸ್ಥಳಾಂತರಗೊಂಡಿತು. ಹಂಪಿ ಪ್ರದೇಶದ ದೊರೆತ ಶಿಲ್ಪಗಳು, ನಾಣ್ಯಗಳು, ಲೋಹದ ವಸ್ತುಗಳು, ತಾಮ್ರ ಶಾಸನಗಳು, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಪ್ರದರ್ಶನಕ್ಕೆ ಇಡಲಾಗಿದೆ.

ವಸ್ತು ಸಂಗ್ರಹಾಲಯದಲ್ಲಿ ಪ್ರಸ್ತುತ ನಾಲ್ಕು ಗ್ಯಾಲರಿಗಳಿವೆ. ಮೊದಲನೆಯ ಗ್ಯಾಲರಿಯಲ್ಲಿ ಶೈವಪಂಥಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಎರಡನೆ ಗ್ಯಾಲರಿಯಲ್ಲಿ ವಿಷ್ಣುವಿಗೆ ಸಂಬಂಧಿಸಿದ ಶಿಲ್ಪಗಳನ್ನು ಕಾಣಬಹುದು. ಮೂರನೆಯ ಗ್ಯಾಲರಿಯಲ್ಲಿ ತಾಮ್ರಶಾಸನ, ತಾಳಪತ್ರ, ನಾಣ್ಯ ಮತ್ತು ಕೆಲವು ಆಯುಧಗಳನ್ನಿಡಲಾಗಿದೆ. ನಾಲ್ಕನೆಯ ಗ್ಯಾಲರಿಯಲ್ಲಿ ವೀರಗಲ್ಲು ಮತ್ತು ಮಾಸ್ತಿಕಲ್ಲು(ಮಹಾಸತಿ)ಗಳನ್ನು ಹಾಗೂ ಇತರ ಶಿಲ್ಪಗಳನ್ನು ಸಂರಕ್ಷಿಸಿಡಲಾಗಿದೆ. ತೆರೆದ ಆವರಣದಲ್ಲಿ ಕೆಲವು ಬಿಡಿ ಶಿಲ್ಪಗಳನ್ನು ಅಲ್ಲಲ್ಲಿ ವಿರಳವಾಗಿ ಇಡಲಾಗಿದೆ. ಆವರಣದ ಮಧ್ಯೆ ಚೌಕಾಕಾರದ ತೊಟ್ಟಿಯಂತಹ ಸ್ಥಳದಲ್ಲಿ ಹಂಪಿಯ ಸಮಗ್ರ ನೋಟವನ್ನು ಪ್ರತಿಬಿಂಬಿಸುವ ಮಾದರಿಯೊಂದನ್ನು ರಚಿಸಲಾಗಿದ್ದು, ಇದರಲ್ಲಿ ಕೋಟೆ ಸಾಲುಗಳು, ದೇವಾಲಯಗಳ ಸ್ಮಾರಕಗಳು ಬೆಟ್ಟಗುಡ್ಡಗಳು ಮತ್ತು ನದಿಗಳನ್ನು ತೋರಿಸಲಾಗಿದೆ. ವಸ್ತು ಸಂಗ್ರಹಾಲಯದ ಪ್ರವೇಶದ್ವಾರದಲ್ಲಿ ಎದುರಾಗುವ ಕೃಷ್ಣ ದೇವರಾಯ ಮತ್ತು ಆತನ ಇಬ್ಬರು ರಾಣಿಯರ ಶಿಲ್ಪಗಳು ನೋಡುಗರ ಗಮನವನ್ನು ಸೆಳೆಯುತ್ತವೆ. ಅವುಗಳನ್ನು ತಿರುಪತಿ ತಿರುಮಲೆಯ ವೆಂಕಟೇಶ್ವರ ದೇವಾಲಯದಲ್ಲಿರುವ ಶ್ರೀಕೃಷ್ಣದೇವರಾಯ, ಚಿನ್ನಾದೇವಿ ಮತ್ತು ತಿರುಮಲದೇವಿಯರ ನೈಜ ಲೋಹ ಶಿಲ್ಪಗಳನ್ನಾಧರಿಸಿ ರಚಿಸಲಾಗಿದೆ.

ಮೊದಲನೆ ಅಂಕಣದಲ್ಲಿ ಶೈವ ಪಂಥಕ್ಕೆ ಸಂಬಂಧಿಸಿದ ಬಿಡಿ ಮತ್ತು ಉಬ್ಬು ಶಿಲ್ಪಗಳನ್ನು ಅಲ್ಲಲ್ಲಿ ವ್ಯವಸ್ಥಿತವಾಗಿ ಇಡಲಾಗಿದೆ. ಅವುಗಳೆಂದರೆ ಶಕ್ತಿ ಗಣೇಶ ಮತ್ತು ಶಿವಲಿಂಗ (೧೪ನೇ ಶತಮಾನ); ಭಿಕ್ಷಾಟನ ಮೂರ್ತಿ, ಚತುರ್ಭುಜ ಬೈರವ, ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ, ರಾಜಭಕ್ತ (ಎರಡನೆಯ ದೇವರಾಯ), ದುರ್ಗಾ, ಚಂದ್ರಮೌಳೇಶ್ವರ, ವೀರಭದ್ರ (ಅರ್ಧಪ್ರತಿಮೆ), ಆಸೀನ ಕಾಳಿ, ನಾಗಲಿಂಗ, ಮಹಿಷಾಮರ್ದಿನಿ, ಇವುಗಳೆಲ್ಲಾ ಕ್ರಿ.ಶ. ೧೫ನೇ ಶತಮಾನಕ್ಕೆ ಸೇರಿವೆ. ದೇವಿ ಪ್ರತಿಮೆ (ಭದ್ರಕಾಳಿ), ವೀರಭದ್ರ, ಬೈರವ, ಪಾರ್ವತಿ, ದಶಭುಜ ವೀರಭದ್ರ, ಮಹಿಷ ಮರ್ದಿನಿ, ನಂದಿ, ಉಮಾಮಹೇಶ್ವರ, ಆತ್ಮಲಿಂಗದೊಂದಿಗೆ ಶಿವ, ನಂದಿ, ಲಿಂಗ ವಿರೂಪಾಕ್ಷ (ಮುಖಲಿಂಗ), ಅಷ್ಟಭುಜ ಮಹಿಷ ಮರ್ದಿನಿ ಮುಂತಾದವುಗಳು ಕ್ರಿ.ಶ.೧೬ನೇ ಶತಮಾನಕ್ಕೆ ಸೇರುತ್ತವೆ. ಈ ಶಿಲ್ಪಗಳೆಲ್ಲಾ ಹಂಪಿ ಪರಿಸರದಲ್ಲೇ ದೊರೆತಿದ್ದು, ಗ್ರಾನೈಟ್ ಮತ್ತು ಕಪ್ಪು ಗ್ರಾನೈಟ್ ಶಿಲೆಯಿಂದ ಮಾಡಲ್ಪಟ್ಟಿವೆ.

ಎರಡನೆ ಅಂಕಣದಲ್ಲಿ ವೈಷ್ಣವ ಪಂಥಕ್ಕೆ ಸಂಬಂಧವಾದ ಬಿಡಿ ಮತ್ತು ಉಬ್ಬು ಶಿಲ್ಪಗಳಾಗಿವೆ. ಗಾತ್ರದಲ್ಲಿ ಕೆಲವು ಶಿಲ್ಪಗಳು ದೊಡ್ಡದಿವೆ. ಇಲ್ಲಿನ ಮುಖ್ಯ ಶಿಲ್ಪಗಳೆಂದರೆ ವಿಷ್ಣು, ಗರುಡ, ವೇಣುಗೋಪಾಲ, ಆಂಜನೇಯ, ವಿಷ್ಣು(ಕಮಲಾಪುರ), ಲಕ್ಷ್ಮಣ, ಲಕ್ಷ್ಮೀನಾರಾಯಣ, ಅಂಜಲಿಮುದ್ರೆಯಲ್ಲಿ ಗರುಡ, ವರಹಾ ಅವತಾರ, ರಾಮ, ಅಂಜಲಿ ಮುದ್ರೆಯಲ್ಲಿ ಭಕ್ತ, ಲಕ್ಷ್ಮಿ ನರಸಿಂಹ(ಅರ್ಧ), ಆಳ್ವಾರ್, ಮತ್ಸ್ಯ ಮತ್ತು ಕಲ್ಕಿ ಅವತಾರ, ವೆಂಕಟೇಶ, ವೈಷ್ಣವ ದೇವತೆ, ಪದ್ಮಾಸೀನ ನರಸಿಂಹ, ವ್ಯಾಳಿಸಹಿತ ಭಿತ್ತಿಸ್ತಂಭ, ಲಕ್ಷ್ಮಿನರಸಿಂಹ, ಗೋಪಿಯರೊಂದಿಗೆ ವೇಣುಗೋಪಾಲ, ಅನಭಿಜ್ಞಾತ ಮೂರ್ತಿಯ ತಲೆ, ನರಸಿಂಹ, ಕೃಷ್ಣ ಮತ್ತು ಅರ್ಜುನ, ಶ್ರೀದೇವಿ, ಭೂದೇವಿ ಸಹಿತ ವಿಷ್ಣು ವೆಂಕಟೇಶ, ವಿಷ್ಣು ಮುಂತಾದ ಶಿಲ್ಪಗಳು ಕ್ರಿ.ಶ.೧೬ನೆಯ ಶತಮಾನಕ್ಕೆ ಸೇರಿದ್ದು, ಹಂಪಿ ಪ್ರದೇಶದಲ್ಲಿ ದೊರೆತಿವೆ. ಇವುಗಳಲ್ಲದೇ ಮಲಪ್ಪನಗುಡಿಯಲ್ಲಿ ದೊರೆತ ವಿಷ್ಣು (ಕ್ರಿ.ಶ.೧೬ನೆಯ ಶತಮಾನ) ಕಮಲಾಪುರದ ಪಟ್ಟಾಭಿರಾಮ ದೇವಾಲಯದ ವೆಂಕಟೇಶ, ಪ್ರಸನ್ನ ನರಸಿಂಹ (ಕ್ರಿ.ಶ.೧೬ನೆಯ ಶತಮಾನ) ಹಾಗೂ ಅನಂತಶಯನಗುಡಿ ಲಕ್ಷ್ಮೀ (ಕ್ರಿ.ಶ.೧೬ನೇ ಶತಮಾನ) ಶಿಲ್ಪಗಳು ಮುಖ್ಯವಾಗಿವೆ.

ಮುಂದಿನ ಮೂರನೇ ಅಂಕಣದಲ್ಲಿ ಲೋಹದ ಅವಶೇಷಗಳಿಂದ ಹಿತ್ತಾಳೆ ಬಟ್ಟಲು, ದೀಪಸ್ತಂಭ, ನೀಲಾಂಜನದ ಭಾಗ ಮತ್ತು ರಜ್ಜುಕ, ಅಲಂಕೃತ ಬಟ್ಟಲುಗಳು (೧೬ನೇ ಶತಮಾನ) ಇವು ಕಮಲಾಪುರದ ಭೀಮದ್ವಾರದ ಹತ್ತಿರ ದೊರೆತಿರುತ್ತವೆ. ದೀಪಲಕ್ಷ್ಮೀ ಎಂಬ ಸಣ್ಣ ಲೋಹ

ಶಿಲ್ಪವು ವಿಜಯನಗರೋತ್ತರ ಕಾಲಕ್ಕೆ ಸೇರಿದ್ದು, ಹೊಸಪೇಟೆಯಲ್ಲಿ ಸಂಗ್ರಹಿಸಲಾಗಿದೆ. ಮತ್ತೊಂದು ದೀಪಲಕ್ಷ್ಮಿ ಇದೇ ಕಾಲಕ್ಕೆ ಸೇರಿದ್ದಾದರೂ ಹಂಪಿಯಲ್ಲಿ ದೊರೆತಿರುತ್ತದೆ. ನಾಗನೊಂದಿಗಿರುವ ನಂದಿ (೧೯ನೇ ಶತಮಾನಕ್ಕೆ ಸೇರಿದ್ದು) ಹಂಪಿಯಲ್ಲಿ ಸಿಕ್ಕಿರುತ್ತದೆ.

ನಂತರ ಕಠಾರಿ, ಗುರಾಣಿ, ಬಂದೂಕು, ಕೊಳವೆ (ಕ್ರಿ.ಶ.೧೭ನೇಯ ಶತಮಾನ), ಖಡ್ಗ (ಕ್ರಿ.ಶ.೧೮ನೆಯ ಶತಮಾನ) ಮುಂತಾದವು ಕಂಡುಬರುತ್ತವೆ. ಇವುಗಳನ್ನು ಆನೆಗೊಂದಿಯಿಂದ ಸಂಗ್ರಹಿಸಲಾಗಿದೆ. ಕ್ರಿ.ಶ.೧೮ನೆಯ ಶತಮಾನಕ್ಕೆ ಸೇರುವ ಬಟ್ಟೆಯ ಮೇಲಿನ ಚಿತ್ರಕಲೆಯು ಶ್ರೀರಾಮನ ಪಟ್ಟಾಭಿಷೇಕವನ್ನು ಕುರಿತದ್ದಾಗಿದೆ. ಇಲ್ಲಿನ ಲೋಹದ ಅವಶೇಷಗಳಲ್ಲಿ ವಿಜಯನಗರ ಕಾಲಕ್ಕೆ ಸೇರುವ ದೀಪಸ್ತಂಭ, ತಂಬಿಗೆ ಮತ್ತು ಎರಡು ಕಲಶಗಳು ಕಮಲಾಪುರದ ಪೆನುಗೊಡೆ ದ್ವಾರದ ಬಳಿಯ ಭಗ್ನ ಶಿವಾಲಯ ಪ್ರದೇಶದಲ್ಲಿ ದೊರೆತಿವೆ. ವಿಜಯನಗರೋತ್ತರ ಕಾಲಕ್ಕೆ ಸೇರುವ ಲೋಹಶಿಲ್ಪಗಳಲ್ಲಿ ಕುದುರೆ, ೩ ದೀಪಲಕ್ಷ್ಮಿ ಶಿಲ್ಪಗಳು (ಹೊಸಪೇಟೆ) ಹಾಗೂ ಸ್ತ್ರೀಯಳೊಬ್ಬಳ ತಲೆ ಪ್ರಮುಖವಾಗಿವೆ.

ಇಲ್ಲಿರುವ ತಾಮ್ರದ ನಾಣ್ಯಗಳಲ್ಲಿ ಗೂಳಿ, ಆನೆ, ಸೂರ್ಯ ಚಂದ್ರರೊಡನೆ ಗೂಳಿ, ಗರುಡ, ಗಂಡಬೇರುಂಡ, ವರಾಹ, ಗಣೇಶ ಮುಂತಾದ ಚಿತ್ರಗಳಿದ್ದು, ವಿಜಯನಗರ ಕಾಲಕ್ಕೆ ಸಂಬಂಧಿಸಿವೆ. ಈ ನಾಣ್ಯಗಳ ಹಿಮ್ಮುಖದಲ್ಲಿ ವಿಜಯನಗರದ ಅರಸರ ಹೆಸರುಗಳಿವೆ. ಕೆಲವು ತಾಮ್ರದ ನಾಣ್ಯಗಳು ಆಂಜನೇಯ ಮತ್ತು ಎರಡು ಶಿಖರಗಳ ಚಿತ್ರಗಳನ್ನು ಹೊಂದಿವೆ. ತಾಮ್ರದ ನಾಣ್ಯಗಳು ೧೩೮ ರಿಂದ ೧೩ ಗ್ರೇಯನ್‌ಗಳವರೆಗೆ ತೂಗುತ್ತವೆ. ವಿಜಯನಗರ ಕಾಲಕ್ಕೆ ಸೇರುವ ಇಲ್ಲಿನ ಬಂಗಾರದ ನಾಣ್ಯಗಳಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ವೆಂಕಟೇಶ ಮುಂತಾದ ಚಿತ್ರಗಳನ್ನು ಹಾಗೂ ನಾಣ್ಯಗಳನ್ನು ಹೊರಡಿಸಿದ ರಾಜರ ಹೆಸರುಗಳ ಹಿಂಬರಹಗಳನ್ನು ಕಾಣಬಹುದು.

ಈ ಅಂಕಣದಲ್ಲಿ ಮಧ್ಯಕಾಲೀನ (ವಿಜಯನಗರದ) ಮಣ್ಪಾತ್ರೆಗಳನ್ನು ಸಂಗ್ರಹಿಸಿಡಲಾಗಿದೆ. ಅವುಗಳೆಂದರೆ ಕೆಂಪುಮಡಕೆ, ಕಪ್ಪುಮಡಕೆ, ಲೋಟದಂತಿರುವ ಕಪ್ಪುಮಡಕೆ, ಸಣ್ಣಲೋಟದಂತಿರುವ ಕಪ್ಪು ಮಡಿಕೆ, ಸಣ್ಣದಾದ ಆಟಿಕೆಯ ಕುಡಕೆ, ಮುಚ್ಚುಳವಿರುವ ಕುಡಿಕೆ ಮತ್ತು ಜಾರ್ ರೀತಿಯ ಕಪ್ಪು ಮಡಕೆ ಪ್ರಮುಖವಾಗಿವೆ. ಇಲ್ಲಿ ಪ್ರದರ್ಶಿಸಲಾಗಿರುವ ಏಳು ತಾಮ್ರ ಶಾಸನಗಳಲ್ಲಿ ಮೂರು ವಿಜಯನಗರ ಕಾಲಕ್ಕೆ ಸೇರಿದ್ದು, ಉಳಿದ ನಾಲ್ಕು ತಾಮ್ರ ಶಾಸನಗಳು ಕ್ರಿ.ಶ. ೧೭ನೇ ಶತಮಾನಕ್ಕೆ ಸಂಬಂಧಿಸಿರುತ್ತವೆ.

ಕೊನೆಯ ಅಂಕಣದಲ್ಲಿ ಕ್ರಿ.ಶ.೧೪ನೆಯ ಶತಮಾನದ ಕುಬೇರ (ತಲೆಭಾಗವಿಲ್ಲ) ಹಾಗೂ ಕ್ರಿ.ಶ.೧೫ನೆಯ ಶತಮಾನದ ಗ್ರಥಿತನಾಗ, ಹಂಸ ಮತ್ತು ತೀರ್ಥಂಕರರ ಶಿಲ್ಪಗಳು ಮುಖ್ಯವಾಗಿವೆ. ಕ್ರಿ.ಶ.೧೬ನೆಯ ಶತಮಾನಕ್ಕೆ ಸೇರುವ ಪ್ರಮುಖ ಶಿಲ್ಪಗಳೆಂದರೆ ವೀರಗಲ್ಲುಗಳು, ರತಿ ಮತ್ತು ಮನ್ಮಥ, ಆರಾಧಕ, ಯೋಧ, ರಾಜಸತಿ, ಮಾಸ್ತಿಕಲ್ಲು, ಗುರುತಿಸಲಾಗದ ತಲೆ, ಆತ್ಮಬಲಿದಾನ ಸ್ಮಾರಕ, ಬಳೆಕಲ್ಲು ಹಾಗೂ ಭೋಜನ ಶಿಲ್ಪಗಳನ್ನು ಕಾಣಬಹುದಾಗಿದೆ.

ಈ ಅಂಕಣದಿಂದ ಹೊರಬಂದಾಗ ಮಧ್ಯದ ತೆರೆದ ಆವರಣದಲ್ಲಿ ಸುತ್ತಲೂ ಪ್ರದರ್ಶಿಸಲಾದ ಬಿಡಿ ಶಿಲ್ಪಗಳನ್ನು ಕಾಣಬಹುದು. ವಾಯುವ್ಯ ಮೂಲೆಯಲ್ಲಿರುವ ವೈಮಾನಿಕ ಛಾಯಾಚಿತ್ರವು ಇಡೀ ಹಂಪಿ ಪ್ರದೇಶದ ಭೌಗೋಳಿಕ ನೋಟವನ್ನು ಪರಿಚಯಿಸುತ್ತದೆ. ಕ್ರಿ.ಶ.೧೫ನೆಯ ಶತಮಾನದ ನಂದಿ ಮತ್ತು ಲಿಂಗದೊಂದಿಗೆ ಧ್ಯಾನಮಗ್ನ ಮಹಿಳೆ, ಲಕುಲೀಶ, ವೇಣುಗೋಪಾಲ, ಆಂಜನೇಯ ಮತ್ತು ಗರುಡ, ಬಾಹುಬಲಿ, ನಾಗಿಣಿ, ಸೂರ್ಯ, ವೀರಯೋಧ ಮತ್ತು ಸತಿ, ಸ್ಮಾರಕ ಶಿಲೆ ಮುಂತಾದ ಪ್ರಮುಖ ಶಿಲ್ಪಗಳಿವೆ. ನಂತರ ಕ್ರಿ.ಶ. ೧೬ನೆಯ ಶತಮಾನದ ಶಿಲ್ಪಗಳಲ್ಲಿ ಅರಬ್ ಅಶ್ವವ್ಯಾಪಾರಿಗಳು, ಕಾರ್ತಿಕೇಯ ಮತ್ತು ದೀಪಸ್ತ್ರೀಯರು ಮುಖ್ಯವಾಗಿವೆ. ಇವಲ್ಲದೇ ಭೈರವ, ಕಾಳಿ, ಗಜಾಪತಿ, ಯೋಗಮುದ್ರೆಯಲ್ಲಿ ಕುಳಿತ ಸ್ತ್ರೀ, ವೀರಭದ್ರ, ವಿಷ್ಣು ಮುಂತಾದ ಶಿಲ್ಪಗಳು ಕಂಡುಬರುತ್ತವೆ. ವಸ್ತುಸಂಗ್ರಹಾಲಯದ ಹೊರಭಾಗದಲ್ಲಿ ಕಲ್ಯಾಣ ಚಾಲುಕ್ಯ ಮತ್ತು ವಿಜಯನಗರ ಕಾಲದ ಸ್ತಂಭಗಳಿವೆ. ಆನೆ, ಸಿಂಹ, ಬಸವ, ಗಣಪತಿ ಹಾಗೂ ಅನಂತಶಯನ ಶಿಲ್ಪಗಳು[೧೪] ಆಕರ್ಷಣೀಯವಾಗಿವೆ ಮತ್ತು ಸುಂದರವಾಗಿರುತ್ತವೆ. ಇಂತಹ ಗತವೈಭವದ ವೈಶಿಷ್ಟ್ಯತೆಗಳನ್ನು ಸಂಗ್ರಹಿಸಿಡಲಾದ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯದ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಅಧ್ಯಯನದ ಉದ್ದೇಶ :

- ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಪ್ರಾಚ್ಯ ಅವಶೇಷಗಳನ್ನು (ಮೂರ್ತಿಶಿಲ್ಪಗಳು, ಶಾಸನಗಳು, ವೀರಗಲ್ಲು, ಮರದ ಮೂರ್ತಿಗಳು) ಕುರಿತು ಅಧ್ಯಯನ ನಡೆಸಿ ಅವುಗಳನ್ನು ದಾಖಲಿಸುವುದು.
- ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಹಿನ್ನಲೆ ಕುರಿತು ವಿಶ್ಲೇಷಿಸುವುದು.

- ಕಮಲಾಪುರದ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಕುರಿತು ವಿವಿಧ ರೀತಿಯ ಮಾಹಿತಿಯನ್ನು ಸಂಗ್ರಹಿಸಿ ದಾಖಲಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.
- ಕಮಲಾಪುರ ವಸ್ತುಸಂಗ್ರಹಾಲಯದಲ್ಲಿರುವ ಪ್ರಾಚ್ಯ ಅವಶೇಷಗಳನ್ನು ಪೂರ್ವ ಇತಿಹಾಸ ಕಾಲದ ಆದಿ ಹಳೇ ಇತಿಹಾಸ ಕಾಲ ಮತ್ತು ಚಾರಿತ್ರಿಕ ಕಾಲದ ಅವಶೇಷಗಳ ಮಾಹಿತಿಯನ್ನು ಸಂಗ್ರಹಿಸುವುದು ಅಧ್ಯಯನದ ಉದ್ದೇಶವಾಗಿದೆ.
- ಇಲ್ಲಿನ ಶಿಲಾ ಮತ್ತು ಲೋಹ ಮೂರ್ತಿಗಳಲ್ಲಿನ ಶೈವ ಮೂರ್ತಿಗಳು, ವೈಷ್ಣವ ಮೂರ್ತಿಗಳು, ಶಾಕ್ತ ಮೂರ್ತಿಗಳು ಮತ್ತು ಜಿನ ಮೂರ್ತಿಗಳನ್ನು ಗುರುತಿಸಿ ವಿಶ್ಲೇಷಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.
- ಪ್ರವಾಸಿಗರು ಕಂಡಂತೆ ಕಮಲಾಪುರ ಮತ್ತು ಕೇಂದ್ರ ಪುರಾತತ್ವ ಪ್ರಾಚ್ಯಾವಸ್ತು ಸಂಗ್ರಹಾಲಯದ ಕುರಿತು ಅಭಿಪ್ರಾಯಗಳನ್ನು ಸಂಗ್ರಹಿಸುವುದು.

ಕಮಲಾಪುರ ಮತ್ತು ಹಂಪಿ ಪರಿಸರದಲ್ಲಿರುವ ಹಲವು ಪ್ರಾಚ್ಯಾವಶೇಷಗಳು ಇಂದು ಕಾಲಿನ ತುಳಿತಕ್ಕೆ ಸಿಕ್ಕು ಸಾಕಷ್ಟು ದುಸ್ಥಿತಿಯಲ್ಲಿವೆ. ಇನ್ನೂ ಕೆಲವು ನೆಲೆಗಳು ಜನರ ಅಜ್ಞಾನದಿಂದ, ಅವರ ನಿಧಿ ದಾಹದಿಂದ, ಪ್ರಕೃತಿಯ ಮುನಸಿನಿಂದ ಅವನತಿಯತ್ತ ಸಾಗಿವೆ. ಈ ರೀತಿ ಭೌಗೋಳಿಕ ಪರಿಸರದಲ್ಲಿ ಅವಸಾನದೆಡೆ ಮುಖಮಾಡಿದ್ದ ಹಲವು ಪ್ರಾಚ್ಯಾವಶೇಷಗಳನ್ನು ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯ ವಸ್ತು ಸಂಗ್ರಹಾಲಯವು ಶ್ರಮ ಮೀರಿ ಸಂರಕ್ಷಿಸಿದೆ. ಹಂಪಿ ಪರಿಸರದ ಸ್ಮಾರಕಗಳ ಕುರಿತು ವಿವಿಧ ದೃಷ್ಟಿಕೋನಗಳಿಂದ ಅಲ್ಲಲ್ಲಿ ಕೆಲವು ಅಧ್ಯಯನಗಳು ನಡೆದಿದ್ದರು ಎಲ್ಲಿಯೂ ಇಲ್ಲಿನ ಪ್ರಾಚ್ಯಾವಶೇಷಗಳನ್ನು ಕುರಿತು ಸಮಗ್ರವಾಗಿ ಅಧ್ಯಯನ ನಡೆದಿರುವುದಿಲ್ಲ ಆ ಹಿನ್ನಲೆಯಲ್ಲಿ ಈ ಅಧ್ಯಯನ ಬಹುಮುಖ್ಯವಾಗಿದೆ.

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸಂಬಂಧಿಸಿದಂತೆ ಈ ಮೊದಲು ನಡೆದ ಸಂಶೋಧನೆಯಲ್ಲಿ ಆಯ್ದ ವಿಷಯಕ್ಕೆ ಮಾತ್ರ ಸೀಮಿತವಾಗಿಟ್ಟುಕೊಂಡು ಸಂಶೋಧನೆ ಮಾಡಿದ್ದಾರೆ ಹಾಗೂ ಅನೇಕ ವಿಷಯಗಳನ್ನು ನಿರ್ಲಕ್ಷಿಸಿದ್ದಾರೆ. ಆದ ಕಾರಣ ಈ ಕೊರತೆಯನ್ನು ತುಂಬಲು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ. ಇಲ್ಲಿನ ಪ್ರಾಚ್ಯಾವಶೇಷಗಳ ಮೂಲ ಸ್ಥಾನ, (ಭೌಗೋಳಿಕ ಸ್ಥಾನ), ಅವುಗಳ ಮಹತ್ವ ಮತ್ತು ವೈಶಿಷ್ಟ, ಮುಂತಾದುವುಗಳನ್ನು ಇಲ್ಲಿ ಗಮನದಲ್ಲಿ ಇಟ್ಟು ಕೊಂಡು ವಿಶ್ಲೇಷಿಸಿ ದಾಖಲಿಸಬೇಕಾದ ತುರ್ತು ಅಗತ್ಯವಿದೆ. ಇಲ್ಲದಿದ್ದಲ್ಲಿ

ಚಾರಿತ್ರಿಕ ಆಕರಗಳು ಕೈತಪ್ಪಿ ಹೋಗಿ ಮುಂದಿನ ಪೀಳಿಗೆಗೆ ಇಲ್ಲಿನ ಪರಂಪರೆ, ಸಂಸ್ಕೃತಿಗಳ ಪರಿಚಯವಿಲ್ಲದೆ ಮೌನಿಗಳಾಗಿ ಉಳಿಯಬೇಕಾಗುತ್ತದೆ.

ಹಂಪಿ ಪರಿಸರದ ಕುರಿತು ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು

ನಾಗರಾಜರಾವ್. ಎಂ.ಎಸ್., ಅವರ ಅಧ್ಯಯನ ಪ್ರಮುಖವಾದದು.'ಪ್ರೋಟೋ ಹಿಸ್ಟಾರಿಕ್ ಕಲ್ಚರ್ ಆಫ್ ದಿ ತುಂಗಭದ್ರಾವ್ಯಾಲಿ' ಎನ್ನುವ ಅವರ ಕೃತಿಯಲ್ಲಿ ಈ ಭಾಗದ ಕೆಲವು ಆದಿಮಾನವನ ನೆಲೆಗಳ ಕುರಿತು ದಾಖಲಿಸಿದ್ದಾರೆ. ಅದೇ ರೀತಿ ಕೆ.ಬಿ. ಶಿವತಾರಕರವರು 'ಕರ್ನಾಟಕ ಪುರಾತತ್ವ ನೆಲೆಗಳು' ಎನ್ನುವ ಕೃತಿಯಲ್ಲಿ ಆದಿಮಾನವನ ಇಲ್ಲಿನ ಕೆಲವು ನೆಲೆಗಳನ್ನು ದಾಖಲೆಮಾಡಿದ್ದಾರೆ. ಸಂಗನಕಲ್ಲು ಪಿಕ್ಲಿಹಾಳ್, 'ಕಪ್ಪಗಲ್ಲುನಲ್ಲಿ ನಡೆದ ಉತ್ಖನನ' ನೆಲೆಗಳ ಮಹತ್ವವನ್ನು ಸುಬ್ಬಾರಾವ್, ಪೆದ್ದಯ್ಯ, ಆಲ್‌ಚಿನ್.ಬಿ. ಮತ್ತು ಎಫ್.ಆರ್.ಅಲ್ಚಿನ್ ಅನ್ಸರಿ.ಜೆಡ್., ಡಿ.ಮಂಜುಂದಾರ್, ಮೊದಲಾದ ವಿದ್ವಾಂಸರು ತಮ್ಮ ವಿವಿಧ ಉತ್ಖನನ ವರದಿಗಳಲ್ಲಿ ಆ ನೆಲೆಗಳ ಮಹತ್ವವನ್ನು ದಾಖಲಿಸಿದ್ದಾರೆ. ಅದೇರೀತಿ ಹಂಪಿಯ ಸ್ಮಾರಕಗಳ ಕುರಿತು ಅನೇಕ ದೇಶ/ವಿದೇಶಿಯ ವಿದ್ವಾಂಸರು ಹೆಚ್ಚು ಅಧ್ಯಯನಗಳನ್ನು ಮಾಡಿದ್ದರೂ ಸಹಾ ಅವು ಸಮಗ್ರವಾಗಿರದೆ ಕೆಲ ಸ್ಮಾರಕಗಳಿಗೆ ಮಾತ್ರ ಸೀಮಿತವಾಗಿವೆ. ಕನ್ನಡ ವಿಶ್ವವಿದ್ಯಾಲಯದ ಡಾ.ಬಾಲಸುಬ್ರಮಣ್ಯ, ಡಾ.ಕೆ.ಎಂ.ಸುರೇಶ್, ಡಾ.ವಾಸುದೇವನ್, ಡಾ.ವಾಸುದೇವ್‌ಬಡಿಗೇರ್, ಡಾ.ಸೋಮಶೇಖರ್, ಡಾ.ಕೊಟ್ರೇಶ್, ಪ್ರೊ.ಲಕ್ಷ್ಮಣ ತೆಲಗಾವಿ ಡಾ.ಎಚ್,ತಿಪ್ಪೇಸ್ವಾಮಿ ಇವರುಗಳು ಅಲ್ಲಲ್ಲಿ ಬಿಡಿ ಲೇಖನಗಳನ್ನು ಮತ್ತು ಕೆಲ ಪುಸ್ತಕಗಳನ್ನು ಈ ಪರಿಸರದ ಕುರಿತು ಪ್ರಕಟಿಸಿದ್ದಾರೆ. ಇನ್ನೂ ಕೆಲ ಲೇಖನಗಳು ಸಂಸ್ಮರಣಾ ಗ್ರಂಥಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ ಸಹಾ ಅವು ಕೆಲವು ಸೀಮಿತ ವಿಷಯಗಳಿಗಷ್ಟೇ ಮೀಸಲಾಗಿವೆ. ಈ ಹಿನ್ನಲೆಯಲ್ಲಿ ಉಲ್ಲೇಖಿಸಬಹುದಾದ ಅತಿ ಮುಖ್ಯವಾದ ಪ್ರಯತ್ನವೆಂದರೆ ಜಾರ್ಜ್‌ಮಿಶಲ್ ಮತ್ತು ಜಾನ್ ಫ್ರೀಟ್ಜ್‌ರವರಿಂದ ನಡೆದ ವಿಜಯನಗರದ ಅರ್ಬನ್ ಕೋರ್‌ನಲ್ಲಿ ನಡೆಸಿದ 'ವಾಸ್ತು ಅವಶೇಷಗಳ ಅನ್ವೇಷಣೆ' ಮತ್ತು ಡಾ.ಎಚ್.ತಿಪ್ಪೇಸ್ವಾಮಿಯವರ 'ಹಂಪಿ ಮಧ್ಯಕಾಲೀನ ಮಹಾನಗರ ಹಾಗು ಹಂಪಿ ಪ್ರಾಧಿಕಾರದ ಸ್ಮಾರಕಗಳು' ಇವು ಹಂಪಿಯ ೧೨೫ ಚ.ಅಡಿ ಪ್ರದೇಶದ ಸ್ಮಾರಕಗಳ ನೈಜ ಚಿತ್ರಣ ನೀಡುವಲ್ಲಿ ಗಮನಾರ್ಹ ಅಧ್ಯಯನವಾಗಿದೆ. ಇದರ ಹೆಚ್ಚಿನ ವಿಷಯದ ಬಗ್ಗೆ ಅಧ್ಯಯನ ಮಾಡುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

ಅಧ್ಯಯನ ಸ್ವರೂಪ :

ಪ್ರಸ್ತುತ ಅಧ್ಯಯನವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿರುತ್ತದೆ.

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ೨

ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯವು ಪ್ರಸ್ತುತ ಎಲ್ಲಿದೆ, ಯಾವಾಗ ನಿರ್ಮಾಣವಾಯಿತು. ಅದರ ಉದ್ದೇಶ ಏನಿದೆ. ಎಂಬುದರ ಸವಿಸ್ತಾರ ವಿಚಾರಗಳನ್ನು ತಿಳಿಸುವ ಮಹತ್ವದ ಅಧ್ಯಾಯ ಇದಾಗಿರುತ್ತದೆ.

ಅಧ್ಯಾಯ : ೩

ಅಧ್ಯಯನದ ಕೇಂದ್ರ ಬಿಂದುವಾದ ಈ ಅಧ್ಯಾಯವು ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಶಿಲಾ ಮಾಧ್ಯಮದ ಶಿಲ್ಪಗಳ ಕುರಿತಾಗಿದ್ದು, ಇಲ್ಲಿರುವ ನಾಲ್ಕು ಅಂಕಣಗಳಲ್ಲಿ ಶಿಲೆಯಲ್ಲಿ ರಚನೆಯಾಗಿರುವ ಶಿಲ್ಪಗಳನ್ನು ಗುರುತಿಸುವ ಮಹತ್ವದ ಅಧ್ಯಾಯ ಇದಾಗಿರುತ್ತದೆ.

ಅಧ್ಯಾಯ : ೪

ಮತ್ತೊಂದು ಅಧ್ಯಯನದ ಕೇಂದ್ರ ಬಿಂದುವಾದ ಈ ಅಧ್ಯಾಯವು ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಲೋಹ ಮಾಧ್ಯಮದ ಶಿಲ್ಪಗಳ ಕುರಿತಾಗಿರುತ್ತದೆ.

ಅಧ್ಯಾಯ : ೫

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಸಂಕೀರ್ಣ ಮಾಧ್ಯಮದ ಕಲೆ ಎಂದಾಗ ಶಿಲೆ ಮತ್ತು ಲೋಹದಲ್ಲಿರುವ ಶಿಲ್ಪಗಳನ್ನು ಹೊರತಾಗಿ ಸಿಗುವಂತಹ ಮಾಧ್ಯಮವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗುವುದು.

ಅಧ್ಯಾಯ : ೬

ಪ್ರವಾಸೋದ್ಯಮದ ಕೇಂದ್ರವಾಗಿ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಕುರಿತು ಕಲಾವಿದರು, ಹಿರಿಯರು ಮತ್ತು ನೋಡುಗರ ಅಭಿಪ್ರಾಯಗಳನ್ನು ಸಂಗ್ರಹಿಸುವುದು.

ಅಧ್ಯಾಯ–೭

ಸಮಾರೋಪ

ಒಟ್ಟು ಅಧ್ಯಾಯಗಳ ಫಲಿತಗಳನ್ನೊಳಗೊಂಡಂತೆ ಪ್ರತಿ ಅಧ್ಯಾಯದ ಕುರಿತು ಚರ್ಚಿಸಲಾಗಿರುತ್ತದೆ.

ಅಧ್ಯಯನ ವ್ಯಾಪ್ತಿ :

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯ ಶಿಲ್ಪಕಲೆಯಾಗಿರುವುದರಿಂದ ವಿಷಯಕ್ಕೆ ಪೂರಕವಾಗಿ ಮುಖ್ಯವಾಗಿ ವಸ್ತುಸಂಗ್ರಹಾಲಯ ಮತ್ತು ಕಮಲಾಪುರದ ಪರಿಚಯವನ್ನು ವಿವರಿಸುವ ವ್ಯಾಪ್ತಿಯನ್ನು ಈ ಅಧ್ಯಯನ ಹೊಂದಿರುತ್ತದೆ.

ವಿಧಾನ :

ಕಮಲಾಪುರದ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಸಂಶೋಧನ ಪ್ರಬಂಧ ಕುರಿತು ಅವಲೋಕನದಲ್ಲಿ ತೊಡಗುವಾಗ ಎರಡು ರೀತಿಯ ಆಕರ ಸಾಮಗ್ರಿಯನ್ನು ಬಳಸಿಕೊಳ್ಳಲಾಗಿದೆ.

೧) ಮೂಲ ಆಕರ ಸಾಮಗ್ರಿ

೨) ಅನುಷಂಗಿಕ ಆಕರ ಸಾಮಗ್ರಿ

ಈ ಮೇಲಿನ ಎರಡು ಮೂಲಗಳಿಂದ ವಿಷಯವನ್ನು ಸಂಗ್ರಹಿಸಲಾಗಿದೆ.

೧. ಮೂಲ ಆಕರ ಸಾಮಗ್ರಿ :

ಸಂಶೋಧನೆಯ ಮೂಲಕ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ, ಸ್ವತಃ ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ, ಅಲ್ಲಿನ ಇತಿಹಾಸ ಕಾಲದ ಶಿಲಾ ಶಿಲ್ಪಗಳು, ಲೋಹಶಿಲ್ಪಗಳ ಜೊತೆಯಲ್ಲಿ ಶಾಸನಗಳು, ನಾಣ್ಯಗಳು, ಆಯುಧಗಳು, ಮಡಕೆಗಳು, ಫಿರಂಗಿಗಳು, ಕಾಗದ ಹಸ್ತಪ್ರತಿಗಳು, ಕತ್ತಿ, ಭರ್ಜಿ, ಗುರಾಣಿ ಇತರೆ ಪ್ರಾಚ್ಯ ಅವಶೇಷಗಳನ್ನು ವೀಕ್ಷಿಸಿ, ಮಾಹಿತಿಯನ್ನು ದಾಖಲು ಮಾಡಿಕೊಳ್ಳಲಾಯಿತು. ಮತ್ತು ಅಲ್ಲಿನ ಅಧಿಕಾರಿಗಳ ಅನುಮೋದನೆ ಪಡೆದು, ಶಿಲ್ಪಗಳ ಛಾಯಚಿತ್ರ ತೆಗದುಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳುವುದು.

೨. ಅನುಷಂಗಿಕ ಆಕರ ಸಾಮಗ್ರಿ :

ವಿಷಯಕ್ಕೆ ಪೂರಕವಾಗಿ ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ ಕೃತಿಗಳು, ನಿಘಂಟುಗಳು, ಗೆಜಿಟಯರ್‌ಗಳು, ಪತ್ರಿಕೆಗಳಲ್ಲಿ ಬಂದ ಲೇಖನಗಳು, ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಪ್ರಕಟಿತ ಸುದ್ಧಿಗಳು, ಗ್ರಂಥಗಳಿಂದ ಟಿಪ್ಪಣಿ, ಬೇರೆ ಬೇರೆ ಕಡೆಹೋಗಿ ಅದರಲ್ಲಿರುವ ಮಾಹಿತಿಯನ್ನು ತೆಗೆದುಕೊಂಡು ಅದರಲ್ಲಿನ ವಿಷಯಗಳನ್ನು ನಕ್ಷೆ ಅಥವಾ ಛಾಯಚಿತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗುವುದು. ಅನೇಕ ವಿದ್ವಾಂಸರನ್ನು ಭೇಟಿ ಮಾಡಿ ವಿವಿಧ ಮಾಹಿತಿಯನ್ನು ಪಡೆದು ಸೇರಿಸುವುದು.

ಅಡಿ ಟಿಪ್ಪಣಿಗಳು

೧. ಎಂ.ಹೇಮಾವತಿ ಶಿವಾನಂದ : ಹಂಪಿ ಪರಿಸರದ ಶೈವ ಶಿಲ್ಪಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ.-೨೦೧೬ ಪು.ಸಂ. ೨

೨. ಪದ್ಮಜಾ ದೇಸಾಯಿ : ಹಂಪಿ ಪರಿಸರದ ವೈಷ್ಣವ ಶಿಲ್ಪಗಳು ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ.-೨೦೧೬ ಪು.ಸಂ. ೨

೩. ಎಂ.ಹೇಮಾವತಿ ಶಿವಾನಂದ : ಹಂಪಿ ಪರಿಸರದ ಶೈವ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ.-೨೦೧೬ ಪು.ಸಂ. ೬

೪. ಕ.ವಿ.ವಿ. ಶಾಸನ ಸಂ.೩- ಹಂಪೆಯ ಶಾಸನಗಳು ಶಾ.ಸಂ.೩೬೫

೫. ಅದೇ ಶಾ.ಸಂ.೧೪೭

೬. ಅದೇ ಶಾ.ಸಂ.೩೫೦

೭. ಅದೇ ಶಾ.ಸಂ.೫೭

೮. ಅದೇ ಶಾ.ಸಂ.೬೯

೯. ಅದೇ ಶಾ.ಸಂ.೩೨೭

೧೦.ಡಾ.ಕೆ.ಶಿವರಾಮ ಕಾರಂತ-ಕರ್ನಾಟಕದಲ್ಲಿ ಶಿಲ್ಪ, ಪು.ಸಂ.೮

೧೧. ಜಿ.ಜ್ಞಾನಾನಂದ-ಶಿಲ್ಪಕಲಾ ದರ್ಶನ ಸಂ.-೧, ಪ್ರಸಾರಾಂಗ, ಕ.ವಿ.ವಿ. ಹಂಪಿ.-೨೦೦೧

೧೨. ಡಾ.ಹೆಚ್. ತಿಪ್ಪೇಸ್ವಾಮಿ, ೨೦೦೬. ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು ಸಂ.೩, ಪು.೪

೧೩. ಡಾ.ಹೆಚ್. ತಿಪ್ಪೇಸ್ವಾಮಿ, "ಕಮಲಾಪುರದ ವಿಜಯನಗರಕಾಲದ ಶಿಲಾಮೂರ್ತಿಗಳು" ವಿಜಯನಗರ ಆಧ್ಯಯನ. ೨೦೦೯

೧೪. ಡಾ.ಸಿ.ಮಹದೇವ : ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕ.ವಿ.ವಿ. ಹಂಪಿ. ೨೦೦೨ ಪು.ಸಂ. ೧೯೪

ಅಧ್ಯಾಯ : ೨

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಹಿನ್ನೆಲೆ.

ಅಧ್ಯಾಯ : ೨

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಹಿನ್ನೆಲೆ

ವಿಶ್ವವಿಖ್ಯಾತ 'ಹಂಪಿ'ಯ ಸಮೀಪದಲ್ಲಿರುವ ಕಮಲಾಪುರವು ಭೌಗೋಳಿಕವಾಗಿ ಹಾಗೂ ಚಾರಿತ್ರಿಕವಾಗಿಯೂ ತನ್ನದೆ ಆದ ಮಹತ್ವ ಮತ್ತು ಹಿನ್ನಲೆಯನ್ನು ಹೊಂದಿದೆ. ಈ ಪರಿಸರ ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಆಡಳಿತ ಕೇಂದ್ರವಾಗಿ, ಉಪನಗರವಾಗಿ ಅಲ್ಲದೇ ಸಾಂಸ್ಕೃತಿಕವಾದ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು. ಇದರ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ ಈ ಮುಂದಿನಂತಿದೆ.

೨.೧ ಕಮಲಾಪುರದ ಭೌಗೋಳಿಕ ಹಿನ್ನೆಲೆ :

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಕೇಂದ್ರದಿಂದ ಸು. ೧೨ ಕಿ.ಮೀ. ದೂರದಲ್ಲಿ ಕಮಲಾಪುರವಿದೆ. ಇಲ್ಲಿಂದ ಬೆಂಗಳೂರಿಗೆ ೩೬೦ ಕಿ.ಮೀ. ದೂರವಿದ್ದು, ಬಳ್ಳಾರಿಗೆ ೭೭ ಕಿ.ಮೀ ದೂರವಿದೆ. ಸಮುದ್ರ ಮಟ್ಟಕ್ಕಿಂತ ೪೫೭ ಕಿ.ಮೀ. ಎತ್ತರವಿರುವ ಇದು ರೇಖಾಂಶ ೧೫.೪೦ ಹಾಗೂ ಉತ್ತರ ಅಕ್ಷಾಂಶ ೭೫.೧೫೦ ಡಿಗ್ರಿಗಳ ನಡುವೆ ಕೇಂದ್ರಿಕೃತವಾಗಿದೆ. ೨೯.೬೦ ಚ.ಕಿ.ಮೀ. ವಿಸ್ತಾರ ಹೊಂದಿರುವ ಕಮಲಾಪುರ ಪ್ರಸ್ತುತ ಪಟ್ಟಣ ಪಂಚಾಯತಿ ಕೇಂದ್ರವಾಗಿರುತ್ತದೆ. ಇಲ್ಲಿ ೨೯ ಸಾವಿರಕ್ಕಿಂತಲೂ ಹೆಚ್ಚಿನ ಜನವಾಸಿಸುತ್ತಿದ್ದಾರೆ. ಇದರ ಉತ್ತರಕ್ಕೆ ಹಂಪಿ, ಈಶಾನ್ಯಕ್ಕೆ ವೆಂಕಟಾಪುರ, ಪೂರ್ವಕ್ಕೆ ಸೀತಾರಾಂ ತಾಂಡ, ಆಗ್ನೇಯಕ್ಕೆ ಪಾಪಿನಾಯಕನಹಳ್ಳಿ, ದಕ್ಷಿಣಕ್ಕೆ ಕಾರಿಗನೂರು ಮತ್ತು ನೈರುತ್ಯಕ್ಕೆ ಗಾಳೆಮ್ಮನ ಗುಡಿ, ಮಲಪ್ಪನಗುಡಿ ಹಾಗು ಪಶ್ಚಿಮಕ್ಕೆ ಕಡ್ಡಿರಾಂಪುರ, ವಾಯುವ್ಯಕ್ಕೆ ಡಣಾಪುರಗಳಿದ್ದು[೧] ಈ ಪಟ್ಟಣದ ಗಡಿಗಳಾಗಿವೆ.

ಕಮಲಾಪುರದ ಹಿನ್ನಲೆ:

'ಕಮಲಾಪುರ'ವನ್ನು ಉಲ್ಲೇಖಿಸುವ ಕೆಲಶಾಸನಗಳಲ್ಲಿ ಉಲ್ಲೇಖವಾಗಿರುವಂತೆ, ಕ್ರಿ.ಶ. ೧೫೪೦ರ ಶಾಸನವೊಂದು 'ಕಮಲಾಪುರ' ಕೆರೆಯ ಕೆಳಗಿನ ಹೂವಿನ ಸಿದ್ದಯ್ಯನ ಗದ್ದೆ ಮತ್ತು ಆ ಗದ್ದೆಗಳ ಉತ್ಪತ್ತಿಯ ಕೆಲಭಾಗಗಳನ್ನು ಹಾಗೂ ತೆಂಗಿನ ಮರಗಳನ್ನು ವರದರಾಜಮ್ಮನ ಪಟ್ಟಣದ 'ನಾಥ ದೇವರಿಗೆ' ನೀಡಿದ ವಿವರವನ್ನು ದಾಖಲಿಸಿದೆ.[೨] ಅದೇ ರೀತಿ ಕ್ರಿ.ಶ. ೧೫೮೧ರ ಶಾಸನವೊಂದು

ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಸಾಳ್ವ ದಣ್ಣಾಯಕ ತನ್ನ ಆಡಳಿತದಲ್ಲಿದ್ದ 'ಕಮಲಾಪುರ' ಸ್ಥಳದ ಕೊಂಡ ಮಾರಸಯ್ಯ ಪಾಳೆಯದ ಭೂಮಿಯನ್ನು ಲಕ್ಷ್ಮೀನರಸಿಂಹ ದೇವರ ದೀಪರಾಧನೆಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸಿದೆ.[೩] ಈ ಮೇಲಿನ ವಿವರಣೆಯಿಂದ ವಿಜಯನಗರ ಕಾಲಕ್ಕಾಗಲೇ 'ಕಮಲಾಪುರವು' ಅಸ್ತಿತ್ವದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಕಮಲಾಪುರ ಎಂಬ ಹೆಸರು ಪ್ರಾಪ್ತವಾದ ಬಗೆಗೆ ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ವಸುಂದರಾ ಫಿಲಿಯೋಜಾರವರು 'ಅಳಿದುಳಿದ ಹಂಪೆ' ಎನ್ನುವ ತಮ್ಮ ಕೃತಿಯಲ್ಲಿ "ಕೃಷ್ಣದೇವರಾಯನು ತನ್ನ ಹೆಂಡತಿ 'ಕಮಲಾದೇವಿ'ಯ ಹೆಸರಿನಲ್ಲಿ ನಗರವೊಂದನ್ನು ನಿರ್ಮಿಸಿ ಅದಕ್ಕೆ ಕಮಲಾಪುರವೆಂದು ಕರೆದನು" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಪ್ರೌಢದೇವರಾಯನ ಪತ್ನಿ ಕಮಲಾದೇವಿಯಿಂದಾಗಿಯೂ ಈ ಹೆಸರು ಪ್ರಾಪ್ತವಾಗಿರಬಹುದೆಂಬುದು ವೀಣಾ ಎಂ.ಪಿ. ಅವರ ಅಭಿಪ್ರಾಯ.[೪] ಕಮಲ ಎಂದರೆ 'ಉತ್ತಮ ಸ್ತ್ರೀ', ಲಕ್ಷ್ಮಿ ಎಂಬ ಅರ್ಥವಿದೆ. 'ಲಕ್ಷ್ಮಿ' ಶ್ರೇಷ್ಠ ಸ್ತ್ರೀಯಾಗಿದ್ದರಿಂದ ಎಲ್ಲರೂ ದೈವ ಭಾವನೆಯಿಂದ ಇವಳ ಜ್ಞಾಪಕಾರ್ಥವಾಗಿ ಈ ಪುರಕ್ಕೆ 'ಕಮಲಾಪುರ' ಎಂದು ಕರೆದಿರಬಹುದೆಂಬುದು ಮತ್ತೊಬ್ಬ ಹಿರಿಯ ವಿದ್ವಾಂಸರ ಅಭಿಪ್ರಾಯ[೫] ಕಮಲಾಪುರ ಎಂಬುದು ಬಿಡಿಸಿದಾಗ

ಕಮಲ = ನೀರಿನಲ್ಲಿ ಅರಳುವ ಪುಷ್ಪ, ತಾವರೆ.

ಪುರ = ನಗರ, ಪಟ್ಟಣ ಎಂಬ ಅರ್ಥಗಳು ಬರುತ್ತವೆ. ಅಂದರೆ 'ತಾವರೆ ಹೂವಿನ' ನಗರ ಎಂದು ಅರ್ಥವಾಗುತ್ತದೆ. ಪ್ರಾಯಶಃ ಇಲ್ಲಿರುವ ಕೆರೆಯಲ್ಲಿ ಅಂದು ಹೆಚ್ಚಾಗಿ ಶ್ವೇತ ತಾವರೆಗಳನ್ನು ಬೆಳೆಯುತ್ತಿದ್ದಿರಬೇಕು? ಅಲ್ಲದೆ ಇಲ್ಲಿನ ಪುಷ್ಪಗಳನ್ನು ಅಂದಿನ ಅರಮನೆ, ಗುರುಮನೆಗಳಿಗೆ ರವಾನಿಸುತ್ತಿದ್ದ ಸೂಚಕವಾಗಿ ಈ ಹೆಸರು ಪ್ರಾಪ್ತವಾಗಿರಬಹುದೆಂದು ಹೇಳಬಹುದಾಗಿದೆ.

ಪರಿಸರ :-

ಇಲ್ಲಿನ ಭೌಗೋಳಿಕ ಪರಿಸರವು ಬೆಟ್ಟ, ಖನಿಜಗಳಿಂದ ಮತ್ತು ಗ್ರಾನೈಟ್ ಶಿಲೆಗಳಿಂದ ಕಂಗೊಳಿಸುತ್ತಿದೆ. ಸಾಮಾನ್ಯವಾಗಿ ಕ್ರಿಸ್ಟಸ್ ಲೈನ್‌ಸಿಸ್ಟ (ಸ್ಪಟಿಕಾತ್ಮಕ ಪದರು ಶಿಲೆ) ಎಪಿಡಿಯೋರಾಯಿಟ್ಸ್ ಗ್ರಾನೈಟ್ (ಜಂಬಿಟ್ಟಿಗೆ) ಮತ್ತು ಲೇಟರ್ ಗ್ರಾನೈಟ್ ಶಿಲಾ ಪದರುಗಳಿಂದ ಕೂಡಿದೆ. ಅಲ್ಲಲ್ಲಿ ಡೈಕ್ ಶಿಲೆ ಕಂಡುಬರುವುದನ್ನು ಗುರುತಿಸಬಹುದು. ಈ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು, ಪೂರ್ಣ ಬೆಟ್ಟದಿಂದಾವರಿಸಿದೆ. ಉತ್ತರಕ್ಕೆ ಹಂಪಿ, ಹಾಗು ಆನೆಗೊಂದಿ ಬೆಟ್ಟ, ಹಿರೇಬೆನಕಲ್ ಮತ್ತು ಕಮ್ಮಟದುರ್ಗಗಳ ಬೆಟ್ಟಗಳಿವೆ. ಪೂರ್ವ ಹಾಗು ಪಶ್ಚಿಮದ ನಡುವೆ

ಸಂಡೂರು ಬೆಟ್ಟಗಳ ಶ್ರೇಣಿಯಿದೆ. ಇವು ಈಶಾನ್ಯದಿಂದ ಆಗ್ನೇಯವರೆಗೂ ಹರಡಿವೆ. ಈ ರೀತಿ ಅಲ್ಲಲ್ಲಿ ಬೆಟ್ಟಗಳು ಗುಂಪುಗಳಾಗಿರುದನ್ನು ಸಾಮಾನ್ಯವಾಗಿ ದಖ್ಖನ್ ಪ್ರಸ್ಥಭೂಮಿಯ ಹಲವೆಡೆ ಕಾಣಬಹುದು. ಈ ಲಕ್ಷಣಗಳು ಹಂಪಿಯ ಪೂರ್ವದಿಕ್ಕಿನಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಪೂರ್ವದಲ್ಲಿ ಕೆಲವು ಬಿಡಿ ಬಿಡಿಯಾದ ಬೆಟ್ಟಗಳ ಗುಂಪುಗಳಿವೆ ಸಂಡೂರು ಬೆಟ್ಟಗಳ ಎತ್ತರಕ್ಕೆ ದರೋಜಿ ಬೆಟ್ಟಗಳಿವೆ. ದರೋಜಿ ಹಾಗು ಸಂಡೂರು ಬೆಟ್ಟಗಳ ನಡುವೆ ಕಣಿವೆ ಪ್ರದೇಶವಿದ್ದು ವ್ಯವಸಾಯಕ್ಕೆ ಅನುಕೂಲವಾಗಿದೆ. ಅಲ್ಲದೆ ಫಲವತ್ತಾದ ಭೂಮಿಯನ್ನು ಹೊಂದಿದ್ದು, ನೀರಾವರಿಯಿಂದಾಗಿ ಹಸಿರು ಕಂಗೊಳಿಸುತ್ತಿದೆ. ದರೋಜಿ ಬೆಟ್ಟಗಳ ಉತ್ತರಕ್ಕೆ ಕಂಪ್ಲಿ ಬೆಟ್ಟಗಳ ಸಾಲುಗಳಿವೆ. ಈ ಎರಡೂ ಬೆಟ್ಟಗಳ ಸಾಲಿನ ನಡುವಿನ ಭೂಪ್ರದೇಶದ ಕಣಿವೆಯಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಿರುವುದನ್ನು ಕಾಣಬಹುದು. ಕಂಪ್ಲಿ ಬೆಟ್ಟಗಳ ಸಾಲಿನಂತೆ ಇನ್ನೊಂದು ಬೆಟ್ಟಗಳ ಸಾಲು ಕುರುಗೋಡು ಪ್ರದೇಶದಲ್ಲಿ ಕಂಡುಬರುತ್ತದೆ. ಇವುಗಳನ್ನು ಕುರುಗೋಡು ಬೆಟ್ಟಗಳು ಎಂದು ಕರೆಯಾಲಾಗುತ್ತದೆ. ಇದು ಉತ್ತರ ಪೂರ್ವದಿಕ್ಕಿಗಿದೆ. ಈ ಬೆಟ್ಟಗಳ ಸಾಲು ಸ್ವಲ್ಪ ದೂರದ ವರೆಗೆ ಮಾತ್ರ ಹರಡಿದೆ. ಹೀಗೆಯೆ ಕೆಲವು ಬೆಟ್ಟಗಳು ಎಂದರೆ ಬಳ್ಳಾರಿಯಲ್ಲಿರುವ ಬೆಟ್ಟಗಳ ಸಾಲು ಈ ಬೆಟ್ಟಗಳು ಗುಂಪುಗಳ ರೀತಿಯಿದ್ದು ತುಂಬ ಎತ್ತರವಾಗಿ ಕಂಡುಬರುವುದು ವಿಶೇಷಗಳಲ್ಲೊಂದು.

ಈ ಬೆಟ್ಟ, ಗುಡ್ಡಗಳಲ್ಲಿನ ಗುಹೆಗಳು, ಕಲ್ಲಾಸರೆಗಳು ಆದಿಮಾನವನ ವಾಸಕ್ಕೆ ಒಂದಡೆ ಸಹಕಾರಿಯಾದರೆ ಇನ್ನೊಂದಡೆ ಇಲ್ಲಿನ ಶಿಲೆ ಅವನು ತನಗೆ ಅಗತ್ಯವಾದ ಆಯುದೋಪಕರಣಗಳನ್ನು ತಯಾರಿಸಿಕೊಳ್ಳಲು ಸಹಕಾರಿಯಾಗಿದೆ ಎಂಬುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ.

ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದೆ. ಮರಳು ಮಿಶ್ರಿತ ಕೆಂಪುಮಣ್ಣು ಸಾಮಾನ್ಯವಾಗಿ ತಂಗಭದ್ರಾನದಿ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇಲ್ಲಿ ಪ್ರಧಾನವಾಗಿ ಗ್ರಾನೈಟ್ ಶಿಲೆ ದೊರೆಯುತ್ತದೆ. ನಾಗಲಾಪುರ, ರಾಜಾಪುರ, ಗಾದಿಗನೂರು, ಅಂಕಮನಾಳ,ರಾಮದುರ್ಗ,ಕಡೆಬಾಗಿಲು.[1] ಬೆಣಚಕಲ್ಲು ದೊರೆಯುತ್ತದೆ. ಹಾಗು ಸಂಡೂರು, ನಂದಿಹಳ್ಳಿ, ಹೊಸಪೇಟೆ ಸುತ್ತಮುತ್ತ ಕಬ್ಬಿಣದ ಅದಿರು ಸಿಗುತ್ತದೆ. ತಾಳೂರು, ಉತ್ತನೂರು, ಜೆಪ್ಸಮ್, ತಿಮ್ಮಾಪುರದಲ್ಲಿ ಬೆಸಾಲ್ಟ್ ಶಿಲೆ, ದೊರೆಯುತ್ತದೆ.

ಈ ಪ್ರದೇಶವು ಮುಂಗಾರು ಹಾಗು ಹಿಂಗಾರು ಮಳೆಯ ಸೆರಗಿನ ಪ್ರದೇಶ ಆದುದರಿಂದ ಅಲ್ಬೇಜಿಯ, ಅಕೇಶಿಯ, ಅರೇಬಿಕ್, ಯುಪೊರ್, ಬಿಯಾಸ ಜಾತಿಗಳಿಗೆ ಸೇರಿದ ಮರ, ಗಿಡಗಳ

ಪ್ರದೇಶವಾಗಿದೆ. ಇಂತಹ ಮರ, ಗಿಡದ ಪ್ರದೇಶವನ್ನು ಅವಲಂಬಿಸುವ ಪ್ರಾಣಿಗಳಾದ ಮೊಲ, ಕರಡಿ, ಜಿಂಕೆಯಂತಹ ಪ್ರಾಣಿಗಳು ಇಲ್ಲಿ ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ಹೇಳುವುದಾದರೆ ತೆಕ್ಕಲಕೋಟೆ, ಸಂಗನಕಲ್ಲು ಹಳ್ಳೂರಿನಲ್ಲಿ ಆಲ್ವಿಯುಯಾ ಅಕಾಹಿಯ ಗುಂಪಿಗೆ ಸೇರಿದ ಸಸ್ಯಗಳು ಬೆಳೆಯುತ್ತಿದ್ದವು. ತೆಕ್ಕಲಕೋಟೆ ಸಂಗನಕಲ್ಲು ಹಳ್ಳೂರಿನಲ್ಲಿ ದೊರೆತಿರುವ ಇದ್ದಿಲಿನಿಂದ ಈ ಸಸ್ಯಗಳನ್ನು ಗುರುತಿಸಲಾಗಿದೆ[೭]. ಇಂದಿಗೂ ಸಹ ಉರುವಲು ಬೇಸಾಯದ ಉಪಕರಣಗಳಿಗೆ ಇವನ್ನು ಬಳಸುತ್ತಾರೆ. ಈ ಪ್ರದೇಶವು ಕಪ್ಪು ಎರೆಮಣ್ಣಿನಿಂದ ಕೂಡಿದ್ದು, ಇಲ್ಲಿ ಮೇಲೆ ತಿಳಿಸಿದ ಕುರುಚಲು ಗಿಡಗಳ ಪ್ರದೇಶದಿಂದ ಆವೃತವಾಗಿದೆ.

ಇಲ್ಲಿ ಹರಿಯುವ ನದಿಗಳಲ್ಲಿ ತುಂಗಭದ್ರ ನದಿಮುಖ್ಯವಾದದು. ತುಂಗಾಭದ್ರಾ ನದಿ ಬಳ್ಳಾರಿ ಜಿಲ್ಲೆಯನ್ನು ಹರಪನಹಳ್ಳಿ ತಾಲೂಕಿನ ಕಡತಿ ಎಂಬ ಗ್ರಾಮದಲ್ಲಿ ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಸಿರಗುಪ್ಪ ತಾಲೂಕುಗಳನ್ನೊಳಗೊಂಡಂತೆ ೩೨೦ ಕಿ.ಮೀ. ಚಲಿಸಿ ಆಲೂರು ತಾಲೂಕಿನ ಚಲಕೂಡಲೂರು ಗ್ರಾಮದಲ್ಲಿ ಆಂಧ್ರಪ್ರದೇಶವನ್ನು ಸೇರುತ್ತದೆ.[೮] ಈ ನದಿ ಪಶ್ಚಿಮದಲ್ಲಿ ಧಾರವಾಡ, ಉತ್ತರದಲ್ಲಿ ಕೊಪ್ಪಳ ಹಾಗು ರಾಯಚೂರು ಜಿಲ್ಲೆಗಳಿಗೆ ಗಡಿಯಾಗಿ ಪರಿಣಮಿಸಿದೆ. ತುಂಗಭದ್ರಾ ನದಿಗೆ ಬಂದು ಸೇರುವ ಹಗರಿ, ಚಿಕ್ಕ ಹಗರಿ ನದಿಗಳು ಪ್ರಾಚೀನ ಕಾಲದಿಂದಲೂ ಕೃಷಿ ಅಭಿವೃದ್ಧಿಗೆ ನೀರನ್ನೊದಗಿಸುತ್ತಿವೆ. ತುಂಗಭದ್ರಾ ನದಿಗೆ ಬಂದು ಸೇರುವ ಹಗರಿ, ಪೆದ್ದವಂಕ, ಗೌರಿಹಳ್ಳ, ನಾರಿಹಳ್ಳ, ಚಿಕ್ಕ ಹಗರಿಗಳಲ್ಲದೆ ಚಿನ್ನ ಹಗರಿಯನ್ನೊಳಗೊಂಡಂತೆ ಅನೇಕ ಹಳ್ಳಗಳು ಈ ಪ್ರದೇಶದಲ್ಲಿ ಹರಿಯುತ್ತವೆ.

ಇಲ್ಲಿನ ಅರಣ್ಯ ಮನುಷ್ಯನಿಗೆ ಅವಶ್ಯಕವಾದ ಹಣ್ಣು ಹಂಪಲು, ಮರ ಮುಟ್ಟು, ಉರುವಲು, ಔಷಧಿಗೆ ಉಪಯುಕ್ತವಾದ ಗಿಡ,ನಾರು–ಬೇರುಗಳನ್ನು ಒದಗಿಸಿದೆ.ಅಲ್ಲದೆ ಇಲ್ಲಿನ ನದಿ,ಹಳ್ಳಗಳು ಮನುಷ್ಯನಿಗೆ ಅವಶ್ಯಕವಾಗಿ ಬೇಕಾದ ಜೀವಸೆಲೆ (ನೀರು)ಯನ್ನು ಒದಗಿಸಿ ಅವನ ಅವಶ್ಯಕತೆಗಳನ್ನು ಪೂರೈಸಿದೆ.

ಬೇಸಿಗೆ ಕಾಲವು ಫೆಬ್ರವರಿ ಅಂತ್ಯದಿಂದ ಆರಂಭವಾಗಿ ಜೂನ್ ತಿಂಗಳವರೆಗೆ ಇರುತ್ತದೆ. ಆಗ ಶಾಖವು ಸರಾಸರಿ ೧೬.೭ ಸೆ.ದಿಂದ ೪೩.೯ಸೆ. ವರೆಗೆ ಇರುತ್ತದೆ. ಕೆಲವು ಸಲ ಇದು ೪೫ ರಿಂದ ೪೯ ಸೆ.ಮೀವರೆಗೆ ಏರುತ್ತದೆ. ಜುಲೈ ತಿಂಗಳಲ್ಲಿ ಆರಂಭವಾಗುವ ಮಳೆಗಾಲ ನವೆಂಬರ್ ತಿಂಗಳವರೆಗೆ ಇರುತ್ತದೆ. ಮಳೆಯ ವಾರ್ಷಿಕ ಸರಾಸರಿ ೫೭೪.೯ ಮಿ.ಮೀ. ಇರುತ್ತದೆ. ನವೆಂಬರ್

ಕೊನೆಯಿಂದ ಫೆಬ್ರವರಿಯವರೆಗೆ ಚಳಿಗಾಲವಿರುತ್ತದೆ. ಶುಷ್ಕ ವಾತಾವರಣವಿರುವ ಈ ಪ್ರದೇಶ ಮನುಷ್ಯನ ವಾಸಕ್ಕೆ ಅತ್ಯಂತ ಯೋಗ್ಯವಾಗಿವೆ.

ಈ ಪ್ರದೇಶದ ಕಾಡು ಹಾಗೂ ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಮುಳ್ಳುಹಂದಿ, ನರಿ, ಜಿಂಕೆ, ತೋಳ ಮೊದಲಾದ ಕಾಡು ಪ್ರಾಣಿಗಳು ಹಾಗು ನವಿಲು, ಕರಡಿ, ಕಾಗೆ, ಗೂಗಿ, ನೀರುಕೋಳಿ, ನೀರುಹಂದಿ, ಗುಬ್ಬಿ,ಕಿಂಗ್‌ಫಿಷರ್, ಮುಂತಾದ ಬಗೆಯ ಪಕ್ಷಿಗಳು ಕಂಡುಬರುತ್ತವೆ. ಅಲ್ಲದೆ ತುಂಗಭದ್ರಾ ನದಿ ನೀರಿನಲ್ಲಿ ಮೊಸಳೆಗಳಿವೆ.[೯].

ತುಂಗಭದ್ರಾ ಮತ್ತು ಅದರ ಉಪನದಿಗಳ ಹಾಗು ಹಳ್ಳ, ಕೆರೆಗಳ ನೀರನ್ನು ಬಳಸಿಕೊಂಡು ಇಲ್ಲವೆ ಮಳೆಯಾಶ್ರಿತ ನೀರಿನ ಸಹಾಯದಿಂದ ಭತ್ತ, ಗೋದಿ, ಜೋಳ, ಗೋವಿನ ಜೋಳ, ರಾಗಿ, ತೊಗರಿ, ಕಡಲೆ ಮೊದಲಾದ ಧಾನ್ಯಗಳು ಹಾಗೂ ಕಬ್ಬು, ಹತ್ತಿ, ಬಾಳೆ ವಾಣಿಜ್ಯ ಬೆಳೆಗಳನ್ನು ಬೆಳಯಲಾಗುತ್ತದೆ.

ಈ ರೀತಿಯ ಎಲ್ಲ ಸವಲತ್ತುಗಳು ಈ ಭೂಭಾಗದಲ್ಲಿ ಇದ್ದಿದ್ದರಿಂದ ಹಂಪಿ, ಆನೆಗೊಂಡಿ ಸುತ್ತಮುತ್ತಲಿನ ಸ್ಥಳಗಳಾದ ನಿಟ್ಟೂರು, ತೆಕ್ಕಲಕೋಟೆ, ಸಂಗನಕಲ್ಲು, ಕಪಗಲ್ಲ, ಕುಡತಿನಿ, ಕಾಕುಬಾಳ, ಹಿರೆಬೆಣಕಲ್ಲು, ಮಲ್ಲಾಪುರ ಮೊದಲಾದ ಸ್ಥಳಗಳಲ್ಲಿ ಆದಿಶಿಲಾಯುಗದಿಂದ ಆದಿಮಾನವನು ವಾಸಿಸಿದ್ದಾನೆ. ಅಲ್ಲದೆ ಮುಂದೆ ಈ ಪ್ರಬಲ ರಾಜ್ಯಗಳನ್ನು ಕಟ್ಟಲು ಇಲ್ಲಿನ ಭೌಗೋಳಿಕ ಪರಿಸರವು ಸಹಕಾರಿಯಾಯಿತು.ಇದರಿಂದಾಗಿಯೇ ಹಂಪಿ-ಆನೆಗುಂದಿ ಮುಂತಾದ ನೆಲೆಗಳಲ್ಲಿ ಮನುಷ್ಯ ಪ್ರಾಗೈತಿಹಾಸಿಕ ಕಾಲದಿಂದ ಇತಿಹಾಸಕಾಲದಲ್ಲು ವಾಸಿಸುತ್ತ ಆ ಪರಂಪರೆ ಇಂದಿಗೂ ಮುಂದುವರಿಯಲು ಕಾರಣವಾಗಿದೆ.

ಬೆಟ್ಟಗಳಿಂದ ಸುತ್ತುವರಿದ ಎತ್ತರವಾದ ಈ ಭೂ ಪ್ರದೇಶ ಪ್ರಕೃತಿದತ್ತ ಸುರಕ್ಷತೆಯನ್ನು ನೀಡಿವೆ. ಇಂತಹ ಬೆಟ್ಟಗಳ ಸಾಲಿನಲ್ಲಿ ನದಿ, ಸಣ್ಣನದಿ, ಹಳ್ಳಗಳು ಹರಿಯುವುದು ಸಾಮಾನ್ಯ ಈ ನೀರಿನ ಪ್ರದೇಶದ ಆಸುಪಾಸಿನಲ್ಲಿರುವ ಫಲವತ್ತಾದ ಮಣ್ಣಿನಿಂದಾಗಿ ಕೃಷಿಗೆ ಯೋಗ್ಯವಾದ ಪ್ರದೇಶ ದೊರಕಿದೆ. ಮಣ್ಣು ಫಲವತ್ತಾದರೂ ಇಲ್ಲಿ ಮಳೆ ಕಡಿಮೆಯಾದದ್ದರಿಂದ ಇತ್ತೀಚಿನವರೆಗೂ ಈ ಪ್ರದೇಶ ಒಣ ಬೇಸಾಯಕ್ಕೆ ಒಳಪಟ್ಟಿತ್ತು. ಆದರೆ ತುಂಗಭದ್ರ ಆಣೆಕಟ್ಟು ನಿರ್ಮಾಣದಿಂದ ತೋಡಿದ ಕಾಲುವೆಗಳಿಂದಾಗಿ ಇಂದು ನೀರಾವರಿ ಭೂಮಿಯಾಗಿದೆ. ಇಲ್ಲಿಯ ಭೂ ಭೌತಿಕ ಸ್ವರೂಪ ಇಲ್ಲಿ ದೊರೆಯುವ ಅದಿರು, ಖನಿಜ, ಮಣ್ಣು, ಸಸ್ಯಗಳು ಮಾನವನಿಗೆ ಸಹಕಾರಿಯಾಗಿದ್ದವು. ಇದುವೇ ಪ್ರಾಚೀನ ಮನುಷ್ಯ ಒಕ್ಕಲು ಸಂಸ್ಕೃತಿ ಆರಂಭಿಸಲು ಪ್ರೇರಣೆಯಾಯಿತು. ಒಟ್ಟಾರೆ ಹೇಳುವುದಾದರೆ

ಭೌಗೋಳಿಕವಾಗಿ ಇದು ಪ್ರಾಚೀನ ಪ್ರದೇಶವಾಗಿದ್ದು, ವಿಶಾಲವಾಗಿ ಹರಡಿಕೊಂಡಿದೆ. ಇಲ್ಲಿ ಹರಿಯುವ ತುಂಗಭದ್ರ ಹಲವು ರೀತಿಯಲ್ಲಿ ಜನಜೀವನದ ಮೇಲೆ ಪ್ರಭಾವ ಬೀರಿದೆ. ಅಲ್ಲದೆ ಅನೇಕ ಸಂಸ್ಕೃತಿಗಳ ಏಳ್ಗೆಗೂ ಕಾರಣವಾಗಿದೆ. ಇಲ್ಲಿನ ಬೆಟ್ಟಗುಡ್ಡಗಳಲ್ಲಿ ದೊರೆಯುವ ನೀರನ್ನು ಆಧರಿಸಿ ಆದಿಮಾನವ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡಿರಬಹುದು. ವ್ಯವಸಾಯದ ಕಸುಬನ್ನು ಆತ ಕರಗತ ಮಾಡಿಕೊಂಡ ನಂತರ ಈ ಸ್ಥಳಗಳಲ್ಲಿದ್ದ ಉತ್ತಮವಾದ ಭೂಮಿ ವ್ಯವಸಾಯಕ್ಕೆ ಆಸರೆಯಾಯಿತು. ಇದು ಮುಂದೆ ಹಲವು ಸಂಸ್ಕೃತಿಗಳ ಉಗಮಕ್ಕೆ ಕಾರಣವಾಯಿತು. ಪಲವತ್ತಾದ ಭೂಮಿ, ದೊಡ್ಡದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಗಳು, ನಿಸರ್ಗ ನಿರ್ಮಿತ ಮತ್ತು ಕೊರೆದು ತಯಾರಿಸಿದ ಗವಿಗಳು, ತಾಮ್ರ, ಕಬ್ಬಿಣ, ಚಿನ್ನದ ಅದಿರು, ತುಂಗಭದ್ರಾ ಮತ್ತು ಅದರ ಉಪನದಿಗಳ ನೀರಿನ ಸರಬರಾಜು, ಕಾಡು ಮೊದಲಾದ ಭೌಗೋಳಿಕ ಅನುಕೂಲತೆಗಳಿಂದ ಪ್ರಾಗಿತಿಹಾಸ ಕಾಲದಿಂದಲೂ ಮಾನವನ ವಾಸಸ್ಥಾನವಾಗುವುದಕ್ಕೆ ಈ ಪ್ರದೇಶ ಕಾರಣವಾಯಿತು ಎಂದು ಹೇಳಬಹುದು.

ಮಾನವನ ಉಗಮ, ವಿಕಾಸ ಹಾಗೂ ಅಭಿವೃದ್ಧಿಯಲ್ಲಿ ಪರಿಸರ ಗಮನಾರ್ಹ ಪಾತ್ರವಹಿಸಿದೆ. ಅಷ್ಟೆ ಅಲ್ಲದೆ ಇಡೀ ಜೀವ ಸಂಕುಲದ ಉಳಿವು ಅಲ್ಲಿನ ಪರಿಸರವನ್ನು ಅವಲಂಬಿಸಿರುತ್ತದೆ ಎಂಬುದನ್ನು ನಾವುಗಳು ಅಲ್ಲಗೆಳೆಯುವಂತಿಲ್ಲ.ರಾಜ ಮಹಾರಾಜರ ಕೀರ್ತಿ, ಪತಾಕೆ, ರಾಜ್ಯಗಳ ಅಳಿವು ಉಳಿವು ಸಹಾ ಅಲ್ಲಿನ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತದೆ ಎಂಬುದು ಅದರ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಕಮಲಾಪುರ ಪರಿಸರದಲ್ಲಿ ಮಾನವ ಆದಿ ಕಾಲದಿಂದ ಅನೇಕ ಬದಲಾವಣೆಗಳೊಂದಿಗೆ ನಾಗರಿಕತೆಯತ್ತ ಸಾಗಲು ಇಲ್ಲಿನ ಸುತ್ತ ಮುತ್ತಲಿನ ಭೌಗೋಳಿಕ ಪರಿಸರವೇ ಕಾರಣ. ಈ ಪರಿಸರ ಮಾನವನ ಸರ್ವಾಂಗೀಣಾ ಅಭಿವೃದ್ಧಿಗೆ ತನ್ನದೆ ಆದ ಕೊಡುಗೆ ನೀಡಿದೆ. ಆದಿ ಮಾನವ ಇಲ್ಲಿನ ನಿಸರ್ಗದತ್ತವಾದ ಸಂಪತ್ತನ್ನು ಬಳಸಿಕೊಂಡು ಅದನ್ನು ತನ್ನ ನಿತ್ಯ ಬಳಕೆಗಾಗಿ ಬಳಸಿಕೊಂಡು ತಾನು ಬೆಳವಣಿಗೆ ಹೊಂದಿದ್ದನ್ನು ಕಾಣಬಹುದಾಗಿದೆ.

೨.೨ ಚಾರಿತ್ರಿಕ ಹಿನ್ನಲೆ :

ಮಾನವ ಆದಿಮ ಹಂತದಿಂದ ನಾಗರಿಕ ಹಂತಕ್ಕೆ ತಲುಪುವವರೆಗಿನ ಕಾಲವನ್ನು ಇಲ್ಲವೇ ಮಾನವ ಅಕ್ಷರ ಜ್ಞಾನವನ್ನು ಕಂಡುಕೊಳ್ಳದೆ ಇದ್ದ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆಂದು ಅಥವಾ

ಇತಿಹಾಸ ಪೂರ್ವಕಾಲವೆಂದು ಕರೆಯುತ್ತಾರೆ[೧೦]. ಮಾನವನ ಅಕ್ಷರ ಜ್ಞಾನವನ್ನು ಕಂಡುಕೊಂಡ ನಂತರದ ಕಾಲವನ್ನು ಚಾರಿತ್ರಿಕ ಕಾಲ ಎನ್ನುತ್ತಾರೆ. ಈ ಕುರಿತ ವಿವರ ಈ ಮುಂದಿನಂತೆ ಇದೆ.

೨.೨.೧ ಪ್ರಾಗೈತಿಹಾಸಕ ಹಿನ್ನಲೆ :

ಭಾಸ್ಕರ ಕ್ಷೇತ್ರ ಕಿಷ್ಕಿಂದ ಪಂಪಾತೀರ್ಥ ವಿಜಯನಗರ ಎಂದೆಲ್ಲ ಕರೆಯಿಸಿಕೊಳ್ಳುವ ಹಂಪಿಯ ಹಾಗೇ ಅದರ ಅತಿ ಸಮೀಪವಿರುವ ಕಮಲಾಪುರವು ಬಹು ಪ್ರಾಚೀನದಿಂದಲೂ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ. ದೇಶದ ಇತರೆಡೆಯಂತೆ ಇಲ್ಲಿಯೂ ಬಹುಪ್ರಾಚೀನ ಕಾಲದಿಂದಲೂ ಮನುಷ್ಯ ವಾಸಿಸುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಕಮಲಾಪುರದ ಸಮೀಪ ಇರುವ ಮಸಳಯನ್ಯಗುಡ್ಡ ಕಿಷ್ಕಿಂದ, ವಾಲಿಕಷ್ಟ, ವಾಲಿ ಭಂಡಾರ ಎನ್ನುವ ಹೆಸರುಗಳೇ ಕಮಲಾಪುರದ ಪ್ರಾಚೀನತೆಯನ್ನು ಸೂಚಿಸುತ್ತವೆ. ಕೇವಲ ಕಮಲಾಪುರ ಅಷ್ಟೇ ಅಲ್ಲದೇ ಅದರ ಸುತ್ತಲಿನ ಹಲವಾರು ಪ್ರದೇಶಗಳಲ್ಲಿ ನಡೆಸಿದ ಹಲವಾರು ಅನ್ವೇಷಣೆ ಮತ್ತು ಕೆಲ ಉತ್ಖನನದ ಫಲವಾಗಿ ಆದಿಮಾನವನ ಹಲವಾರು ತಾಣಗಳು ಬೆಳಕಿಗೆ ಬಂದಿವೆ. ಆ ವಿವರ ಈ ಮುಂದಿನಂತಿದೆ.

೧. ಹಳೆ ಶಿಲಾಯುಗ (ಪ್ಯಾಲಿಯೋಲಿಥಿಕ್) :

ಗ್ರೀಕ್ ಭಾಷೆಯಲ್ಲಿ ಪ್ಯಾಲಿಯೋ ಎಂದರೆ ಹಳೆಯ ಎಂದು, ಲಿಥಿಕ್ ಎಂದರೆ ಶಿಲೆ ಎಂದು ಅರ್ಥ. ಈ ಕಾಲದಲ್ಲಿ ಮಾನವ ಶಿಲೆಯಿಂದ ಮಾತ್ರ ಬಹುತೇಕ ಉಪಕರಣಗಳನ್ನು ತಯಾರಿಸಿಕೊಂಡು ಅವುಗಳನ್ನು ತನ್ನ ಬಳಕೆಗೆ ಬಳಸಿಕೊಂಡಿದ್ದರಿಂದ ಮತ್ತು ಅವನ ರೀತಿ ನೀತಿಗಳೂ ಸಾಕಷ್ಟು ಸುಧಾರಿಸದೇ ಇನ್ನು ಆದಿಮ ಹಂತದಲ್ಲಿ ಇದ್ದಿದ್ದರಿಂದ ಈ ಕಾಲಘಟ್ಟವನ್ನು ಹಳೆ ಶಿಲಾಯುಗ ಸಂಸ್ಕೃತಿ (ಪ್ಯಾಲಿಯೋಲಿಥಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ಆದಿಮಾನವನ ಈ ಜೀವನ ಕ್ರಮವನ್ನು ಪುನಃ ೩ ಭಾಗಗಳಾಗಿ ಮುಂದಿನಂತೆ ವಿಭಾಗಿಸಲಾಗಿದೆ.

೧. ಆದಿ ಹಳೆ ಶಿಲಾಯುಗ – (೭ಲಕ್ಷ ಅಥವಾ ಅದಕ್ಕೂ ಮುಂಚೆ)

೨. ಮದ್ಯ ಹಳೆ ಶಿಲಾಯುಗ – (ಕಿ.ಪೂ. ೭೦,೦೦೦ ೩೦,೦೦೦)

೩. ಅಂತ್ಯ ಹಳೆ ಶಿಲಾಯುಗ – (ಕ್ರಿ.ಪೂ. ೪೦,೦೦೦ ೧೦,೦೦೦)

ಕರ್ನಾಟಕದಲ್ಲಿ ಈ ಸಂಸ್ಕೃತಿಗೆ ಸೇರಿದ ಸ್ಥಳಗಳು ವಿವಿದೆಡೆ ದೊರೆಕಿವೆ. ಅವುಗಳಲ್ಲಿ ಕೃಷ್ಣಾ ಮೇಲ್ದಂಡೆ ಮತ್ತು ಘಟಪ್ರಭಾದ ೧೫ ಸ್ಥಳಗಳಲ್ಲಿ ಹಾಗು ಕಲಾದಗಿ, ಅನಗವಾಡಿ(ಬಿಜಾಪುರ), ಗುಲಬಾಳ್ ಕಿಲ್ಬನ ಹಳ್ಳಿ (ತುಮಕೂರು ಜಿಲ್ಲೆ) (ಸುರಪುರ ತಾಲ್ಲೂಕು ಕಲ್ಬುರ್ಗಿ.ಜಿ.) ನಿಟ್ಟೂರ್

(ಸಿರುಗುಪ್ಪ.ತಾ. ಬಳ್ಳಾರಿ.ಜಿ.) ಹುಣಸಗಿ, (ಸುರಪುರ ತಾಲ್ಲೂಕು ಕಲ್ಬುರ್ಗಿ.ಜಿ.)ನೆಲೆಗಳು ಪ್ರಮುಖವಾಗಿವೆ. ಸಂಗನಕಲ್ಲು, ಬ್ರಹ್ಮಗಿರಿ, ನಿಟ್ಟೂರು, ಸಾಲ್ವಡಗಿ, ಮಟಕದೇವನಹಳ್ಳಿ (ಬುಡಪನಹಳ್ಳಿ) ಮತ್ತು ಕೂಚುಬಾಳು, ಕೋವಳ್ಳಿ(ಮುದ್ದೇಬಿಹಾಳು ತಾಲೂಕು ಈಗ ಬಾಗಲಕೋಟೆ ಜಿಲ್ಲೆ) ಅಲ್ಲದೆ ಅಂತ್ಯ ಹಳೆ ಶಿಲಾಯುಗಕ್ಕೆ ಸಂಬಂದಿಸಿದಂತೆ ಮೊಟ್ಟ ಮೊದಲಿಗೆ ೧೯೫೫ರಲ್ಲಿ[೧೧] ಸಾಳವಾಡಗಿಯಲ್ಲಿ ಉಪಕರಣ ಉತ್ಪಾದನಾ ನೆಲೆಯನ್ನು ಅ.ಸುಂದರರವರು ಗುರುತಿಸಿದರು. ಇದೇ ನಿವೇಶನದಲ್ಲಿ ಸಂಗ್ರಹಿಸಿದ ಉಪಕರಣಗಳ ವಿಷಯವಾಗಿ ಎಂ.ಶೇಷಾದ್ರಿಯವರು ವಿವರಣಾತ್ಮಕ ಅಧ್ಯಯನವನ್ನು ಮಾಡಿದ್ದಾರೆ. ಮಾಂಜ್ರಾ, ದೋಣ, ಕೃಷ್ಣ, ತುಂಗಾ, ಶಿಂಷಾ ಹಾಗೂ ಪನ್ನಾರ್ ನದಿ ಕೊಳ್ಳಗಳಲ್ಲಿ ಈ ನೆಲೆಗಳು ಹೆಚ್ಚಾಗಿ ಕಂಡು ಬಂದಿವೆ. ಬಳ್ಳಾರಿ ತಾಲೂಕಿನ ಬಾದನಹಟ್ಟಿ, ಗುಡ್ಡ, ಬಳ್ಳಾರಿ, ಬೇಡರಬೆಳೆಗಲ್ಲು, ಕಮಲಾಪುರ, ವೆಂಕಟಾಪುರ ಎನ್ನುವ ಪ್ರದೇಶಗಳಲ್ಲಿ ಈ ಕಾಲದ ಕೈಗೊಡಲಿ ಇತ್ಯಾದಿಗಳು ದೊರತಿದ್ದು, ಅಂದಿನ ಸಂಸ್ಕೃತಿಯ ಮೇಲೆ ಬೆಳಕು ತೋರುತ್ತವೆ. ಈ ಕಾಲದ ಆದಿ ಮಾನವ ನಿಸರ್ಗದಲ್ಲಿ ದೊರೆಯುವ ಆಹಾರ ಸಂಪಾದನೆಯ ಹಂತದಲ್ಲಿದ್ದರೂ ನೈಸರ್ಗಿಕ ಗವಿ ಮುಂತಾದ ರಕ್ಷಣೆಯ ಸ್ಥಳಗಳಲ್ಲಿ ಇರುತ್ತಿದ್ದರೆಂಬುದು ಮಾತ್ರ ತಿಳಿದುಬಂದಿದ್ದು. ಅವರ ನಡುವಿನ ಜೀವನ ಕ್ರಮದ ಬಗ್ಗೆ ಇದುವರೆಗೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಈ ಹಂತದ ಮಾನವನ ದೈನಂದಿನ ಕಾರ್ಯಚಟುವಟಿಕೆಯನ್ನು ಆಹಾರ ಸಂಗ್ರಹಣೆ ಮತ್ತು ಬೇಟೆಗಾರಿಕೆ ಸಂಸ್ಕೃತಿಯೆಂದು ಕರೆಯಲಾಗಿದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಮೆಸೋಲಿಥಿಕ್ ಕಲ್ಚರ್) – (ಕ್ರಿ.ಪೂ ೭,೦೦೦ ೩,೦೦೦) :

ಗ್ರೀಕ್ ಭಾಷೆಯಲ್ಲಿ ಮೆಸೋ ಎಂದರೆ ಸೂಕ್ಷ್ಮ ಎಂದು, ಲಿಥಿಕ್ ಎಂದರೆ ಶಿಲೆ ಎಂಬ ಅರ್ಥಗಳಿವೆ.ಈ ಕಾಲದಲ್ಲಿ ಮಾನವ ಶಿಲೆಯಿಂದ ಬಹಳ ಸೂಕ್ಷ ಉಪಕರಣಗಳನ್ನು ತಯಾರಿಸಿಕೊಂಡು ಅವುಗಳನ್ನು ತನ್ನ ಬಳಕೆಗೆ ಬಳಸಿಕೊಂಡಿದ್ದರಿಂದ ಈ ಕಾಲಘಟ್ಟವನ್ನು ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಮೆಸೋಲಿಥಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಈ ಕಾಲದ ಆಹಾರೋತ್ಪಾದನೆಯ ಬೆಳವಣಿಗೆಯಿಂದಾಗಿ ಈ ಕಾಲವನ್ನು ಸ್ಥಿತ್ಯಂತರ (Mesolithic) ಹಂತವೆಂದು ಸಹಾ ಗುರುತಿಸಲಾಗಿದೆ.

ಭಾರತದ ಹಲವಾರು ಸ್ಥಳಗಳಲ್ಲಿ ಇದರ ಕುರುಹುಗಳು ಶೋಧಿತವಾಗಿವೆ. ಕರ್ನಾಟಕದಲ್ಲಿ ಈ ಕಾಲದ ನಿವೇಷನಗಳು ೧೮೮೯ರ ವೇಳೆಗೆ ಬೆಳಕಿಗೆ ಬಂದಿದ್ದರೂ ಸಹಾ ಅಲ್ಲಿ ದೊರೆತ ಉಪಕರಣಗಳ ವೈಜ್ಞಾನಿಕ ಅಧ್ಯಯನ ಆರಂಭವಾದುದು ೧೯೫೬ರ ನಂತರವೇ.

ಈ ಸಂಸ್ಕೃತಿಯ ಶಿಲೋಪಕರಣಗಳು ಸುರಪುರ, ಬೆಂಗಳೂರು ಮತ್ತು ಕೃಷ್ಣಾನದಿ ಪಾತ್ರ, ದಕ್ಷಿಣ ಕನ್ನಡ ಜಿಲ್ಲೆಯ ಮಾಣಿ ಮತ್ತು ಉಪ್ಪಿನಂಗಡಿ. ಬೀದರ್ ಜಿಲ್ಲೆಯ ಮಾಂಜ್ರ ಮತ್ತು ಕಾರಂಜಾ ಕಣಿವೆ ಪ್ರದೇಶ ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶದ ದಾವಣಗೆರೆ, ಶಿವಮೊಗ್ಗ, ಚಿಕ್ಕಮಂಗಳೂರು ಮತ್ತು ಹಾಸನಜಿಲ್ಲೆ ಹಾಗೂ ತುಮಕೂರು ಜಿಲ್ಲೆಯ ಶಿಂಷಾ ಮತ್ತು ಪೆನ್ನಾರ್‌ನದಿ ಪ್ರಾಂತಗಳಲ್ಲಿ ದೊರೆತಿರುವ ನೆಲೆಗಳು ಈ ಸಂಸ್ಕೃತಿಯ ವಿಸ್ತೃತ ಬೆಳವಣಿಗೆಗೆ ಹಾಗೂ ಪ್ರಸರಣದ ಬಗೆಗೆ ತಿಳಿಯಲು ಸಹಾಯಕವಾಗಿವೆ. ಬ್ರಹ್ಮಗಿರಿ, ಕುಡತಿನಿ, ಕಮಲಾಪುರ ಸಮೀಪದ ಸಂಗನಕಲ್ಲು, ಕಪ್ಪಗಲ್ಲು, ಆನೆಗೊಂದಿ, ಬುಕ್ಕಸಾಗರ ಎನ್ನುವ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಕುರುಹುಗಳು ದೂರೆತ್ತಿದ್ದು ಅಂದಿನ ಶಿಲಾಯುಗದ ಜನಜೀವನ ಅರಿಯಲು ಸಹಾಯಕವಾಗಿವೆ.

ನೂತನ ಶಿಲಾಯುಗ ಸಂಸ್ಕೃತಿ (ನಿಯೋಲಿಥಿಕ್ ಕಲ್ಚರ್) : (ಕ್ರಿ.ಪೂ. ೩೦೦೦-೧೫೦೦)

ಗ್ರೀಕ್ ಭಾಷೆಯಲ್ಲಿ ನಿಯೋ ಎಂದರೆ ನವೀನ/ಹೊಸದು ಎಂದು, ಲಿಥಿಕ್ ಎಂದರೆ ಸ್ಟೋನ್ ಎಂಬ ಅರ್ಥವಿದೆ. ಈ ಹಂತದಲ್ಲಿ ಮನುಷ್ಯ ಜೀವನದ ರೀತಿ ನೀತಿಗಳು ಸಾಕಷ್ಟು ಬದಲಾವಣೆ ಗೊಂಡವು ಅಲ್ಲದೆ ಈ ಕಾಲಘಟ್ಟದಲ್ಲಿ ಶಿಲಾಯುದಗಳನ್ನು ಉಜ್ಜಿ ನಯಗೊಳಸಿ ತಯಾರಿಸುತ್ತಿದ್ದರಿಂದಾಗಿ ಈ ಯುಗವನ್ನು ನೂತನ ಶಿಲಾಯುಗ ಸಂಸ್ಕೃತಿ (ನಿಯೋಲಿಥಿಕ್ ಕಲ್ಚರ್) ಎಂದು ಕರೆಯಲಾಗುತ್ತದೆ. ಈ ಸಂಸ್ಕೃತಿಯ ಹಂತವನ್ನು ಗುರುತಿಸುವಾಗ ಉಜ್ಜಿ ನಯಗೊಳಿಸಿದ ಮೇಲ್ಮೈಯುಳ್ಳ ಕೊಡಲಿಗಳು ಹಾಗೂ ಬೂದುವರ್ಣದ ಮಡೆಕೆಗಳನ್ನು ಗಣನೆಗೆ ತೆಗೆದು ಕೊಳ್ಳಲಾಗುತ್ತದೆ.

ಕರ್ನಾಟಕದಲ್ಲಿ ನೂತನ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಶೋಧನೆಗಳು ಪ್ರಥಮವಾಗಿ ೧೮೭೨ರಲ್ಲಿ ಶೋಧಿತವಾದವು. ಫ್ರೇಸರ್ ಅವರು ಬಳ್ಳಾರಿ ಜಿಲ್ಲೆ ಕಪ್ಪುಗಲ್ಲು ಬೆಟ್ಟದಲ್ಲಿ ನೂತನ ಶಿಲೋಪಕರಣ ಹಾಗೂ ವಾಸ್ತವ್ಯದ ನೆಲೆಯೊಂದನ್ನು ಗುರುತಿಸಿದರು. ರಾಬಟ್ ಬ್ರೂಸ್ ಪೂಟ್‌ರವರು ಕೋಲಾರ್ ಜಿಲ್ಲೆ ಶ್ರೀನಿವಾಸಪುರ ಮತ್ತು ಬೀರಿಮಂಗಳ ನೆಲೆಗಳನ್ನು ಶೋದಿಸಿದರು. ಮೈಸೂರು ಜಿಲ್ಲೆಯ ಲಕ್ಷ್ಮೀಪುರ ಮತ್ತು ನರಸೀಪುರ ಮತ್ತು ಮಂಡ್ಯ ಜಿಲ್ಲೆಯ ಫ್ರೆಂಚ್ ಹಿಲ್ಸ್ ಮುಂತಾದೆಡೆಗಳಲ್ಲಿಯೂ ನೂತನ ಶಿಲಾಯುಗದ ಸಂಸ್ಕೃತಿಯ ನೆಲೆಗಳು ಶೋದಿತವಾದವು.

ಕರ್ನಾಟಕದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕುರಿತು ಇಲ್ಲಿ ನೆಡದ ಹಲವು ಉತ್ಖನನಗಳು ಮಹತ್ವದ ವಿವರಗಳನ್ನು ಒದಗಿಸಿವೆ. ಅವುಗಳೆಂದರೆ ಬ್ರಹ್ಮಗಿರಿ, ಮಸ್ಕಿ, ಪಿಕ್ಲೆಹಾಳ್. ತೆಕ್ಕಲಕೋಟೆ, ಹಳ್ಳೋರು, ಕುಪ್ಪಗಲ್ ತಿ.ನರಸೀಪುರ, ಕೊಡೆಕಲ್. ಹೆಮ್ಮಿಗೆ., ಹಾಗೂ ಇತ್ತೀಚಿಗೆ

ನಡೆದ ಕೋಲಾರ ಜಿಲ್ಲೆಯ ಬನಹಳ್ಳಿ. ಮಂಜ್ರಾ, ಕಾರಂಜಾ ನದಿ ಕಣಿವೆಗಳ ಕ್ಷೇತ್ರ ಕಾರ್ಯದಿಂದ ನೂತನ ಶಿಲಾಯುಗದ ನೆಲೆಗಳನ್ನು ಗುರುತಿಸಲಾಗಿದೆ. ಮಲೆನಾಡು ಅರೆಮಲೆನಾಡಿನ ದಾವಣಗೆರೆ, ಶಿವಮೊಗ್ಗ, ಚಿಕ್ಕಮಂಗಳೂರು ಮತ್ತು ಹಾಸನ್ ಜಿಲ್ಲೆಗಳಲ್ಲಿಯೂ ಕೆಲವು ನೆಲೆಗಳು ಕಂಡುಬಂದಿವೆ. ಪನ್ನಾರ್ ನದಿಪಾತ್ರವು ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿದ್ದಿತೆಂದು ತಿಳಿಯುತ್ತದೆ ಈ ನಿವೇಶನಗಳ ಅಧ್ಯಯನದಂಇದಾಗಿ ಕರ್ನಾಟಕದಲ್ಲಿ ಈ ಸಾಂಸ್ಕೃತಿಕ ಹಂತವು ಉಚ್ಛ್ರಾಯ ಸ್ಥಿತಿಯಲ್ಲಿದ್ದುದು ತಿಳಿಯುತ್ತದೆ. ಮುಳ್ಯ ಅವಷೇಶವಾದ ವೈವಿಧ್ಯ ಶಿಲೋಪಕರಣಗಳು ಮಣ್ಣಿನ ಪಾತ್ರಗಳು ಶವಸಂಸ್ಕಾರ ಪದ್ದತಿ ಕಲೆಗಾರಿಕೆ ಮುಂತಾದ ಅನೇಕ ವಿಷಯಗಳ ಕುರಿತು ಮಹತ್ವದ ಮಾಹಿತಿಗಳು ತಿಳಿದು ಬಂದಿವೆ. ಕಮಲಾಪುರ ಪರಿಸರದಲ್ಲಿ ನಿಂಬಾಪುರ, ಕಮಲಾಪುರ, ಬುಕ್ಕಸಾಗರ, ವೆಂಕಟಾಪುರ, ಆನೆಗೊಂದಿ, ಹಿರೇಬೆನಕಲ್ ಹಾಗು ಕಪ್ಪಗಲ್ಲು, ಸಂಗನಕಲ್ಲು, ಹಳೆನೆಲ್ಲುಡಿ. ಕಕ್ಕಬೇವಿನಹಳ್ಳಿ, ಬೇಡರಬೆಳೆಗಲ್ಲು, ಹಲಕುಂದಿ ಮತ್ತು ಕುಡಿತಿನಿ ಮುಂತಾದ ಪ್ರದೇಶಗಳಲ್ಲಿ ಈ ಕಾಲದ ಅವಶೇಷಗಳು ದೊರೆತ್ತಿದ್ದು, ಅಂದಿನ ಸಂಸ್ಕೃತಿಯನ್ನು ಅರಿಯಲು ಸಹಾಯಕವಾಗಿವೆ.

ಶಿಲಾ ತಾಮ್ರ ಯುಗ ಸಂಸ್ಕೃತಿ:– –(ಕಿ.ಪೂ. ೨,೨೦೦–೮೦೦)

ನೂತನ ಶಿಲಾಯುಗದ ಒಂದು ಘಟ್ಟದಿಂದ ತಾಮ್ರದ ಬಳಕೆ ಆರಂಭವಾಯಿತು. ತಾಮ್ರದ ಅದಿರಿನಿಂದ ಲೋಹವನ್ನು ತಯಾರಿಸಿ ಅದರಿಂದ ಆಭರಣ, ಗೊಂಬೆ, ಆಯುಧ, ಮೊದಲಾದವುಗಳನ್ನು ಮಾಡಲಾಗುತ್ತಿತ್ತು. ಈ ಹಂತದ ಜನಜೀವನದಲ್ಲಿ ಕಾಣುವ ಖಚಿತ ಬೆಳವಣಿಗೆಯೆಂದರೆ ಶಿಲಾಯುಧಗಳ ಜೊತೆಗೆ ತಾಮ್ರ ಅಥವಾ ಕಂಚಿನ ಉಪಕರಣಗಳ ನಿರ್ಮಾಣ. ಆದ್ದರಿಂದ ಈ ಸಂಸ್ಕೃತಿಯನ್ನು ಶಿಲಾ ತಾಮ್ರ ಯುಗವೆಂದು(ಚಾಲ್ಕೋಲಿಥಿಕ್ ಪಿರಿಯಡ್) ಕರೆಯಲಾಗುತ್ತದೆ.

ಶಿಲಾ ತಾಮ್ರಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದರೆಂದು ಅವರು ಮಣ್ಣಿನ ಗೊಂಬೆ ಹಾಗು ದೊರೆತ ವರ್ಣಚಿತ್ರಗಳಿಂದ ತಿಳಿಯಬಹುದಾಗಿದೆ. ರಾಯಚೂರು, ಬಳ್ಳಾರಿ, ಹಂಪಿ ಪ್ರದೇಶದಲ್ಲಿಯ ಬೆಟ್ಟಗಳಲ್ಲಿ ಹಾಗು ಬಯಲು ಬಂಡೆಗಳ ಮೇಲೆ ಚಿತ್ರಗಳು ದೊರೆತಿವೆ. ನೂತನ ಶಿಲಾಯುಗ, ಶಿಲಾ–ತಾಮ್ರಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿಯ ಹಂತಕ್ಕೆ ಸೇರಿದವುಗಳೆಂದು ತಿಳಿಯುವ ಬೂದಿ ದಿಬ್ಬಗಳು ಕರ್ನಾಟಕದ ಉತ್ತರ ಭಾಗಗಳಲ್ಲಿ ಹೆಚ್ಚಾಗಿಯೂ ನಂತರದ ಭಾಗದಲ್ಲಿ ಪ್ರಾತಿನಿಧಿಕವಾಗಿಯೂ ಇರುವುದು ಕಂಡುಬರುತ್ತವೆ.

ಕಮಲಾಪುರ ಪರಿಸರದಲ್ಲಿ ನಿಂಬಾಪುರ, ಕಮಲಾಪುರ, ಬುಕ್ಕಸಾಗರ, ವೆಂಕಟಾಪುರ, ಆನೆಗೊಂದಿ, ಹಿರೇಬೆನಕಲ್ ಸಂಗನಕಲ್ಲು, ಕಪ್ಪಗಲ್ಲು, ಕುರುಗೋಡು, ಕುಡುತಿನಿ, ಬಳ್ಳಾರಿ, ಮುಂತಾದ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಕುರುಹುಗಳು ದೊರತ್ತಿದ್ದು, ಅವರ ಜೀವನ ಶೈಲಿಯನ್ನು ತಿಳಿಯಲು ಸಹಾಯಕವಾಗಿವೆ.

ಕಬ್ಬಿಣ ಯುಗ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ – (ಕ್ರಿ.ಪೂ. ೧೨೦೦–೨೦೦)

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಕಲ್ಗೋರಿ (ಶಿಲಾ ಗೋರಿ)ಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ (ಮೆಗಾಲಿಥಿಕ್ ಏಜ್) ಎಂದು ಕರೆಯಲಾಗುತ್ತಿದೆ. ಜೊತೆಗೆ ಈ ಹಂತದಲ್ಲಿ ಕಬ್ಬಿಣದ ಬಳಕೆ ಆರಂಭಗೊಂಡಿದ್ದರಿಂದ ಈ ಕಾಲವನ್ನು ಕಬ್ಬಿಣಯುಗವೆಂತಲೂ (ಐರನ್ ಏಜ್) ಕರೆಯಲಾಗುತ್ತದೆ. ಈ ಕಾಲದ ಕಲ್ಲು ಗೋರಿಗಳು ಈ ಜನರ ಪಾರಂಪರಿಕ ನಂಬಿಕೆಗಳ ತಳಹದಿಯ ಮೇಲೆ ರೂಪಿತವಾಗಿದ್ದು, ಅತ್ಯಂತ ಮಹತ್ವ ಪಡೆದಿವೆ. ಸಂಸ್ಕೃತಿಯ ಜನರು ಜೀವಿಸುತ್ತಿದ್ದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದೂ ಹಾಗೂ ಶವ ಸಂಸ್ಕಾರದ ಕೇಂದ್ರಗಳನ್ನು ಗೋರಿನೆಲೆಗಳೆಂದು ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಗಿದೆ. ದೇಶಿಯ, ವಿದೇಶಿಯ ಪುರಾತತ್ವಜ್ಞರಿಂದ ಇವುಗಳ ಮೇಲೆ ಸಾಕಷ್ಟು ಅಧ್ಯಯನ ನಡೆದು, ಹಲವು ಹೊಸ ವಿವರಗಳು ಬೆಳಕಿಗೆ ಬಂದಿವೆ.

ಕರ್ನಾಟಕದಲ್ಲಿ ಈ ಸಂಸ್ಕೃತಿಯು ವಿಶಿಷ್ಟವಾಗಿರುವುದನ್ನು ಕಾಣಬಹುದು. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಲ್ಗೋರಿಗಳು ಮತ್ತು ವಸತಿ ನೆಲೆಗಳು ಕಂಡುಬಂದಿವೆ. ಹಲವು ನೆಲಗಳ ಉತ್ಖನನವೂ ನಡೆದಿದೆ. ಬ್ರಹ್ಮಗಿರಿ, ನುಂಕೆಮಲೆ, ಜಟ್ಟಿಂಗರಾಮೇಶ್ವರ, ಕಪ್ಪಗಲ್ಲು, ಸಂಗನಕಲ್ಲು, ಹಿರೆಬೆನಕಲ್, ಕುಮತಿ, ಹುಲಿಕುಂಟೆ, ವಟಗಲ್, ಮೊದಲಾದವು ಈ ಕಾಲದ ಪ್ರಮುಖ ನೆಲೆಗಳಾಗಿವೆ. ದಕ್ಷಿಣ ಕರ್ನಾಟಕದ ನೆಲೆಗಳಿಗೆ ಹೋಲಿಸಿದರೆ ಉತ್ತರ ಕರ್ನಾಟಕದ ನೆಲೆಗಳು ಅಧ್ಯಯನಕ್ಕೆ ಆಶಾದಾಯಕವಾಗಿವೆ. ಕಮಲಾಪುರ ಪರಿಸರದಲ್ಲಿ ನಿಂಬಾಪುರ, ಕಮಲಾಪುರ, ಬುಕ್ಕಸಾಗರ, ವೆಂಕಟಾಪುರ, ಹಂಪಿ, ಆನೆಗುಂದಿ, ಹಿರೇಬೆನಕಲ್ ಮೊದಲಾದೆಡೆ ಈ ಕಾಲದ ಕುರುಹುಗಳು ದೊರೆತಿದ್ದು, ಅಂದಿನ ಜನ ಜೀವನ ಅರಿಯಲು ಸಹಾಯಕವಾಗಿವೆ.

೨.೨.೨ ಚಾರಿತ್ರಿಕ ಕಾಲ :

ಕಮಲಾಪುರ ಪರಿಸರದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲಿ ಆದಿಮಾನವರು ಹೇಗೆ ವಾಸಿಸುತ್ತಿದ್ದರೋ ಹಾಗೇಯೇ ನಂತರ ಕಾಲದಲ್ಲಿ ವಿವಿಧ ರಾಜರುಗಳು, ವಂಶಗಳು ಬಂದು ಹೋದವು. ಇವು ಮುಂದೆ ಈ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದರೆ ಎಂದು ತಿಳಿದು ಬರುತ್ತದೆ. ವಿವಿಧ ವಂಶದ ರಾಜರು ಕಮಲಾಪುರ ಅದರ ಸುತ್ತಲಿನ ಪ್ರದೇಶವನ್ನು ನೇರವಾಗಿ ಇಲ್ಲವೇ ಪರೋಕ್ಷವಾಗಿ ಆಳಿದ ಬಗ್ಗೆ ಹಲವು ದಾಖಲೆಗಳು ದೊರೆತಿವೆ. ಹೀಗೆ ರಾಜಮನೆತನಗಳ ಆಳ್ವಿಕೆವನ್ನು ನಾವು ಈ ಮುಂದಿನಂತೆ ವಿವರಿಸಬಹುದಾಗಿದೆ.

ಮೌರ್ಯರ ಆಳ್ವಿಕೆ :

ಬಳ್ಳಾರಿಯ ಜಿಲ್ಲೆಯ ಉತ್ತರ ಮತ್ತು ಪಕ್ಷಿಮ ದಿಕ್ಕಿನಲ್ಲಿ ರಾಯಚೂರು ಜಿಲ್ಲೆಯ ಮಸ್ಕಿ ಕೊಪ್ಪಗಳಲ್ಲಿ ಮತ್ತು ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ ಜಟಂಗಿರಾಮೇಶ್ವರ ಮತ್ತು ಬ್ರಹ್ಮಗಿರಿಗಳಲ್ಲಿ ಅಶೋಕ ಚಕ್ರವರ್ತಿಯ ಶಾಸನಗಳು ದೊರಕಿವೆ. ಕ್ರಿ.ಶ ೧೯೭೭- ೭೮ರಲ್ಲಿ ಇದೇ ಜಿಲ್ಲೆಯ ಸಿರುಗುಪ್ಪ ತಾಲೂಕಿನ ನಿಟ್ಟೂರು ಮತ್ತು ಉಡೇಗೊಳ ಗ್ರಾಮಗಳಲ್ಲಿ ಅಶೋಕನ ಎರಡು ಶಾಸನ ದೊರಕಿದ್ದು. ಇವು ಕುರುಗೋಡಿನಿಂದ ವಾಯುವ್ಯಕ್ಕೆ ತುಂಗಾಭದ್ರ ನದಿ ತೀರದಲ್ಲಿ ಕೇವಲ ೧೫-೨೦ಕೀ.ಮೀ ದೂರದಲ್ಲಿವೆ. ದೇವಾನಾಂಪ್ರಿಯನೆಂಬ ಬಿರುದನ್ನು ಪಡೆದಿರುವವನು. ಅಶೋಕ ಚಕ್ರವರ್ತಿ ಎಂಬ ಮಹತ್ವದ ವಿಷಯವನ್ನು ಈ ಶಾಸನಗಳಲ್ಲಿ ತಿಳಿಸಲಾಗಿದೆ.

ಶಾತವಾಹನರ ಆಳ್ವಿಕೆ :

ಬಳ್ಳಾರಿ ತಾಲೂಕಿನ ಹಿರೇಹಡಗಲಿ ಮ್ಯಾಕ್ ದೋಣಿಗಳಲ್ಲಿ ದೊರತ ತಾಮ್ರ ಪತ್ರಗಳಿಂದಲೂ ರಾಜಶೇಖರನ ಕಾವ್ಯವಿಮಾಂಸೆ, ವಾತ್ಸ್ಯಾಯನನ 'ಕಾಮಸೂತ್ರ' ಮೊದಲಾದ ಸಾಹಿತ್ಯ ಆಧಾರಗಳಿಂದಲೂ ಶಾತವಾಹನರು ಕುಂತಳ ದೇಶವನ್ನು ಆಳುತ್ತಿದ್ದಾಗಿ ಪ್ರಕಟಿಸಲಾಗಿದೆ. ಅಲ್ಲದೆ ಕುರುಗೋಡು ಕುಂತಾಳದ ರಾಜಧಾನಿಯೆಂದು ಪುರಾಣನಾಮ ಚೂಡಾಮಣಿ ಗ್ರಂಥದಲ್ಲಿ ದೃಡಪಡಿಸಲಾಗಿದೆ. ಈ ರಾಜ್ಯವನ್ನು ಪೌರಾಣಿಕ ಪ್ರಸಿದ್ದ ಚಂದ್ರಹಾಸ ಚಕ್ರಾಧಿಪತಿಯು ಆಳುತ್ತಿದ್ದುದಾಗಿ ಐತಿಹಾಸಿಕವಿದೆ ಹೀಗೆ ಮೌರ್ಯರ ನಂತರದಲ್ಲಿ ಈ ಪ್ರದೇಶವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದು ಬಂದಿದೆ.

ಬಾದಾಮಿ ಚಾಲುಕ್ಯರು :

ಬಾದಾಮಿ ಚಾಲುಕ್ಯರಲ್ಲಿ ಅತ್ಯಂತ ಪ್ರಬಲನಾದ ಸತ್ಯಶ್ರಯ (೨ನೇ ಪುಲಕೇಶಿ)ಯ ಕಾಲದಲ್ಲಿ ಕ್ರಿ.ಶ.೯೧೦-೯೪೨ ಈ ಪ್ರದೇಶವು ಆತನ ಆಡಳಿತಕ್ಕೆ ಒಳಪಟ್ಟಿತ್ತು ಆತನ ರಾಜ್ಯಡಳಿತದ ವೈಶಿಷ್ಟತೆಯ ಬಗ್ಗೆ ಬೆಳಕು ಬಿರುವ ಕತ್ತೆಬಂಡೆ ಶಿಲಾಶಾಸನ ಕುರುಗೋಡನ ಈ ಶಾಸನಕ್ಕೆ ೨ ಕಿ.ಮಿ.ದೂರದಲ್ಲಿದೆ. ಕುಡತಿನಿ ಮತ್ತು ಕೊಳಗಲ್ಲು ಗ್ರಾಮಗಳಲ್ಲಿ ಕುಮಾರಸ್ವಾಮಿಯ ತಪೋವನಗಳಿದ್ದವು ಎಂಬುದು ತಿಳಿದು ಬರುತ್ತದೆ.

೨ನೇ ಪುಲಕೇಶಿಯೂ ತನ್ನ ಇಬ್ಬರ ಮಕ್ಕಳಾದ ಆದಿತ್ಯಕರ್ಮ ಮತ್ತು ಚಂದ್ರಾದಿತ್ಯನ್ನು ಬಳ್ಳಾರಿ ಕರ್ನೂಲು ಜಿಲ್ಲೆಯ ಪ್ರದೇಶದಲ್ಲಿ ರಾಜ ಪ್ರತಿನಿಧಿಗಳನ್ನಾಗಿ ನೇಮಿಸಿದ್ದು ಅವರು ಬಾದಮಿಯು ಪಲ್ಲವರಿಗೆ ವಶನಾದ ಸಮಯದಲ್ಲಿ ಇಲ್ಲಿಂದಲೇ ರಾಜ್ಯ ಪರಿಪಾಲನೆ ಮಾಡುತ್ತಿದ್ದರಾಗಿಯೂ ಇತಿಹಾಸದಿಂದ ತಿಳಿದು ಬರುತ್ತದೆ.

ಕಲ್ಯಾಣದ ಚಾಲುಕ್ಯರು ಮತ್ತು ಕಳೆಚೂರ್ಯರು.

ಕಲ್ಯಾಣ ಚಾಲುಕ್ಯ ವಂಶದ ೫ನೇ ವಿಕ್ರಮಾದಿತ್ಯ ಮಹಾರಾಜರು (೧೦೦೮-೧೫ ಕ್ರಿ.ಶ). ನೊಳಂಬವಾಡಿ ೩೨೦೦ ನೂಗಳಿ ೫೦೦ ಮತ್ತು ಕುರುಗೋಡು ಪಟ್ಟಣ ರಾಜಧಾನಿಯಾಗಿದ್ದು, ಬಲಕುಂದೆ ೩೦೦ ನಾಡನ್ನು ತನ್ನ ಸಾಮಂತ ನಳಂದ ಪಲ್ಲವವಂಶದ ಇರಿವನೊಳಂಬವಾಡಿ ರಾಜನ ಮೂಲಕ ಆಳುತ್ತಿದ್ದುದಾಗಿಯೂ ಆನಂತರ ಜಯಸಿಂಹ ಕೆಲವು ಕಾಲ ಆಳಿದುದಾಗಿಯೂ ಹಿಂದಿನಿಂದಲೂ ವ್ಯಕ್ತಪಟ್ಟಿದೆ.

ಹೊಯ್ಸಳರು:

ಕಲ್ಯಾಣ ಚಾಲುಕ್ಯರು ಮತ್ತು ಕಲಚೂರ್ಯರು ಆಡಳಿತದಲ್ಲಿ ಮೆರೆದ ಬಳ್ಳಾರಿ ಪ್ರದೇಶವು ನಂತರ ೧೨ನೇ ಶತಮಾನದ ಪ್ರಾರಂಭದಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಂಡು ಕರ್ನಾಟಕದ ಪ್ರಸಿದ್ದ ರಾಜ ಮನೆತನಗಳಲ್ಲಿ ಒಂದಾದ ಹೊಯ್ಸಳವಂಶದ ೨ನೇ ಬಲ್ಲಾಳನ ಆಡಳಿತಕೊಳ್ಳಪಟ್ಟಿತ್ತು. ಈ ತಾಲೂಕಿನಲ್ಲಿ ಕುಡಿತಿನಿ ಗ್ರಾಮಗಳಲ್ಲಿ ಹೊಯ್ಸಳ ರಾಜರ ಕಾಲದ ಶಿಲಾಶಾಸನಗಳಿದ್ದು, ಅವುಗಳಲ್ಲಿ ಕುರುಗೋಡು ಕಂಪಲಿ ರಾಜ್ಯಗಳ ಬಗ್ಗೆ ತಿಳಿಸಿಲಾಗಿದೆ.

೧೩ನೇ ಶತಮಾನವು ದಕ್ಷಿಣ ಭಾರತದ ಮಹತ್ವದ ಕಾಲವಾಗಿತ್ತು. ಮಧ್ಯಯುಗೀನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮಹತ್ವದ್ದಾಗಿದೆ. ವಿಜಯನಗರ ಸಾಮ್ರಾಜ್ಯ ವೈಭವದ ಆಳ್ವಿಕೆಯಿಂದು, ದೇಶ-ವಿದೇಶಿಯರ ಗಮನವನ್ನು ಸೆಳೆದಿದೆ. ಒಂದು ಕಾಲದಲ್ಲಿ

ವೈಭವದಿಂದ ಮೆರೆದಿದ್ದ ವಿಜಯನಗರ ಸಾಮ್ರಾಜ್ಯವು ಇಂದು ಹಾಳು ಹಂಪೆಯಾಗಿ ಉಳಿದಿರುವುದನ್ನು ಕಾಣುತ್ತೇವೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಪೂರ್ವದಲ್ಲಿ ದಕ್ಷಿಣ ಭಾರತದ ಸ್ಥಿತಿಗತಿ ಶೋಚನೀಯವಾಗಿತ್ತು. ೧೩ನೇ ಶತಮಾನದ ಅಂತ್ಯ ಭಾಗದಲ್ಲಿ ದಕ್ಷಿಣ ಭಾರತದಲ್ಲಿ ನಾಲ್ಕು ರಾಜ್ಯಗಳು ಆಳ್ವಿಕೆ ನಡೆಸುತ್ತಿದ್ದವು. ಉತ್ತರದಲ್ಲಿ ಯಾದವರು, ಕಾಕತೀಯರು, ಮಧ್ಯ ಭಾಗದಲ್ಲಿ ಹೊಯ್ಸಳರು ಮತ್ತು ದಕ್ಷಿಣದಲ್ಲಿ ಪಾಂಡ್ಯರು ಆಳ್ವಿಕೆ ನಡೆಸುತ್ತಿದ್ದರು. ಈ ರಾಜ್ಯಗಳು ತಮ್ಮ ತಮ್ಮ ನಡುವೆ ಯುದ್ಧಗಳಲ್ಲಿ ನಿರತರಾಗಿದ್ದರು. ಇತರರ ಮೇಲೆ ಪಾರಮ್ಯವನ್ನು ಗಳಿಸುವ ಬಯಕೆಯಿಂದ ರಾಜಕೀಯ ವೈಭವೀಕರಣ ನಡೆಯುತ್ತಿತ್ತು. ಚೋಳರು ಮತ್ತು ಪಾಂಡ್ಯರ ನಡುವೆ, ಹೊಯ್ಸಳರು ಮತ್ತು ಸೇವುಣರ ನಡುವೆ, ಸೇವುಣರು ಮತ್ತು ಕಾಕತೀಯರ ನಡುವೆ ಯುದ್ಧಗಳು ನಡೆಯುತ್ತಿದ್ದವು. ಇಡೀ ದಕ್ಷಿಣ ಭಾರತದ ರಾಜಕೀಯ ಅಸ್ಥಿರತೆ, ಧಾರ್ಮಿಕ ಅಸ್ತವ್ಯಸ್ತೆಗಳಿಗೆ ಈಡಾಗಿತ್ತು. ಆಂತರಿಕ ವೈಮನಸ್ಸು, ಅನೈಕಮತ್ಯ, ಸಣ್ಣಪುಟ್ಟ ಸಂಸ್ಥಾಪನಾಧಿಪತಿಗಳ ಉದಯ ಮತ್ತು ಪರಕೀಯ ಆಕ್ರಮಣಕಾರರ ಸತತ ದಾಳಿಗಳಿಂದಾಗಿ ಪಾಂಡ್ಯ, ರಾಜ್ಯ ಸಂಪೂರ್ಣ ಅವನತಿಯಾಯಿತು. ದಕ್ಷಿಣ ಭಾರತದ ರಾಜವಂಶಗಳ ಅರಸರು ಆಂತರಿಕವಾಗಿ ದುರ್ಬಲರಾಗಿದ್ದರು. ಇವರು ಒಂದಲ್ಲ ಒಂದು ರೀತಿಯ ಯುದ್ಧಗಳಲ್ಲಿ ತೊಡಗಿರುತ್ತಿದ್ದರು.

ದೇವಗಿರಿ, ದೊರಸಮುದ್ರ ಮತ್ತು ವಾರಂಗಲ್ಲು ಈ ಮೂರು ರಾಜ್ಯಗಳ ನಡುವೆ ಸ್ತಂಭದಂತಿದ್ದ ಕಮ್ಮಟ ರಾಜ್ಯ ಅವನತಿಯಾಯಿತು. ಹೀಗೆ ದಕ್ಷಿಣ ರಾಜ್ಯಗಳು ಮುಸ್ಲಿಮರ ದಾಳಿಗಳಿಂದ ಸಂಪೂರ್ಣವಾಗಿ ನಾಶವಾಯಿತು. ಆದರೆ ಹೊಯ್ಸಳ ರಾಜ್ಯ ದಕ್ಷಿಣ ಭಾರತದ ಏಕೈಕ ಹಿಂದೂ ರಾಜ್ಯವಾಗಿ ಉಳಿಯಿತು. ಮುಂದೆ ಎರಡನೇ ಬಾರಿಗೆ ಮಹಮ್ಮದೀಯ ದಾಳಿಗೆ ಹೊಯ್ಸಳರು ತುತ್ತಾಗಿ ಕ್ರಿ.ಶ.೧೩೨೭ರಲ್ಲಿ ಸಂಪೂರ್ಣವಾಗಿ ಹೊಯ್ಸಳ ರಾಜ್ಯವು ನಾಶವಾಗುವ ತನಕ ನಾಮಕಾವಸ್ಥೆಗೆ ಆಳ್ವಿಕೆ ಮುಂದುವರೆಯಿತು. ಈ ಸಂದರ್ಭದಲ್ಲಿ ಸಂಗಮ ವಂಶದ ಸಹೋದರರು ಕ್ರಿ.ಶ.೧೩೨೮ರಲ್ಲಿ ಕಂಪಿಲ ರಾಜ್ಯ ಪತನದ ನಂತರ ಹೊಯ್ಸಳ ರಾಜ್ಯದ ಆಶ್ರಯ ಪಡೆದರು. ಇದು ಅವರಿಗೆ ಅನಿವಾರ್ಯವೂ ಸಹ ಆಗಿತ್ತು. ಏಕೆಂದರೆ ಹಂಪಿ ಪ್ರದೇಶದಲ್ಲಿ ತಮ್ಮದೇ ಆದ ಸ್ವಂತ ಸೈನ್ಯವನ್ನು ಕಟ್ಟಲು ಸಾಧ್ಯವಿರಲಿಲ್ಲ. ಒಂದು ವೇಳೆ ಕಟ್ಟಲು ಸಾಧ್ಯವಿದ್ದರೂ ನಿರ್ವಹಣೆ ಮಾಡಲು ಸಾಧ್ಯವಿರಲಿಲ್ಲ. ಅಲ್ಲದೆ ಹೊಯ್ಸಳರ ಆಶ್ರಯವು ಅನುಕೂಲಕರವಾಗಿತ್ತು. ಈ ಸಂಗಮದ ಸಹೋದರರು ಹೊಯ್ಸಳ ರಾಜ್ಯ ಅವನತಿಯಾಗುವವರೆಗೂ ಹೊಯ್ಸಳ ಸಾಮ್ರಾಜ್ಯಕ್ಕೆ ವಿಧೇಯರಾಗಿದ್ದರು. ಹರಿಹರನು ಮೂರನೇ ಬಲ್ಲಾಳನ ಆಸ್ಥಾನದಲ್ಲಿ ಮಹಾಮಂಡಲೀಶ್ವರನಾಗಿ

ನೇಮಕವಾಗಿದ್ದನು. ಸಂಗಮರು ಹೊಯ್ಸಳ ಸಾಮ್ರಾಜ್ಯದ ಪ್ರದೇಶದಲ್ಲಿ ತಮ್ಮ ರಾಜ್ಯ ವಿಸ್ತರಿಸಲು ಯಾವ ಯುದ್ಧಗಳನ್ನು ಮಾಡಲಿಲ್ಲ. ಹೊಯ್ಸಳ ಅರಸ ವೀರಬಲ್ಲಾಳ ವೃದ್ಧನಾಗಿದ್ದನು. ಹಾಗಾಗಿ ಬಲ್ಲಾಳನು ಸಮರ್ಥ ಮತ್ತು ನಂಬಿಗಸ್ಥ, ವಿಶ್ವಾಸಕ್ಕೆ ಪಾತ್ರನಾಗಿದ್ದ ಪ್ರಾಂತೀಯ ಅಧಿಕಾರಿ ಒಂದನೇ ಹರಿಹರನನ್ನು ಹೊಸಪಟ್ಟಣ(ಹಂಪಿ)ದ ರಾಜ್ಯಪಾಲನನ್ನಾಗಿ ನೇಮಿಸಿದನು. ಈ ರೀತಿ ೧೩ನೇ ಶತಮಾನದ ಅಷ್ಟೊತ್ತಿಗೆ ದಕ್ಷಿಣದಲ್ಲಿ ಏಕೈಕ ಹಿಂದೂ ರಾಜ್ಯವಾಗಿ ಉಳಿದಿದ್ದ ಹೊಯ್ಸಳರು, ಮುಸ್ಲಿಂ ದಾಳಿಗಳಿಂದ ದಕ್ಷಿಣ ಭಾರತವನ್ನು ರಕ್ಷಿಸುವ ಕಾರ್ಯವನ್ನು ಆರಂಭ ಮಾಡಿದರೆ, ಸಂಗಮರು ಅದನ್ನು ಪೂರ್ತಿಗೊಳಿಸಿದರು.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ:

ತುಂಗಭದ್ರೆಯಿಂದ ಕಾವೇರಿವರೆಗಿನ ವಿಶಾಲದ ಹೊಯ್ಸಳರ ರಾಜ್ಯದಲ್ಲಿ ಸಂಗಮರು ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಾಪಿಸಿದರು. ಈ ಸಾಮ್ರಾಜ್ಯವನ್ನು ಕ್ರಿ.ಶ.೧೩೩೬ ರಿಂದ ಕ್ರಿ.ಶ.೧೫೬೫ರವರೆಗೆ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ಪ್ರಮುಖ ಅರಸು ಮನೆತನದವರು ಆಳಿದರು. ರಾಜ್ಯ ಸ್ಥಾಪನೆಯ ಕೀರ್ತಿಯು ಒಂದನೇ ಹರಿಹರ ಮತ್ತು ಬುಕ್ಕನಿಗೆ ಸಲ್ಲುತ್ತದೆ. ಸು.೨೨೦ ವರ್ಷದ ಬಹು ದೀರ್ಘವಾದ ಅವಧಿಯ ಆಳ್ವಿಕೆ ನಡೆಸಿದರು. ಇವರ ರಾಜ್ಯ ಸ್ಥಾಪನೆಯಲ್ಲೂ ಬಹುಮುಖ್ಯ ಪಾತ್ರವಹಿಸಿದ್ದು ಅಂದಿನ ಹಂಪಿ ಪರಿಸರದಲ್ಲಿ ಪ್ರಸಿದ್ಧಿ ಪಡೆದ ಪಾಶುಪಥ(ಕಾಳಮುಖ) ಆಚಾರ್ಯರಾದ 'ಕ್ರಿಯಾಶಕ್ತಿ ಪಂಡಿತರು'.[೧೨]

ಸಂಗಮ ವಂಶ:

ಸಂಗಮ ವಂಶವು ಕ್ರಿ.ಶ.೧೩೩೬ ರಿಂದ ೧೪೮೫ರವರೆಗೆ ೯ ಜನ ಅರಸರು ಆಳ್ವಿಕೆ ನಡೆಸಿದರು. ಸಂಗಮ ವಂಶವು ಕ್ರಿ.ಶ. ೧೩೩೬ರಲ್ಲಿ ಹರಿಹರ, ಒಂದನೇ ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪ ಎಂಬ ಸಹೋದರರಿಂದ ಸ್ಥಾಪನೆಯಾಯಿತು.

ಒಂದನೇ ಹರಿಹರನಿಗೆ ೧೩೩೬ರಲ್ಲಿ ವೀರಬಲ್ಲಾಳನು ಸಮಸ್ತ ಅಧಿಕಾರವನ್ನು ನೀಡಿದನು. ಹರಿಹರ ಕ್ರಿ.ಶ.೧೩೪೨ರಲ್ಲಿ ಸ್ವತಂತ್ರವಾದ ಮತ್ತು ಸುಭದ್ರವಾದ ವಿಜಯನಗರದ ತಳಹದಿಯನ್ನು ಹಾಕಿದನು. ಈತ ರಾಜ್ಯವನ್ನು ಬಾದಾಮಿಯವರೆಗೆ ವಿಸ್ತರಿಸಿದನು.[೧೩] ಹರಿಹರ ರಾಜ್ಯ ಸ್ಥಾಪನೆಯ ಜೊತೆಗೆ ಉತ್ತಮ ಆಡಳಿತಗಾರನಾಗಿದ್ದನು. ಉತ್ತಮ ಸರ್ಕಾರವನ್ನು ರೂಪಿಸಿ ರಾಜ್ಯದಲ್ಲಿ ಶಾಂತಿ ಸುಭದ್ರತೆ ಸ್ಥಾಪಿಸಿದನು. ನಂತರ ಹರಿಹರನ ಸಹೋದರ ಒಂದನೇ ಬುಕ್ಕನು(೧೩೫೬–೭೭) ಅಧಿಕಾರಕ್ಕೆ ಬಂದ ಒಂದನೇ ಬುಕ್ಕ ತನ್ನ ಮಗ ಎರಡನೇ ಕಂಪಣನ ನೆರವಿನಿಂದ ದಕ್ಷಿಣದಲ್ಲಿನ

ವೈರಿಗಳನ್ನು ಅಡಗಿಸಿದನು. ಕಂಪಣನ ಪತ್ನಿ ಗಂಗಾದೇವಿಯ ಕೃತಿ 'ಮಧುರಾ ವಿಜಯಂ' ಅಥವಾ 'ವೀರಕಂಪರಾಯ ಚರಿತಂ'ನಲ್ಲಿ ಕಂಪಣನ ಕಾರ್ಯವನ್ನು ವಿವರಿಸಿದ್ದಾನೆ.

ಎರಡನೇ ಕಂಪಣನು ಗುಲಬರ್ಗಾದ ಮಹಮ್ಮದ್ ಷಾ ಮತ್ತು ಅನಂತರ ಬಂದ ಮುಜಾಹಿದ್ ಇವರೊಡನೆ ಅನೇಕ ಯುದ್ಧಗಳನ್ನು ಮಾಡಿದನು. ಈತ ಮುಸಲ್ಮಾನರ ದಾಳಿಗಳಿಂದ ನಾಶವಾದ ಮಧುರೆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನು.[೧೪]

ಕ್ರಿ.ಶ.೧೪೦೪ರಲ್ಲಿ ಎರಡನೇ ಬುಕ್ಕ ಸಿಂಹಾಸನಕ್ಕೆ ಬಂದನು. ಇವನ ಅಕಾಲ ಮರಣದಿಂದ ಕ್ರಿ.ಶ.೧೪೦೬ರಲ್ಲಿ ಒಂದನೇ ದೇವರಾಯನು ಸಿಂಹಾಸನಕ್ಕೆ ಏರಿದನು. ಈತನು ಅಧಿಕಾರಕ್ಕೆ ಬಂದ ಕೂಡಲೆ ಬಹುಮನಿ ರಾಜ್ಯದ ಸುಲ್ತಾನ ಫಿರೋಜ್ ಷಾನೊಂದಿಗೆ ಯುದ್ಧ ಮಾಡಿದನು. ಕೊನೆಗೆ ಒಂದನೇ ದೇವರಾಯ ವಿವಾಹ ಮಾಡಿ ಮೈತ್ರಿ ಸಂಬಂಧ ಬೆಳೆಸಿದ.[೧೫]

ಇವನ ಆಡಳಿತದ ಸಂದರ್ಭದಲ್ಲಿ ವಿದೇಶಿ ಪ್ರವಾಸಿಗ ಇಟಲಿ ದೇಶದ ನಿಕೋಲೋಕೊಂಟಿ ವಿಜಯನಗರವನ್ನು ಸಂದರ್ಶಿಸಿದನು. ನ್ಯೂನಿಜ್‌ನು 'ದೇವರಾಯ ಸದಾಕಾಲ ಮೂರರೊಂದಿಗೆ ಯುದ್ಧದಲ್ಲಿ ತೊಡಗಿರುತ್ತಿದ್ದನು' ಎಂದು ಹೇಳುತ್ತಾನೆ. ದೇವರಾಯ ರಾಜ್ಯ ವಿಸ್ತಾರ, ಕೋಟೆ-ಕೊತ್ತಲೆಗಳನ್ನು ವಿಸ್ತಾರಗೊಳಿಸಿ ಆ ನಗರಕ್ಕೆ ಸುಭದ್ರತೆಯನ್ನು ಒದಗಿಸಿದನು. ನಂತರ ಈತನ ಮಗನಾದ ವೀರ ವಿಜಯರಾಯನು ಕ್ರಿ.ಶ.೧೪೧೨ ರಿಂದ ೧೪೧೩ರ ವರೆಗೆ ಆಳ್ವಿಕೆ ನಡೆಸಿದನು.

ಈತನ ನಂತರ ಎರಡನೇ ದೇವರಾಯನು ಸಿಂಹಾಸನಕ್ಕೆ ಬಂದನು. ಈತನಿಗೆ 'ಗಜಬೇಂಟೆಗಾರ' ಎಂಬ ಬಿರುದಿತ್ತು. ಸಂಗಮ ವಂಶದ ಪ್ರಸಿದ್ಧ ದೊರೆಯಾಗಿದ್ದನು. ಪರ್ಶಿಯಾ ದೇಶದ ಪ್ರವಾಸಿಗ ಅಬ್ದುಲ್ ರಜಾಕ್ ಈತನ ಆಳ್ವಿಕೆ ಕಾಲದಲ್ಲಿ ಭೇಟಿ ನೀಡಿದ್ದನು. ಈತನ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯವು ಸಿಲೋನಿನಿಂದ ಹಿಡಿದು ಗುಲಬರ್ಗಾದವರೆಗೂ ಒರಿಸ್ಸಾ-ಬಂಗಾಳಗಳಿಂದ ಮಲಬಾರಿನವರೆಗೂ ಈತ ರಾಜ್ಯವನ್ನು ವಿಸ್ತರಿಸಿದನು. ಈತನ ಆಳ್ವಿಕೆಯ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಸೈನಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ವದ ಘಟನೆಗಳು ನಡೆದವು. ಈತನ ಆಳ್ವಿಕೆ ಕಾಲವು ವಿಜಯನಗರ ಚರಿತ್ರೆಯಲ್ಲಿ ವೈಭವೋಪೇರಿತ ಕಾಲವಾಗಿತ್ತು.

ಎರಡನೇ ದೇವರಾಯನ ಕಾಲದಲ್ಲಿ ಬಹುಮನಿ ಸುಲ್ತಾನರ ದಾಳಿಗಳು ಮೇಲಿಂದ ಮೇಲೆ ಸಂಭವಿಸುತ್ತಿದ್ದವು. ಈತನು ಸಮರ್ಥ ರೀತಿಯಲ್ಲಿ ದಾಳಿಗಳನ್ನು ಎದುರಿಸಬೇಕಾಗಿತ್ತು. ಹಾಗಾಗಿ ದೇವರಾಯ ತನ್ನ ಸೈನ್ಯ ವ್ಯವಸ್ಥೆಯನ್ನು ಸುಧಾರಿಸಲು ಮುಸ್ಲಿಮ್ ಸೈನಿಕರನ್ನು ನೇಮಿಸಿಕೊಂಡನು. ಸೈನಿಕರಿಗೆ ಶಾಸ್ತ್ರೀಯ ಶಿಕ್ಷಣವನ್ನು ನೀಡಿ ಅವರಲ್ಲಿ ಕೌಶಲವನ್ನು ಹೆಚ್ಚಿಸಲು ಸಮರ್ಥ ಮುಸ್ಲಿಮ್

ಸೈನ್ಯವನ್ನು ನೇಮಿಸಿಕೊಂಡನು. ಈ ಮುಸ್ಲಿಮ್ ಸೈನಿಕರಿಗೆ ಹೆಚ್ಚಿನ ವೇತನ ಕೊಟ್ಟು ಎಲ್ಲಾ ಸೌಲಭ್ಯವನ್ನು ಮಾಡಿಕೊಟ್ಟನು.

ಈತನ ಆಳ್ವಿಕೆ ಕಾಲದಲ್ಲಿ ಭೇಟಿ ನೀಡಿದ್ದ ಪರ್ಶಿಯಾ ದೇಶದ ಪ್ರವಾಸಿಗನಾದ ಅಬ್ದುಲ್ ರಜಾಕನು 'ಇಂತಹ ಇನ್ನೊಂದು ಸಾಮ್ರಾಜ್ಯವನ್ನು ಕಣ್ಣಿದ್ದವರು ನೋಡಲಾರರು ಕಿವಿಯಿಂದ ಕೇಳಲಾರರು' ಎನ್ನುವ ಮಾತುಗಳನ್ನು ಹೃದಯ ತುಂಬಿ ನೋಡಿರುವುದರಿಂದ ವಿಜಯನಗರ ಭವ್ಯ ಇತಿಹಾಸವನ್ನು ವರ್ಣಿಸಿದ್ದಾನೆ. ಈತನ ಆಳ್ವಿಕೆ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಸುಭೀಕ್ಷೆಯಿಂದ ಕೂಡಿತ್ತು.

ಈತನ ನಂತರ ಸಹೋದರನಾದ ಪ್ರತಾಪಲ ದೇವರಾಯ ಅಲ್ಪಕಾಲ ಆಳ್ವಿಕೆ ಮಾಡಿದನು. ನಂತರ ಈತನ ಮಗನಾದ ಮಲ್ಲಿಕಾರ್ಜುನ(ಕ್ರಿ.ಶ.೧೪೪೬–೧೪೬೫) ಅಧಿಕಾರಕ್ಕೆ ಬಂದನು. ಆದರೆ ಈತ ಸಮರ್ಥನಾಗಿರಲಿಲ್ಲ. ಈತನ ಆಡಳಿತಾವಧಿಯಲ್ಲಿ ಬಹುಮನಿ ಸುಲ್ತಾನನು ಹಾಗೂ ಕಪಿಲೇಶ್ವರ ಗಜಪತಿಯು ವಿಜಯನಗರ ಸಾಮ್ರಾಜ್ಯದ ಮೇಲೆ ಆಕ್ರಮಣ ಮಾಡಿದರೂ ಸಹ ವಿಜಯನಗರ ಸೈನ್ಯವು ಅವರನ್ನು ಹಿಮ್ಮೆಟ್ಟಿಸಿದರೂ ಸಹ ಒರಿಸ್ಸಾ ದೇಶದ ಹಮ್ಮೀರನು ವಸಪಡಿಸಿಕೊಂಡನು. ಮಲ್ಲಿಕಾರ್ಜುನನ ಚಿಕ್ಕಪ್ಪನ ಮಗನಾದ ವಿರೂಪಾಕ್ಷನು ಈ ಕ್ಷೋಭಕಾರಕ ಪರಿಸ್ಥಿತಿಯ ಲಾಭ ಪಡೆದುಕೊಂಡನು. ಈತನು ಯೋಗ್ಯ ರೀತಿಯಿಂದ ರಾಜ್ಯಭಾರ ಮಾಡಲು ಸಮರ್ಥನಾಗಿರಲಿಲ್ಲ. ವಿಷಯಾಸಕ್ತನೂ ವ್ಯಸನಾಧೀನನೂ ಆಗಿದ್ದನು. ಇದರಿಂದ ವಿಜಯನಗರ ಸಾಮ್ರಾಜ್ಯವು ತ್ವರಿತಗತಿಯಿಂದ ಅವನತಿಯ ಕಡೆಗೆ ಇಳಿಯ ತೊಡಗಿತು.

ವಿಜಯನಗರ ಸಾಮ್ರಾಜ್ಯವು ಅವನತಿ ಅಂಚಿನಲ್ಲಿ ಇರುವ ಸಂದರ್ಭದಲ್ಲಿ ಸಮರ್ಥ, ವೀರಪುರುಷನೂ, ಕ್ರಿಯಾಶೀಲನೂ ಮತ್ತು ಮಹತ್ವಕಾಂಕ್ಷಿಯೂ ಆದ ಸಾಳುವ ಒಂದನೇ ನರಸಿಂಹನು ಕ್ರಿ.ಶ.೧೪೮೫ರಲ್ಲಿ ಸಿಂಹಾಸನ ಏರಿ, ಸಾಳುವ ವಂಶವನ್ನು ಸ್ಥಾಪಿಸಿದನು. ಸಾಳುವ ಆಡಳಿತಾವಧಿಯು ಅಲ್ಪವಾಗಿದೆ. ಇವರು ಮಂಗಳಗಿರಿಯಿಂದ ವಲಸೆ ಬಂದು ಮಂಗು ಎಂಬುವವನು ಸಂಗಮ ವಂಶದ ಮೂರನೇ ಕಂಪಣನಿಗೆ ನೆರವು ನೀಡಿದನು. ಇವರ ಪೂರ್ವಿಕರು ಕಲ್ಯಾಣಿಯಲ್ಲಿ ಆಳುತ್ತಿದ್ದರು.[೧೬]

ತಾವು ಯಾದುವರಿಂದ ಬಂದವರೆಂದೂ ಸೂರ್ಯವಂಶಕ್ಕೆ ಸೇರಿದವರೆಂದು ಹೇಳಿಕೊಂಡರು. ಅಲ್ಲದೇ ಸಂಗಮ ವಂಶದ ಮೂರನೇ ದೇವರಾಯನ ತಂಗಿಯಾದ ಹರಿಮಾಳಳನ್ನು ಸಾಳ್ವ ವಂಶದ ತಿಮ್ಮನು ಮದುವೆಯಾಗಿದ್ದರಿಂದಾಗಿ ಇವರು ಸಂಗಮ

ವಂಶದೊಂದಿಗೆ ರಕ್ತ ಸಂಬಂಧವನ್ನು ಹೊಂದಿದ್ದರು. ಈ ವಂಶದಲ್ಲಿ ಕ್ರಿ.ಶ.೧೪೫೨ ರಲ್ಲಿ ನರಸಿಂಹನಿಂದ ರಾಜಕೀಯ ಪ್ರಾರಂಭವಾಯಿತು. ಈತನು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆ ಮತ್ತು ತಮಿಳುನಾಡಿನಲ್ಲಿ ಎರಡು ಆರ್ಕಾಟ್ ಜಿಲ್ಲೆಗಳನ್ನು ಕರ್ನಾಟಕದಲ್ಲಿ ಕೋಲಾರ ಜಿಲ್ಲೆಯನ್ನು ಪ್ರಾರಂಭದಲ್ಲಿ ಅಂದರೆ ವಿರೂಪಾಕ್ಷನ ಆಳ್ವಿಕೆಯಲ್ಲಿ ತನ್ನ ಹತೋಟಿಗೆ ತೆಗೆದುಕೊಂಡನು. ಆಂಧ್ರಪ್ರದೇಶದ ಕರಾವಳಿ, ಉದಯಗಿರಿ ಕೋಟೆ, ಚೋಳ ದೇಶ, ತೊಂಡೈಮಂಡಲ ದೇಶಗಳನ್ನು ಸಹ ಗೆದ್ದುಕೊಂಡನು. ರಾಮೇಶ್ವರ, ಶ್ರೀಲಂಕಾದವರೆಗೂ ಕಪ್ಪ ಕಾಣಿಕೆಯನ್ನು ಪಡೆಯಲಾರಂಭಿಸಿದನು. ಕ್ರಿ.ಶ.೧೪೭೧ರಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಈತನು ರಾಜನಾದ ಬಗೆ ನಿಖರವಾದ ಕಾಲಾವಧಿ ಇಲ್ಲ.[೧೭] ಇಮ್ಮಡಿ ನರಸಿಂಹನ ಇಬ್ಬರು ಮಕ್ಕಳಲ್ಲಿ ಹಿರಿಯ ಮಗನಾದ ಇಮ್ಮಡಿ ನರಸಿಂಹನನ್ನು ಪಟ್ಟಾಭಿಷೇಕ ಮಾಡಿದನು. ಆದರೆ ಆಡಳಿತವೆಲ್ಲವೂ ತುಳುವ ನರಸನಾಯಕನ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ತುಳುವ ವಂಶದ ಆಳ್ವಿಕೆ ಪ್ರಾರಂಭವಾಯಿತು.

ತುಳುವ ವಂಶದ ಪ್ರಸಿದ್ಧ ದೊರೆಗಳೆಂದರೆ ಶ್ರೀಕೃಷ್ಣದೇವರಾಯ, ಅಚ್ಯುತರಾಯ ಪ್ರಮುಖರು. ಶ್ರೀಕೃಷ್ಣದೇವರಾಯನು ಕ್ರಿ.ಶ.೧೫೦೯ ರಿಂದ ೧೫೩೦ರ ವರೆಗೆ ಆಳ್ವಿಕೆ ನಡೆಸಿದನು. ಈತನ ಅವಧಿಯಲ್ಲಿ ಸಾಮಂತರ ವಿರೋಧ, ಸುತ್ತಮುತ್ತಲ ಅರಸರ ಒತ್ತುಪರಿ ಉಪಟಳ ಮೊದಲಾದವು ತುಂಬಿದ್ದವು. ಈತನ ಆಳ್ವಿಕೆ ಕಾಲದಲ್ಲಿ ಒರಿಸ್ಸಾದ ದೊರೆಯಾದ ಪ್ರತಾಪರುದ್ರನು ಗೋಲ್ಕೊಂಡ ಮೊದಲಾದ ಮುಸ್ಲಿಮ್ ರಾಜ್ಯಗಳೊಂದಿಗೆ ದುರುದ್ದೇಶದಿಂದ ಜತೆಗೂಡಿಸಲು ಪ್ರಯತ್ನಿಸಿದನು ಅಲ್ಲದೆ ಕೊಂಡವೀಡು ಮತ್ತು ಉದಯಗಿರಿಗಳನ್ನು ಆಕ್ರಮಿಸಿಕೊಂಡನು. ಪ್ರತ್ಯಕ್ಷ ವಿರೋಧವನ್ನು ಸಾಮ್ರಾಟನಿಗೆ ವ್ಯಕ್ತಪಡಿಸಿದನು.

ಶ್ರೀಕೃಷ್ಣದೇವರಾಯನು ಕ್ರಿ.ಶ.೧೫೦೯ರಲ್ಲಿ ಪಟ್ಟವೇರಿದನು. ಸಾಮ್ರಾಜ್ಯದ ಉತ್ತರ ಭಾಗದ ಗಡಿನಾಡು ಬಿಜಾಪುರವನ್ನು ಆಳುತ್ತಿದ್ದ ಆದಿಲ್‌ಶಾಹಿ ವಂಶದ ಯೂಸುಫ್ ಆದಿಲ್ ಖಾನ್ ವಿಜಯನಗರದ ಮೇಲೆ ಆಕ್ರಮಣ ನಡೆಸಲು ಸದಾ ಹೊಂಚು ಹಾಕುತ್ತಿದ್ದನು. ಪಶ್ಚಿಮ ತೀರ ಪ್ರದೇಶದಲ್ಲಿ ಪೋರ್ಚುಗೀಸರು ದಕ್ಷಿಣ ರಾಜ್ಯಗಳೊಂದಿಗೆ ರಾಜಕೀಯ ಸಂಬಂಧ ಬೆಳೆಸಲು ಕಾಯುತ್ತಿದ್ದರು.[೧೮] ಶ್ರೀಕೃಷ್ಣದೇವರಾಯ ಸಮರ್ಥ ರೀತಿಯಲ್ಲಿ ರಾಜ್ಯವನ್ನು ಆಳಿದನು. ಶ್ರೀಕೃಷ್ಣದೇವರಾಯನು ತನ್ನ ಗ್ರಂಥ 'ಆಮುಕ್ತ ಮೌಲ್ಯದ'ದಲ್ಲಿ ಉಲ್ಲೇಖಿಸಿರುವ ರೀತಿಯಲ್ಲಿ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯನ್ನು ನಡೆಸುತ್ತಿದ್ದನು.[೧೯] ಶ್ರೀಕೃಷ್ಣದೇವರಾಯ ಉದಾರನು, ದಯಾಕ್ಷಮಾಗುಣವುಳ್ಳನು, ದಾನಧರ್ಮ ದತ್ತಿಗಳಿಂದ ಕೂಡಿದ ವ್ಯಕ್ತಿಯಾಗಿದ್ದನು. ವಿಜಯನಗರ

ಸಾಮ್ರಾಜ್ಯವು ಶ್ರೀಕೃಷ್ಣದೇವರಾಯನ ಕಾಲದಲ್ಲಿ ವೈಭವದ ಶಿಖರ ಮುಟ್ಟಿತು. ಆತನ ಕಾಲನಂತರ ಅದರ ಉಚ್ಛ್ರಾಯಕ್ಕೆ ಪತನ ಪ್ರಾರಂಭವಾಯಿತು.

ಈತನ ಮರಣದ ನಂತರ ಸಹೋದರನಾದ ಅಚ್ಯುತರಾಯನು ಉತ್ತರಾಧಿಕಾರಿಯಾಗಿ ನೇಮಕನಾದನು. ಅಚ್ಯುತರಾಯ ಕ್ರಿ.ಶ.೧೫೩೦ ರಿಂದ ೧೫೪೨ರ ವರೆಗೆ ಆಳ್ವಿಕೆ ನಡೆಸಿದನು. ಈತನ ಆಳ್ವಿಕೆ ಕಾಲದಲ್ಲಿ ಮಧುರೆ, ತಂಜಾವೂರು ಮತ್ತು ಇಕ್ಕೇರಿಯ ನಾಯಕರು ಅಸ್ಥಿತ್ವಕ್ಕೆ ಬಂದರು. ನ್ಯೂನಿಜನು ಅಚ್ಯುತರಾಯನು ದುರ್ವ್ಯಸನ ಹಾಗೂ ನಿರಂಕುಶಾಡಳಿತಕ್ಕೆ ಬಲಿಯಾಗಿದ್ದನೆಂದು ತಿಳಿಸುತ್ತಾನೆ. ಅಚ್ಯುತರಾಯನ ಮರಣದ ನಂತರ ಒಂದನೇ ವೆಂಕಟ (ಕ್ರಿ.ಶ.೧೫೪೩) ಆಡಳಿತಕ್ಕೆ ಬಂದನು. ನಂತರ ಸದಾಶಿವರಾಯನಿಗೆ (ಕ್ರಿ.ಶ.೧೫೪೩–೧೫೭೧) ಪಟ್ಟಾಭಿಷೇಕವಾಯಿತು. ಹೆಸರಿಗೆ ಮಾತ್ರ ರಾಜನಾಗಿದ್ದು, ಎಲ್ಲಾ ಅಧಿಕಾರ ರಾಮರಾಯನ ಕೈಯಲ್ಲಿತ್ತು. ರಾಮರಾಯನು ಮುಸ್ಲಿಮ್ ರಾಜ್ಯಗಳಲ್ಲಿ ಪರಸ್ಪರ ವೈಮನಸ್ಸು ಉಂಟುಮಾಡಲು ಪ್ರಯತ್ನಿಸಿದನು, ಒಬ್ಬರನ್ನು ಮತ್ತೊಬ್ಬರ ವಿರುದ್ಧ ಎತ್ತಿಕಟ್ಟಿ, ಅವರನ್ನು ದುರ್ಬಲಗೊಳಿಸಿ ತನ್ನ ಸ್ವಂತ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಆಸೆ ಹೊಂದಿದ್ದನು. ಈತನ ಮುಖ್ಯವಾದ ಉದ್ದೇಶ ಕೃಷ್ಣಾ ಮತ್ತು ತುಂಗಭದ್ರೆಯ ನಡುವಿನ ದೋಅಬ್(ಮುದಗಲ್ ಮತ್ತು ರಾಯಚೂರು ಕೋಟೆಗಳು) ಪ್ರದೇಶವನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುವುದು ಮತ್ತು ಮುಸ್ಲಿಮ್ ರಾಜ್ಯಗಳನ್ನು ಕೃಷ್ಣೆಯ ಉತ್ತರಕ್ಕೆ ನೂಕುವುದು ಈತನ ನೀತಿಯನ್ನು ಅರಿತ ಮುಸ್ಲಿಮ್ ರಾಜ್ಯಗಳು ಪರಸ್ಪರ ಒಂದಾದರು. ರಾಮರಾಯನ ನೀತಿ ಮತ್ತು ತಪ್ಪು ಎಣಿಕೆ ಅಂತಿಮವಾಗಿ ರಕ್ಕಸ ತಂಗಡಿಯ ಸರ್ವ ನಾಶಕ್ಕೆ ಕಾರಣವಾಯಿತು. ಕೊನೆಗೆ ವೈಭವ ಸಾಮ್ರಾಜ್ಯ ಅವನತಿಯಾಯಿತು. ಕ್ರಿ.ಶ.೧೫೬೫ರ ಯುದ್ಧದ ನಂತರ ಸದಾಶಿವರಾಯ ಮರಣ ಹೊಂದಿದನು. ಸದಾಶಿವರಾಯನ ಜೊತೆಯಲ್ಲಿಯೇ ತುಳುವ ವಂಶ ಕೊನೆಗೊಂಡಿತು.

ಅರವೀಡು ವಂಶ ಕ್ರಿ.ಶ.೧೫೭೧ರಲ್ಲಿ ಆರಂಭವಾಯಿತು. ತಿರುಮಲ ಸಿಂಹಾಸನ ವೇರಿದನು. ನಂತರ ಕ್ರಿ.ಶ.೧೫೭೨ರಲ್ಲಿ ಶ್ರೀರಂಗರಾಯನು ಅಧಿಕಾರಕ್ಕೆ ಬಂದನು. ಅರವೀಡು ವಂಶದ ಅರಸರು ದುರ್ಬಲರಾಗಿದ್ದ ಕ್ರಮೇಣ ಸಾಮ್ರಾಜ್ಯ ಅವನತಿಯಾಯಿತು. ಸುಮಾರು.೧೪೬ ವರ್ಷಗಳ ದೀರ್ಘ ಆಳ್ವಿಕೆ ನಡೆಸಿತ್ತು. ವಿಜಯನಗರ ಸಾಮ್ರಾಜ್ಯವು ಅನ್ಯ ದಾಳಿಯನ್ನು ಎದುರಿಸಿ ದಕ್ಷಿಣ ಭಾರತವನ್ನು ರಕ್ಷಿಸಿ ಘೋಷಿಸಿದ ರೀತಿಯ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಅಲ್ಲದೆ ಸು.೨೫೦ ವರ್ಷಗಳ ವರೆಗೆ ಭವ್ಯ ಸಂಸ್ಕೃತಿಯನ್ನು ಬೆಳೆಸಿದ ಕೀರ್ತಿಗೆ ಭಾಜನರಾದರು. ನಂತರ ಹಲವು ಪಾಳೇಗಾರರ

ಅಧೀನಕ್ಕ ಈ ಪ್ರಧೇಶ ಒಳಗಾಯಿತು. ನಂತರ ಈ ಪ್ರದೇಶ ಹೈದರ್ ಮತ್ತು ಟಿಪ್ಪು ಹಾಗು ಬ್ರಿಟಿಷರ ಅಧೀನಕ್ಕೆ ಒಳಗಾಯಿತು.[೨೦]

ವಿಜಯನಗರ(ಕಲೆ)

ಚೋಳ ಸಾಮ್ರಾಜ್ಯ ಪತನಗೊಳ್ಳುತ್ತಲೇ ದಕ್ಷಿಣ ಭಾರತದ ಶಿಲ್ಪಗಳಿಗೆ ಇದ್ದ ರಾಜಾಶ್ರಯ ತಪ್ಪಿತು. ಆದರೆ ಪ್ರವರ್ಧಮಾನದಲ್ಲಿದ್ದ ವಿಜಯನಗರದಲ್ಲಿ ಅವರಿಗೆ ಮಾನ್ಯತೆ ದೊರೆಯಿತು. ವಿಜಯನಗರ ಸಾಮ್ರಾಜ್ಯವನ್ನು ಸಂಗಮ ವಂಶದ ಹರಿಹರ ಕಂಪ ಮತ್ತು ಬುಕ್ಕರು ಪ್ರಾರಂಭಿಸಿದರು. ವಿಜಯನಗರ ಅರಸರ ಕಾಲದಲ್ಲಿ ಕಲೆಗೆ ಪ್ರೋತ್ಸಾಹವಿದ್ದರೂ, ನಿರ್ಮಾಣಗಳು ಸಂಖ್ಯಾ ದೃಷ್ಟಿಯಿಂದಲೂ ಬಹುವಾಗಿದ್ದರೂ ಶಿಲ್ಪದಲ್ಲಿ ಅಲಂಕರಣೆ ವಿರಳವಾಗಿತ್ತು. ಈ ಕಾಲದ ಶಿಲ್ಪಗಳಿಗೆ ವಿಷ್ಣುವಿನ ದಶಾವತಾರಗಳು, ಕೃಷ್ಣನ ಲೀಲೆಗಳು ಮಹಾಕಾವ್ಯಗಳಿಂದ ಆಯ್ದು ವಿವಿಧ ದೃಶ್ಯಗಳು ಶಿಲ್ಪವಸ್ತುಗಳಾಗಿದ್ದವು.

ವಿಜಯನಗರ ಸಾಮ್ರಾಜ್ಯದ ಕೊಡುಗೆ ಎಂದರೆ ಹಂಪಿ. ಈ ನಗರವು ವಿಜಯನಗರದ ಪತನದೊಂದಿಗೆ ಭಗ್ನ ನಗರವಾಗಿದೆ. ಹಂಪಿಯ ವೈಭವವನ್ನು ಪೋರ್ಚ್‌ಗೀಸ್ ಯಾತ್ರಿಯಾದ ಪಯಾಸನ ಬರಹಗಳಿಂದ ಸ್ವಲ್ಪಮಟ್ಟಿಗೆ ಊಹಿಸಬಹುದು. ಈತನು ವಿಜಯನಗರವನ್ನು ಕೃಷ್ಣದೇವರಾಯನ ಕಾಲದಲ್ಲಿ ಧಾರ್ಮಿಕ ಮತ್ತು ಸಾಮಾಜಿಕವಾದ ಅನೇಕ ಕಟ್ಟಡಗಳ ನಿರ್ಮಾಣ ನಡೆಯಿತು ಎಂದು ತನ್ನ ಬರಹದಲ್ಲಿ ವಿವರಿಸಿದ್ದಾನೆ.[೨೧]

ಶಿಲೆ : ಶಿಲ್ಪದ ನಿರ್ಮಾಣದಲ್ಲಿ ಶಿಲೆಯು ಪ್ರಮುಖ ಮಾಧ್ಯಮವಾಗಿದೆ. ಶಿಲ್ಪದ ನಿರ್ಮಾಣಕ್ಕೆ ಶಿಲೆಯನ್ನು ಬೆಟ್ಟದಿಂದ ತೆಗೆದು ನಿರ್ಮಿಸುವ ವಸ್ತುವಾಗಿದೆ. ಇಂತಹ ಶಿಲೆಯಿಂದ ರಚಿಸಿದ ಶಿಲ್ಪವು ದೃಡವಾಗಿರುತ್ತದೆ. ಆದರೆ ಭೂಮಿಯಿಂದ ತೆಗೆದ ಶಿಲೆಯು ಅಷ್ಟೊಂದು ದೃಡವಾಗಿರುವುದಿಲ್ಲ. ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ನಿರ್ಮಿಸಲು ಶಿಲೆಯ ಬಳಕೆಯು ಅತಿ ಪ್ರಮುಖವಾಗಿದೆ. ಶಿಲೆಗಳಲ್ಲಿ ನಾಲ್ಕು ವಿಧದ ಬಣ್ಣಗಳಿರುವ ಶಿಲೆಗಳು ನಿಸರ್ಗದಲ್ಲಿ ದೊರೆಯುತ್ತವೆ. ಅವುಗಳಲ್ಲಿ ಮುಖ್ಯವಾಗಿ ಬಿಳಿ, ಕೆಂಪು, ಹಳದಿ ಮತ್ತು ಕಪ್ಪು. ಈ ಬಣ್ಣಗಳಲ್ಲಿ ಹಲವು ಛಾಯೆಯ ವರ್ಣಗಳಿರುತ್ತವೆ. ದೇವಾಲಯ ಮತ್ತು ಮೂರ್ತಿಶಿಲ್ಪಗಳ ನಿರ್ಮಾಣಕ್ಕೆ ಬಿಳಿಯ ಬಣ್ಣದ ಕಲ್ಲು ಅತ್ಯಂತ ಶ್ರೇಷ್ಟಕರವಾಗಿದೆ. ಇದರ ನಂತರದಲ್ಲಿ ಕ್ರಮವಾಗಿ ಹಳದಿ, ಕೆಂಪು ಮತ್ತು ಕಪ್ಪು ಶಿಲೆಯು ಶ್ರೇಷ್ಟವಾದದ್ದಾಗಿದೆ.[೨೨]

ದೇವಾಲಯಗಳಲ್ಲಿರುವ ಶಿಲಾಮೂರ್ತಿಗಳನ್ನು ಗರ್ಭಗೃಹದಲ್ಲಿ ಸ್ಥಾಪಿಸುವುದು ಶ್ರೇಷ್ಟಕರವಾದದ್ದು ಎಂದು ಶಿಲ್ಪಶಾಸ್ತ್ರ ಗ್ರಂಥಗಳು ತಿಳಿಸುತ್ತವೆ. ಅದಕ್ಕಾಗಿ ಶ್ರೇಷ್ಟವಾಗಿರುವ ಶಿಲೆಯನು ಆಯ್ಕೆ ಮಾಡಿಕೊಳ್ಳುತ್ತಾರೆ. ಅದರಲ್ಲಿ ಬಿಳಿಯ ಬಣ್ಣದ ಶಿಲೆಯಾದ ಕ್ವಾರ್ಟ್ಜೈಟ್‌ನ್ನು ಬಳಸಿ ಮೂರ್ತಿಗಳನ್ನು ಕೆತ್ತಲಾಗುತ್ತದೆ. ಗರ್ಭಗೃಹದ ಬಿಂಬಗಳು ಅಚಲ ಬಿಂಬಗಳು ಅವುಗಳನು ಬೇರೆಡೆ ಸಾಗಿಸಲು ಬರುವುದಿಲ್ಲ. ಅದಕ್ಕಾಗಿ ಇಂತಹ ಬಲಯುತವಾದ ಶಿಲೆಯನ್ನು ಬಳಸಿ ಶ್ರೇಷ್ಟವಾದ ಮೂರ್ತಿಗಳನ್ನು ಕೆತ್ತಿ ಪ್ರತಿಷ್ಠಾಪನೆ ಮಾಡಲಾಗುತ್ತದೆ.[೨೩]

ಮೂರ್ತಿ ಶಿಲ್ಪದ ನಿರ್ಮಾಣಕ್ಕೆ ಶಿಲೆಯನ್ನು ಆಯ್ಕೆ ಮಾಡುವ ವಿಧಾನದಲ್ಲಿ ಮೂರು ವಿಧದ ಶಿಲೆಯಲ್ಲಿ ಶಿಲ್ಪಗಳ ಕೆತ್ತನೆಗೆ ಬಳಸಲಾಗುತ್ತದೆ. ಒಂದೇ ಆಕಾರ ಬಣ್ಣವನ್ನು ಹೊಂದಿರುವ ತೂಕವಾಗಿರುವ ಸುತ್ತಿಗೆಯಿಂದ ಬಡಿದರೆ ಕಿಡಿಗಳನ್ನು ಚೆಲ್ಲುವ ಶಿಲೆಯು ಉತ್ತರ ದಿಕ್ಕಿಗೆ ಪಡೆದಿರುವ ಶಿಲೆಯಿಂದ ಪುರುಷ ಶಿಲ್ಪಗಳನ್ನು ಕೆತ್ತಲಾಗುವುದು. ತುಂಬಾ ದೊಡ್ಡದಲ್ಲದ, ತುಂಬಾ ಚಿಕ್ಕದಲ್ಲದ ನಾಲ್ಕು ಅಥವಾ ಎಂಟು ಕೋನಗಳ ತಾಳವಾದ್ಯದಂತಹ ಸುನಾದ ಹೊಮ್ಮಿಸುವ ಮೂಲ ದಪ್ಪವಾಗಿಯೂ, ತೆಳುವಾಗಿಯೂ ಇರುವ ಸಾಧಾರಣವಾದ ಭಾರದ, ಮುಟ್ಟಲು ಬಹು ಶೀತಲವಾಗಿರುವ ಶಿಲೆಯಿಂದ ಸ್ತ್ರೀ ಶಿಲ್ಪವನ್ನು ಕೆತ್ತಲಾಗುತ್ತದೆ.[೨೪]

ಚಿಕ್ಕದಾದ ವೃತ್ತಾಕಾರದ ಬಣ್ಣ, ಒರಟಾದ ಹೊರಮೈಯ, ಬಡಿದಾಗ ಗಣಗಣ ಸದ್ದು ಬಂದ, ಮೂಲದ ತೆಳುವಾಗಿ, ಅಗ್ರ ಭಾಗವು ದಪ್ಪಗೆ ಇರುವ ತ್ರಿಕೋನಾಕೃತಿಯ ಅಥವಾ ಒಂದು ಬಾಹು ಎದುರಾಗಿರುವ ಬಾಹುವಿಗಿಂತಲೂ ಕಡಿಮೆಯಾಗಿರುವ ಶಿಲೆಯನ್ನು ನಪುಂಸಕ ಶಿಲೆಯನ್ನು ಹೆಚ್ಚಾಗಿ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪದಲ್ಲಿ ಬಳಸುವುದು ಕಡಿಮೆ. ಈ ರೀತಿಯಾಗಿ ಶಿಲೆಯಿಂದ ವಿವಿಧ ರೀತಿಯ ಶಿಲ್ಪಗಳನ್ನು ಕೆತ್ತಲು ಶಿಲೆಗಳು ಆಯ್ಕೆ ಮಾಡಿಕೊಂಡು ನಿರ್ಮಿಸಲಾಗುತ್ತದೆ.[೨೫]

ವಸ್ತು ಸಂಗ್ರಹಾಲಯಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಕನ್ನಡಿ ಇದ್ದಹಾಗೆ ಇವುಗಳ ಮುಲ ಉದ್ದೇಶವನ್ನು ನಮ್ಮ ಹಿಂದಿನ ಸಂಸ್ಕೃತಿಯ ಅವಶೇಷಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಮಾದರಿಯಾಗಿ ಇಡುವುದು ವಸ್ತು ಸಂಗ್ರಹಾಲಯಗಳ ಬಹುಮುಖ್ಯ ಉದ್ದೇಶವಾಗಿದೆ. ವಸ್ತು ಸಂಗ್ರಹಾಲಯಗಳು ವೈವಿಧ್ಯಮಯ ವಸ್ತುಗಳ ಅಪೂರ್ವ ಖಜಾನೆಯಾಗಿದೆ. ವಸ್ತು ಸಂಗ್ರಹಾಲಯವೆಂದರೆ ಕೇವಲ ವಸ್ತುಗಳ ಸಂಗ್ರಹಣೆ ಎಂದಷ್ಟೆ ತಿಳಿಯದೆ ಅದು ಒಂದು ಅಧ್ಯಯನ ಕೇಂದ್ರವಾಗಿರುತ್ತದೆ. ಚರಿತ್ರೆ ಕಲೆ ಸಾಹಿತ್ಯ ಸಂಸ್ಕೃತಿ ಇವುಗಳನ್ನೆಲ್ಲಾ ಪರಿಶೀಲಿಸುವುದರ ಮೂಲಕ ಮಾಹಿತಿಯನ್ನು ಗ್ರಹಿಸಲು ಸಾಧ್ಯವಾಗುತ್ತದೆ

ಪ್ರಾಚ್ಯ ವಸ್ತುಸಂಗ್ರಹಾಲಯಗಳ ಬೆಳವಣಿಗೆ & ಹಿನ್ನಲೆ

ವೈಜ್ಞಾನಿಕ ಶಿಸ್ತಿಗೆ ಒಳಪಟ್ಟಿರುವ ವಸ್ತು ಸಂಗ್ರಹಾಲಯವನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಅಜಯಗರ್ ಎಂದು ಮತ್ತು ಪ್ರಾಚೀನ ಸಾಹಿತ್ಯದಲ್ಲಿ ಚಿತ್ರ ಶಿಲೆಯೆಂದು ಕರೆಯಲಾಗುತ್ತಿತ್ತು ಈಗ ಬಳಕೆಗೊಳ್ಳುತ್ತಿರುವ ವಸ್ತು ಸಂಗ್ರಹಾಲಯ ಎಂಬ ಪದವು ಗ್ರೀಕ್ ಮ್ಯೂಸಿಯ ಎಂಬ ಶಬ್ದ ಸಂವಾದಿಯಾಗಿ ಬಳಕೆಗೊಂಡಿದೆ ಇದರರ್ಥ ಕಲಾಭಿಮಾನಿ ದೇವತೆಗಳ ಗರ್ಭಗುಡಿ ಎಂಬುದಾಗಿದೆ.

ಭಾರತದಲ್ಲಿ ಮೊದಲ ಬಾರಿಗೆ ೧೭೮೪ರಲ್ಲಿ ಕಲ್ಕತ್ತಾದ ರಾಯಲ್ ಏಶಿಯ ಯೂಟಿಕ್ ಸೊಸೈಟಿಯು ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿತು ಇದರ ಉದ್ದೇಶ ಪುರಾತತ್ವ & ಪ್ರಾಣಿ ಶಾಸ್ತ್ರಕ್ಕೆ ಸಂಬಂಧಿಸಿದ ವಸ್ತುಗಳನ್ನು ಒಂದೆಡೆ ಸಂಗ್ರಹಿಸಿ ಪ್ರದರ್ಶನಗೊಳಿಸುವುದಾಗಿತ್ತು. ಆ ಸಂಗ್ರಹಾಲಯಕ್ಕೆ

ಡ್ಯಾನಿಸ್‌ನ ಡಾ॥.ನಾಥಿನಿಯಲ್ ಮೊದಲು ಅಧಿಕಾರಿಯಾಗಿ ನೇಮಕಗೊಂಡನು. ಕ್ರಿ.ಶ ೧೮೬೨ ಬ್ರಿಟೀಷ್ ಅಧಿಕಾರಿಯಾದ ಸರ್.ಅಲೆಗ್ಯಾಂಡರ್ ಕನ್ನಿಂಗ ಹ್ಯಾಂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯನ್ನು ಸ್ಥಾಪಿಸಿ ವಸ್ತು ಸಂಗ್ರಹಾಲಗಳ ಬೆಳವಣಿಗೆಗೆ ವಿಶೇಷ ಆದ್ಯತೆ ಕೊಟ್ಟನು. ಈ ಹಿನ್ನಲೆಯಲ್ಲಿ ದಕ್ಷಿಣ ಭಾರತದ ಮದ್ರಾಸಿನಲ್ಲಿ ಕ್ರಿ.ಶ. ೧೮೫೪ರಲ್ಲಿ ಮೊಟ್ಟ ಮೊದಲಿಗೆ ಆದಿ ಮಾನವನ ಸಂಸ್ಕೃತಿಗೆ ಸಂಬಂಧಿಸಿದ ಕಲ್ಲಿನ ಆಯುಧಗಳನ್ನು ಸಂಗ್ರಹಿಸಿ ಪ್ರದರ್ಶನಕ್ಕೆ ಈಗಿನ ಇಗ್ಮೋರ್ ಮ್ಯೂಸಿಯಂನಲ್ಲಿರಿಸಿದನು. ಈತನ ಸಂಗ್ರಹಕಾರ್ಯ ಮಾನವ ಶಾಸ್ತ್ರಕ್ಕೆ ಸಂಬಂಧಿಸಿದ ವಸ್ತು ಸಂಗ್ರಹಗಳವರೆಗೂ ವ್ಯಾಪ್ತಿಯನ್ನು ಪಡೆಯಿತು. ಪ್ರಾಚೀನ ಕಾಲದಿಂದಲೂ ಸಾಹಿತ್ಯ ಸಂಸ್ಕೃತಿ ಪ್ರಿಯರಾಗಿದ್ದ ಅರಸರು ಕಲೆ, ಸಾಹಿತ್ಯ ಸಂಸ್ಕೃತಿ, ಪೋಷಣೆ ಅಂಗವಾಗಿ ತಮ್ಮ ಅರಮನೆಗಳ ವಸ್ತು ಸಂಗ್ರಹಾಲಯವನ್ನು ಅಸ್ತಿತ್ವಕ್ಕೆ ತರುತ್ತಿದ್ದರೆಂಬುದಕ್ಕೆ ನಮ್ಮಲ್ಲಿ ನಿದರ್ಶನಗಳಿವೆ. ಹೀಗಾಗಿ ಟ್ರಾವಂಕೂರಿನ ಮಹಾರಾಜರು ತ್ರಿವೇಂಡ್ರಂನಲ್ಲಿ ಮೈಸೂರು ಅರಸರು, ಬೆಂಗಳೂರಿನಲ್ಲಿ ತಮ್ಮ ಪ್ರಾಂತ್ಯದ ಪೂರ್ವಜರ ವಸ್ತುಗಳನ್ನು ಸಂಗ್ರಹಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ೧೯೦೨ ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯು ದೇಶದಾದ್ಯಂತ ಸು.೨೫ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿತು ಅವುಗಳಲ್ಲಿ ಸಾರನಾಥ್ ೧೯೦೪, ಆಗ್ರಾದಲ್ಲಿ ೧೯೦೬ ರ ಆಡ್ಮೀರದಲ್ಲಿ ೧೯೦೮, ದೆಹಲಿಯಲ್ಲಿ ೧೯೦೯, ಕಲ್ಕತ್ತಾದಲ್ಲಿ ೧೯೦೯ ಬಿಜಾಪುರ ೧೯೧೨, ನಳಂದದಲ್ಲಿ ೧೯೧೭, ಸಾಂಚಿಯಲ್ಲಿ ೧೯೧೯ ಖುಜರಾಹೋದಲ್ಲಿ ೧೯೨೩, ಹಂಪಿಯಲ್ಲಿ ೧೯೫೨ರಲ್ಲಿ ಸ್ಥಾಪನೆಗೊಂಡಿತು.

ವಸ್ತು ಸಂಗ್ರಹಾಲಯಗಳನ್ನು ೭ ರೀತಿಯಲ್ಲಿ ವಿಂಗಡಿಸಲಾಗಿದೆ.

೧. ರಾಷ್ಟ್ರೀಯ ವಸ್ತು ಸಂಗ್ರಹಾಲಯ

೨. ರಾಜ್ಯ ವಸ್ತು ಸಂಗ್ರಹಾಲಯ

೩. ಸ್ಥಳೀಯ ವಸ್ತು ಸಂಗ್ರಹಾಲಯ

೪. ವಿಶ್ವ ವಿದ್ಯಾಲಯ ವಸ್ತು ಸಂಗ್ರಹಾಲಯ

೫. ವ್ಯಕ್ತಿ ಕೇಂದ್ರಿತ ವಸ್ತು ಸಂಗ್ರಹಾಲಯ

೬. ಆಧುನಿಕ ವಸ್ತು ಸಂಗ್ರಹಾಲಯ

೭. ವಿಜ್ಞಾನ & ತಂತ್ರಜ್ಞಾನ ವಸ್ತು ಸಂಗ್ರಹಾಲಯ

ರಾಷ್ಟ್ರೀಯ ವಸ್ತು ಸಂಗ್ರಹಾಲಯ :

ರಾಷ್ಟ್ರೀಯ ವಸ್ತು ಸಂಗ್ರಹಾಲಯಗಳು ನವದೆಹಲಿ, ಅಲಹಾಬಾದ್, ಕಲ್ಕತ್ತಾ, ಹೈದ್ರಾಬಾದ್, ಹಾಗೂ ಮುಂಬೈಗಳಲ್ಲಿ ಸ್ಥಾಪಿಸಲ್ಪಟ್ಟವು ಇವುಗಳಲ್ಲಿ ಕಲ್ಕತ್ತಾ ವಸ್ತು ಸಂಗ್ರಹಾಲಯವನ್ನು ೧೮೧೪ ರಲ್ಲಿ ವಿಲಿಯಂ ಬೋನ್ಸ್ ಸ್ಥಾಪಿಸಿದರು, ನವದೆಹಲಿ ವಸ್ತು ಸಂಗ್ರಹಾಲಯವನ್ನು ೧೯೪೯ ರಲ್ಲಿ ಮಾರ್ಟಿಮರ್ ಈಲರ್ ಸ್ಥಾಪಿಸಿದರು. ಈ ವಸ್ತು ಸಂಗ್ರಹಾಲಯಗಳು ರಾಷ್ಟ್ರ ಮಟ್ಟದಲ್ಲಿ ಉನ್ನತ ಸ್ಥಾನ ಪಡೆದಿದೆ.

ರಾಜ್ಯ ವಸ್ತು ಸಂಗ್ರಹಾಲಯ :

ರಾಜ್ಯದ ರಾಜಧಾನಿಗಳಲ್ಲಿ ಸ್ಥಾಪಿಸಲ್ಪಟ್ಟಿರುವ ವಸ್ತು ಸಂಗ್ರಹಾಲಯಗಳೆಲ್ಲಾವನ್ನು ಪ್ರಾದೇಶಿಕ ಆದ್ಯತೆಯ ಮೇರೆಗೆ ವಿಂಗಡಿಸಲ್ಪಟ್ಟು, ಸಮಗ್ರ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿಯೂ ಜನಾಂಗದ ಸಾಂಸ್ಕೃತಿಕ ಪ್ರಾತಿನಿಧಿಕ ಸಂಸ್ಥೆಗಳಂತೆ ಪ್ರತಿನಿಧಿಸುತ್ತವೆ.

ಸ್ಥಳೀಯ ವಸ್ತು ಸಂಗ್ರಹಾಲಯ :

ಇತ್ತೀಚಿಗೆ ಸ್ಥಳೀಯ ಚರಿತ್ರೆಯ ಆಧ್ಯಯನವು ವ್ಯಾಪಕಗೊಳ್ಳುತ್ತಿದೆ. ಈ ಹಿನ್ನಲೆಯಲ್ಲಿ ಸ್ಥಳೀಯ ವಸ್ತು ಸಂಗ್ರಹಾಲಯಗಳ ಆಸ್ತಿತ್ವಕ್ಕೆ ಎಲ್ಲಿಲ್ಲದ ಮಹತ್ವವಿದೆ. ಆಯಾ ಪ್ರಾಂತ್ಯದಲ್ಲಿ ಆಳಿದ ಅರಸರು ಶ್ರೀಸಾಮಾನ್ಯರು ಬಿಟ್ಟು ಹೋದ ಸಾಂಸ್ಕೃತಿಕ ಪಳಿಯುಳಿಕೆಗಳನ್ನು ಇಂತಹ ಸಂಗ್ರಹಾಲಯದಲ್ಲಿ ಕಾಣಬಹುದು

ವಿಶ್ವ ವಿದ್ಯಾಲಯದಲ್ಲಿ ವಸ್ತು ಸಂಗ್ರಹಾಲಯ :

ಶೈಕ್ಷಣಿಕ ಭಾಗವಾದ ಇಲ್ಲಿಯು ವಸ್ತು ಸಂಗ್ರಾಹಾಲಯಗಳು ಅಲ್ಲಿಯ ವಿದ್ವಾಂಸರ ಅಧ್ಯಯನ ಅಧ್ಯಾಪನ ಹಾಗೂ ಸಂಶೋಧನೆ ಪರಿಸರದಲ್ಲಿ ಬೆಳೆದಿರುವಂತಹವುಗಳು ಉಪಯೋಗವಾಗುವ ದೃಷ್ಠಿಯಿಂದ ಬೆಳವಣಿಗೆ ಹೊಂದಿದೆ. ಇದಕ್ಕೆ ಉತ್ತಮ ಉದಾಹರಣೆ ಹಂಪಿಯ ಕನ್ನಡ ವಿಶ್ವ ವಿದ್ಯಾಲಯ ಪುಣೆ ವಸ್ತು ಸಂಗ್ರಹಾಲಯ ಡೆಕ್ಕನ್ ಕಾಲೇಜಿನ ವಸ್ತು ಸಂಗ್ರಹಾಲಯವನ್ನು ಕಾಣಬಹುದು.

ವ್ಯಕ್ತಿ ಕೇಂದ್ರಿತ ವಸ್ತು ಸಂಗ್ರಹಾಲಯ :

ರಾಷ್ಟ್ರನಾಯಕರು ಸಂಸ್ಕೃತಿ ಪ್ರಿಯರ ಹೆಸರಿನಲ್ಲಿ ಆಸ್ತಿತ್ವಕ್ಕೆ ಬಂದ ವಸ್ತು ಸಂಗ್ರಹಾಲಯಗಳಿವು ಉದಾ:ಗಾಂಧಿ ವಸ್ತು ಸಂಗ್ರಹಾಲಯ ದೆಹಲಿಯ ಜವಾಹರಲಾಲ್ ನೆಹರು ವಸ್ತುಗಳನ್ನು ಕಾಣಬಹುದು

ಆಧುನಿಕ ವಸ್ತು ಸಂಗ್ರಹಾಲಯಗಳು :

ಅಲ್ಲಿನ ಸ್ಥಳೀಯ ಸಂಸ್ಕೃತಿ ಆಚಾರ ವಿಚಾರಗಳಿಗೆ ಸಂಬಂಧಿಸಿದ ವಸ್ತುಗಳ ಸಂಗ್ರಹಣೆಯಾಗಿದೆ.

ವಿಜ್ಞಾನ & ತಂತ್ರಜ್ಞಾನ ವಸ್ತು ಸಂಗ್ರಹಾಲಯ :

ವಿಜ್ಞಾನ & ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಬೆಂಗಳೂರು ವಿಜ್ಞಾನ, ತಂತ್ರಜ್ಞಾನ ವಸ್ತು ಸಂಗ್ರಹಾಲಯವನ್ನು ಕಾಣಬಹುದಾಗಿದೆ.

ವಸ್ತುಗಳ ಭೌತಿಕ ರೂಪಕ್ಕಿಂತ ಅವುಗಳ ವಾಸ್ತವಿಕ ಮೌಲ್ಯಗಳನ್ನು ಪ್ರಧಾನವಾಗಿ ತೀಳಿಯುವುದಾಗಿದೆ. ಯಾವುದೇ ವಸ್ತುವು ಅದೇಷ್ಟೇ ಮುಖ್ಯವಾದರು, ಅದರ ಮೂಲ ಹಿನ್ನಲೆಯಲ್ಲಿ ಅದನ್ನು ತೋರಿಸಿದ ಹೊರತು ಅದು ಪೂರ್ಣವೆಸುವುದಿಲ್ಲ. ತತ್ ಪರಿಣಾಮವಾಗಿ ಇಂದು ವಸ್ತುಗಳ ಸಂಗ್ರಹ ಹಾಗೂ ಸಂರಕ್ಷನೆ ಸಾಮಾನ್ಯ ಕಾರ್ಯಗಳಿಗಾಗಿ ಅವುಗಳು ಶೈಕ್ಷಣಿಕ ಗುಣ ಪ್ರಧಾನ ಪಡೆಯುತ್ತವೆ. ವಸ್ತುಗಳ ಸಂಗತವಾದ ಕಥೆಯನ್ನು ತಾನೇ ಹೇಳಲು ಯತ್ನಿಸುತ್ತವೆ. ಅನೇಕ ಸೂಚನೆಗಳನ್ನು ಕೊಡುವ ಮೂಲಕ ಸಂದರ್ಶಕನಿಗೆ ನೋಡುವ ಮತ್ತು ಅನುಭವಿಸುವ ಮೂಲಕ ಜ್ಞಾನವನ್ನು ಪಡೆಯಲು ಉತ್ತೇಜನ ನೀಡುತ್ತವೆ. ಆನಂದ ಪಡೆಯುವ ಪ್ರೇಕ್ಷಕನು ದಿನ ನಿತ್ಯ ದುಡಿತದ ಬಳಲಿಕೆ ಅಥವಾ ಆತಂಕಗಳಿಂದ ವಿರಾಮ ಪಡೆಯುವ ಹಾಗೂ ವಿಶಾಲ ಜ್ಞಾನ ದಿಗಂತಗಳನ್ನು[೨೭] ಕಾಣುವ ಸ್ಥಳ ಎಂದು ವಿವೇಚಿಸಿದರೆ ತಪ್ಪಾಗಲಾರದು.

೩.೨. ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಬೆಳವಣಿಗೆ ಮತ್ತು ಹಿನ್ನಲೆ:

ಕಮಲಾಪುರ (ಹಂಪಿ) ಪುರಾತತ್ವ ಪ್ರಾಚ್ಯ ವಸ್ತು ಸಂಗ್ರಾಲಯವು. ಹಂಪಿಯ ಕಮಲ್ ಮಹಲ್‌ನ ಹಿಂದೆ ಮೊಟ್ಟ ಮೊದಲು ಇದನ್ನು ಕ್ರಿ.ಶ. ೧೯೫೨ರಲ್ಲಿ ಕೇಂದ್ರ ಪ್ರಾಚ್ಯ ಇಲಾಖೆ ಸ್ಥಾಪನೆ ಮಾಡಿತ್ತು. ವಿಜಯನಗರದ ಗತವೈಭವ ಸ್ಮಾರಕವಾಗಿ ಉಳಿದಿರುವ ಹಂಪಿಯಲ್ಲಿ ಅಲ್ಲಿನ

ಗಜಶಾಲೆಯಲ್ಲಿ ಕೆಲವಾರು ಮೂರ್ತಿಶಿಲ್ಪ ಕೃತಿಗಳನ್ನು ಜೋಡಿಸಲಾಗಿದೆ ಇವೆಲ್ಲವೂ ಆ ಸುತ್ತಿನಲ್ಲಿ ಸಂಗ್ರಹಿಸಿ ಕೃತಿಗಳು ಈ ಸಂಗ್ರಹಾಲಯಕ್ಕೆ ನೂತನ ಘಟಕವನ್ನು ಕಮಲಾಪುರದಲ್ಲಿ ಕಟ್ಟಿಸಿ ಕ್ರಿ.ಶ. ೧೯೭೨ರಲ್ಲಿ ಇದನ್ನು ಸ್ಥಾಪಿಸಿ ಸ್ಥಳಾಂತರಿಸಿದರು. ಈ ವಸ್ತು ಸಂಗ್ರಾಹಾಲಯದಲ್ಲಿ ಪ್ರಾಗೈತಿಹಾಸ ಕಾಲದಿಂದ ವಿಜಯನಗರ ಕಾಲದವರೆಗೂ ಅನೇಕ ಅವಶೇಷಗಳು – ವಸ್ತುಗಳು, ಮೂರ್ತಿ ಶಿಲ್ಪಿಗಳು. ನಾಣ್ಯಗಳು, ಶಾಸನಗಳನ್ನು ಕಾಪಾಡಿಕೊಂಡು ಸುಮಾರು ೪೧ ವರ್ಷಗಳ ಕಾಲ ಈ ವಸ್ತು ಸಂಗ್ರಹಾಲಯವು ನಿರತಕಾರ್ಯದಲ್ಲಿದೆ. ಇದರ ಜೊತೆಗೆ ಸಂಶೋಧಕರು ಉತ್ಖನನ ಮಾಡುವ ಮುಖಾಂತರ ಹೊರತೆಗೆದು ಅದಕ್ಕೆ ಜೀವ ತುಂಬುವ ಕೆಲಸ ಸಂಶೋಧಕರದ್ದು, ಅವರು ವಸ್ತುಗಳ ಜೊತೆ ಮಾತನಾಡುತ್ತಾರೆ. ಅವುಗಳ ಕುರಿತು ಅರಿವುಮೂಡಿಸುತ್ತಾರೆ.

ಸ್ಥಾಪನೆ – ಕ್ರಿ.ಶ. ೧೯೭೨ ರಲ್ಲಿ ಸ್ಥಾಪನೆಯಾಯಿತು.

ಈ ವಸ್ತು ಸಂಗ್ರಹಾಲಯದಲ್ಲಿ ಶಿಲಾಯುಗ & ಶಾತವಾಹನ ಕಾಲದಿಂದ ಹಿಡಿದು ವಿಜಯನಗರ ಮತ್ತು ಮೈಸೂರು ಒಡಯರ ಕಾಲದವರೆಗಿನ ಆನೇಕ ಪ್ರಾಚ್ಯ ವಸ್ತುಗಳ ಸಂಗ್ರಹವಿದೆ. ಅನೇಕ ಶಿಲಾಯುಗದ ವಿಗ್ರಹಗಳು , ಶಿಲಾ ಹಾಗೂ ಕಾವ್ಯ ಶಾಸನಗಳು ನಾಣ್ಯಗಳು ವಾಣಿಗಳು, ತಾಳೆಗರಿ ಕಾಗದದ ಹಸ್ತ ಪ್ರತಿಗಳು, ಶಿಲ್ಪ ಪಟ್ಟಿಕೆಗಳು, ಚಿತ್ರಗಳು ಕತ್ತಿ ಕವಚ, ಭರ್ಜಿ ಗುರಾಣಿ ಧರಣಿಗುಂಡು,[೨೮] ಹಲವು ಬಗೆಯ ಪ್ರಾಚ್ಯ ವಸ್ತುಗಳ ಸಂಗ್ರಹವಿದ್ದು ಇದನ್ನು ದೇಶ ವಿದೇಶದ ಅನೇಕ ಅನೇಕ ಸಂದರ್ಶಕರು ಬಂದು ವೀಕ್ಷಿಸುತ್ತಿದ್ದಾರೆ.

ಅಡಿಟಿಪ್ಪಣಿಗಳು :

೧. ಡಾ.ಹೆಚ್. ತಿಪ್ಪೇಸ್ವಾಮಿ, ೨೦೧೨, ಆದಿಮ ಸಂಸ್ಕೃತಿ. ಪು.೩೨-೩೭

೨. ಡಾ.ಹೆಚ್. ತಿಪ್ಪೇಸ್ವಾಮಿ, ೨೦೧೨, ಹಂಪಿ ಮಧ್ಯಕಾಲೀನ ಮಹಾನಗರ.ಪು.೨೭-೩೨

೩. ಡಾ.ಹೆಚ್. ತಿಪ್ಪೇಸ್ವಾಮಿ, ೨೦೦೯, "ಕಮಲಾಪುರದ ವಿಜಯನಗರಕಾಲದ ಶಿಲಾಮೂರ್ತಿಗಳು" ವಿಜಯನಗರ ಆದ್ಯಯನ. ಪು.೫೬

೪. ಡಾ.ಹೆಚ್. ತಿಪ್ಪೇಸ್ವಾಮಿ, ೨೦೦೬. ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು ಸಂ.೩ ,ಪು.೪

೫. ನಾಯಕ ಹಾ.ಮಾ. (ಸಂ), ಕನ್ನಡ ವಿಷಯ ವಿಶ್ವಕೋಶ ಪು.೯೮೬೫-೯೭

೬. ಅದೇ.

7. Gazetteer of India, Bellary District

೮. ಅದೇ.

೯. ಚಂದ್ರಶೇಖರ ಟಿ.ಆರ್., ಬಳ್ಳಾರಿ ಜಿಲ್ಲೆಯ ನಿಸರ್ಗ ಸಂಪತ್ತು, ಪು.೪೭-೪೮

೧೦. ರಾಯಚೂರು ಜಿಲ್ಲಾ ಗ್ಯಾಝೇಟಿಯರ್.ಪು.೮-೧೨.

೧೧. Gazetteer of India, Bellary District.

೧೨. ಎನ್. ಶಿವರಾಜ, ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯ ಸಂಗ್ರಹಾಲಯದ ಶಿಲ್ಪಕಲೆ, ಕಿರುಯೋಜನಾ ವರದಿ, ಕೃದೇವಿ.ಬಳ್ಳಾರಿ

೧೩. ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ, ಕರ್ನಾಟಕ ಇತಿಹಾಸ ದರ್ಶನ: ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ಚಾಮರಾಜಪೇಟೆ, ಬೆಂಗಳೂರು, ೧೯೭೦,ಪು-೩೬೧,

೧೪. ಅದೇ, ಪು-೩೬೩

೧೫. ಕರ್ನಾಟಕ ಪರಂಪರೆ ಮಧ್ಯಕಾಲ ಮತ್ತು ಆಧುನಿಕ ಕಾಲ ಸಂ-೨, ಪು-೨೨, ೨೩ ಮೈಸೂರು ರಾಜ್ಯ ಸರ್ಕಾರ

೧೬. ಡಾ.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು-೧೪೦-೧೪೨

೧೭. ಅದೇ ಪುಟ-೩೩-೩೪

೧೮. ಕರ್ನಾಟಕ ಪರಂಪರೆ ಪು-೨, ಪು-೩೨,೩೩

೧೯. ಅದೇ- ಪು-೩೬

೨೦. ಅದೇ-ಪು-೪೬

೨೧.ಪದ್ಮಜಾ ದೇಸಾಯಿ. ಹಂಪಿ ಪರಿಸರದ ವೈಷ್ಣವ ಶಿಲ್ಪಗಳು, ಪಿಎಚ್.ಡಿ ಮಹಾಪ್ರಬಂಧ, ಕವಿವಿ.ಹಂಪಿ,೨೦೧೫,ಪು-೯೨

೨೨.ಜ್ಞಾನಾನಂದ ಜಿ, ಶಿಲ್ಪಾದರ್ಶ(ಸಂ-೨), ಪು-೩೧೯

೨೩.ಅದೇ, ಪು-೩೨೦

೨೪.ಅದೇ, ಪು-೩೨೨

೨೫.ರಾಮಚಂದ್ರರಾವ್ ಎಸ್.ಕೆ, ಮೂರ್ತಿ ಶಿಲ್ಪದ ನೆಲೆ-ಹಿನ್ನಲೆ,ಪು-೧೫-೧೮

೨೬.ವಸ್ತು ಸಂಗ್ರಹಾಲಯ ಶಾಸ್ತ್ರ - ನಿಗಮ್ ಸಂಪಾದಕರು ಹಾ ಮ ನಾಯಕ ಸಣ್ಣಯ್ಯ

೨೭.ಅದೇ ಪು.ಸಂ. ೪

೨೮.ಹಡಗಲಿ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿರುವ ಕಲ್ಯಾಣಿ ಚಾಲುಕ್ಯರ ವಿಜಯನಗರ ಶಿಲ್ಪಗಳ ಒಂದು ಅಧ್ಯಯನ ಪು.ಸಂ.೮

ಅಧ್ಯಾಯ : ೩

ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿನ ಶಿಲಾ ಮಾಧ್ಯಮದ ಶಿಲ್ಪಕಲೆ

ಅಧ್ಯಾಯ : ೩

ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿನ ಶಿಲಾ ಮಾಧ್ಯಮದ ಶಿಲ್ಪಕಲೆ

ನವಶಿಲಾಯುಗದಿಂದ ಆರಂಭಿಸಿ ಇಂದಿನವರೆಗೆ ಹುಲುಸಾಗಿ ಬೆಳೆದುಬಂದ ಪರಿಚಿತ ಕಲೆಯೆಂದರೆ ಮೂರ್ತಿಶಿಲ್ಪ. ಪುರಾತತ್ವ ಶೋಧನೆಯಲ್ಲಿ ಹಲವಾರು ಮೂರ್ತಿಶಿಲ್ಪಗಳು ಬೆಳಕಿಗೆ ಬಂದಿವೆ. ಜೇಡಿಮಣ್ಣು, ಗಚ್ಚು, ಮರ, ಲೋಹ ಹಲವು ಬಗೆಯ ಶಿಲೆ ಮುಂತಾದವನ್ನು ಶಿಲ್ಪ ರಚನೆಯಲ್ಲಿ ಬಳಸಲಾಗಿದೆ. ಇವುಗಳಿಗೆ ತಮ್ಮದೇ ಆದ ಇತಿಮಿತಿಗಳಿರುತ್ತವೆ. ಮಾನವ ತಾನು ಕಂಡ ಇಲ್ಲವೇ ಪ್ರೇರಣೆಯಿಂದ ಕಲ್ಪಿಸಿಕೊಂಡ ಆಕೃತಿಗಳ ಎತ್ತರ, ದಪ್ಪ, ಉದ್ದ, ಅಗಲ ಹೀಗೆ ಎಲ್ಲವನ್ನೂ ತೋರಿಸುವ ಪ್ರಯತ್ನವನ್ನು ಶಿಲ್ಪದಲ್ಲಿ ಮಾಡಿದ್ದಾನೆ. ಈ ಬಗೆಯ ಶಿಲ್ಪಗಳನ್ನು ದುಂಡುಶಿಲ್ಪವೆನ್ನುತ್ತಾರೆ. ಆದರೆ ಈ ಮಾತು ಎಲ್ಲಾ ಶಿಲ್ಪಗಳಿಗೆ ಅನ್ವಯಿಸುವುದಿಲ್ಲ. ಉದ್ದ ಮತ್ತು ಅಗಲ ಮಾತ್ರ ಕಾಣುವಂತಿದ್ದು, ದಪ್ಪವಿಲ್ಲದೇ ಇರುವುದನ್ನು ಉಬ್ಬು ಶಿಲ್ಪವೆನ್ನುತ್ತಾರೆ.

ಈ ಬಗೆಯ ಶಿಲ್ಪ ಹಿಂಬದಿಯ ಫಲಕಕ್ಕೆ ಅಂಟಿಕೊಂಡಿರುತ್ತದೆ. ಶಿಲ್ಪಗಳು ರಚಿಸುವ ಮೂರ್ತಿಶಿಲ್ಪದ ಹಲವು ಪ್ರಕಾರಗಳಲ್ಲಿ ಸುಡಾವೆ ಮಣ್ಣಿನ ಗೊಂಬೆಗಳು, ಶಿಲಾ ಪುತ್ಥಳಿಗಳು, ಕಂಚು ಪ್ರತಿಮೆಗಳು ಎಂದು ಮುಖ್ಯವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

೧. ಸುಡಾವೆ ಮಣ್ಣಿನ ಗೊಂಬೆಗಳು :

ಪುರಾತತ್ವ ಶೋಧನೆಯಲ್ಲಿ ದೊರೆತ ಮಣ್ಣಿನ ಗೊಂಬೆಗಳು ಅತ್ಯಂತ ಪ್ರಾಚೀನ ಶಿಲ್ಪ ಮಾದರಿಗಳಾಗಿವೆ. ಪ್ರಾಗೈತಿಹಾಸಿಕ ಕಾಲದ ಅದರಲ್ಲೂ ನವಶಿಲಾಯುಗದ ಮೃಣ್ ಮೂರ್ತಿಗಳು ಹಲವೆಡೆ ದೊರೆತಿವೆ. ಕರ್ನಾಟಕದ ಕುಪ್ಪಗಲ್ಲು, ಬ್ರಹ್ಮಗಿರಿ, ಸಂಗಮಕಲ್ಲು, ತೆಕ್ಕಲಕೋಟ, ಪಿಕ್ಲಿಹಾಳು, ಹರವಗೇರಿ ಮುಂತಾದೆಡೆಗಳಲ್ಲಿ ದೊರೆತ ಗೊಂಬೆಗಳು ಈ ಮಾದರಿಯವಾಗಿವೆ. ಪ್ರಾಣಿ–ಪಕ್ಷಿ ಹಾಗೂ ಮಾನವಾಕೃತಿಯ

ಈ ಗೊಂಬೆಗಳು ಇತಿಹಾಸ ಪೂರ್ವ ಕಾಲದ ಶೈಲಿಯಲ್ಲಿವೆ. ಆವೆ ಮಣ್ಣಿನ ಒಂದು ತುಂಡಿಗೆ ಮತ್ತೊಂದನ್ನು ಮೈತ್ರಿ ಉಚಿತರೂಪ ಬರುವಂತೆ ಮಾಡಿದ ಪ್ರಾಚೀನ ಪ್ರಯತ್ನವನ್ನು ಈ ಕಲೆಯಲ್ಲಿ ನೋಡಬಹುದು. ಈ ಬಗೆಯ ಆವೆ ಮಣ್ಣಿನ ಗೊಂಬೆಗಳನ್ನು ಆನಂತರದಲ್ಲಿ ಸುಟ್ಟ ನೀರಲ್ಲಿ ಕರಗದ ಹಾಗೆ ಗಟ್ಟಿ ಗೊಂಬೆಗಳನ್ನು ತಯಾರಿಸಲಾಯಿತು. ಪಿಕ್ಲಿಹಾಳಿನಲ್ಲಿ ದೊರೆತ ನವಶಿಲಾಯುಗದ ಗೂಳಿಗಳನ್ನು ಇಲ್ಲಿ ಉದಾಹರಿಸಬಹುದು. ಇತಿಹಾಸದ ಆರಂಭ ಕಾಲದ ಅದರಲ್ಲೂ ಶಾತವಾಹನ ಕಾಲದ ಹಲವಾರು ಸುಡಾವೆ ಮೂರ್ತಿಗಳು ಪತ್ತೆಯಾಗಿವೆ.

೨. ಶಿಲಾ ಪುತ್ಥಳಿ :

ವಾಸ್ತುಶಿಲ್ಪದಂತೆ ಮೂರ್ತಿಶಿಲ್ಪ ಕೂಡ ಪುರಾತತ್ವ ಅಧ್ಯಯನದ ಪ್ರಧಾನವಾದ ಒಂದು ಅಂಗ. ಪುರಾತತ್ವ ಸಂಶೋಧನೆಯಲ್ಲಿ ದೊರೆತ ನೂರಾರು ದೇವತಾ ಮೂರ್ತಿಗಳಲ್ಲಿ ಎದುರಿನಿಂದ ಮತ್ತು ಮಗ್ಗಲುಗಳಿಂದ ನೋಡಲು ರೂಪಗೊಂಡ ಪ್ರತಿಮೆಗಳೇ ಹೆಚ್ಚಾಗಿವೆ. ಈ ವಿಗ್ರಹಗಳ ಹೊರಮೈ ಅಷ್ಟೇನೂ ವಿವರವಾಗಿ ಕೆತ್ತಲಾಗಿಲ್ಲ. ಅವುಗಳ ಬೆಂಗಡೆಯಲ್ಲಿ ಆಧಾರಕ್ಕಾಗಿ ಇಲ್ಲವೇ ಅಲಂಕರಣೆಗಾಗಿ ಶಿಲಾ ಫಲಕಗಳಿರುತ್ತವೆ. ಇದನ್ನೇ ಪ್ರಭಾವಳಿ ಎಂದು ಕರೆಯುತ್ತಾರೆ. ಇವು ನಿಂತ ಇಲ್ಲವೇ ಕುಳಿತ ಪೀಠ ಭಾಗಕ್ಕೆ ಪಾಣಿಪೀಠ ಎಂದು ಕರೆಯುತ್ತಾರೆ. ದಪ್ಪ ಕಲ್ಲಿನಲ್ಲಿರುವ ಕೆತ್ತಬೇಕಾದ ಶಿಲ್ಪಕ್ಕೆ ಅನಗತ್ಯವಾದ ಭಾಗವನ್ನು ಕೆತ್ತಲು ಚಿತ್ರ ರಚಿಸಿಕೊಂಡು ನಂತರ ಹಂತಹಂತವಾಗಿ, ಕಲ್ಲಿನಲ್ಲಿ ಕೆತ್ತುವಾಗ ಅದರ ಜಾತಿ, ಗುಣ, ದೋಷ, ಕೆತ್ತಿದ ಮೇಲೆ ಯಾವ ತರದ ಮೈವಳಿಕೆಯಾಗಬಹುದೆಂಬುದನ್ನು ಆಲೋಚನೆ ಮಾಡುತ್ತಾನೆ. ಶಿಲಾ ಪುತ್ಥಳಿಯ ಕೆತ್ತನೆಯಲ್ಲಿ ರೂಪಾನುಕರಣೆ ಮುಖ್ಯವಲ್ಲ. ಪ್ರತಿಮಾ ಲಕ್ಷಣಶಾಸ್ತ್ರದ ಚೌಕಟ್ಟಿನಲ್ಲಿ ಶಿಲ್ಪಿಯ ಕಲ್ಪನೆ, ಭಾವನೆಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ.

ಕರ್ನಾಟಕದ ಅತಿ ಪ್ರಾಚೀನ ಶಿಲ್ಪಗಳಲ್ಲಿ ಬನವಾಸಿ ನಾಗಶಿಲ್ಪ, ಸನ್ನತಿ ಬೌದ್ಧಸ್ತೂಪದ ಶಿಲ್ಪಗಳು ಬೌದ್ಧಮತದಿಂದ ಪ್ರೇರಣೆಗೊಂಡವು. ಇದೇರೀತಿ ಜೈನ, ಪೌರಾಣಿಕ ದೇವಾದಿ ದೇವತೆಗಳು, ಯಕ್ಷ-ಯಕ್ಷಿಯರೆಲ್ಲ ಗುಣಗಳು, ಸಾಲಭಂಜಿಕೆ, ಚಾಮರಧಾರಿಣಿ ಮುಂತಾದ ಹಲವು ವಿಧದ ಪ್ರತಿಮೆಗಳು ವಿಪುಲವಾಗಿ ದೊರೆತಿವೆ. ಪೂಜೆಗಾಗಿಯೇ ನಿರ್ಮಿಸಿದ ವಿವಿಧ ಮತೀಯ ಪ್ರಧಾನ ಶಿಲ್ಪಗಳೂ ಸಾಕಷ್ಟಿವೆ. ಇವಲ್ಲದೇ ಅಲಂಕಾರಿಕ ಪಟ್ಟಿಕೆಗಳೂ, ಕಥಾನಕ ಶಿಲ್ಪ ಪಟ್ಟಿಕೆಗಳೂ ನೋಡ ಸಿಗುತ್ತವೆ. ಇವುಗಳಲ್ಲಿ ಎಲ್ಲವೂ ಸ್ವಯಂಸ್ಫೂರ್ತಿಯ ಸೃಜನಶೀಲ ಶಿಲ್ಪಕೃತಿಗಳಾಗಿವೆಯೆಂದು ಹೇಳಲಾಗುವುದಿಲ್ಲ. ಪ್ರತಿಮಾ ಲಕ್ಷ್ಮಣಶಾಸ್ತ್ರ ವಿಧಿಸಿದಂತೆ ಶಿಲ್ಪಿಗಳು ಮೂರ್ತಿಯನ್ನು ಕೆತ್ತಿದ್ದಾರೆನ್ನಬಹುದು. ಈ ದಿಶೆಯಲ್ಲಿ ಮೂರ್ತಿ ಶಿಲ್ಪಶಾಸ್ತ್ರವು ಶಿಲ್ಪಕಲೆಗೆ ಕೆಲಮಟ್ಟಿನ ಶೃಂಖಲೆಯಾಯಿತೇನೋ! ಈ ಮಾತು ಪೂಜೆ ಮಾಡುವ ದೇವಾನುದೇವತೆಗಳ ವಿಗ್ರಹಗಳಿಗೆ ಹೆಚ್ಚಾಗಿ ಅನ್ವಯಿಸುತ್ತದೆ. ಶಿಲ್ಪ ತಂತ್ರದ ದೃಷ್ಟಿಯಿಂದಲೂ ಇವು ಅಮೂಲ್ಯವಾಗಿವೆ. ಆದರೆ

ವೀರಗಲ್ಲುಗಳು, ಸ್ಮಾರಕ ಶಿಲ್ಪಗಳು ಮುಂತಾದ ಲೌಕಿಕ ಶಿಲ್ಪಗಳಲ್ಲಿ ಅನುಕರಣೆ ಅಷ್ಟಾಗಿ ಕಂಡುಬರುವುದಿಲ್ಲ. ಸ್ವಂತ ವಸ್ತು ಪರಿಶೀಲನೆಯನ್ನು, ಪ್ರತಿಭಾಪೂರ್ಣ ಕಲಾ ಸ್ಫೂರ್ತಿಯನ್ನು ಈ ಬಗೆಯ ಶಿಲ್ಪಗಳಲ್ಲಿ ನೋಡಬಹುದು. ಅಂದಂದಿನ ಸಾಮಾಜಿಕ, ಧಾರ್ಮಿಕ ಜೀವನ ಇಲ್ಲಿ ಪ್ರತಿಬಿಂಬಿತ. ಸಮಕಾಲೀನ ವೇಷಭೂಷಣ, ಒಡವೆ, ಕೇಶ ಶೃಂಗಾರ, ಹಾವ-ಭಾವ ಮುಂತಾದವನ್ನು ಅಗತ್ಯವಾಗಿ ಮನ್ನಿಸಬೇಕು. ಇಲ್ಲಿ ಶಿಲ್ಪಕ್ಕೆ ಬೇಕಾದ ಮೂಲ ಪ್ರೇರಣೆಯನ್ನು ತಮ್ಮ ಸುತ್ತಣ ಬದುಕಿನಿಂದಲೇ ಪಡೆದರು.[೧]

೩. ಕಂಚು ಶಿಲ್ಪ :

ಲೋಹದಲ್ಲಿ ಮಾಡಿದ ವಿಗ್ರಹಗಳಲ್ಲಿ ಪಂಚಲೋಹದ ದೇವತಾ ಮೂರ್ತಿಗಳು, ಕಂಚು ಶಿಲ್ಪಗಳು ಪ್ರಮುಖವಾಗಿವೆ. ಹರಪ್ಪಾ ಸಂಸ್ಕೃತಿಯಿಂದ ಮೊದಲಗೊಂಡು ಇಂದಿನವರೆಗೂ ಪ್ರತಿಮೆಗಳು ಪತ್ತೆಯಾಗಿವೆ. ಇವುಗಳಲ್ಲಿ ಹಲವು ವಿಗ್ರಹಗಳನ್ನು ಅಚ್ಚಿನಿಂದ ತಯಾರಿಸಲಾಗಿದೆ. ಮೇಣದಲ್ಲಿ ಬೇಕಾದ ಆಕೃತಿಯನ್ನು ಸಿದ್ಧಪಡಿಸಿಕೊಂಡು ಅದರ ಮೇಲೆ ಮಣ್ಣನ್ನು ಮೆತ್ತಿ ಆ ಮಣ್ಣು ಒಣಗುತ್ತಲೆ ಮೇಲ್ಭಾಗದಲ್ಲಿ, ಕೆಳಭಾಗದಲ್ಲಿ ತೂತು ಮಾಡಿ ಸುಟ್ಟು ಒಳಗಿನ ಮೇಣ ತೆಗೆಯುತ್ತಾರೆ. ಕಾದು ನೀರಾದ ಲೋಹದ್ರವವನ್ನು ಈ ಮಣ್ಣಿನ ಅಚ್ಚಿನ ಹೊಳ್ಳೆಯಲ್ಲಿ ಹೊಯ್ದು ಮೂಲ ಮೇಣದ ಆಕೃತಿಗೆ ಸಮನಾದ ಆಕೃತಿಯನ್ನು ನಿರ್ಮಿಸುತ್ತಾರೆ. ಒಂದು ಅಚ್ಚು ಸಿದ್ಧಪಡಿಸಿಕೊಂಡರೆ ಆ ಬಗೆಯ ಪ್ರತಿಮೆಗಳನ್ನು ಎಷ್ಟು ಬೇಕಾದರೂ ತೆಗೆಯಬಹುದು. ದೇವಾಲಯಗಳ ಉತ್ಸವ ಮೂರ್ತಿ, ರಾಜ-ರಾಣಿಯರ ಇಲ್ಲವೇ ಪ್ರಮುಖ ವ್ಯಕ್ತಿಗಳ ಸ್ಮಾರಕ ಶಿಲ್ಪ, ಅಲಂಕರಣೆಯ ಚಿಕಣಿ ಶಿಲ್ಪಗಳೇ ಮುಂತಾದವನ್ನು ಈ ತಂತ್ರದಿಂದ ರಚಿಸುತ್ತಾರೆ. ಸಿಂಧೂ ಕಣಿವೆಯಲ್ಲಿ ಸಿಕ್ಕ ಲೋಹದ ಪುಟ್ಟ ನರ್ತಕಿ ವಿಗ್ರಹ ಒಂದು ಪ್ರಾಚೀನ ಮಾದರಿಯಾಗಿದೆ. ಆನಂತರ ವಿವಿಧ ರಾಜವಂಶಗಳು ಈ ಕಲೆಗೆ ಪ್ರೋತ್ಸಾಹ ನೀಡಿದವು.

ದಕ್ಷಿಣ ಭಾರತದಲ್ಲಿ ಅದರಲ್ಲೂ ತಮಿಳುನಾಡಿನಲ್ಲಿ ಕಂಚುಶಿಲ್ಪಕಲೆ ವಿಪುಲವಾಗಿ ಬೆಳೆಯಿತು. ನಟರಾಜ, ಶಿವಪರಿವಾರ, ಜೈನತೀರ್ಥಂಕರ ವಿಗ್ರಹಗಳನ್ನು ವಿಶೇಷವಾಗಿ ಹೆಸರಿಸಬೇಕು. ಹಲವು ವಿಗ್ರಹಗಳ ಪೀಠಭಾಗದ ಮೇಲೆ ಶಾಸನಗಳೂ ಕಂಡುಬರುತ್ತವೆ. ಇವುಗಳ ವೈಜ್ಞಾನಿಕ ಅಧ್ಯಯನ ಪುರಾತತ್ವ ಶೋಧನೆಯಲ್ಲಿ ತುಂಬಾ ಸ್ವಾರಸ್ಯವಾಗಿದೆ. ಕಂಚು ಶಿಲ್ಪಗಳನ್ನು ರಾಸಾಯನಿಕ ದ್ರವದಿಂದ ತೊಳೆದು ಸಂರಕ್ಷಿಸುವ ಪ್ರತ್ಯೇಕ ಏರ್ಪಾಡು ಪ್ರಾಕ್ತನ ಇಲಾಖೆಯಲ್ಲಿರುತ್ತದೆ. ಪ್ರತಿಮೆಗಳಿಗೆ ಉಪಯೋಗಿಸಿರುವ ಲೋಹ ಮತ್ತು ಅದರ ಶೈಲಿ ಮುಂತಾದವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದ ಕಂಚು ಶಿಲ್ಪಕಲೆಯ ಸಮುಗ್ರ ಅಧ್ಯಯನದ ಅವಶ್ಯಕತೆ ತುಂಬಾ ಇರುತ್ತದೆ.

ಶಿಲಾ ಪುತ್ಥಳಿಗಳು ಹಾಗೂ ಲೋಹ ಪ್ರತಿಮೆಗಳು, ಸಮಕಾಲೀನ ಸಮಾಜದ ಹಾಗೂ ಧರ್ಮದ ಮೌಲ್ಯಗಳನ್ನು ಕೆಲಮಟ್ಟಿಗೆ ಸಂಕೇತಿಸುತ್ತವೆ. ತಾಂತ್ರಿಕ ಅಭಿವೃದ್ಧಿಯ ಮಟ್ಟವನ್ನು ಸೂಚಿಸುತ್ತವೆ. ಹೀಗಾಗಿ ಕಂಚು ಶಿಲ್ಪವನ್ನು ಗುರುತಿಸುವ ಕೆಲಸ ಅಧ್ಯಯನದ ಪ್ರಮುಖಾಂಶವೂ ಹೌದು. ಕೆಲವೇ ಕೆಲವು ಕಂಚು ಶಿಲ್ಪಗಳಿದ್ದರೂ ಅವು ವಿಜಯನಗರ ಕಾಲದ ಮೌಲ್ಯವುಳ್ಳವುಗಳಾದಂತಹವು. ಅಂತಹವುಗಳನ್ನು ಹುಡುಕಿ ಬೆಳಕಿಗೆ ತರುವ ಮಹತ್ವದ ಉದ್ದೇಶ ಈ ಅಧ್ಯಯನದ್ದಾಗಿರುತ್ತದೆ.[1]

ಶೈವಧರ್ಮ :

ಮಾನವನ ವಿಕಾಸದ ಹಾದಿಯಲ್ಲಿ ಧರ್ಮವು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಧರ್ಮವೆಂಬುದು ಮಾನವನ ಇತಿಹಾಸದುದ್ದಕ್ಕೂ ಆತನೊಂದಿಗೆ ಅಂಟಿಕೊಂಡು ಬರುವಂತದ್ದು. ಮಹಾಭಾರತದ ಕರ್ಣ ಪರ್ವದಲ್ಲಿ "ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತಿ ಪ್ರಜ್ಞಾಃ" ಎನ್ನುವ ಮಾತು ಬರುತ್ತದೆ. ಯಾವುದು ಇನ್ನೊಂದನ್ನು ಎತ್ತಿ ಹಿಡಿದಿರುವುದೋ ಅಥವಾ ಇನ್ನೊಂದಕ್ಕೆ ಆಧಾರವಾಗಿ ಅದನ್ನು ರಕ್ಷಿಸುವುದೋ ಅದು "ಧರ್ಮ" ಅನಿಸಿಕೊಳ್ಳುತ್ತದೆ.[2] ಎಂಬಂತೆ ಮಾನವ ಧರ್ಮವನ್ನು ಹಾಗೂ ಧರ್ಮ ಮಾನವನನ್ನು ಹೀಗೆ ಒಂದನ್ನೊಂದು ರಕ್ಷಿಸುತ್ತಲೇ ಬಂದಿವೆ. ಧರ್ಮ ಎಂಬುದು ವಿಶಾಲ ಅರ್ಥವನ್ನು ಹೊಂದಿರುವ ಪದ. ಒಂದೇ ವಾಕ್ಯದಲ್ಲಿ ಧರ್ಮ ಪದದ ಅರ್ಥವನ್ನು ತಿಳಿಸುವುದು ಕಷ್ಟ. ಮಾನವ ಪ್ರಕೃತಿಯ ಅನನ್ಯ ಶಕ್ತಿಗಳನ್ನು ಜಯಿಸಲಾಗದೆ ಇರುವಂತಹ ಸ್ಥಿತಿಯಲ್ಲಿ ಮತ್ತು ತನ್ನ ನೆಮ್ಮದಿಯ ಜೀವನಕ್ಕೆ ಪೂರಕವಾಗಿ ಕಂಡುಕೊಂಡ ಮಾರ್ಗವೆಂದರೆ ದೇವತಾರಾಧನೆ. ಈ ದೈವ ಎಂಬ ಆಮೂರ್ತಿ ಶಕ್ತಿಗೆ ಮಾರ್ತರೂಪ ನೀಡಿ ಅದನ್ನು ಆರಾಧಿಸತೊಡಗಿದನು. ಅಲ್ಲದೇ ಇಷ್ಟಕ್ಕೆ ಸೀಮಿತಗೊಳಿಸದೇ ಅದಕ್ಕೊಂದು ಚೌಕಟ್ಟುಕೊಟ್ಟು ನಂಬಿಕೆ, ಆಚರಣೆಗಳ ಹಿನ್ನಲೆಯಲ್ಲಿ ಧರ್ಮ ಎಂಬುದನ್ನು ಕಂಡುಕೊಂಡನು. ಆದ್ದರಿಂದ ಧರ್ಮಕ್ಕೆ ಮಾನವ ಸಂಸ್ಕೃತಿಗಿರುವಷ್ಟೇ ಪ್ರಾಚೀನತೆಯಿದೆ. ಇದು ಮುಂದೆ ಬೆಳವಣಿಗೆ ಹೊಂದಿದಂತೆಲ್ಲಾ ಜಗತ್ತಿನಾದ್ಯಂತ ಕಾಲ ದೇಶಗಳಿಗುಣವಾಗಿ ಕವಲೊಡೆದು ಒಂದೇ ಧರ್ಮ ಎನಿಸದೆ ಹಲವಾರು ಧರ್ಮಗಳು ಉದಯಿಸಿದವು. ಅವುಗಳನ್ನೇ ಇಂದು ಶೈವ, ವೈಷ್ಣವ, ಬೌದ್ಧ, ಜೈನ, ಇಸ್ಲಾಂ, ಸಿಖ್, ಪಾರಸಿ, ಕ್ರೈಸ್ತ ಮುಂತಾದ ಹೆಸರುಗಳಿಂದ ಗುರುತಿಸುತ್ತೇವೆ. ಇವುಗಳಲ್ಲಿ ಅತ್ಯಂತ ಪುರಾತನ ಹಾಗೂ ವ್ಯಾಪಕವಾಗಿ ಹರಡಿದ ಧರ್ಮವೆಂದರೆ ಶೈವಧರ್ಮ. ಶೈವಧರ್ಮಕ್ಕೆ ಶಿವನೇ ಅಧಿಪತಿ. ಮುಖ್ಯವಾಗಿ ಶಿವನ ಆರಾಧಕರನ್ನು ಶೈವರೆಂದು ಹಾಗೂ ಅವರು ಅನುಸರಿಸುವ ಧರ್ಮವನ್ನು ಶೈವಧರ್ಮವೆಂದು ಕರೆಯಲಾಯಿತು. ಶಿವ ಎಂಬ ಶಬ್ದಕ್ಕೆ ಮಂಗಳ ಎಂಬ ಅರ್ಥವಿದೆ. ಶಿವನು ಈಶ, ಈಶ್ವರ, ಮಹೇಶ್ವರ, ಮಹೇಶ, ಮಹಾದೇವ, ಸದಾಶಿವ, ಶಿವ ಮತ್ತು ಶಂಕರ ಮುಂತಾದ ಅನೇಕ ಹೆಸರುಗಳಿಂದ ಕರೆಯಲ್ಪಡುವರು. ಪುರಾಣಗಳಲ್ಲಿ ಇವನನ್ನು ಸೃಷ್ಟಿಕರ್ತ, ಸ್ಥಿತಿಕರ್ತ, ಲಯಕರ್ತ ಅಥವಾ ಪ್ರಳಯಕರ್ತ ಎಂದು ಕರೆದಿರುವರು. ಒಟ್ಟಾರೆ

ಶೈವಧರ್ಮದಲ್ಲಿ ಶಿವನೇ ಕೇಂದ್ರಬಿಂದು. ಈ ಶೈವಧರ್ಮದಲ್ಲಿ ಲಕುಲೀಶ, ಪಾಶುಪತ, ಕಾಪಾಲಿಕ, ಕಾಳಾಮುಖ ಎಂಬ ಶೈವ ಪಂಥಗಳಿವೆ.[೪]

ಪ್ರಾಚೀನತೆ :

ಶೈವಧರ್ಮದ ಅಸ್ತಿತ್ವ ಉಳಿದೆಲ್ಲಾ ಧರ್ಮಗಳಿಗಿಂತ ಪ್ರಾಚೀನವಾದುದು. ಹಾಗೂ ಹೆಚ್ಚು ವಿಸ್ತಾರವಾಗಿ ಹರಡಿಕೊಂಡ ಧರ್ಮವಾಗಿದೆ. ಶೈವಧರ್ಮದ ಮೂ ಮತ್ತು ಅದು ಬೆಳೆದುಬಂದ ಬಗೆ ಇನ್ನು ಅಸ್ಪಷ್ಟವಾಗಿದೆ. ಒಂದೆಡೆ ಪುರಾತತ್ವ ಆಕರಗಳು ಇನ್ನೊಂದೆಡೆ ವಿವಿಧ ಮಾದರಿಯ ಸಾಹಿತ್ಯಿಕ ಆಕರಗಳು ಈ ಕುರಿತಂತೆ ಅಲ್ಪಸ್ವಲ್ಪ ಚಿತ್ರಣ ನೀಡುತ್ತವೆ.[೫] ಸಿಂಧೂ ನಾಗರೀಕತೆ ಮತ್ತು ವೇದ ಸಂಹಿತೆಗಳು ಶೈವಧರ್ಮದ ಪ್ರಾಚೀನತೆಯನ್ನು ಅರಿಯಲು ಪ್ರಮುಖ ಮೂಲಾಧಾರಗಳಾಗಿವೆ. ಮುಖ್ಯವಾಗಿ ವೇದಗಳು ಸಾಹಿತ್ಯಿಕ ರೂಪದ ಆಕರಗಳಾಗಿದ್ದು, ಪ್ರಾಚೀನವೆನಿಸಿವೆ. ಇಲ್ಲಿಯವರೆಗೂ ವಿವಾದಿತವಾಗಿದ್ದ ಹಾಗೂ ವೇದಗಳಲ್ಲಿಯೇ ಪ್ರಾಚೀನವೆನಿಸಿರುವ ಋಗ್ವೇದದ ಕಾಲವನ್ನು ಇತ್ತೀಚೆಗೆ ಅಂದರೆ ೧೯-೨೦ನೇ ಶತಮಾನಗಳಲ್ಲಿ ವಿದ್ವಾಂಸರು ಕ್ರಿ.ಪೂ. ೧೫೦೦ ಅಥವಾ ೧೨೦೦ ಎಂದು ಒಪ್ಪಿಕೊಂಡಿರುತ್ತಾರೆ. ಆದರೆ ಸಿಂಧೂ-ಸರಸ್ವತಿ ನಾಗರೀಕತೆಗೆ ಸಂಬಂಧಿಸಿದಂತೆ ಸಿ-೧೪ರ ಮಾಪನಾಂಕದ ಪ್ರಕಾರ ಅದರ ಕಾಲವನ್ನು ಕ್ರಿ.ಪೂ. ೩೩೦೦-೧೫೦೦[೬] ಎಂದು ನಿರ್ಧರಿಸಲಾಗಿದೆ. ಇದರಿಂದ ತಿಳಿಯುವುದೇನೆಂದರೆ ವೇದಗಳ ಕಾಲವು ಸಿಂಧೂ ನಾಗರೀಕತೆಯ ಕಾಲಕ್ಕಿಂತ ನಂತರದ್ದು ಎಂದು ತಿಳಿದುಬರುತ್ತದೆ. ಆದ್ದರಿಂದ ಭಾರತವು ಪ್ರಾಚೀನತೆಯನ್ನು ಸಿಂಧೂ ಬಯಲಿನ ನಾಗರೀಕತೆಯಿಂದಲೇ ಶೈವಧರ್ಮದ ಬಗ್ಗೆ ತಿಳಿಯಬೇಕಾಗುತ್ತದೆ.[೭]

ವಿಜಯನಗರ ಸಾಮ್ರಾಜ್ಯ ಒಂದು ಮರೆಯಲಾಗದ ಸಾಮ್ರಾಜ್ಯವದು. ಅಳಿದರೂ ಸಹ ಜನತೆಯ ಮನದಲ್ಲಿ, ಇತಿಹಾಸ ಪುಟಗಳಲ್ಲಿ, ಜನಪ್ರಿಯ ವಸ್ತುಸಂಗ್ರಹಾಲಯಗಳಲ್ಲಿ, ಪಠ್ಯಪುಸ್ತಕಗಳಲ್ಲಿ, ಪ್ರತ್ಯಕ್ಷವಾಗಿರುವ, ವಾಸ್ತವಾಂಶಗಳು ಕಣ್ಣೆದುರಿಗೆ ರಾರಾಜಿಸುತ್ತವೆ. ಹೀಗಿರುವಾಗ ಮರೆಯಲು ಹೇಗೆ ಸಾಧ್ಯ. ಇಂತಹ ಸಮೃದ್ಧ, ಶ್ರೀಮಂತ, ವೈಭವದ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ಅಥವಾ ಹಂಪಿ ಬಹಳ ಸುಂದರ, ಮನೋಹರ, ಆಕರ್ಷಣೀಯ ವಾತಾವರಣದ ನೆಲೆಬೀಡಾಗಿದೆ. ಹೆಜ್ಜೆ ಹೆಜ್ಜೆಗೂ ದೇವಮಂದಿರಗಳು ನೇರವಾಗಿ ನೆಲೆನಿಂತ ತಾಣವದು. ಅಲ್ಲಲ್ಲೇ ಪುಷ್ಕರಣಿಗಳು, ಶಿಲ್ಪಗಳು ನಯನ ಮನೋಹರ. ಇಂತಹ ಸಾಮ್ರಾಜ್ಯ ಮುಸ್ಲಿಮರ ಧಾಳಿಯಿಂದ ವಿನಾಶದ ಹಾದಿ ಕಂಡೇಬಿಟ್ಟಿತು. ಆ ಸಾಮ್ರಾಜ್ಯದ ಕುರುಹುಗಳನ್ನು ನಾವು ಇಂದು ಸಹ ಕಾಣಬಹುದು. ಎಲ್ಲಿ ? ನೋಡೋಣ !

ಶಿಲೆಯ ಸ್ವರೂಪ :

ವಿಜಯನಗರ ಸಾಮ್ರಾಜ್ಯದ ಆಡಳಿತಾವಧಿಯಲ್ಲಿ ರಚಿತವಾದ ಶಿಲಾ ಮಾಧ್ಯಮದ ಕಲಾಕೃತಿಗಳ ಸ್ವರೂಪ ನಯನ ಮನೋಹರವಾದದ್ದು ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲ್ಪಟ್ಟ ಬಹಳಷ್ಟು ಶಿಲ್ಪ ಕಲಾಕೃತಿಗಳು ಸಾಮಾನ್ಯವಾಗಿ ಕಣಶಿಲೆಯಿಂದ ರಚಿತವಾಗಿವೆ. ಇಡೀ ವಸ್ತು ಸಂಗ್ರಹಾಲಯವು ಶಿಲ್ಪ ಕೃತಿಗಳಿಂದ ಆವೃತವಾಗಿವೆ. ಶಿಲ್ಪಗಳು ರಚಿಸಿದಂತಹ ಶಿಲ್ಪಗಳಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಬಹುದು.

೧. ಕಲ್ಲಿನ ಆಯ್ಕೆ

೨. ಶಿಲ್ಪದ ಅಳತೆ

೩. ಕೆತ್ತನೆ ರೀತಿ

೪. ಶಿಲ್ಪಭಾವ

ಕಲ್ಲಿನ ಆಯ್ಕೆ :

ವಿಜಯನಗರ ಕಾಲದ ಶಿಲ್ಪಗಳನ್ನು ಗಮನಿಸಿದಾಗ ಬಹುತೇಕ ಶಿಲ್ಪಕಲಾಕೃತಿಗಳು ಗಟ್ಟಿಯಾದ ಕಣಶಿಲೆಯಿಂದ ಕೆತ್ತಲಾಗಿದೆ. ಶಿಲ್ಪಗಳಿಗೆ ಸರಿ ಹೊಂದುವ ಶಿಲೆಯನ್ನು ಆಯ್ಕೆ ಮಾಡಿಕೊಂಡು ಶಿಲ್ಪರಚನಾ ಕಾರ್ಯವನ್ನು ಪ್ರಾರಂಭಿಸುತ್ತಿದ್ದರು. ಅವರು ಶಿವಲಿಂಗ ಅಥವಾ ಬೇರಾವ ಶಿಲ್ಪಕಲಾಕೃತಿಗಳಾಗಲಿ ಅವೆಲ್ಲವನ್ನು ತುಂಬಾ ಜಾಗರೂಕತೆಯಿಂದ ಬಹಳ ಮನೋಜ್ಞವಾದ ಕಲಾಕೃತಿಗಳನ್ನು ರಚಿಸುತ್ತಿದ್ದರು.

ಶಿಲ್ಪ ಅಳತೆ :

ವಸ್ತುಸಂಗ್ರಹಾಲಯದಲ್ಲಿನ ಎಲ್ಲಾ ಶಿಲ್ಪಗಳು ಅಳತೆಗೆ ತಕ್ಕವುಗಳಾಗಿವೆ. ಆಕೃತಿಗೆ ತಕ್ಕಂತೆ ಶಿಲೆಯನ್ನು ಆಯ್ಕೆ ಮಾಡಿಕೊಂಡು ಶಿಲ್ಪಿಸುತ್ತಿದ್ದರು. ವಿಶಾಲವಾದ ಸ್ಥಳಾವಕಾಶದಲ್ಲಿ ಶಿಲ್ಪಿಗಳು ಕೆತ್ತನೆ ಮಾಡುತ್ತಿದ್ದರು. ಶಿಲ್ಪ ಕೆತ್ತನೆ ಮಾಡುವಾಗ ಕಲ್ಲು ಎಲ್ಲಿಯಾದರೂ ಮುಕ್ಕಾಗಿದ್ದರೆ ಅಷ್ಟಕ್ಕೆ ಅಲ್ಲಿ ಬರಬೇಕಾಗಿದ್ದ ಶಿಲ್ಪದ ಮುಂದುವರಿಕೆಯನ್ನು ಮೊಟಕುಗೊಳಿಸುತ್ತಿದ್ದರು. ಪಾದದಿಂದ ಶಿರೋಭಾಗದವರೆಗೆ ವಿವರವಾಗಿ ಬಿಡಿಸಿದ್ದರೂ ಕೈಗಳನ್ನು ಹಾಗೂ ಕೈಗಳಲ್ಲಿನ ಆಯುಧಗಳನ್ನು ಅಥವಾ ಮುದ್ರೆಗಳನ್ನು ಬಿಡಿಸುವಾಗ ಕಲ್ಲು ಸಕಾಗದಿದ್ದಲ್ಲಿ ಇರುವಷ್ಟು ಜಾಗದಲ್ಲಿಯೇ ಎಲ್ಲವನ್ನು ಶಿಲ್ಪಿ ಕೆತ್ತನೆ ಮಾಡುತ್ತಿದ್ದ. ಹೀಗಾಗಿ ಅನೇಕ ವಿಗ್ರಹಗಳಲ್ಲಿ ಆಯುಧಗಳು ಬಾಗಿರುವಂತೆ ವಿವರವಾಗಿ ಬಿಡಿಸಲು ಸಾಧ್ಯವಾಗದಂತೆ ಆಗಿರುತ್ತದೆ.

ಕೆತ್ತನೆಯ ರೀತಿ :

ಶಿಲ್ಪ ರಚನೆಯ ಎಲ್ಲಾ ಅಂಗಾಂಗಗಳನ್ನು ಬಿಡಿಯಾಗಿ ಬಿಡಿಸದೆ ಉಬ್ಬುಶಿಲ್ಪಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಾರೆ. ಬಿಡಿ ಬಿಡಿಯಾದ ಶಿಲ್ಪಗಳು ಇದ್ದರೂ ಅವೆಲ್ಲಾ ಉಬ್ಬು ಶಿಲ್ಪಗಳಾಗಿವೆ. ಇಲ್ಲಿ ಮುಖ್ಯವಾಗಿ ಶಿವಲಿಂಗ, ನಂದಿ, ಶ್ರೀಕೃಷ್ಣದೇವರಾಯ ಮತ್ತು ತಿರುಮಲಾದೇವಿಯವರ ಶಿಲ್ಪಗಳನ್ನು ಬಿಟ್ಟರೆ ಉಳಿದೆಲ್ಲಾ ಶಿಲ್ಪಗಳು ಉಬ್ಬು ಶಿಲ್ಪವಾಗಿಯೇ ಬಂದಿವೆ. ಕಲ್ಲಿನ ಮುಂಭಾಗದಲ್ಲೇ ವಿಗ್ರಹದ ವಿವರಗಳು ಕಾಣುತ್ತವೆ. ಹಿಂಬದಿಯಲ್ಲಿ ಯಾವ ಕೆತ್ತನೆಯು ಇರುವುದಿಲ್ಲ. ಅನೇಕ ಚಿಕ್ಕ ಚಿಕ್ಕ ಶಿಲ್ಪಗಳ ಕೆತ್ತನೆಗೆ ಇವರು ಅನುಸರಿಸಿರುವ ವಿಧಾನವೆಂದರೆ ಅಂಡಾಕಾರದ, ವೃತ್ತಾಕಾರದ ಕಲ್ಲನ್ನು ಮಧ್ಯಕ್ಕೆ ಎರಡು ಭಾಗ ಮಾಡಿ ಉಬ್ಬು ಭಾಗದಲ್ಲಿ ಶಿಲ್ಪವನ್ನು ಬಿಡಿಸಿರುವುದು, ಹೀಗಾಗಿ ಶಿಲ್ಪಗಳು ಉಬ್ಬಾಗಿ ಬರಲು ಸಹಾಯಕವಾಗುವುದರ ಜೊತೆಗೆ ಪೂರ್ಣವಾಗಿ ಕಡೆಯುವುದು ತಪ್ಪಿದೆ.

ಶಿಲ್ಪದ ಭಾವ :

ಶಿಲ್ಪಗಳು ಕೆತ್ತಿರುವ ಶಿಲ್ಪಗಳಲ್ಲಿ ಮುಖಭಾವ ಪ್ರಧಾನವಾದುದು. ಆ ಭಾವದಿಂದ ಆ ಶಿಲ್ಪವನ್ನು ನೋಡುತ್ತಿದ್ದರು. ಉದಾ : ದುರ್ಗಾ, ಮಹಿಷಾ, ಮರ್ದಿನಿ, ವಿಷ್ಣು, ಮುಂತಾದ ಶಿಲ್ಪಗಳನ್ನು ಗಮನಿಸಿದಾಗ ಈ ವ್ಯತ್ಯಾಸಗಳು ನಮಗೆ ಕಾಣುತ್ತದೆ. ವಿಷ್ಣು ಮೊದಲಾದ ವಿಗ್ರಹಗಳು ನಗೆ ಮೊಗದಿಂದ ಕೂಡಿದ ಶಿಲ್ಪಗಳೆಂದು ನೋಡಿದ ತಕ್ಷಣ ತಿಳಿಯಬಹುದು. ಮಹಿಷ ಮರ್ದಿನಿ ಮುಂತಾದ ಸಂಹಾರ ಶಿಲ್ಪಗಳ ಮುಖಭಂಗವು ಉಗ್ರವಾಗಿದ್ದು ದೃಷ್ಟಿಯನ್ನು ಶತೃವಿನ ಮೇಲೆ ಕೇಂದ್ರೀಕರಿಸಿದಂತಾಗುತ್ತದೆ.

ಪ್ರಾರಂಭದಲ್ಲಿ ಬ್ರಿಟೀಷರ ಕಾಲದಲ್ಲಿ ವಿಜಯನಗರ [ಹಂಪಿ]ದಲ್ಲಿನ ಭಗ್ನಗೊಂಡ ಶಿಲ್ಪ ಕಲಾಕೃತಿಗಳನ್ನು ಮತ್ತು ವಾಸ್ತುಖಂಡಗಳನ್ನು, ನಾಣ್ಯಗಳನ್ನು, ಶಸ್ತ್ರಾಸ್ತ್ರಗಳನ್ನು, ಮರದ ಮತ್ತು ಕಲ್ಲಿನ ಕೆಲವು ವಸ್ತುಗಳು, ಪ್ರಾಚೀನ ಆದಿಮಾನವನ ಅವಶೇಷಗಳನ್ನು ಸಂಗ್ರಹಿಸಿ ಮೊದಲು ಕಮಲಾಪುರದ ಸಮೀಪದಲ್ಲಿರುವ ಕಮಲಮಹಲ್‌ನ ಆನೆಲಾಯದಲ್ಲಿ ಪ್ರದರ್ಶನಕ್ಕೆ ಆಯೋಜಿಸಲಾಗಿತ್ತು. ನಂತರ ೧೯೭೨ ರಲ್ಲಿ ಇಂತಹ ಬೆಲೆಬಾಳುವ ಅವಶೇಷಗಳನ್ನು ಪ್ರಸ್ತುತ ಕಮಲಾಪುರದ ಪುರಾತತ್ವ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಯಿತು. ಒಟ್ಟು ಈ ವಸ್ತುಸಂಗ್ರಹಾಲಯಗಳಲ್ಲಿ ನಾಲ್ಕು ಪ್ರದರ್ಶನ ಅಂಕಗಳಿವೆ. ಒಳಾಂಗಣದಲ್ಲಿ "ಹಂಪೆ ಕಣಿವೆಯ ನಮೂನೆ" ಪ್ರದರ್ಶಿತವಾಗಿವೆ. ನಿಜಕ್ಕೂ ನೋಡಿದ ಕಣ್ಣುಗಳೇ ಧನ್ಯ. ಆವರಣದಲ್ಲಿ ಸುಮಾರು ೧೪೦ ರಿಂದ ೧೫೦ ಶಿಲಾಮಾಧ್ಯಮದ ಶಿಲ್ಪಗಳನ್ನು ಕಾಣಬಹುದಾಗಿದೆ.

ವಸ್ತುಸಂಗ್ರಹಾಲಯದ ಪ್ರವೇಶ ದ್ವಾರದ ಬಳಿ ವಿಜಯನಗರ ಸಾಮ್ರಾಜ್ಯದ ರಾಜರುಗಳಲ್ಲಿ ಸುಪ್ರಸಿದ್ಧರಾದ ಶ್ರೀಕೃಷ್ಣದೇವರಾಯ, ಕ್ರಿ.ಶ. ೧೫೦೯ ರಿಂದ ೧೫೨೯ ಹಾಗೂ ಪಟ್ಟದರಸಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯವರ ಪ್ರತಿರೂಪ ಶಿಲ್ಪಗಳನ್ನು ಅಳವಡಿಸಲಾಗಿದೆ. ಬಹುಮುಖ್ಯವಾಗಿ ವಿಶ್ವಪರಂಪರೆಗೆ ಸೇರಿದ ವಿಜಯನಗರ ಇತಿಹಾಸ ಸ್ಮಾರಕ ಮತ್ತು ಅವುಗಳನ್ನು ಸಂರಕ್ಷಿಸುತ್ತಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಬಗ್ಗೆ ಮಾಹಿತಿ ನೀಡುವ ಗಣಕೀಕೃತ ಸ್ಪಷ್ಟ ಮಾಹಿತಿ ಯಂತ್ರವನ್ನು ಸಂದರ್ಶಕರ ಉಪಯೋಗಕ್ಕೆ ಇಡಲಾಗಿದೆ. ಹಂಪಿಯಲ್ಲಿ ಅನೇಕ ಕಡೆ ನಿರ್ಮಾಣವಾದ ಶಿಲಾ ಮಾಧ್ಯಮದ ರಚನೆಯಿಂದ ಎಷ್ಟೋ ವಸ್ತುಸಂಗ್ರಹಾಲಯದಲ್ಲಿ ಸುರಕ್ಷಿತವಾಗಿ ಆಯೋಜಿಸಲಾಗಿದೆ. ವಸ್ತುಸಂಗ್ರಹಾಲಯದ ಮೊದಲನೇ ಅಂಕಣದಲ್ಲಿರುವ ಶಿಲ್ಪಗಳೆಲ್ಲ ಶೈವ ಪಂಥಕ್ಕೆ ಸೇರಿದ ಶಿಲ್ಪಗಳಾಗಿವೆ. ವೈಭವೀಕೃತ ಶೈವ ದ್ವಾರವನ್ನು ಪ್ರವೇಶಿಸುತ್ತಿದ್ದ ಹಾಗೆ ದೊಡ್ಡ ದೊಡ್ಡ ಶಿಲ್ಪಗಳು ನಮ್ಮ ಮೇಲೆ ಎರಗಿದಂತಾಗುತ್ತದೆ.

ಶೈವಪಂಥಕ್ಕೆ ಸೇರಿದ ಅತ್ಯುತ್ತಮ ಶಿಲ್ಪಗಳು ಪ್ರದರ್ಶನಗೊಂಡಿವೆ. ಇದರ ಜೊತೆಗೆ ಒಂದು ವಿಜಯನಗರ ಕಾಲದ ಮಂಟಪವನ್ನು ಹೋಲುವಂತೆ ಕೆಲವು ಸ್ತಂಭಗಳನ್ನು ಮತ್ತು ಪಾವಟಿಗೆಗಳನ್ನು ಅಂಕಣದ ಮಧ್ಯಭಾಗದಲ್ಲಿ ನಿಜಸ್ಥಿತಿಯಿದ್ದ ಹಾಗೆ ಆಯೋಜಿಸಲಾಗಿದೆ. ಪ್ರದರ್ಶನಗೊಂಡ ಹಲವು ಶಿಲ್ಪಗಳು ಶಿವನ ಸಂಹಾರ ಮೂರ್ತಿಗಳ ಪ್ರತೀಕಗಳಾದ ವೀರಭದ್ರ, ಭೈರವ, ಕಾಳಿ, ಭದ್ರಕಾಳಿ, ಮಹಿಶಾಸುರ ಮರ್ದಿನಿ, ಈ ಶಿಲ್ಪಗಳ ಜೊತೆಗೆ ಲೀಲಾಮೂರ್ತಿ ಸ್ವರೂಪವಾದ ಉಮಾಮಹೇಶ್ವರ ಶಿಲ್ಪವೂ ಪ್ರದರ್ಶನಗೊಂಡಿವೆ. ಈ ರೀತಿಯ ಶಿಲ್ಪಗಳಲ್ಲದೆ ದೇವಿ ಸಹಿತ ಕಾರ್ತಿಕೇಯ ಮತ್ತು ಗಣೇಶನ ಶಿಲ್ಪವೂ ಪ್ರಮುಖ. ಸಂಪೂರ್ಣವಾಗಿ ಕೆತ್ತಲ್ಪಟ್ಟ ಗಣೇಶ ವಿಗ್ರಹವು ಪದ್ಮಪೀಠದಲ್ಲಿ, ಸರ್ಪಾಲಂಕೃತ ವೃಕ್ಷದ ಕೆಳಗೆ ಶಕ್ತಿ ಸಹಿತ ಕುಳಿತ ದಶಭುಜ ವಿಗ್ರಹವಾಗಿದ್ದು ಶಕ್ತಿ ಪಂಥದ ಪ್ರಮುಖ ಪೂಜನೀಯ ಶಿಲ್ಪವಾಗಿದೆ. ಇದರ ಸನಿಹದಲ್ಲೇ ಪ್ರದರ್ಶಿಸಲ್ಪಟ್ಟ ವೀರಭದ್ರ (ರುಂಡವಿಲ್ಲದ) ವಿಗ್ರಹವು ತನ್ನ ಸಹಜಭಂಗಿಗೆ ಮತ್ತು ವೇಷಭೂಷಣ ವಿವರಗಳಿಗೆ ಹೆಸರುವಾಸಿಯಾಗಿದ್ದು, ವಿಜಯನಗರ ಶಿಲ್ಪಕಲಾಶೈಲಿಯು ಉತ್ಕೃಷ್ಟ ಮಾದರಿಯಾಗಿವೆ.

ಮೇಲೆ ವಿವರಣೆ ಸಹಿತ ಹೇಳಿದ ಶಿಲ್ಪಗಳಲ್ಲದೆ, ಇನ್ನು ಹಲವು ಶಿಲ್ಪಗಳಿವೆ. ಅವುಗಳೆಂದರೆ, ವಿಜಯನಗರ ಕಾಲಕ್ಕೆ ಸಂಬಂಧಿಸಿದ ಮಂಟಪವನ್ನೇ ಹೋಲುವ ಸ್ತಂಭಗಳನ್ನೊಳಗೊಂಡ ಮತ್ತು ಪಾವಟಿಗೆಗಳನ್ನು ಆಯೋಜಿಸಲಾಗಿದೆ. ಈ ಮಂಟಪದ ಎದುರಿನಲ್ಲಿ ಸಂಯೋಜಿಸಲ್ಪಟ್ಟ ಸಾಧಾರಣ

ಉಡುಪಿನಲ್ಲಿರುವ ರಾಜದಂಪತಿಗಳ (ರುಂಡವಿಲ್ಲದ) ಸಮರ್ಪಣಾಭಾವವನ್ನು ಬಿಂಬಿಸುವ ಶಿಲ್ಪಗಳು, ದೈವದ ಬಗ್ಗೆ ಅವರಿಗಿರುವ ಭಯ ಭಕ್ತಿಯನ್ನು ಎತ್ತಿ ತೋರಿಸುವಂತಿದೆ.

ವಿಗ್ರಹಗಳ ಕೈಯಲ್ಲಿ ಕೊಟ್ಟಿರುವ ಆಯುಧಗಳಲ್ಲಿ ಮುಖ್ಯವಾದವು ಯಾವವುವೆಂದರೆ: ಶಂಖ, ಚಕ್ರ, ಬಾಣ, ಅಂಕುಶ, ಪಾಶ, ಗದಾ, ಖಡ್ಗ, ಪರಶು, ಶೂಲ, ವಜ್ರ, ಅಗ್ನಿ ಇವುಗಳಲ್ಲಿ ಶಂಖ, ಚಕ್ರ, ಗದಾ ವಿಷ್ಣುವಿಗೂ ಪರಶು, ಶೂಲ, ಅಗ್ನಿ ಶಿವನಿಗೂ ಆಯುಧಗಳು, ಅಂಕುಶ ಪಾಶಗಳನ್ನು ಗಣೇಶನು ಮತ್ತು ಸರಸ್ವತಿಯೂ ಹಿಡಿದಿರುತ್ತಾರೆ. ಅಂತಹ ಆಯುಧಗಳು ಕೆಳಗೆ ಕಾಣಿಸಿದ ಶಕ್ತಿ, ಗುಣಗಳನ್ನು ಸೂಚಿಸುತ್ತದೆ.

ಶಂಖ; ಅಜ್ಞಾನನಾಶಕ ಶಕ್ತಿ

ಚಕ್ರ; ಕಾಲಚಕ್ರ

ಬಾಣಗಳು; ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು

ಅಂಕುಶ; ಆತ್ಮನಿಗೆ ಬೇಕಾದುದನ್ನು ಆರಿಸಿಕೊಳ್ಳುವ ಶಕ್ತಿ

ಪಾಶ; ತ್ರಿಗುಣಾತ್ಮಕವಾದ ಬಂಧನ

ಗದಾ; ಅಧರ್ಮನಾಶಕ ಶಕ್ತಿ

ಖಡ್ಗ; ಶೌರ್ಯ

ಪರುಶು; ದೈವಿಶಕ್ತಿ

ಶೂಲ(ತ್ರಿಶೂಲ); ಸತ್ವರಜಸ್ ತಮೋ ಗುಣಗಳು

ವಜ್ರ; ಬುದ್ಧಿ

ಅಗ್ನಿ; ಸಂಹಾರ ಶಕ್ತಿ ಇವುಗಳಲ್ಲದೇ ಶಿಲ್ಪಗಳಲ್ಲಿ ಇನ್ನೂ ವಿವಿಧ ಆಯುಧಗಳನ್ನು ಕಾಣಬಹುದು. ಯೋಗಶಾಸ್ತ್ರದಲ್ಲಿ ವಿವರಿಸಿರುವ ಆಸನಗಳಲ್ಲಿ ಆರು ಆಸನಗಳು ಮಾತ್ರ ವಿಗ್ರಹಗಳಲ್ಲಿ ಕಂಡುಬರುತ್ತವೆ. ಅನಂತಾಸನ, ಸಿಂಹಾಸನ, ಯೋಗಾಸನ, ಪದ್ಮಾಸನ, ವಿಮಲಾಸನ ಮತ್ತು ಭದ್ರಾಸನ.

೧. ಅನಂತಾಸನ; ತ್ರಿಕೋಣಾಕಾರ

೨. ಸಿಂಹಾಸನ; ಚತುಃಕೋಣಾಕಾರ

೩. ಭದ್ರಾಸನ;

ವಿಮಲಾಸನ; ಷಟ್ಕೋಣಾಕಾರ

೪. ಯೋಗಾಸನ; ಅಷ್ಟಕೋಣಾಕಾರ .

೫. ಪದ್ಮಾಸನ; ಚಕ್ರಾಕಾರ ಈ ಥರದ ಶಿಲ್ಪಗಳಲ್ಲಿ ಆಸನಗಳನ್ನು ಕಾಣಬಹುದಾಗಿದೆ.

ಅಂಕಣ: ೩.೧ (ಶೈವ)

ವೈಭವೀಕೃತ ಶೈವ ದ್ವಾರವನ್ನು ಹೊಂದಿದ ಈ ಅಂಕಣವು ಶೈವ ಪಂಥಕ್ಕೆ ಸೇರಿದ ಅತ್ಯುತ್ತಮ ಶಿಲ್ಪಗಳು ಪ್ರದರ್ಶಿತಗೊಂಡಿವೆ. ಇದರ ಜೊತೆಗೆ ಒಂದು ವಿಜಯನಗರ ಕಾಲದ ಮಂಟಪವನ್ನು ಹೋಲುವಂತೆ ಕೆಲವು ಸ್ತಂಭಗಳನ್ನು ಮತ್ತು ಪಾವಟಿಗೆಗಳನ್ನು ಆಯೋಜಿಸಲಾಗಿದೆ. ಶಿವನ ಸಂಹಾರ ಮೂರ್ತಿಗಳ ಪ್ರತೀಕಗಳಾದ, ವೀರಭದ್ರ, ಕಾಳಿ, ಭದ್ರಕಾಳಿ, ಮಹಿಷ ಮರ್ದಿನಿ, ಶಿಲ್ಪಗಳ ಜೊತೆಗೆ ಲೀಲಾಮೂರ್ತಿ ಸ್ವರೂಪವಾದ ಉಮಾ ಮಹೇಶ್ವರ ಶಿಲ್ಪವೂ ಪ್ರದರ್ಶಿತಗೊಂಡಿದೆ. ಇದೇ ಅಲ್ಲದೇ ದೇವಿ ಸಹಿತ ಕಾರ್ತಿಕೇಯ ಮತ್ತು ಗಣೇಶನ ವಿಗ್ರಹವು ಪದ್ಮಪೀಠದಲ್ಲಿ ಸರ್ಪಾಲಂಕೃತ ವೃಕ್ಷದ ಕೆಳಗೆ, ಶಕ್ತಿ ಸಹಿತ ಕುಳಿತ ದಶಭುಜ ವಿಗ್ರಹವಾಗಿದ್ದು, ಶಾಕ್ತಪಂಥದ ಪ್ರಮುಖ ಪೂಜನೀಯ ಶಿಲ್ಪವಾಗಿದೆ. ಇದರ ಸನಿಹದಲ್ಲೇ ಪ್ರದರ್ಶಿಸಲ್ಪಟ್ಟ ವೀರಭದ್ರ (ರುಂಡವಿಲ್ಲದ) ವಿಗ್ರಹವು ತನ್ನ ಸಹಜ ಭಂಗಿಗೆ ಮತ್ತು ವೇಷ ಭೂಷಣಗಳ ವಿವರಗಳಿಗೆ ಹೆಸರುವಾಸಿಯಾಗಿದ್ದು ವಿಜಯನಗರ ಶೈಲಿಯ ಉತ್ಕೃಷ್ಟ ಮಾದರಿಯಾಗಿದೆ.

ಮೇಲೆ ಹೇಳಿದ ಶಿಲ್ಪಗಳಲ್ಲದೇ ಮಂಟಪದ ಎದುರಿನಲ್ಲಿ ಸಂಯೋಜಿಸಲ್ಪಟ್ಟ ಸಾಧಾರಣ ಉಡುಪಿನಲ್ಲಿರುವ ರಾಜ ದಂಪತಿಗಳ (ರುಂಡವಿಲ್ಲದ) ಸಮರ್ಪಣಾ ಭಾವ ಬಿಂಬಿಸುವ ಶಿಲ್ಪಗಳು, ದೈವದ ಬಗ್ಗೆ ಅವರಿಗಿರುವ ಭಯ ಭಕ್ತಿಯನ್ನು ಬಿಂಬಿಸಿರುವುದನ್ನು ಕಾಣಬಹುದು. ಈ ಅಂಕಣವು ಶೈವ ಧರ್ಮಕ್ಕೆ ಸೇರಿದ ಶಿಲ್ಪಗಳನ್ನು ಹೊಂದಿರುವುದು ವಿಶೇಷವಾಗಿದೆ. ಅವುಗಳು ಈ ಕೆಳಗಿನಂತಿವೆ.

೩.೧.೧) ವೀರಭದ್ರ

೩.೧.೨) ಭೈರವ

೩.೧.೩) ಪಾರ್ವತಿ

೩.೧.೪) ಭಿಕ್ಷಾಟನಾ ಮೂರ್ತಿ

೩.೧.೫) ಚತುರ್ಭುಜ ಭೈರವ

೩.೧.೬) ಚತುರ್ಭುಜ ಭದ್ರಕಾಳಿ

೩.೧.೭) ದಶಭುಜ ವೀರಭದ್ರ

೩.೧.೮) ಮಹಿಷಾಸುರ ಮರ್ಧಿನಿ

೩.೧.೯) ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ

೩.೧.೧೦) ಭಕ್ತ ಮೂರ್ತಿ

೩.೧.೧೧) ನಂದಿ

೩.೧.೧೨) ಶಿವಲಿಂಗ

೩.೧.೧೩) ದುರ್ಗಾ

೩.೧.೧೪) ಉಮಾ ಮಹೇಶ್ವರ

೩.೧.೧೫) ಚಂದ್ರಮೌಳಿ ಶಿವ

೩.೧.೧೬) ವೀರಭದ್ರ

೩.೧.೧೭) ಆಸೀನ ಕಾಳಿ

೩.೧.೧೮) ಚತುರ್ಭುಜ ಭೈರವ

೩.೧.೧೯) ಆತ್ಮಲಿಂಗದೊಂದಿಗೆ ಶಿವ

೩.೧.೨೦) ಆಸೀನ ಶೈವ ದೇವತೆ

೩.೧.೨೧) ನಾಗಲಿಂಗ

ಈ ಅಂಕಣದ ಮಧ್ಯಭಾಗದಲ್ಲಿರಿಸಿರುವ ಶಿಲ್ಪಗಳು

೩.೧.೨೨) ಕೃಷ್ಣದೇವರಾಯ ಮತ್ತು ತಿರುಮಲದೇವಿ

೩.೧.೨೩) ಹೆಬ್ಬಾಗಿಲು

೩.೧.೨೪) ನಂದಿ

೩.೧.೨೫) ಲಿಂಗ

೩.೧.೨೬) ಮಹಿಷಾಸುರ ಮರ್ಧಿನಿ

೩.೧.೨೭) ವಿರೂಪಾಕ್ಷ (ರುಂಡ)

೩.೧.೨೮) ಮಹಿಷಾಸುರ ಮರ್ದಿನಿ

೩.೧.೨೯) ಶಕ್ತಿ ಗಣೇಶ

ಈ ಕೆಳಗಿನಂತೆ ಶಿಲ್ಪಗಳನ್ನು ವಿವರಿಸಲಾಗಿದೆ.

೩.೧.೧ : ವೀರಭದ್ರ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೫-೧೬ನೇ ಶತಮಾನ

ಅಳತೆ : ೧೮೦ * ೧೨೦ ಸೆಂ.ಮೀ

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೧೮೦*೧೨ ಸೆಂ.ಮೀವುಳ್ಳ ಈ ಶಿಲ್ಪವು ಲೋಹಮಾಧ್ಯಮದಲ್ಲಿ ರಚಿಸಲಾಗಿದೆ. ಹೆಸರೆ ಸೂಚಿಸಿರುವಂತೆ ವೀರಭದ್ರನ ಶಿಲ್ಪವಾಗಿದ್ದು, ಹೆಗಲಿಗೆ ಕತ್ತಿಹಿಡಿದು ಗಂಭೀರವಾಗಿ ನಿಂತಿರುವಂತಿದೆ. ಒಟ್ಟು ಈ ಶಿಲ್ಪಕ್ಕೆ ನಾಲ್ಕು ಕೈಗಳನ್ನು ತೋರಿಸಲಾಗಿದ್ದು, ಹಿಂಬದಿಯ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು, ಬಲಗೈಯಲ್ಲಿ ಬಾಣವನ್ನು ಹಿಡಿದಿರುವುದನ್ನು ಗುರುತಿಸಬಹುದು. ಮೈ ತುಂಬಾ ವಸ್ತ್ರವನ್ನುಟ್ಟ ವೀರಭದ್ರನನ್ನು ಅಲಂಕಾರಯುತವಾಗಿ ಬಿಂಬಿಸಲಾಗಿದೆ. ಹೂವಿನ ಮಾಲೆ, ಆಭರಣಗಳು, ಸೊಂಟಕ್ಕೆ ಡಾಬು, ರಕ್ಷಣೆಗೆ ಬಲಭಾಗದಲ್ಲಿ ಕತ್ತಿ, ಕುತ್ತಿಗೆಗೆ ಸರ, ಕೈಬಳೆ, ತಲೆಗೆ ಕಿರೀಟ (ವಜ್ರದ ಕಿರೀಟವಿರಬಹುದು) ಕಾಲಿಗೆ ಗೆಜ್ಜೆ ಹೀಗೆ ವೀರಭದ್ರನನ್ನು ಲೋಹದಲ್ಲಿ ಕೆತ್ತಿ ಸುಂದರಗೊಳಿಸಲಾಗಿದೆ. ಈ ವ್ಯಕ್ತಿ ತುಂಬಾ ಗಂಭೀರದಲ್ಲಿ ನಿಂತಿರುವುದನ್ನು ಕಾಣಬಹುದು. ಈ ಅಂಕಣದ ಮೊದಲ ಶಿಲ್ಪವಾಗಿರುವ ವೀರಭದ್ರನ ಶಿಲ್ಪದ ಕೆಳಗಡೆ ದ್ವಾರಪಾಲಕರು ನಿಂತಿದ್ದು, ಬೃಹತ್ತಾದ ದೇಹದ ಕಡೆ ನೋಡುತ್ತಾ ನಮಸ್ಕರಿಸುವಂತಿದೆ.

೩.೧..೨ : ಭೈರವ :

ಕಾಲ: ೧೪ ಮತ್ತು ೧೫ ನೇ ಶತಮಾನ

ಶಿಲೆ: ಕೆಂಪು ಶಿಲೆ

ಅಳತೆ: ೧೬೦*೧೧೫ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

ಈ ಮೂರ್ತಿಯು ಅಸುರರೊಡನೆ ಹೋರಾಟ ಮಾಡುವ ಶಿವನ ಪ್ರತಿರೂಪವಾಗಿದೆ, ಜಟಾಮುಕುಟದಾರಿಯಾಗಿದ್ದು, ಕಿವಿಯಲ್ಲಿ ಸರ್ಪಕುಂಡಲ ಕೊರಳಲ್ಲಿ ಕಂಟಾಭರಣ, ಎದೆಹಾರ, ಕೈಗಡಗ ಕಾಲ್ಗಡಗ ಮೊಣಕಾಲದವರೆಗೂ ಉಪವೀತ ವಸ್ತ್ರಾಭರಣಗಳನ್ನು ಧರಿಸಿದ್ದು ಬಲಗೈಯಲ್ಲಿ ಢಮರು, ಖಡ್ಗ, ರುಂಡದ ಹಿಂದೆ ಶ್ವಾನ ವಾಹನ ವಾಗಿರುವ ಚಿತ್ರವನ್ನು ಮೂರ್ತಿಯಲ್ಲಿ ಕಾಣಬಹುದು.

ಶಿವನ ಉಗ್ರರೂಪವಾದ ಪ್ರಭೇದವೇ ಭೈರವ ಶಿಲ್ಪಗಳಲ್ಲಿ ಶಿವನ ರೂಪ ಮಂಗಳಕರವಾದರೆ. ಭೈರವನ ರೂಪ ಶಿವನ ಉಗ್ರರೂಪವಾಗಿರುತ್ತದೆ. ಕುಳಿತಿರಲಿ ನಿಂತಿರಲಿ ಸಾಮಾನ್ಯ. ಲಕ್ಷಣಗಳೆಂದರೆ ಭೈರವ ಎಂದರೆ ಭಯಾನಕ ಅರ್ಥವು ಬರುತ್ತದೆ. ಭೈರವನಲ್ಲಿ ತ್ರಿಪುರಾಂತ ಭೈರವ, ಉಗ್ರ ಭೈರವ, ಬಾಡವಾಲನಭೈರವ, ಅಗ್ನಿ ಭೈರವ, ಕಾಲಭೈರವ, ಕರಾಳಭೈರವ ಭೀಮರೂಪ ಭೈರವ, ಚತುರ್ಭುಜ ಭೈರವ, ದಶಭುಜ ಭೈರವ. ಇನ್ನೂ ಮುಂತಾದ ಪ್ರಕಾರಗಳನ್ನು ನಾವು ನೋಡಬಹುದು. ಈ ಭೈರವನಿಗೆ ಸಾತ್ವಿಕ, ರಾಜನಿಕ, ತಾಮಸಿಕ ರೂಪಗಳನ್ನು ಹೇಳಿದ್ದಾನೆ. ಭೈರವನ ಕೈಯಲ್ಲಿ ಖಡ್ಗ, ತ್ರಿಶೂಲ, ಢಮರು ಹಾಗೂ ಪಾನ ಪಾತ್ರೆಯನ್ನು ಹಿಡಿದುಕೊಂಡಿರುವುದು. ಜೊತೆಗೆ ನಾಯಿ ಇರುತ್ತದೆ. ಸ್ಥಾನಿಕ ಭಂಗಿಯಲ್ಲಿ ಭೈರವನನ್ನು ನೋಡಬಹುದು. ೧೬೦*೧೧೫ ಸೆಂ.ಮೀವಿರುವ ಈ ಶಿಲ್ಪವನ್ನು ಭೈರವ ಮೂರ್ತಿಯೆಂದು ಗುರುತಿಸಲಾಗಿದ್ದು, ಈ ಪದದ ಅರ್ಥವು ಯಾರ ಧ್ವನಿಯು ಭೀಕರವಾಗಿದೆಯೋ ಅವನು ಭೈರವ. "ಭಿರ್ ಭಯಾನಕೋನಕೋ ರವೋ ಯಸ್ಯ ಸಃ ಭೈರವ" ಎಂದಿದ್ದು ಈ ಮಾತು ರುದ್ರನಿಗೆ ಅನ್ವಯಿಸುತ್ತದೆ.[೮] ವಿಷ್ಣು ಧರ್ಮೋತ್ತರ ಪುರಾಣದ ಪ್ರಕಾರ ಭೈರವನ ಶಿಲ್ಪದಲ್ಲಿ ಭೈರವನಿಗೆ (ಉಬ್ಬಿದ) ದೊಡ್ಡದಾದ ಹೊಟ್ಟೆ, ದುಂಡಾದ ಕಣ್ಣುಗಳು, ಕೋರೆ ಹಲ್ಲುಗಳು, ಅಗಲವಾದ ಮೂಗಿನ ಹೊಳ್ಳೆಗಳು ಇರುತ್ತವೆ. ರುಂಡ ಮಾಲೆಯನ್ನು ಧರಿಸಿದ ಭೈರವನು ನಾಗಾಭರಣಗಳನ್ನು ತೊಟ್ಟಿರುತ್ತಾನೆ. ಕಾರಮೇಘಗ ವರ್ಣದ ಭೈರವನು ಗಜಚರ್ಮಾಂಬಧಾರಿ; ಅನೇಕ ಕೈಗಳಲ್ಲಿ ಆಯುಧಗಳನ್ನು ಹಿಡಿದಿರುವ, ಸರ್ಪದೊಂದಿಗೆ ಇರುವ ಇವನ ಬಳಿ ಭೀತಳಾದ ಪಾರ್ವತಿಯು ಇರುತ್ತಾಳೆ.[೯]

ಭೈರವನ ೬೪ ರೂಪಗಳನ್ನು ಹೇಳುತ್ತದೆ. ಮುಖ್ಯವಾಗಿ ಎಂಟು ಭೈರವನ ರೂಪಗಳು ೧. ಅಸಿತಾಂಗ ೨. ರುರು ೩. ಚಂಡ ೪. ಕ್ರೋದ ೫. ಉನ್ಮತ್ತ ಭೈರವ ೬. ಕಾಪಾಲ ೭. ಭೀಷಣ ೮. ಸಂಹಾರ ಈ ಎಂಟು ಭೈರವನ ರೂಪಗಳಲ್ಲಿ ಪ್ರತಿಯೊಂದು ಮತ್ತೆ ಎಂಟು ಉಪ ರೂಪಗಳನ್ನು ಹೊಂದಿದ್ದು ಅವು ಈ ಕೆಳಗಿನಂತಿವೆ.

೧. ಅಸಿತಾಂಗ ರೂಪದಲ್ಲಿ ಅಸಿತಾಂಗ, ವಿಶಾಲಾಕ್ಷ, ಮಾರ್ತಾಂಡ, ಮೋದಕ ಪ್ರೀಯ, ಸ್ವಚ್ಚಂದ, ವಿಘ್ನ ಸಂತುಷ್ಟ, ಕೇಚರ, ಸಚರಾಚರ ಇವೆಲ್ಲವುಗಳು ಸ್ವರ್ಣವರ್ಣ, ಆಕರ್ಷಕ ದೇಹವನ್ನು ಹೊಂದಿದ್ದು, ತ್ರಿಶೂಲ, ಡಮರು, ಪಾಶ, ಖಡ್ಗ, ಆಯುಧಗಳನ್ನು ಹೊಂದಿರುತ್ತವೆ.

೨. ರುರು ಒಳಗೊಂಡಂತೆ ಕ್ರೋಧದಂಷ್ಟ್ರ, ಜಟಾಧರ, ವಿಶ್ವರೂಪ, ವಿರೂಪಾಕ್ಷ, ನಾನಾ ರೂಪಧರ, ವಜ್ರಹಸ್ತ, ಮಹಾಕಾಯ. ಈ ಗುಂಪಿನ ಭೈರವನ ವರ್ಣವು ಶುದ್ಧ, ಶ್ವೇತವರ್ಣ ಇವರೆಲ್ಲರೂ ಮಾಣಿಕ್ಯಗಳನ್ನೊಳಗೊಂಡ ಆಭರಣಗಳಿಂದ ಅಲಂಕೃತರಾಗಿ ಕೈಗಳಲ್ಲಿ ಅಕ್ಷರಮಾಲೆ, ಅಂಕುಶ, ಪುಸ್ತಕ ಮತ್ತು ವೀಣೆಯನ್ನು ಹೊಂದಿರುವನು.

೩. ಚಂಡನನ್ನು ಒಳಗೊಂಡಂತೆ ಪ್ರಳಯಾಂತಕ, ಭೂಮಿಕಂಪ, ನೀಲಕಂಠ, ವಿಷ್ಣು, ಕುಲಪಾಲಕ, ಮುಂಡಪಾಲ ಮತ್ತು ಕಾಮಪಾಲ ಇವರು ನೀಲ ವರ್ಣದವರಾಗಿದ್ದು, ಸುಂದರವಾಗಿರುವರು. ಇವರ ಹಸ್ತಗಳಲ್ಲಿ ಅಗ್ನಿ, ಗದೆ ಮತ್ತು ರುಂಡಗಳನ್ನು ಹಿಡಿದಿರುವರು.

೪. ಕ್ರೋದವನ್ನು ಒಳಗೊಂಡು ಪಿಂಗಳೇಕ್ಷಣ, ಅಭ್ರರೂಪ, ಧರಾಪಾಲ, ಕುಟಿಲ, ಮಂತ್ರನಾಯಕ, ರುದ್ರ ಮತ್ತು ಪಿಮಹ ಇವರೆಲ್ಲರೂ ಧೂಮ್ರ ವರ್ಣದವರಾಗಿದ್ದು, ಹಸ್ತಗಳಲ್ಲಿ ಖಡ್ಗ, ಖೇಟಕ, ಉದ್ದನೆಯ ಕತ್ತಿ ಮತ್ತು ಪಾಶವನ್ನು ಹಿಡಿದಿರುತ್ತಾರೆ.

೫. ಉನ್ಮತ್ತ ಭೈರವನನ್ನು ಒಳಗೊಂಡಂತೆ ವಟುಕ ನಾಯಕ, ಶಂಕರ, ಭೂತ, ಬೇತಾಳ, ತ್ರಿನೇತ್ರ, ತ್ರಿಪುರಾಂತಕ, ವರದ, ಪರ್ವತಾವಾಸ ಇವರು ಶ್ವೇತ ವರ್ಣಿತರಾಗಿದ್ದು, ಆಕರ್ಷಕ ದೇಹವನ್ನು ಹೊಂದಿರುವರು. ಇವರು ಹಸ್ತಗಳಲ್ಲಿ ರುಂಡ, ಖೇಟಕ ಮತ್ತು ಕಂಪಾಲವನ್ನು ಹಿಡಿದಿರುವರು.

೬. ಕಲಾಪ, ಶಶಿಭೂಷಣ, ಚರಮಾಂಬರಧರ, ಯೋಗೀಶ, ಬ್ರಹ್ಮರಾಕ್ಷಸ, ಸರ್ವಜ್ಞ, ಸರ್ವದೇವೇಶ ಮತ್ತು ಸರ್ವಭೂತ ಹೃದಿಸ್ಥಿತ, ಹಳದಿ ವರ್ಣಿತರಾಗಿದ್ದು, ಹಿಂದಿನ ಗುಂಪಿನ ಆಯುಧಗಳನ್ನು ಹೊಂದಿರುವರು.

೭. ಭೀಷಣ, ಭಯಹರ, ಸರ್ವಜ್ಞ, ಕಾಲಾಗ್ನಿ, ಮಹಾರುದ್ರ, ದಕ್ಷಿಣ, ಮುಖರ ಮತ್ತು ಅಷ್ಟಿರ ಇವರು ಕೆಂಪು ವರ್ಣಿತರಾಗಿದ್ದು, ಹಿಂದಿನ ಗುಂಪಿನ ಆಯುಧಗಳನ್ನು ಹೊಂದಿರುವರು.

೮. ಸಂಹಾರ ಭೈರವನನ್ನು ಒಳಗೊಂಡ ಅತಿರೀಕ್ತಾಂಗ, ಕಾಲಗ್ನಿ, ಪ್ರಿಯಾಂಕರ, ಘೋರನಾದ, ವಿಶಾಲಾಕ್ಷ, ಯೋಗೀಶ, ದಕ್ಷ, ಸಂಸ್ಥಿತ ಇವರೂ ಸಹ ಹಿಂದನ ಗುಂಪಿನ ಆಯುಧಗಳನ್ನು ಹೊಂದಿರುವರು.

ಹೀಗೆ ಶಿವನ ಸಂಹಾರ ಮೂರ್ತಿಗಳಲ್ಲಿ ಒಂದಾದ ಭೈರವನು ಅನೇಕ ರೂಪಗಳಲ್ಲಿ ಕಾಣಲ್ಪಡುತ್ತಾನೆ.

ಹಂಪಿಯು ಮೊದಲು ಭೈರವನ ಆರಾಧನಾ ಕೇಂದ್ರವಾಗಿತ್ತು. ಇದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ಹಂಪಿಗೆ ಸಮೀಪದ ಗೋನಾಳ ಗ್ರಾಮದಲ್ಲಿ ದೊರೆತ ಕ್ರಿ.ಶ. ೧೦೧೩ರ ಶಾಸನದ ಪ್ರಕಾರ ಹಂಪೆಯ ಮಹಾಕಾಳ ದೇವರಿಗೆ ಇರಿವ ನೊಳಂಬಾಧಿರಾಜನ ಅರಸಿ ವೃದ್ಧಿಮಬ್ಬರಸಿ ಎಂಬುವಳು ಕೆಲವೊಂದು ತೆರಿಗೆಗಳನ್ನು ದಾನವಾಗಿ ಕೊಟ್ಟುದುದನ್ನು ತಿಳಿಸುತ್ತದೆ. ಹಾಗೆಯೇ ಹಂಪಿಯಲ್ಲಿ ಭೈರವನ ಶಿಲ್ಪಗಳು ಹೆಚ್ಚಾಗಿ ನೈಸರ್ಗಿಕ ಬಂಡೆಗಳ ಮೇಲೆಯೇ ಹೆಚ್ಚು ಕಂಡುಬರುತ್ತವೆ ಎಂಬಂತೆಯೇ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಭೈರವನ ಬೃಹತ್ ಶಿಲೆಯ ಶಿಲ್ಪಗಳನ್ನು ಕಾಣಬಹುದಾಗಿದೆ.

೩.೧.೩: ಪಾರ್ವತಿ :

ಶಿಲ್ಪದ ಹೆಸರು : ಪಾರ್ವತಿ

ಬಳಸಿದ ಕಲ್ಲು : ಕೆಂಪು ಕಲ್ಲು

ಕಾಲ : ೧೩–೧೪ ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

ಪಾರ್ವತಿಯು ಶಿವನನ್ನು ತಪಸ್ಸು ಮಾಡಿ ಗೆದ್ದು ವಿವಾಹವಾದ ದೇವಿ 'ಪಾರ್ವತಿ' ಶಕ್ತಿ ದೇವತೆಯಾಗಿದ್ದಾಳೆ ಮತ್ತು ಭವಾನಿಯಾಗಿದ್ದಾಳೆ. ಮೂವತ್ತೆರೆಡು ಹೆಸರುಗಳಿಂದ ಈಕೆಯನ್ನು ಕರೆಯುವರು ಮತ್ತು ಪೂಜಿಸುವರು. ಶಿವನ ಜೊತೆಯಲ್ಲಿ ತೋರಿಸಲಾಗುತ್ತದೆ. ಪ್ರತ್ಯೇಕ ಶಿಲ್ಪಗಳಲ್ಲಿ ಪಾರ್ವತಿ ಢಮರು, ಶೂಲ ಮತ್ತು ದರ್ಪಣಗಳನ್ನು ಹಿಡಿದುಕೊಂಡು ಸ್ಥಾನಿಕ ಭಂಗಿಯಲ್ಲಿರುವುದನ್ನು ನೋಡಬಹುದು. ೧೨೦*೯೦ ಸೆಂ.ಮೀವಿರುವ ಈ ಲೋಹಶಿಲ್ಪವು ಪಾರ್ವತಿಯಾಗಿದ್ದು, ತಲೆಗೆ ಕಿರೀಟ ತೊಟ್ಟು, ಸೀರೆಯುಡಿಗೆಯೊಡನೆ, ಪಾರ್ವತಿ ತುಂಬಾ ಗಂಭೀರವಾಗಿ ಕುಳಿತಿರುವಂತಿದೆ. ಈ ಹಿಂದೆ ಕಂಡಂತೆ ಈ ಶಿಲ್ಪಕ್ಕೂ ಕೂಡ ನಾಲ್ಕು ಕೈಗಳನ್ನು ಕಾಣಬಹುದು. ಮುಂಭಾಗದ ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದು, ಬಲಭಾಗದಲ್ಲಿ ಲಿಂಗವನ್ನು ತೋರಿಸಲಾಗಿದೆ. ಹಿಂಬದಿಯ ಎಡಗೈಯಲ್ಲಿ ತ್ರಿಶೂಲ, ಬಲಗೈಯಲ್ಲಿ ಡಮರುಗವನ್ನು ಕೆತ್ತಲಾಗಿದೆ. ಕಿವಿಗೆ ದುಂಡಾದ ಓಲೆಗಳು, ಕುತ್ತಿಗೆ ಸರ, ಸೊಂಟಕ್ಕೆ ಡಾಬು, ಕಾಲಿಗೆ ಗೆಜ್ಜೆ ಜೊತೆಗೆ ಸೀರೆಯಂಚನ್ನು ವಿವರಿಸಲಾಗಿದೆ. ಉದ್ದನೆಯ ಮೂಗು, ದುಂಡಾದ ಕಣ್ಣುಗಳು, ಸೌಮ್ಯ ತುಟಿಗಳು, ಮುಖ ಭಾವನೆಯಲ್ಲಿ ಮುಗ್ಧತೆಯನ್ನು ಎತ್ತಿ ತೋರಿಸುವಂತಿದೆ.

೩.೧.೪: ಬಿಕ್ಷಾಟನ ಮೂರ್ತಿ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕೆಂಪು ಶಿಲೆ

ಅಳತೆ: ೯೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

ಈ ಮೂರ್ತಿಯು ಸ್ಥಾನಿಕಭಂಗಿಯಲ್ಲಿ ನಿಂತಿದೆ. ಕಿರೀಟಾಧಾರಿಯಾದ ಈ ಮೂರ್ತಿಯು ಕಿವಿ, ಓಲೆಗಳನ್ನು ಕೈಗಡುಗ, ಕಾಲ್ಗಡುಗ ಮೊಣಕಾಲವರೆಗೂ ಉಪವೀತ ಮತ್ತು ವಸ್ತ್ರಾಭರಣಗಳನ್ನು ಧರಿಸಿದ್ದು ಬಲಗೈಯಲ್ಲಿ ಈಟಿ, ತ್ರಿಶೂಲ, ಎಡಗೈಯಲ್ಲಿ ಢಮರುಗಳನ್ನು ಹಿಡಿದು ಪೀಠದ ಮೇಲೆ

ನಿಂತಿದೆ. ಪಾದದಡಿಯಲ್ಲಿ ಎರಡು ಕಡೆಯಲ್ಲಿ ತ್ರಿಭಂಗಿಯಲ್ಲಿ ಸ್ತ್ರಿಯರು ಶಂಖವನ್ನು ಊದುತ್ತಿರುವಂತೆ ಭಾಸವಾಗುತ್ತಿದೆ.

ಇದು ೯೦*೬೦ ಸೆಂ.ಮೀ ಇರುವ ಈ ಭಿಕ್ಷಾಟನಾ ಮೂರ್ತಿ ಶಿಲ್ಪವು ನೋಡಲು ಸುಂದರವಾಗಿದೆ. ಭಿಕ್ಷೆಯನ್ನು ಬೇಡುತ್ತಿರುವಂತೆ ಕೆತ್ತಲಾಗಿರುವ ಈ ಶಿಲ್ಪದಲ್ಲಿ ತುಂಬಾ ಗಾಂಭೀರ್ಯತೆಯಿರುವುದನ್ನು ಕಾಣಬಹುದು. ತಲೆಗೆ ಕಿರೀಟ, ಕಿವಿಗೆ ದುಂಡನೆಯ ಓಲೆಗಳು, ಸೊಂಟಕ್ಕೆ ಡಾಬು, ಬಲಗೈಯಲ್ಲಿ ಬೆತ್ತ, ಎಡಗೈಯಲ್ಲಿ ಅಕ್ಷಯ ಪಾತ್ರೆ, ಕಂಠಿ ಹಾರ, ಹಣೆಗೆ ಕುಂಕುಮ, ದುಂಡಾದ ಕಣ್ಣುಗಳು, ನೀಳ ಮೂಗು, ಮೌನದ ತುಟಿ, ಹಿಂಬದಿಯ ಬಲಗೈಯಲ್ಲಿ ಪ್ರಾಣಿಚಿತ್ರ, ಎಡಗೈಯಲ್ಲಿ ಡಮರು ಹಿಡಿದು ಸ್ತಬ್ಧವಾಗಿ ನಿಂತಿರುವಂತೆ ಶಿಲ್ಪ ಭಾಸವಾಗುತ್ತಿದೆ. ಈ ಶಿಲ್ಪದ ಕೆಳಗಡೆ ಎಡ, ಬಲಭಾಗದಲ್ಲಿ ಸೇವಕಿಯರು ನಿಂತಿದ್ದು, ಲೋಹದಲ್ಲಿ ರಚನೆಯಾಗಿರುವ ಈ ಶಿಲ್ಪವನ್ನು ಸುತ್ತಲ ವಿನ್ಯಾಸದಿಂದ ಸೌಂದರ್ಯವನ್ನು ವೃದ್ದಿಗೊಳಿಸಲಾಗಿದೆ.

೩.೧.೫: ಚತುರ್ಭುಜ ಭೈರವ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪು ಶಿಲೆ

ಅಳತೆ: ೧೨೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

ಈ ಮೂರ್ತಿಯು ಸ್ಥಾನಿಕ ಭಂಗಿಯಲ್ಲಿದ್ದು, ಕೀರಿಟಧಾರಿಯಾಗಿದ್ದು, ಬಲಗೈಯಲ್ಲಿ ಢಮರು ಖಡ್ಗ, ಎಡಗೈಯಲ್ಲಿ ತ್ರಿಶೂಲ, ರುಂಡ, ಕೋರೆಹಲ್ಲು ಹೊಂದಿದ್ದು ಉಗ್ರಸ್ವರೂಪವಾಗಿದೆ ಸರ್ಪಾಭರಣಗಳಿಂದ ಕೂಡಿದ್ದು, ಕಿವಿಯಲ್ಲಿ ಓಲೆ ಯಜ್ಞೋಪಾದಿತ ಕಂಠಿಹಾರ ಮೊಣಕಾಲದ ವರೆಗೂ, ರುಂಡಮಾಲೆ, ಕೈಗಡಗ, ಕಾಲ್ಗಡಗ ಧರಿಸಿದ್ದು, ಶ್ವಾನ ವಾಹನವಾಗಿದೆ. ಒಟ್ಟು ೧೨೦*೬೦ ಸೆಂ.ಮೀ ಇರುವ ಚತುರ್ಭುಜ ಭೈರವ ಶಿಲ್ಪವು ಶಿವನ ಉಗ್ರಸ್ವರೂಪವನ್ನು ಪ್ರತಿನಿಧಿಸುವ ಈ ಮೂರ್ತಿಯೂ ವಿಷ್ಣು ಧರ್ಮೋತ್ತರ ಪುರಾಣದನ್ವಯ ಬರುವ ವರ್ಣನೆಯಂತೆ, ನಾಲ್ಕು ಕೈಗಳೂ, ಸರ್ಪಾಭರಣಗಳ ಭೂಷಣವೂ, ರುಂಡಮಾಲೆಯೂ ಇದ್ದು, ಕಪ್ಪು ವರ್ಣವನ್ನು ಹೊಂದಿರುತ್ತದೆ. ರೂಪಮಂಡನನ ಪ್ರಕಾರ ಭೈರವನು ತನ್ನ ಕೈಗಳಲ್ಲಿ ಶೂಲ, ಪಾಶ, ಡಮರು ಮತ್ತು ಕಪಾಲ ಹಿಡಿದಿದ್ದು, ಅದು ಶ್ವಾನ ಹಿನ್ನಲೆಯಲ್ಲಿದೆ, ವಟುಕ ಚತುರ್ಭುಜ ಭೈರವ ಮೂರ್ತಿ ಸಂಪೂರ್ಣ ನಗ್ನನಾಗಿರಬೇಕು. ಮುಖದಲ್ಲಿ ಕ್ರೌರ್ಯವನ್ನು ತೋರಿಸಲು ಶಿಲ್ಪದಲ್ಲಿ ಕೊರೆಹಲ್ಲುಗಳನ್ನು ಮತ್ತು

ಉಗ್ರವಾಗಿ ತೆರೆದ ತ್ರಿನೇತ್ರಗಳನ್ನು ತೋರಿಸಿರುತ್ತಾರೆ. ಜಟೆಯನ್ನು ಜ್ವಾಲೆ, ಅಥವಾ ಬಿರಿಹುಯ್ದಂತೆ ಕೆತ್ತಲಾಗುತ್ತದೆ. ಭೈರವ ಮೂರ್ತಿಯ ಪ್ರಭೇಡಗಳಲ್ಲಿ ಎಂಟು ಬಗೆಯಿದ್ದು ಅವುಗಳಲ್ಲಿ ಅಸಿತಾಂಗ, ರುರು, ಚಂಡ, ಕ್ರೋದ, ಉನ್ಮತ್ರ ಭೈರವ, ಕಾಪಾಲ, ಭೀಷಣ ಮತ್ತು ಸಂಹಾರ ಎಂದು ಕರೆದಿದ್ದಾರೆ.

೩.೧.೬: ಚತುರ್ಭುಜ ಭದ್ರಕಾಳಿ :

ಬಳಸಿದ ಕಲ್ಲು : ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೪*೨ ಅಡಿ

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೪*೨ ಅಡಿ ಎತ್ತರ ಮತ್ತು ಅಗಲವಿರುವ ಚತುರ್ಭುಜ ಭದ್ರಕಾಳಿಯ ಈ ಶಿಲ್ಪವು ಗಂಭೀರವಾಗಿ ನಿಂತಿರುವಂತೆ ಭಾಸವಾಗುತ್ತಿದೆ. ನಾಲ್ಕು ಕೈಗಳನ್ನು ಹೊಂದಿರುವ ಈ ಶಿಲ್ಪವು ಬಿಲ್ಲು, ಬಾಣ, ಕತ್ತಿಗಳನ್ನು ಹಿಡಿದು ನಿಂತಿರುವಂತಿದೆ. ಹಿಂದಿನ ಶಿಲ್ಪದಂತೆ ಈ ಶಿಲ್ಪದಲ್ಲಿಯೂ ಉಗ್ರ ಸ್ವರೂಪವನ್ನು ಕಾಣಬಹುದು. ಅದರಲ್ಲಿ ಮುಖ್ಯವಾಗಿ ಉಗ್ರವಾಗಿ ತೆರೆದ ತ್ರಿನೇತ್ರಗಳನ್ನು ಕಾಣಬಹುದು. ವಸ್ತ್ರವನ್ನು ಧರಿಸಿರುವ ಈ ಮೂರ್ತಿಯಲ್ಲಿ ಆಭರಣವನ್ನು ಹೆಚ್ಚು ತೋರಿಸಲಾಗಿದೆ. ಎದೆಯುಬ್ಬಿಸಿ ನಿಂತ ಭಂಗಿಯಲ್ಲಿ ತುಂಬಾ ಗಾಂಭೀರ್ಯತೆ ಕಾಣಲ್ಪಡುತ್ತಿದೆ. ಬಲಗೈಯಲ್ಲಿ ಕತ್ತಿ ಹಿಡಿದು ಸಿಡಿದೇಳುವ ಹಂತಕ್ಕೆ ಈ ಶಿಲ್ಪ ಕಂಡುಬರುತ್ತಿದೆ. ಹೆಸರಿಗೆ ತಕ್ಕಂತೆ ಚತುರ್ಭುಜವಾಗಿ ರಚಿಸಲಾದ ಚಿತ್ರಕ್ಕೆ ವಿನ್ಯಾಸದಿಂದ ಅಲಂಕಾರವನ್ನು ಮಾಡಲಾಗಿರುತ್ತದೆ. ಒಟ್ಟಾರೆ ಈ ವಸ್ತು ಸಂಗ್ರಹಾಲಯದ ಶಿಲ್ಪಗಳಲ್ಲಿ ಇದೊಂದು ವಿಶೇಷವಾದ ಶಿಲ್ಪವೆಂದರೆ ತಪ್ಪಾಗಲಿಕ್ಕಿಲ್ಲ.

೩.೧.೭ ಮಹಿಷಾಸುರ ಮರ್ದಿನಿ

ಬಳಸಿದ ಕಲ್ಲು : ಕೆಂಪು ಕಲ್ಲು

ಕಾಲ : ೧೪-೧೫ ನೇ ಶತಮಾನ

ಅಳತೆ : ೧೪೦ * ೯೫ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

ಈ ಶಿಲ್ಪವು ಶಕ್ತಿ ದೇವತೆಯ ಅವತಾರವಾಗಿದೆ. ಇದು ಪಾರ್ವತಿ ದೇವಿಯ ಉಗ್ರರೂಪವಾಗಿದೆ. ಈ ಶಿಲ್ಪವು ಒಂದು ಮುಖ ಮತ್ತು ಕೈ ಕಾಲುಗಳು ಹೊಂದಿರುತ್ತದೆ. ಮಹಿಷಾಮರ್ಧಿನಿ ಶಿಲ್ಪವು ಎಂಟು ಕೈಗಳನ್ನು ಹೊಂದಿದ್ದು, ಕೋಣದ ಮೇಲೆ ಮೆಟ್ಟಿ ನಿಂತು

ತ್ರಿಶೂಲವನ್ನು ಹಿಡಿದಿರುವಂತೆ ಕಲ್ಲಿನ ಮೇಲೆ ಶಿಲ್ಪವನ್ನು ಕೆತ್ತಲಾಗಿದೆ. ಎಡಗೈಯಲ್ಲಿ ಬಿಲ್ಲು, ಕಠಾರಿ ಇವೆ. ಬಲಗೈಯಲ್ಲಿ ಖಡ್ಗ, ಬಾಣ, ಚಕ್ರವನ್ನು ಕಾಣಬಹುದು. ವಿಗ್ರಹದಲ್ಲಿ ಸೀರೆ, ಕೈಕಾಲು ಕಡಗ ಹೊಂದಿದ್ದು. ವೈಜಯಂತಿ ಮಾಲೆ ಕಿರೀಟವನ್ನು ಧರಿಸಿದ್ದಾಳೆ.

ಶಕ್ತಿ ದೇವತೆಗಳಲ್ಲಿ ಬಹುಜನ ಪ್ರಿಯವಾದ ದೇವತೆಗಳಲ್ಲಿ, ಮಹಿಷಾಸುರ ಮರ್ದಿನಿಯೂ ಒಬ್ಬಳಾಗಿದ್ದಾಳೆ. ಇವಳ ಈ ರೂಪವು ಉಗ್ರರೂಪವಾಗಿದ್ದು, ಕ್ರಿಯೆಯಲ್ಲಿಯೂ ಸಂಹಾರವೇ ಪ್ರಾಮುಖ್ಯವಾಗಿದೆ. ಶಾಸ್ತ್ರ ಗ್ರಂಥಗಳಲ್ಲಿ ಈಕೆಯೂ ಕೋಪಗೊಂಡ ಯುವತಿಯಂತಿದ್ದು, ಒಂದು ಮುಖ ಹಾಗೂ ಅನೇಕ ಕೈಗಳನ್ನು ಹೊಂದಿರುತ್ತಾಳೆಂದು ವರ್ಣಿಸಿವೆ. ಶಿಲ್ಪಗಳಲ್ಲಿಯೂ ಇದೇ ಭಾವನೆ ಬರುವಂತೆ ಶಿಲ್ಪಿ ಶಿಲ್ಪಿಸಿರುತ್ತಾನೆ[೧೦]

೩.೧.೮: ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ :

ಬಳಸಿದ ಕಲ್ಲು : ಬಿಳಿನೀಲಿ ಮಿಶ್ರಿತ ಕಲ್ಲು

ಕಾಲ : ೧೪-೧೫ ನೇ ಶತಮಾನ

ಅಳತೆ : ೨*೪ ಅಡಿ

ದೊರೆತ ಸ್ಥಳ : ವಿಜಯನಗರ ಹಂಪಿ

೨ * ೪ ಅಡಿ ಎತ್ತರ ಮತ್ತು ಅಗಲವಿರುವ ಈ ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ ಶಿಲ್ಪವು ಮೂರು ಭಾಗವಾಗಿರುವುದನ್ನು ಕಾಣಬಹುದು. ಆಕಾಶ ನೀಲಿಯ ಬಂಡೆಯಲ್ಲಿ ರಚಿತವಾಗಿರುವ ಈ ಶಿಲ್ಪವು ವಿಶೇಷವಾದದ್ದಾಗಿದೆ. ಮಧ್ಯಭಾಗದಲ್ಲಿ ಕಾರ್ತಿಕೇಯ ಮೂರು ತಲೆಯನ್ನೊತ್ತು ನಾಲ್ಕು ಕೈಗಳನ್ನು ಅಗಲವಾಗಿ ಚಾಚಿರುವಂತೆ ಬಿಂಬಿಸಲಾಗಿದೆ. ಬಲಭಾಗದಲ್ಲಿ ವಳ್ಳಿ ಎಡಭಾಗದಲ್ಲಿ ದೇವಸೇನೆಯನ್ನು ಕಾಣಬಹುದು. ಬ್ರಹ್ಮ, ವಿಷ್ಣು, ಮಹೇಶ್ವರರಾದಿಯಾಗಿ ಇಲ್ಲಿ ಬಿಂಬಿಸಿದಂತೆ ಕಾಣಲ್ಪಡುವ ದೃಶ್ಯವು ಅಸ್ಪಷ್ಟತೆಯಲ್ಲಿ ಮುಳುಗಿರುತ್ತದೆ ತನ್ನ ವಾಹನದ ಮೇಲೆ ಆಸೀನರಾಗಿರುವ ಕಾರ್ತಿಕೇಯನ್ ಗಂಭೀರ ಸ್ವರೂಪಿಯಾಗಿದ್ದಾನೆ. ಅಕ್ಕ ಪಕ್ಕದಲ್ಲಿರುವ ಶಿಲ್ಪಗಳು ವಸ್ತ್ರಾಭರಣಗಳಿಂದ ಕೂಡಿದ ಅಲಂಕಾರಯುತವಾದ ಗಂಭೀರ ವ್ಯಕ್ತಿಗಳಂತೆ ಬಿಂಬಿಸಲಾಗಿದೆ.

೩.೧.೯: ಭಕ್ತಮೂರ್ತಿ :

೨೫ * ೨ ಅಡಿ ಎತ್ತರ ಮತ್ತು ಅಗಲವಿರುವ ಭಕ್ತ ಮೂರ್ತಿ ಶಿಲ್ಪವು, ಕೈಮುಗಿದು ದೇವರಿಗೆ ನಮಸ್ಕರಿಸುತ್ತಿರುವಂತೆ ಭಾಸವಾಗುತ್ತಿದೆ. ಕುಬ್ಜ ರೀತಿಯಲ್ಲಿರುವ ಭಕ್ತಮೂರ್ತಿಯೂ ತಲೆಗೆ ಕಿರೀಟ,

ಕಿವಿಗೆ ದುಂಡಾದ ಓಲೆ, ಮೈ ತುಂಬಾ ಬಟ್ಟೆಯನ್ನು ಧರಿಸಿರುವಂತೆ, ಲೋಹದಲ್ಲಿ ರಚಿಸಲಾಗಿದೆ.

೩.೧.೧೦: ನಂದಿ :

ಬಳಸಿದ ಕಲ್ಲು : ಬಿಳಿನೀಲಿ ಮಿಶ್ರಿತ ಕಲ್ಲು

ಕಾಲ : ೧೫-೧೬ ನೇ ಶತಮಾನ

ಅಳತೆ : ೨*೨ ಅಡಿ ಎತ್ತರ ಮತ್ತು ಅಗಲ

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

ನಂದಿಯ ವಿಗ್ರಹ ಶಿವಲಿಂಗದ ಎದುರುಗಡೆ ಆಸೀನದಂತಿದೆ. ವಿಗ್ರಹವನ್ನು ನೋಡಬಹುದು. ಭಾರತದ ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಬಸವನಿಗೆ(ನಂದಿ) ಅಗ್ರಸ್ಥಾನವಿದೆ. ಪ್ರಾಣಿಗಳಲ್ಲಿ ಪೂಜ್ಯವಾಗಿದೆ. ಶಿವಲಿಂಗದ ಎದುರುಗಡೆ ಈ ನಂದಿ ವಿಗ್ರಹವನ್ನು ನೋಡಬಹುದು.

೩.೧.೧೧: ಶಿವಲಿಂಗ :

ಬಳಸಿದ ಕಲ್ಲು : ಬಿಳಿನೀಲಿ ಮಿಶ್ರಿತ ಕಲ್ಲು :

ಕಾಲ : ೧೪-೧೫ ನೇ ಶತಮಾನ

ಅಳತೆ : 3 x 2½ ಅಡಿ

ದೊರೆತ ಸ್ಥಳ : ವಿಜಯನಗರ ಹಂಪಿ

3 x 2½ ಅಡಿ ಎತ್ತರ ಮತ್ತು ಅಗಲವಿರುವ ಶಿವಲಿಂಗ ಶಿಲ್ಪವು ಯಾವುದೇ ಅಲಂಕಾರವಿಲ್ಲದೇ ಸರಳವಾಗಿ ರೂಪಿಸಲಾಗಿದೆ. ಶಿವನ ಲಿಂಗವನ್ನು ರಚನೆ ಮಾಡುವ ಹಂತದಲ್ಲಿಯೇ ಅಪರಿಪೂರ್ಣತೆಯಾದಂತಿದೆ.

೩.೧.೧೨: ದುರ್ಗಾ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್ ಕಲ್ಲು

ಕಾಲ : ೧೪-೧೫ ನೇ ಶತಮಾನ

ಅಳತೆ : ೧೨೦ * ೯೫ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೧೨೦ * ೯೫ ಸೆಂ.ಮೀವಿರುವ ದುರ್ಗಾ ಶಿಲ್ಪವು ನುಣುಪಾದ ಶಿಲೆಯಿಂದ ರಚಿತವಾಗಿದೆ ತುಂಬಾ ಸೂಕ್ಷ್ಮತೆಯಿಂದ ಶಿಲ್ಪ ಕೂಡಿದ್ದರೂ, ದುರ್ಗಾ ಶಿಲ್ಪವು ಭಯಂಕರವಾಗಿರುವುದನ್ನು ಕಾಣಬಹುದು. ತ್ರಿನೇತ್ರಗಳನ್ನೊತ್ತ ಭೈರವನಂತೆ ಭಾಸವಾಗುವ ಮುಖಚರ್ಯೆಯಲ್ಲಿ ತುಂಬಾ

ಗಂಭೀರತೆಯನ್ನು ಕಾಣಬಹುದು. ದಪ್ಪನೆಯ ಕಣ್ಣುಗಳು ಮುರಿದ ಮೂಗು, ಮುಚ್ಚಿದ ಬಾಯಿಯಲ್ಲಿ ಕೋರೆಹಲ್ಲುಗಳು, ಕಿವಿಗೆ ಹಗಲವಾದ ಓಲೆಗಳು, ಎಡಗೈಯಲ್ಲಿ ಡಮರು, ಬಲಗೈಯಲ್ಲಿ ತ್ರಿಶೂಲ ಹಿಡಿದಿದ್ದು, ಇನ್ನುಳಿದ ಎರಡು ಕೈಗಳು ಮುರಿದು ಹೋಗಿರುತ್ತವೆ. ದುಸ್ಥಿತಿಯಲ್ಲಿರುವ ಈ ದುರ್ಗಾ ಶಿಲ್ಪವು ಮೈಕಟ್ಟಿನಲ್ಲಿ ಗಟ್ಟಿಮುಟ್ಟಿದೆ. ರಾಕ್ಷಸರನ್ನು ಅಂಗಾಲಲ್ಲಿ ತುಳಿಯುತ್ತಾ, ಘರ್ಜಿಸುತ್ತಿರುವಂತೆ ಕಾಣುವ ದುರ್ಗೆ, ಮಹಾಶಕ್ತಿವಂತಳು, ಕಾಲಬಳಿಯಲ್ಲಿ ಸಿಂಹ ಲಾಂಛನವನ್ನು ತೋರಿಸಲಾಗಿದೆ. ಬೃಹತ್ ದೇಹಕ್ಕೆ ಅಷ್ಟೇ ದೊಡ್ಡದಾದ ನಿಂಬೆ ಹಾರವನ್ನು ಹಾಕಲಾಗಿದೆ. ಎದೆಯುಬ್ಬಿದ ದೇಹಕ್ಕೆ ಆಭರಣಗಳಿಂದ ಅಲಂಕಾರವನ್ನು ಮಾಡಲಾಗಿದೆ.

ದುರ್ಗಾದೇವಿಯು ಸಾತ್ವಿಕ ರೂಪವುಳ್ಳವಳಾಗಿದ್ದು, ಕೈಗಳಲ್ಲಿ ಅಭಯ, ವರದ, ಶಂಖ, ಚಕ್ರಮುದ್ರೆಗಳನ್ನು ಧಾರಣೆ ಮಾಡಿರುತ್ತಾಳೆ. ನಮಗೆ ಕಾಣಬರುವ ವಿಜಯನಗರ ಶಿಲ್ಪಗಳಲ್ಲಿ ಪ್ರಸನ್ನ ದುರ್ಗೆಯ ಶಿಲ್ಪಗಳು ಅತೀ ಕಡಿಮೆ. ಕೋಣನ ತಲೆಯ ಮೇಲೆ ಸಮಪಾದದಲ್ಲಿ ನಿಂತಿರುವಂತೆ ಶಿಲ್ಪಿ ಕೆತ್ತಿರುತ್ತಾನೆ. ಈ ಥರಹದ ಶಿಲ್ಪಗಳು ಗಂಗರ ಶಿಲ್ಪಗಳಲ್ಲಿ ಕಾಣಬಹುದು. ಕಲ್ಲಿನಲ್ಲಿ ವಿಜೃಂಭಿಸಿ ದುರ್ಗಾಳನ್ನು ಪೂಜಿಸುವುದುಂಟು. ಜೈನ ಮಹಾಪುರಾಣದಲ್ಲಿ ಈ ಬಗೆಯ ರೂಪವನ್ನು ವಿಧ್ಯ ವಾಸಿನೀ ದೇವತೆ ಎಂದು ಕರೆಯಲಾಗಿದೆ. ಈ ಮಹಾಪುರಾಣದ ರಚನೆಯ ಕಾಲಕ್ಕೆ ದುರ್ಗಿಯನ್ನು ತ್ರಿಶೂಲದಂತಹ ರೂಪದಲ್ಲಿ ಪೂಜಿಸುತ್ತಿದ್ದಿರಬೇಕು. ಗಂಗ ಅರಸರಲ್ಲಿ ದುರ್ವಿನೀತನನ್ನು ಕಾತ್ಯಾಯನೀ ಕಮಲೋದರ ಭಕ್ತನೆಂದು ಶಾಸನವೊಂದು ವರ್ಣಿಸುತ್ತದೆ. ಕೋಣನ ತಲೆಯ ಮೇಲೆ ಸ್ಥಾನಿಕ ಭಂಗಿಯಲ್ಲಿ ನಿಂತು ಅಭಯ, ಚಕ್ರ, ಶಂಖ ಮತ್ತು ಕಟೀ ಹಸ್ತವನ್ನುಳ್ಳ ವಿಗ್ರಹವನ್ನು ಕಾಣಬಹುದು.

೩.೧.೧೩: ಉಮಾಮಹೇಶ್ವರ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೪-೧೫ ನೇ ಶತಮಾನ

ಅಳತೆ : ೧.೧/೨*೨ ಅಡಿ

ದೊರೆತ ಸ್ಥಳ : ವಿಜಯನಗರ ಹಂಪಿ

1½ x 2 ಅಡಿ ಎತ್ತರ ಮತ್ತು ಅಗಲವಿರುವ ಉಮಾಮಹೇಶ್ವರ ಶಿಲ್ಪವು ಸೂಕ್ಷ್ಮವಾಗಿ ಕೆತ್ತನೆ ಮಾಡಲಾಗಿದೆ. ಗಂಡ, ಹೆಂಡತಿ ಒಬ್ಬರಿಗೊಬ್ಬರು ಅಕ್ಕಪಕ್ಕ ಕುಳಿತು ತಮ್ಮ

ಆಯುಧಗಳನ್ನಿಡಿದಿರುವುದನ್ನು ಕಾಣಬಹುದು. ತಲೆಗೆ ಕಿರೀಟ, ಮೈತುಂಬಾ ವಸ್ತ್ರಗಳನ್ನು ಹಾಕಿರುವಂತೆ ಶಿಲ್ಪಿ ತೋರಿಸಿದ್ದು, ಮೈತುಂಬಾ-ಆಭರಣಗಳಿರುವಂತೆ ಭಾಸವಾಗುತ್ತಿದೆ.

೩.೧.೧೪: ಚಂದ್ರಮೌಳಿ ಶಿವ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೪-೧೫ನೇ ಶತಮಾನ

ಅಳತೆ : ೪ * ೨.೫ ಅಡಿ

ದೊರೆತ ಸ್ಥಳ : ಕಮಲಾಪುರ

ಈ ವಿಗ್ರಹವು ಶಿವನ ಒಂದು ಪ್ರಭೇದ ವಿಗ್ರಹವಾಗಿದ್ದು ಶಿವನು ಆಸಿನ ಭಂಗಿಯಲ್ಲಿ ಕುಳಿತಿದ್ದು, ಬಲಗೈಯಲ್ಲಿ ತ್ರಿಶೂಲ ಖಡ್ಗ, ಎಡಗೈಯಲ್ಲಿ ಢಮರುಗ, ಪಾನಪಾತ್ರೆಯನ್ನು ಹಿಡಿದಿದ್ದು, ಕಿರೀಟಾಧಾರಿಯಾಗಿದ್ದು, ವಸ್ತ್ರಾಭರಣಗಳನ್ನು ಧರಿಸಿದ್ದು, ತೋಳ್ ಬಂಧಿಗಳನ್ನು, ಕಾಲ್ಗಡ್ಗಗಳನ್ನು ಧರಿಸಿರುತ್ತಾನೆ.

೩.೧.೧೫: ವೀರಭದ್ರ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್ ಕಲ್ಲು

ಕಾಲ : ೧೫-೧೬ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೧೨೦*೯೦೦ ಸೆಂ.ಮೀ ಅಳತೆಯ ಈ ವೀರಭದ್ರ ಶಿಲ್ಪವು ತನ್ನ ರುಂಡವನ್ನು ಕಳೆದುಕೊಂಡಿರುತ್ತದೆ. ಈ ಹಿಂದೆ ಮೊದಲು ನೋಡಿದ ವೀರಭದ್ರನಿಗೂ ಈ ವೀರಭದ್ರನಿಗೂ ವ್ಯತ್ಯಾಸಗಳಿರುವುದನ್ನು ಗುರುತಿಸಬಹುದು. ನೀಲ, ಆಕಾಶ ವರ್ಣದ ಶಿಲೆಯಲ್ಲಿ ರಚನೆ ಮಾಡಲಾಗಿರುವ ಈ ಶಿಲ್ಪವು ತುಂಬಾ ನೈಜತೆಯಿಂದ ಕೂಡಿದ್ದಾಗಿದೆ. ಅರೆನಗ್ನದಲ್ಲಿರುವ ವೀರಭದ್ರ ಮೈತುಂಬಾ ಆಭರಣಗಳನ್ನು ಧರಿಸಿದ್ದಾನೆ. ಕೈಗಡಗ, ಕಾಲುಕಡುಗ, ಡಾಬು, ಸರ ತುಂಬಾ ಸೂಕ್ಷ್ಮವಾಗಿ ಕೆತ್ತಲಾಗಿರುತ್ತದೆ.

೩.೧.೧೬: ಆಸೀನ ಕಾಳಿ :

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೧೫೦ * ೧೨೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೧೫೦ * ೧೨೦ ಸೆಂ.ಮೀ ಇರುವ ಆಸೀನ ಕಾಳಿಯ ಶಿಲ್ಪವು ಒರಟಾದ ಶಿಲೆಯಿಂದ ಕೆತ್ತನೆ ಮಾಡಲಾಗಿದೆ. ಅಳತೆ, ಪ್ರಮಾಣ ಸ್ಪಷ್ಟವಾಗಿದೆ ಎಂದಾದರೂ ನೈಜತೆಯಲ್ಲಿ ಅಸ್ಪಷ್ಟ ಎಂಬುದನ್ನು ಶಿಲ್ಪವನ್ನು ನೋಡಿ ಗುರುತಿಸಬಹುದು. ತಲೆಗೆ ಕಿರೀಟ, ಕಿವಿಗೆ ಓಲೆ, ಕೈಯಲ್ಲಿ ತ್ರಿಶೂಲ, ಡಮರು, ಕತ್ತಿಗಳಿರುವುದನ್ನು ಕಾಣಬಹುದು. ದೇವಿಯ ಕಾಲ ಬಳಿಯಲ್ಲಿ ಮೂರು ಮುಖಗಳನ್ನು ಕಾಣಬಹುದು. ಮುಖದಲ್ಲಿ ಗಂಭೀರ ಭಾವನೆಗಳಿದ್ದು, ದೊಡ್ಡ ಕಣ್ಣುಗಳು, ಬಾಯಲ್ಲಿ ಕೋರೆಹಲ್ಲುಗಳಿರುವುದನ್ನು ಗಮನಿಸಬಹುದು.

೪.೧.೧೭: ಚತುರ್ಭುಜ ಭೈರವ :

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೧೨೦ * ೯೦ ಸೆಂ.ಮೀ ಇರುವ ಚತುರ್ಭುಜ ಬೈರವ ಶಿಲ್ಪವು ಬೈರವ ಮತ್ತು ಭಿಕ್ಷಾಟನಾ ಮೂರ್ತಿಯ ಸ್ವರೂಪದಂತೆ ಕೆತ್ತಲಾಗಿದೆ. ಆದರೆ ಈ ಚತುರ್ಭುಜ ಬೈರವ ಮೂರ್ತಿಶಿಲ್ಪದಲ್ಲಿ ಹಿಂಬದಿಯಲ್ಲಿ ಹಾವುಗಳ ನರ್ತನೆಯಿರುವುದು ತುಂಬಾ ವಿಶೇಷವಾದದ್ದಾಗಿದೆ. ನಗ್ನವಾಗಿ ನಿಂತಿರುವ ಮೂರ್ತಿಯು ಕೈಯಲ್ಲಿ ರುಂಡವಿರಬೇಕಿತ್ತು. ಆದರೆ ಅದು ನಾಶಗೊಂಡ ಹಿನ್ನೆಲೆಯಲ್ಲಿ ನಾಯಿಯ ಬಾಯಿ ಹಾಕಿರುವಂತೆ ಭಾಸವಾಗುತ್ತಿದೆ. ಕಾಲಬಳಿಯ ಅಕ್ಕ-ಪಕ್ಕದಲ್ಲಿ ದ್ವಾರಪಾಲಕರು ನಿಂತಿದ್ದಾರೆ. ಬೈರವನು ತನ್ನ ಎಡಗೈಯಲ್ಲಿ ಡಮರು, ಬಲಗೈಯಲ್ಲಿ ತ್ರಿಶೂಲವನ್ನಿಡಿದಿದ್ದು, ಮುಖ ಅಸ್ಪಷ್ಟವಾಗಿದ್ದು, ಈ ಶಿಲ್ಪವು ಬಹುಮುಖ್ಯ ಪಾತ್ರವಹಿಸುತ್ತಿದೆ. ದೇವಾನು ದೇವತೆಗಳ ರೂಪವನ್ನು ಸಂರಕ್ಷಿಸಿದ ನಾಡು ವಿಜಯನಗರ ಎಂಬ ಹೆಗ್ಗಳಿಕೆಗೆ ಈ ಸ್ಥಳ ಸಾಕ್ಷಿಯಾಗಿದೆ.

೪.೧.೧೮: ಶಿವ ಆತ್ಮಲಿಂಗದೊಂದಿಗೆ :

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ಒಳ ಆವರಣದಲ್ಲಿ ಶಿವ ಆತ್ಮಲಿಂಗದೊಂದಿಗೆ ಎಂಬ ನಾಮಫಲಕದೊಂದಿಗೆ ಒಂದು ಶಿಲ್ಪವನ್ನು ಪ್ರದರ್ಶಿಸಲಾಗಿರುತ್ತದೆ. ಈ ಶಿಲ್ಪವು ಪದ್ಮಾಸನದಲ್ಲಿ ಆಸೀನರಾಗಿದ್ದು, ಚತುರ್ಭುಜಗಳನ್ನು ಹೊಂದಿರುತ್ತದೆ. ಮುಂದಿನ ಎರಡು ಹಸ್ತಗಳು ಪಕ್ಷದವರೆಗೂ ಚಾಚಿ ಬಲಗೈಯಲ್ಲಿ ಅಕ್ಷಮಾಲೆಯನ್ನು ಧರಿಸಿದ್ದು, ಎಡಗೈಯು ಕೆಳಗಡೆಯಿದೆ. ಇಲ್ಲಿ ಎಡಗೈಯ ಮೇಲೆ ಬಲಗೈಯಲ್ಲಿದ್ದು, ಅದರಲ್ಲಿ ಸಣ್ಣ ಪೀಠಸ್ತ ಲಿಂಗವನ್ನು ಹಿಡಿದಿರುವುದು. ಬಲ ಹಿಂದಿನ ಹಸ್ತಗಳಲ್ಲಿ ಒಂದೇ ವೃತ್ತದಲ್ಲಿ ಸೂರ್ಯ-ಚಂದ್ರ ಕಾಣುವಂತೆ ಕೆತ್ತಲಾಗಿದೆ. ಕರ್ಣಾಭರಣಗಳು, ಕೊರಳಾಭರಣಗಳು ಹಾಗೂ ಕೆಳಭಾಗದ ವಸ್ತ್ರವನ್ನು ಧರಿಸಿರುವನು. ಪೀಠಭಾಗದಲ್ಲಿ ಬಲಕ್ಕೆ ಚಿಕ್ಕಗಾತ್ರದಿಂದ ದೊಡ್ಡ ಗಾತ್ರದವರೆಗಿನ ಐದು ಗುಂಡುಗಳನ್ನು ಕಂಡರಿಸಿರುವರು. ಹಾಗೆಯೇ ಮೇಲೆ ಉಲ್ಲೇಖಿಸಿದಂತೆ ಸರ್ಪದ ಹೆಡೆಯಿರುವುದು. ವೃತ್ತದಾಕಾರದಲ್ಲಿ ಎಡಕ್ಕೆ ಸೂರ್ಯನನ್ನು ತೋರಿಸಲಾಗಿದೆ. ಒಟ್ಟಾರೆ ಶಿವ ಇಲ್ಲಿ ಸೌಮ್ಯ ಸ್ವರೂಪಿಯಾಗಿದ್ದಾನೆ.

೩.೧.೧೯: ಆಸೀನ ಶೈವ ದೇವತೆ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೯೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೯೦*೯೦ ಸೆ.ಮೀ ಇರುವ ಆಸೀನ ಶೈವ ದೇವತೆಯ ಶಿಲ್ಪವು ಶಿರವನ್ನು ಕಳೆದುಕೊಂಡಿದೆ. ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿರುವ ಶಿಲ್ಪದಲ್ಲಿ ಬಲಗೈಯಲ್ಲಿ ತ್ರಿಶೂಲ ಮತ್ತೊಂದು ಕೈಯಲ್ಲಿ ಖಡ್ಗವಿರುವುದನ್ನು ಗುರುತಿಸಬಹುದು. ಕುಳಿತ ಭಾವ ಭಂಗಿಯಲ್ಲಿರುವ ಶೈವದೇವತೆ ಆಭರಣ ಸಹಿತ ಸುಂದರತೆಯನ್ನು ಮೆರೆದಿದ್ದಾಳೆ ಈ ಶಿಲ್ಪವನ್ನು ಸ್ಪಷ್ಟವಾಗಿ ಗುರುತಿಸಲು ಆಗಿರುವುದಿಲ್ಲ ಕಾರಣ ಶಿಲ್ಪವು ತುಂಬಾ ಹಾಳಾಗಿರುತ್ತದೆ.

೩.೧..೨೦: ನಾಗಲಿಂಗ :

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೯೦ * ೮೪ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೯೦*೮೪ ಸೆಂ.ಮೀ. ಇರುವ ನಾಗಲಿಂಗ ಶಿಲ್ಪವು ಎಡೆ ಎತ್ತಿದ ಏಳುತಲೆಯ ಸರ್ಪವನ್ನು ಕಾಣಬಹುದು. ಅರ್ಧಭಾಗದಲ್ಲಿ ಶಿವಲಿಂಗವನ್ನು ತೋರಿಸಲಾಗಿದ್ದು, ಅದಕ್ಕೆ ಆಸರೆಯಾಗಿ ಸರ್ಪ ನಿಂತಿದೆ ಎಂಬಂತೆ ಭಾಸವಾಗುವ ಲಕ್ಷಣಗಳು ಇಲ್ಲಿ ಗೋಚರವಾಗಿವೆ. ಸಾಧಾರಣ ಕಪ್ಪು, ನೀಲಿ ಶಿಲೆಯಿಂದ ರಚನೆಯಾಗಿರುವ ಈ ಶಿಲ್ಪವು ಪರಿಪೂರ್ಣವಾಗಿ ಕಾಣಲಾರಂಭಿಸುತ್ತಿಲ್ಲ. ಇನ್ನೂ ರಚನೆಯಲ್ಲಿದ್ದಾಗಲೇ ನಿಂತುಹೋಗಿರುವ ಸಾಧ್ಯತೆಗಳಿರಬಹುದು ಎನ್ನುವ ಹಾಗೆ ಅಪರಿಪೂರ್ಣತೆಯ ಶಿಲ್ಪ ಎಂದರೆ ಬಹುಶಃ ತಪ್ಪಾಗಲಾರದು.

ಅಂಕಣದ ಮಧ್ಯಭಾಗದಲ್ಲಿರುವ ಶಿಲ್ಪಗಳು:

೩.೧. ೨೧: ಕೃಷ್ಣದೇವರಾಯ ಮತ್ತು ಶ್ರೀಮತಿ ತಿರುಮಲದೇವಿ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೧೨೦ * ೪೮ ಸೆಂ.ಮೀ.

೧೦೦ * ೪೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

ಕೃಷ್ಣದೇವರಾಯ (೧೨೦*೪೮,ಸೆಂ.ಮೀ) ಮತ್ತು ತಿರುಮಲದೇವಿ (೧೦೦*೪೦ ಸೆಂ.ಮೀ) ಶಿಲ್ಪಗಳನ್ನು ಅಕ್ಕಪಕ್ಕ ಜೋಡಿಸಲಾಗಿದ್ದು, ಕಪ್ಪು ಶಿಲೆಯಿಂದ ಸುಂದರವಾಗಿ ಕೆತ್ತಲಾಗಿದೆಯಾದರು ಈ ಇಬ್ಬರ ತಲೆಗಳು ಶಿಲ್ಪದಲ್ಲಿರುವುದಿಲ್ಲ. ರುಂಡವಿಲ್ಲದ ಮೂರ್ತಿಗಳಲ್ಲಿ ಎರಡು ಕೈ ಜೋಡಿಸಿ ಮುಗಿಯುತ್ತಿರುವಂತೆ ರಚಿಸಿದ್ದಾರೆ. ನುಣುಪಾದ ಸುಂದರ ಕಲ್ಲಿನಲ್ಲಿ ಅಷ್ಟೇ ಸೌಮ್ಯವಾಗಿ ಶಿಲ್ಪ ತಯಾರಾಗಿದೆ. ಶಿವ, ಪಾರ್ವತಿಯಾದಿಯಲ್ಲಿ ನಿಂತಿರುವ ಭಂಗಿಯನ್ನು ಕಾಣಬಹುದು. ಮೈತುಂಬಾ ಆಭರಣವನ್ನು ಧರಿಸಿರುವ ತಿರುಮಲದೇವಿ, ಅರೆನಗ್ನದಂತಿರುವ ಕೃಷ್ಣದೇವರಾಯ ಕುತ್ತಿಗೆಯಲ್ಲಿ ಆಭರಣಗಳನ್ನು ಧರಿಸಿದ್ದಾನೆ. ಅಸ್ಪಷ್ಟವಾದ ಈ ಶಿಲ್ಪಕ್ಕೆ ಶಿರಗಳಿದ್ದರೆ ಜೀವಂತ ಶಿಲ್ಪಗಳಾಗಿ ಮೆರೆಯುತ್ತಿದ್ದವು.

೩.೧. ೨೨: ನಂದಿ :

ದುಂಡಾಕಾರದಲ್ಲಿರುವ ಈ ನಂದಿ ಶಿಲ್ಪವು ವಿಜಯನಗರದ ಕಾಲದ್ದೇ ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟ ಶಿಲ್ಪವಾಗಿದ್ದು, ಶಿವನ ಆರಾಧನ ನಂದಿಯಾಗಿದೆ ನೋಡಲು ಸುಂದರವಾದ ನಂದಿಯು

ಕಪ್ಪು ವರ್ಣದಿಂದ ಕೂಡಿರುತ್ತದೆ. ಅಂತಹ ವಿಶೇಷತೆಯೇನು ಈ ಶಿಲ್ಪದಲ್ಲಿ ಕಾಣುವುದಿಲ್ಲವಾದರೂ ನೈಜತೆಗೆ ಹತ್ತಿರವಾಗಿದೆ.

೩.೧. ೨೩: ಶಿವಲಿಂಗ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೧೨೦ * ೭೦ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

೧೨೦*೭೦ಸೆಂ.ಮೀ ಇರುವ ಈ ಶಿವಲಿಂಗ ಶಿಲ್ಪವು ನಾಲ್ಕು ಹಂತಗಳಲ್ಲಿ ಮೆಟ್ಟಿಲುಗಳಂತೆ ರಚಿಸಲಾಗಿದೆ. ಮೇಲ್ಭಾಗದಲ್ಲಿ ದುಂಡನೆಯ ಲಿಂಗವನ್ನು ಜೋಡಿಸಲಾಗಿದೆ.

೩.೧. ೨೪: ಮಹಿಷಾಸುರ ಮರ್ದಿನಿ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್

ಕಾಲ : ೧೫-೧೬ನೇ ಶತಮಾನ

ಅಳತೆ : ೧೨೦ * ೧೦೦ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

ಈ ಶಿಲ್ಪದಲ್ಲಿ ಮರ್ದಿನಿ ಮದವೇರಿದ ಕೋಣದ ಮೇಲೆ ತನ್ನ ಎಡಗಾಲಿಟ್ಟಿದ್ದು, ರೌದ್ರವತಾರವಾಗಿ ಜಿಂಬಿಸಿರುವಂತೆ ಭಾಸವಾಗುತ್ತಿದೆ. ಈ ಶಿಲ್ಪವು ನಾಶಗೊಂಡಿರುತ್ತದೆ. ಕಪ್ಪು ಶಿಲೆಯಿಂದ ರಚಿಸಲ್ಪಟ್ಟ ಈ ಶಿಲ್ಪವು ನೈಜತೆಗೆ ಹತ್ತಿರವಾದಂತಿದೆ. ಕಾಳಿಯ ರೂಪವನ್ನು ತಾಳಿರುವಂತೆ ಮಹಿಶಾಸುರ ಮರ್ದಿನಿ ಗೋಚರಿಸುತ್ತಿದ್ದಾಳೆ.

೩.೧. ೨೫: ವಿರೂಪಾಕ್ಷ :

ಅಂಕಣ ಒಂದರಲ್ಲಿ ಒಂದು ತೃಟಿತಗೊಂಡ ಮೂರ್ತಿಯ ಶಿರಭಾಗವನ್ನು ಪ್ರದರ್ಶಿಸಲಾಗಿದೆ. ಇದು ಸರ್ಪವನ್ನು ತಲೆಯಲಂಕರಣೆಯ ಉಡುಗೆಯಾಗಿ ಸುತ್ತಿರುವ ಕೆತ್ತನೆಯನ್ನು ಕಾಣಬಹುದು. ಉದ್ದನೆಯ ಕರ್ಣಗಳು, ಅದರಲ್ಲಿ ವೃತ್ತ ಕುಂಡಲಗಳು ಹಾಗೂ ಮೇಲ್ಭಾಗದಲ್ಲಿ ಬುಗುಡೆಯಂತಹ ಆಭರಣವನ್ನು ಧರಿಸಲಾಗಿದೆ. ಸ್ಪಷ್ಟವಾಗಿ ಕಾಣುವ ತ್ರಿನೇತ್ರ ಈ ತ್ರಿನೇತ್ರದಲ್ಲಿಯೇ ಚಿಕ್ಕದಾಗಿ ತ್ರಿಪುಂಡ್ರದ ಕೆತ್ತನೆಯೂ ಇದೆ. ದಪ್ಪನೆಯ ಹುಬ್ಬುಗಳು, ಅಗಲವಾದ ನೇತ್ರಗಳಲ್ಲಿ ಒಂದು ನೇತ್ರವು ಚಿಕ್ಕದಾಗಿರುವುದನ್ನು ಗುರುತಿಸಬಹುದು.

ಬಹುಶಃ ಈ ಲಕ್ಷಣದಿಂದಲೇ ಇದಕ್ಕೆ ವಿರೂಪಾಕ್ಷ ಎಂದು ಕರೆದಿರಬಹುದು. ಉದ್ದನೆಯ ನಾಸಿಕ ದಪ್ಪವಿರುವ ತುಟಿಗಳು ಹಾಗೂ ಚಿಕ್ಕದಾದ ಕೋರೆಹಲ್ಲುಗಳು ಮತ್ತು ಕಂಠಾಭರಣಗಳನ್ನು ಕೆತ್ತಲಾಗಿದೆ.

ಛಿ.೧. ೨೬: ಮಹಿಷಾಸುರ ಮರ್ದಿನಿ :

ಬಳಸಿದ ಕಲ್ಲು : ಕೆಂಪು ಕಲ್ಲು

ಕಾಲ : ೧೪-೧೫ ನೇ ಶತಮಾನ

ಅಳತೆ : ೧೪೦ * ೯೫ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

ಈ ಶಿಲ್ಪವು ಶಕ್ತಿ ದೇವತೆಯ ಅವತಾರವಾಗಿದೆ. ಇದು ಪಾರ್ವತಿ ದೇವಿಯ ಉಗ್ರರೂಪವಾಗಿದೆ. ಈ ಶಿಲ್ಪವು ಒಂದು ಮುಖ ಮತ್ತು ಕೈ ಕಾಲುಗಳು ಹೊಂದಿರುತ್ತದೆ. ಮಹಷಿಮರ್ಧಿನಿ ಶಿಲ್ಪಕೆ ಎಂಟು ಕೈಗಳನ್ನು ಹೊಂದಿದ್ದು. ಕೋಣವನ್ನು ಮೆಟ್ಟಿ ನಿಂತು ತ್ರಿಶೂಲದಿಂದ ಘಾತಗೊಳಿಸುವಂತೆ ಕಲ್ಲಿನ ಶಿಲ್ಪವನ್ನು ಕೆತ್ತಿದ್ದಾರೆ. ಎಡಗೈಯಲ್ಲಿ ಬಿಲ್ಲು, ಕಠಾರಿ ಇವೆ. ಬಲಗೈಯಲ್ಲಿ ಖಡ್ಗ, ಬಾಣ, ಚಕ್ರವನ್ನು ಕಾಣಬಹುದು. ವಿಗ್ರಹದಲ್ಲಿ ಸೀರೆ ಕೈಕಾಲು ಕಡಗ ಹೊಂದಿದ್ದು, ವೈಜಯಂತಿಮಾಲೆ ಕಿರೀಟವನ್ನು ಧರಿಸಿದ್ದಾಳೆ.

ಛಿ.೧. ೨೭: ಶಕ್ತಿ ಗಣೇಶ :

ಬಳಸಿದ ಕಲ್ಲು : ಕಪ್ಪು ಕಲ್ಲು

ಕಾಲ : ೧೧-೧೨ ನೇ ಶತಮಾನ

ಅಳತೆ : ೧೫೦ * ೧೦೦ ಸೆಂ.ಮೀ.

ದೊರೆತ ಸ್ಥಳ : ಚಾಲುಕ್ಯರ ಸಾಮ್ರಾಜ್ಯ

ಶಕ್ತಿ ಗಣೇಶನ ಶಿಲ್ಪವು ಪ್ರಾಚೀನ ಮೂರ್ತಿಯಾಗಿದ್ದು, ಅನೇಕ ಉಬ್ಬು ತಗ್ಗುಗಳಿಂದ ಕೂಡಿದೆ. ಎಡಗಾಲನ್ನು ಸಾಮಾನ್ಯವಾಗಿ ಮಡಚಿ ಬಲಗಾಲನ್ನು ಮೇಲಕ್ಕೆ ಮಡಿಚಿ ಸುಖಾಸನದಲ್ಲಿರುವ ಈ ಮೂರ್ತಿಯು ಚತುರ್ಭುಜ ದಾರಿಯಾಗಿದ್ದು, ಕರಂಡ ಮುಕುಠ ದಾರಿಯಾಗಿದೆ. ಗಣೇಶನ ಮೇಲೆ ಬಲಗೈಯಲ್ಲಿ ಅಂಕುಶವಿದೆ. ಮತ್ತು ಮೇಲಿನ ಎಡಗೈಯ ಮಡಿಚಿದೆ. ಕೆಳ ಬಲಗೈಯನ್ನು ಕೆಳಗೆ ಬಾಗಿಸಿ ಮಡಿಚಿದ ರೀತಿಯಲ್ಲಿದ್ದು ಎಡಗೈಯಲ್ಲಿ ಮೋದಕ ಪಾತ್ರೆ ತಾಗಿ ಸೊಂಡಿಲು ಇದೆ. ಎದೆಯಲ್ಲಿ ಉರಗ ಬಂಧ, ಕೈಕಡಗ ಮತ್ತು ಕಾಲುಗಳಲ್ಲಿ ಕಾಲುಕಡಗವಿದೆ. ಸುತ್ತಲು ಪ್ರವಾವಳಿ, ಇಲ್ಲಿ

ಪೀಠದ ಮೇಲೆ ಕುಳಿತಿರುವ ಅಲಂಕಾರವಾದ ಮೂರ್ತಿಯಾಗಿದ್ದು. ಇದು ಚಾಲುಕ್ಯರ ಕಾಲದ ಮೂರ್ತಿಎಂದು ಹೇಳಬಹುದಾಗಿದೆ.

ಈ ಅಂಕಣದ ತುಂಬಾ ಶೈವ ದೇವ ದೇವತೆಗಳೇ ತುಂಬಿರುವಾಗ ಗಣೇಶನ ಮೂರ್ತಿಗಳು ತುಂಬಾ ವಿರಳ ಅಂತಾನೇ ಹೇಳಬಹುದು. ಇಲ್ಲಿರುವ ಶಕ್ತಿ ಗಣೇಶನೂ ಕೂಡ ತನ್ನ ಸೊಂಡಿಲು, ಕೈ ಕಾಲುಗಳನ್ನು ತುಂಡರಿಸಿಕೊಂಡಿದ್ದಾನೆ ತುಂಬಾ ಸೂಕ್ಷ್ಮವಾಗಿ ಗಣೇಶನನ್ನು ಕೆತ್ತಲ್ಪಟ್ಟಿದೆಯಾದರೂ ವಿವರವಾದ ಕೆತ್ತನೆಯಿಲ್ಲ. ಶಿವ, ಪಾರ್ವತಿಯರ ಮಗನ ಸೌಂದರ್ಯವನ್ನು ಈ ಶಿಲ್ಪದಿಂದಲೂ ಅರಿಯಬಹುದು. ೧೫೦ * ೧೦೦ ಸೆಂ.ಮೀ ಇರುವ ಈ ಶಿಲ್ಪವು ಕಪ್ಪು ಶಿಲೆಯಿಂದ ರಚನೆ ಮಾಡಲಾಗಿದೆ. ಸೊಂಡಿಲು ಮುರಿದಿದ್ದು, ಅರ್ಧ ಸೊಂಡಿಲು ಉಳಿದಿದೆ ಆದರೆ ತಲೆಯ ಕಿರೀಟ, ವಿನ್ಯಾಸ, ಕೈಕಾಲುಗಳಲ್ಲಿರುವ ಆಭರಣ, ಎದೆಯಲ್ಲಿರುವ ಆಭರಣ, ಕೈಯಲ್ಲಿಡಿದಿರುವ ದೇವತೆಗಳು, ಕಾಲು, ಕಾಲ್ಗಡಗ, ಕೈಯಲ್ಲಿರುವ ಅಸ್ತ್ರಗಳನ್ನು ನೋಡುತ್ತಿದ್ದರೆ ಅಬ್ಬಾ ಇದು ಶಕ್ತಿ ಗಣೇಶ ಎಂದೇ ಕರೆಯಬಹುದು.

ಅಂಕಣ: ೩. ೨: (ವೈಷ್ಣವ)

ವೈಷ್ಣವ ಧರ್ಮ :

ವಿಷ್ಣು ತ್ರಿಮೂರ್ತಿಗಳಲ್ಲಿ ಒಬ್ಬನಾಗಿದ್ದು, ಸಕಲ ಲೋಕಗಳ ಪಾಲಕ ಎಂದು ಹಿಂದೂ ಧರ್ಮ ನಂಬುತ್ತದೆ. ಭಗವದ್ಗೀತೆಯಲ್ಲಿ ವರ್ಣಿಸಿದಂತೆ 'ವಿಶ್ವರೂಪಿ'. ನಾರಾಯಣ ಎಂದೂ ಕರೆಯುತ್ತಾರೆ. ಧರ್ಮ ಸಂಸ್ಥಾಪನೆಗಾಗಿ ದಶಾವತಾರ ತಾಳಿ ಭೂಲೋಕವನ್ನು ರಕ್ಷಿಸಿದಾತ ಎಂದು ಪುರಾಣಗಳು ಕೊಂಡಾಡುತ್ತವೆ. ವಿಷ್ಣುವನ್ನು ಲಕ್ಮಿನಾರಾಯಣ, ಹರಿ, ಜನಾರ್ದನ, ಮಾಧವ, ಕೇಶವ, ಅಚ್ಯುತ, ಶ್ರೀನಿವಾಸ ಎಂದೂ ಕರೆಯುತ್ತಾರೆ. ವೈಷ್ಣವ ಪಂಥ, ಶೈವ ಪಂಥ, ಶಾಕ್ತ ಪಂಥ ಮತ್ತು ಸ್ಮಾರ್ತ ಸಂಪ್ರದಾಯ ಹಿಂದೂ ಧರ್ಮದ ಮುಖ್ಯ ಪಂಥಗಳು. ಈ ನಾಲ್ಕು ಪಂಥಗಳು ಕ್ರಿಯಾವಿಧಿಗಳು, ನಂಬಿಕೆಗಳು, ಮತ್ತು ಸಂಪ್ರದಾಯಗಳನ್ನು ಹಂಚಿಕೊಳ್ಳಬಹುದು. ಆದರೆ ಪ್ರತಿ ಪಂಥವು ಜೀವನದ ಪರಮ ಗುರಿಯಾದ ಆತ್ಮಜ್ಞಾನವನ್ನು ಹೇಗೆ ಸಾಧಿಸಬೇಕು ಎಂಬುದಕ್ಕೆ ಒಂದು ಬೇರೆ ಜೀವನಕ್ರಮವನ್ನು ಹೊಂದಿದೆ. ವೈಷ್ಣವ ಪಂಥವು ಶೈವ ಪಂಥ, ಸ್ಮಾರ್ತ ಸಂಪ್ರದಾಯ, ಮತ್ತು ಶಾಕ್ತ ಪಂಥದ ಜೊತೆಗೆ ಹಿಂದೂ ಧರ್ಮದ ಪ್ರಮುಖ ಶಾಖೆಗಳ ಪೈಕಿ ಒಂದು. ಅದು ಪರಮಶ್ರೇಷ್ಠ ಭಗವಂತ ವಿಷ್ಣುವಿನ ಪೂಜ್ಯ ಭಾವನೆಯ ಮೇಲೆ ಕೇಂದ್ರೀಕೃತವಾಗಿದೆ. ವೈಷ್ಣವರು, ಅಥವಾ ವಿಷ್ಣುವಿನ ಅನುಯಾಯಿಗಳು, ಭಗವಂತ ವಿಷ್ಣು ಮತ್ತು ಅವನ ದಶಾವತಾರಗಳಿಗೆ ಪ್ರಾಮುಖ್ಯ ಕೊಡುವ, ಪ್ರತ್ಯೇಕವಾಗಿಸಲ್ಪಟ್ಟ ಏಕದೇವತಾವಾದವನ್ನು ಏಕದೇವನಿಷ್ಠೆ ಪ್ರಚಾರಮಾಡುವ ಜೀವನದ ಒಂದು ದಾರಿಯಲ್ಲಿ ನಡೆಯುತ್ತಾರೆ.

ವೈಷ್ಣವ ಪಂಥವೂ ಕರ್ನಾಟಕದ ಪ್ರಾಚೀನ ಸಂಪ್ರದಾಯ. ಕದಂಬರ ಹಲ್ಮಿಡಿ, ಗುಡ್ನಾಪುರ ಶಾಸನಗಳು ವಿಷ್ಣು ಸ್ತುತಿಯಿಂದ ಆರಂಭವಾಗುತ್ತವೆ. ಆರಂಭದಲ್ಲಿ ಬಾದಾಮಿ ಚಾಲುಕ್ಯರೂ, ರಾಷ್ಟ್ರಕೂಟರೂ ವೈಷ್ಣವರಗಿದ್ದು ಬಾದಾಮಿಯ ವೈಷ್ಣವ ಗುಹೆಯೂ ಪ್ರಾಚೀನ ವೈಷ್ಣವಾಲಯ. ಕರ್ನಾಟಕದಲ್ಲಿ ರಾಮಾನುಜ ಮತ್ತು ಮಾಧ್ವರ ಬೋಧನೆಗಳಿಂದ ವೈಷ್ಣವ ಸಂಪ್ರದಾಯಕ್ಕೆ ವಿಶೇಷ ಚಾಲನೆ ಸಿಕ್ಕಿತು. ರಾಮಾನುಜರು ವಿಷ್ಣುವಿಗೆ ಭಕ್ತಿ ಮತ್ತು ಶರಣಾಗತಿಯನ್ನು ಭೋಧಿಸಿದರು. ವಿಷ್ಣುವಿನ ಪತ್ನಿ ಲಕ್ಷ್ಮಿ ದೈವಾನುಗ್ರಹದ ಸಂಕೇತ. ಹೀಗಾಗಿ ಅವರ ಪಂಥಕ್ಕೆ ಶ್ರೀವೈಷ್ಣವ ಪಂಥ ಎನ್ನುತ್ತಾರೆ. ಲಕ್ಷ್ಮಿಯ ಕೃಪೆಗೆ ಪಾತ್ರರಾಗಿ ವಿಷ್ಣುವಿನ ಅನುಗ್ರಹ ಪಡೆಯಬೇಕು ಎಂಬುದು ರಾಮಾನುಜರ ತತ್ತ್ವ. ಅವರ ತತ್ತ್ವಜ್ಞಾನವು ಶಕ್ತಿವಿಶಿಷ್ಟಾದ್ವೈತವೆಂದು ಪ್ರಸಿದ್ಧವಾಯಿತು. ಹೊಯ್ಸಳ ವಿಷ್ಣುವರ್ಧನನ ಮೇಲೆ ರಾಮಾನುಜರ ವಿಶೇಷ ಪ್ರಭಾವವಿದೆ. ಅವರು ದಲಿತರನ್ನು 'ತಿರುಕುಳತ್ತರ್' ಎಂದು ಕರೆದು ತಮ್ಮ ಸಂಪ್ರದಾಯದಲ್ಲಿ ಸೇರಿಸಿಕೊಂಡರು. ಮೇಲುಕೋಟೆ ದೇವಾಲಯವನ್ನು ಅರಸರೂ ಮೈಸೂರಿನ ಚಿಕ್ಕದೇವರಾಯರೂ ಶ್ರೀವೈಷ್ಣವರು. ಕನ್ನಡ ಕವಿಗಳಾದ ತಿರುಮಲಾರ್ಯ ಸಂಚಿಯ ಹೊನ್ನಮ್ಮ ಶ್ರೀವೈಷ್ಣವರು. ಉಡುಪಿ ಬಳಿ ಜನಿಸಿದ ಆಚಾರ್ಯ ಮಧ್ವರು ವಿಷ್ಣುವೇ ಪರದೈವವೆಂಬ ತತ್ತ್ವ ಬೋಧಿಸಿದರು. ಅನ್ಯ ದೇವರ ಆರಾಧನೆಯನ್ನು ಅವರು ವಿರೋಧಿಸಲಿಲ್ಲ. ಜೀವಾತ್ಮನೂ ಪರಮಾತ್ಮನೂ ಬೇರೆಬೇರೆ, ಭಕ್ತಿಯಿಂದ ಮನುಷ್ಯ ಆತ್ಮೋದ್ಧಾರ ಮಾಡಬೇಕು, ಎಂದು ಅವರು ಬೋಧಿಸಿದರು. ಉತ್ತರ ಭಾರತದ ಭಕ್ತಿಪಂಥ ಇವರ ಮೇಲೆ ರಾಮಾನುಜ ಪಂಥ ಮತ್ತು ಬಂಗಾಳದ ಚೈತನ್ಯರ ಭಕ್ತಿಪಂಥಗಳ ಮೇಲೆ ಮಧ್ವರ ಪ್ರಭಾವ ವಿಶೇಷವಾಗಿದೆ.[೧೧]

ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು ಹಾಗೂ ಆತನ ಅವತಾರಗಳು ಪ್ರತಿರೂಪಗಳು. ಆತನ ಅಂಶಗಳುಳ್ಳ ರೂಪಗಳು ಇತ್ಯಾದಿಗಳನ್ನು ಹಾಗೂ ಅದರೊಂದಿಗೆ ಆತನ ಪತ್ನಿ ಪರಿವಾರ ದೇವತೆ, ವಾಹನ ದೇವತೆ ಇತ್ಯಾದಿಗಳೆಲ್ಲಾವನ್ನು ಸೇರಿಸಿ ವೈಷ್ಣವ ಪಂಥವೆಂದು ಕರೆಯಬಹುದು. ಈ ಪಂಥ ಅಥವಾ ವೈಷ್ಣವ ರೂಪಗಳು ವೇದಗಳ ಕಾಲದಿಂದಲೇ ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ರಾಷ್ಟ್ರಕೂಟರು, ಬಾದಾಮಿ ಹಾಗೂ ಕಲ್ಯಾಣಿ ಚಾಳುಕ್ಯರು ವೈಷ್ಣವ ಪರವಾದ ಕೃತಿ ರಚನೆಗಳಿಗೆ ದೇವಾಲಯಗಳಿಗೆ ಪ್ರೋತ್ಸಾಹ ನೀಡಿದರು.

೩.೨.೧ : ವೈಷ್ಣವ ಶಿಲ್ಪಗಳು :

ವಿಷ್ಣುವು ಹಿಂದೂ ಧರ್ಮದ ದೇವತೆಗಳಾದ ತ್ರಿಮೂರ್ತಿಗಳಲ್ಲಿ ಎರಡನೆಯವನು. ಬ್ರಹ್ಮ ಸೃಷ್ಟಿಕರ್ತ, ವಿಷ್ಣು ರಕ್ಷಕ, ಶಿವ ಲಯಕರ್ತ ಅದರಲ್ಲಿ ವಿಷ್ಣುವು ಜಗತ್ತಿನ ರಕ್ಷಣಾ ಕಾರ್ಯವನ್ನು ಮಾಡುವವನು.[೧೨] ವಿಷ್ಣುವನ್ನು ದೇವತೆಯ ಸಾಲಿನಲ್ಲಿ ಸೇರಿಸಲಾಗುತ್ತಿದೆ. ವೇದಗಳಾದ ಋಗ್ವೇದ, ಯಜುರ್ವೇದ, ಅಥರ್ವಣವೇದ ಮತ್ತು ಸಾಮವೇದಗಳಲ್ಲಿ ವಿಷ್ಣುವನ್ನು ಹೆಸರಿಸುವುದು ಕಂಡುಬರುತ್ತದೆ. ವೈದಿಕ ವಿಷ್ಣುವನ್ನು ಆದಿತ್ಯನೆಂದು ಕರೆಯಲಾಗಿದೆ. ಶತಪಥ ಬ್ರಾಹ್ಮಣದಲ್ಲಿ ವಿಷ್ಣುವನ್ನು ಉನ್ನತ ಮಟ್ಟದ ದೇವತೆಯೆಂದು ಗುರುತಿಸಲಾಗಿದೆ.[೧೩]

ಶುಕಪಾಣಿಯ[೧೪] ಪ್ರಕಾರ ವಿಷ್ಣುವನ್ನು ಅಗ್ನಿಯ ಮೂರು ರೂಪಗಳೊಂದಿಗೆ ಹೋಲಿಸುತ್ತಾರೆ. ಅವುಗಳೆಂದರೆ ಮಿಂಚು, ಸೂರ್ಯನ ಬೆಳಕು ಮತ್ತು ಅಗ್ನಿ ಈ ರೀತಿಯಾಗಿರುವ ಆಕಾಶ ತತ್ವದೊಂದಿಗೆ ಸಮೀಕರಿಸಲಾಗುತ್ತದೆ. ಇನ್ನೊಬ್ಬ ವೇದ ವ್ಯಾಖ್ಯಾನಕಾರನಾದ 'ಅರನ್‌ವಬಾ' ಅವರ ಪ್ರಕಾರ ವಿಷ್ಣುವಿನ ಮೂರು ಪಾದಗಳು ಒಂದು ಅಗ್ನಿ, ಎರಡು ಬೆಳಕು, ಮೂರು ಸೂರ್ಯ ವಿಷ್ಣುವನ್ನು ನಾರದನೆಂದು ಕರೆಯಲಾಗುವುದು. ವಾರದ ಒಂದು ದಿನವನ್ನು ಭಾನುವಾರ ಅಂದರೆ ಸೂರ್ಯನ ಹೆಸರಿನಿಂದ ಕರೆಯಲಾಗುತ್ತದೆ. ವೇದಗಳು ಮತ್ತು ಬ್ರಾಹ್ಮಣಕಗಳು ಪ್ರಮುಖವಾದಂತಹ ಆಕಾರಗಳಾಗಿವೆ. ವಿಷ್ಣು ದೇವತೆಯ ಬಗ್ಗೆ ವಿವರಣೆಯನ್ನು ನೀಡುತ್ತದೆ. ಇದೇ ಕಾಲದಲ್ಲಿ ವೈಷ್ಣವ ಧರ್ಮದ ಬೆಳವಣಿಗೆಯನ್ನು ವಾಸುದೇವನೆಂದು ಮಹಾಭಾರತದಲ್ಲಿ ಉಲ್ಲೇಖಿಸಲಾಗುತ್ತದೆ.[೧೫]

ವಾಸುದೇವನ ಆರಾಧನೆಯು ಭಾಗವತ, ಸಂತತ್ವ, ಏಕಾಂತಿ ಮತ್ತು ಪಾಂಚರಾತ್ರಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಪ್ರಾಚೀನವಾದ ವೈಷ್ಣವ ಧರ್ಮವು ಮಹಾಭಾರತದ ನಾರಾಣೀಯ ಭಾಗದಲ್ಲಿ ವರ್ಣಿಸಲಾಗಿದೆ. ವಿಷ್ಣುವನ್ನು ಶೇಷಶಾಯಿ ರೂಪದಲ್ಲಿ ಬೆಳವಣಿಗೆಯನ್ನು ಹೊಂದಿದ್ದನ್ನು ಕಾಣಬಹುದು. ಈ ರೂಪವು ಸೃಷ್ಟಿಯ ಪ್ರತೀಕಾರವಾಗಿದೆ. ಶೇಷನು, ಶಾಶ್ವತ ತತ್ವದ ಸಂಕೇತವಾಗಿದೆ. ಶೇಷಶಾಯಿಯು ನೀರಿನ ಮಧ್ಯದಲ್ಲಿ ಮಲಗುತ್ತಾನೆ. ವಿಷ್ಣು ನಾಲ್ಕು ರೂಪಯಿಗಳನ್ನು ಹೊಂದಿರುತ್ತಾನೆ. ಅವುಗಳೆಂದರೆ ನರ, ನಾರಾಯಣ, ಕೃಷ್ಣ ಮತ್ತು ಹರಿ.[೧೬] ಪುರಾಣ ಮತ್ತು ಇತಿಹಾಸ ಕಾಲದಲ್ಲಿ ವಿಷ್ಣುವಿಗೆ ಶ್ರೇಷ್ಠ ಸ್ಥಾನವನ್ನು ಕಲ್ಪಿಸಲಾಗಿತ್ತು. ವಿಷ್ಣು ರಕ್ಷಕ ದೇವತೆಯಾಗಿದ್ದಾನೆ. ಹಿಂದೂ ದೇವತೆಗಳ ಸಾಲಿನಲ್ಲಿ, ಶಿಲ್ಪಗಳಲ್ಲಿ ವಿಷ್ಣುವನ್ನು ವಿವಿಧ ರೂಪಗಳಲ್ಲಿ ನಿರ್ಮಿಸಿ ಪೂಜಿಸುವ ಪದ್ಧತಿಯೂ ಈ ಕಾಲಾವಧಿಯಲ್ಲಿ ಬೆಳೆದುಬಂದಿತು. ಮಹಾಭಾರತದಲ್ಲಿ ಒಟ್ಟು ೧೨ ಜನ ಆದಿತ್ಯರನ್ನು ಹೆಸರಿಸಲಾಗಿದೆ.[೧೭] ಉಪಪುರಾಣಗಳು ಕೂಡ ವಿಷ್ಣುವಿನ ಪಾರಮ್ಯವನ್ನು ತಿಳಿಸುವಲ್ಲಿ ಸಹಾಯಕವಾಗುತ್ತವೆ. ಪುರಾಣಗಳಲ್ಲಿ ವಿಷ್ಣು ಧರ್ಮಪುರಾಣ ಮತ್ತು ವಿಷ್ಣುಧರ್ಮೋತ್ತರ ಪುರಾಣ, ನರಸಿಂಹ ಪುರಾಣ ಮತ್ತು ಕಲ್ಕಿ ಪುರಾಣ ವಿಷ್ಣುವಿನ ವಿವರಣೆಯನ್ನು ನೀಡುತ್ತದೆ. ಪ್ರಮುಖವಾದ ಪುರಾಣವಾದ ವಿಷ್ಣುಧರ್ಮೋತ್ತರ ಪುರಾಣವು ಕಲೆ ಮತ್ತು ಪ್ರತಿಮಾ ಲಕ್ಷಣಗಳನ್ನು ಅರಿಯಲು ಇದು ವಿಪುಲ ಮಾಹಿತಿಯನ್ನು ನೀಡುತ್ತದೆ. ಉಳಿದ ಪುರಾಣಗಳು ದಂತಕತೆಗಳ ಜೊತೆಗೆ ಪೌರಾಣಿಕ ಕಥೆಗಳನ್ನು ವಿಷ್ಣುವಿನ ವಿವಿಧ ಅವತಾರ ರೂಪಗಳ ಜೊತೆಗೆ ಹೆಣೆದುಕೊಂಡಿವೆ. ಕೆಲವು ಕಥೆಗಳು ವಿಷ್ಣುವಿನ ಪ್ರತಿಮಾ ಲಕ್ಷಣಗಳ ಪರಿಕಲ್ಪನೆಯನ್ನು ವಿವರಿಸುತ್ತವೆ.[೧೮] ಆಗಮಗಳಾದ ವೈಖಾಸನಾಗಮ, ಪಾಂಚರಾತ್ರ ಮತ್ತು ಮಧ್ವಾಚಾರ್ಯರ ತಂತ್ರಸಾರವು ವಿಷ್ಣುವಿನ ಪ್ರತಿಮಾ ಲಕ್ಷಣಗಳ ಸಂಪೂರ್ಣವಾದ ವಿವರಣೆಯನ್ನು ನೀಡುತ್ತವೆ. ಪಾಂಚರಾತ್ರಗಮವು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದೆ.

ಶ್ರೀವೈಷ್ಣವ ಪಂಥದ ರಾಮಾನುಜಾಚಾರ್ಯರು ಪಾಂಚರಾತ್ರಗಮನದಲ್ಲಿ ೧೦೮ ಸಂಹಿತೆಗಳಿವೆ ಎಂದು ತಿಳಿಸಿದ್ದಾರೆ. ಅದೇರೀತಿಯಾಗಿ ವೇದಾಂತ ದೇಶಿಕರ ಕಾಲಕ್ಕೆ ಕೆಲವು ಸಂಹಿತೆಗಳ ಮಾಹಿತಿಯೂ ದೊರೆಯಲಿಲ್ಲ. ವೈಖಾಸನಾಗಮವು ಪಾಂಚರಾತ್ರಗಮಕ್ಕಿಂತ ಹಳೆಯದಾದ ಆಗಮವಾಗಿದೆ. ವಿಷ್ಣುಧರ್ಮೋತ್ತರ ಪುರಾಣವು[೧೯] ವಿಷ್ಣು ಶಿಲ್ಪಗಳ ಬಗ್ಗೆ ವಿವರಣೆಯನ್ನು ನೀಡುವ ಪ್ರಮುಖ ಆಕರವಾಗಿದೆ. ಸಾಮಾನ್ಯವಾಗಿ ವಿಷ್ಣುವನ್ನು ಮೂರು ಭಂಗಿಗಳಲ್ಲಿ ತೋರಿಸಲಾಗುತ್ತದೆ.

೩.೨.೧.೧: ಸ್ಥಾನಿಕ ಮೂರ್ತಿ

೩.೨.೧.೨: ಆಸೀನ ಮೂರ್ತಿ

೩.೨.೧.೩: ಶಯನ ಮೂರ್ತಿ

೩.೨.೧.೧: **ಸ್ಥಾನಿಕ ಮೂರ್ತಿ :** ಶಯನ ರೂಪದಲ್ಲಿ ನಿಂತಿರುವ ಮೂರ್ತಿಯನ್ನು ಸ್ಥಾನಿಕ ಮೂರ್ತಿ ಎಂದು ಕರೆಯಲಾಗುವುದು.

೩.೨.೧.೨: **ಆಸೀನ ಮೂರ್ತಿ :** ಕುಳಿತಿರುವ ಮೂರ್ತಿಯನ್ನು ಆಸೀನ ಮೂರ್ತಿ ಎಂದು ಕರೆಯಲಾಗುವುದು.

೩.೧.೩: **ಶಯನ ಮೂರ್ತಿ :** ಮಲಗಿರುವ ಮೂರ್ತಿಯನ್ನು ಶಯನ ಮೂರ್ತಿ ಎಂದು ಕರೆಯಲಾಗಿದೆ.

ಈ ಮೂರ್ತಿಗಳಲ್ಲಿ ಮೂರು ಕ್ರಿಯೆಗೆ ಅನುಗುಣವಾಗಿ ವೀರಭೋಗ, ಯೋಗ ಮತ್ತು ಅಭಿಚಾರಿಕಾ ಮೂರ್ತಿಗಳೆಂದು ವರ್ಗೀಕರಿಸಲಾಗಿದೆ. ಮತ್ತೆ ಇದರಲ್ಲಿ ಉತ್ತಮ, ಮಧ್ಯಮ, ಅಧಮ ಎಂಬ ಮೂರ್ತಿಗಳನ್ನು ಗುರುತಿಸಬಹುದು. ಈ ವರ್ಗೀಕರಣ ಹೆಚ್ಚಾಗಿ ಗರ್ಭಗೃಹದಲ್ಲಿರುವ ಮೂರ್ತಿಗಳಿಗೆ ಅನ್ವಯಿಸುತ್ತದೆ.

ಸ್ಥಾನಿಕ ಭಂಗಿ :

ಬಾಗುವುದರಿಂದುಂಟಾಗುವ ದೇಹದ ನಿಲುವನ್ನು ಭಂಗಿ ಎನ್ನುವರು. ದೇಹದ ಅಂಗಾಗಳು ನೇರವಾಗಿದ್ದು, ಸಮಸ್ಥಿತಿಯಲ್ಲಿ ದೃಢವಾಗಿ ನಿಂತ ನಿಲುವಿಗೆ ಸಮಭಂಗಿ ಎಂದು ಹೆಸರು. ದೇಹದ ಯಾವುದಾದರೂ ಒಂದು ಭಾಗವು ನಸುಭಾಗಿದ್ದರೆ ದ್ವಿಭಂಗಿಯಲ್ಲಿರುತ್ತವೆ. ದೇಹದಲ್ಲಿ ತಲೆ, ನಡು ಮತ್ತು ಜನನಗಳು ನೇರವಾಗಿರದೇ ಮೂರು ಕಡೆ ಭಾಗಿದ್ದರೆ ತ್ರಿಭಂಗಿ ಎನ್ನಿಸುವುದು.[೨೦] ಉದಾ: ವೇಣುಗೋಪಾಲ ಶಿಲ್ಪ, ಅದೇ,

ದೇಹದ ಅನೇಕ ಭಾಗಗಳು ಹಲವೆಡೆ ಬಾಗಿದ್ದು, ವಿಲಕ್ಷಣವಾದ ಭಂಗಿಯನ್ನು ತೋರಿದರೆ ಅತಿಭಂಗಿ ಎನಿಸುತ್ತದೆ. ದೇಹವು ನೇರವಾಗಿದ್ದು ಬಲಗಾಲನ್ನು ಮುಂಚಾಚಿ ಸ್ವಲ್ಪ ಮುಂಬಾಗಿ ನಿಂತಿದ್ದರೆ ಅದನ್ನು ಆಲೀಡಭಂಗಿ ಎನ್ನುವರು. ವೀರಭದ್ರ, ತ್ರಿಪುರಾಂತಕ ಕೆಲವು ಹನುಮಂತನ ಬಿಂಬಗಳು ಈ

ಭಂಗಿಯಲ್ಲಿರುವುದನ್ನು ಕಾಣಬಹುದು. ದೇಹವು ನೇರವಾಗಿದ್ದು, ಎಡಗಾಲನ್ನು ಮುಂಚಾಚಿ ನಿಂತ ಭಂಗಿಗೆ ಪ್ರತ್ಯಾಲೀಡ ಎಂದು ಕರೆಯುವರು. ಕೆಲವು ವೀರಗಲ್ಲು ಶಿಲ್ಪಗಳನ್ನು ವೀರರ ಬಿಂಬದಲ್ಲಿ ಕಾಣಬಹುದು.

ಆಸೀನ ಭಂಗಿ :

ಸಾಮಾನ್ಯವಾಗಿ ಈ ಭಂಗಿಯಲ್ಲಿನ ಶಿಲ್ಪಗಳು ಕುಳಿತ ಭಂಗಿಯಲ್ಲಿರುತ್ತವೆ. ಯೋಗಶಾಸ್ತ್ರವು ಧ್ಯಾನ ಮತ್ತು ಸಮಾಧಿಯನ್ನು ಸಾಧಿಸಲು ಕುಳಿತುಕೊಳ್ಳುವ ಭಂಗಿಯನ್ನು ತಿಳಿಸಿದೆ. ಇದನ್ನು ಆಸನಗಳೆನ್ನುವರು. ಶಿಲ್ಪಗಳಲ್ಲಿ ಕೆಲವು ಆಸನಗಳನ್ನು ಕೆತ್ತಲಾಗಿದ್ದು, ಇವು ಆ ಮೂರ್ತಿಯ ಮನೋಭಾವವನ್ನು ಅರಿಯುವಲ್ಲಿ ನೆರವಾಗುತ್ತವೆ. ಶಿಲ್ಪಗಳಲ್ಲಿ ಸಾಮಾನ್ಯವಾಗಿ ಪದ್ಮಾಸನ, ಸಿದ್ಧಾಸನ, ಯೋಗಾಸನ, ವೀರಾಸನ, ಶಯಾಸನ ಮತ್ತು ಸುಖಾಸನಗಳಲ್ಲಿರುವಂತೆ ಬಿಡಿಸಿರುವುದನ್ನು ಕಾಣುತ್ತೇವೆ.

ಪದ್ಮಾಸನ ಭಂಗಿ :

ಈ ಭಂಗಿಯಲ್ಲಿ ಕಾಲುಗಳನ್ನು ಮಡಿಸಿ ಎರಡು ಪಾದಗಳು ತೊಡೆಗಳ ಮೇಲೆ ವಿರಮಿಸುವಂತೆ ಕುಳಿತ ಭಂಗಿಗೆ ಪದ್ಮಾಸನ ಭಂಗಿ ಎನ್ನುವರು. ಒಂದು ಪಾದ ತೊಡೆಯ ಮೇಲಿದ್ದು, ಇನ್ನೊಂದು ಪೀಠದ ಮೇಲಿದ್ದರೆ ಇದು ಸಿದ್ಧಾಸನ, ಮಧ್ಯಯುಗೀನ ಕಾಲದ ಕುಳಿತ ಬುದ್ಧ ಮತ್ತು ತೀರ್ಥಂಕರ ಶಿಲ್ಪಗಳಲ್ಲಿ ಇದನ್ನು ಕಾಣಬಹುದು. ಪದ್ಮಾಸನ ಭಂಗಿಯಲ್ಲಿ ಕುಳಿತು, ಕೈಗಳು ಯೋಗ ಮುದ್ರೆಯಲ್ಲಿದ್ದರೆ ಯೋಗಾಸನವೆನಿಸುವುದು.[೨೧] ಸುಖಾಸನ ಭಂಗಿ ಸಾಮಾನ್ಯವಾಗಿ ಎಡಗಾಲನ್ನು ಪೀಠದ ಮೇಲಿಟ್ಟು ಬಲಮಂಡಿಯನ್ನು ಎತ್ತರಿಸಿ ಕುಳಿತುಕೊಳ್ಳುವುದು ಸುಖಾಸನ ಭಂಗಿಯಾಗಿದೆ. ಇಲ್ಲಿ ಬಲತೋಳು ಮಂಡಿಯನ್ನಾಧರಿಸುತ್ತದೆ. ಉದಾಹರಣೆಗೆ: ಸುಖಾಸೀನ ವಿಷ್ಣು. ಶಯನ ಭಂಗಿಯಲ್ಲಿ ವಿಷ್ಣುವಿನ ಶಿಲ್ಪಗಳನ್ನು ಕೆತ್ತಿರಲಾಗುತ್ತದೆ. ಆದಿಶೇಷನ ಮಂಚದ ಮೇಲೆ ದೇಹವನ್ನೊರಗಿಸಿ ಮಲಗಿರುವ ಭಂಗಿಗೆ ಶಯನಾಸನವೆನ್ನುವರು.

ಯಾನಕ ಭಂಗಿ ಈ ಭಂಗಿಯಲ್ಲಿ ವಿಷ್ಣುವಿನ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಗರುಡನ ಮೇಲೆ ವಿಷ್ಣು ಮತ್ತು ಅವನ ಪತ್ನಿಯು ಗರುಡ ಮೇಲೆ ಕುಳಿತಿರುವ ಭಂಗಿಯನ್ನು ಯಾನಕ ಭಂಗಿ ಎಂದು ಕರೆಯುವರು.[೨೨] ಮೂರ್ತಿಶಿಲ್ಪದಲ್ಲಿ ಗಮನಿಸಬೇಕಾದ ಮುಖ್ಯವಾದ ವಿವರಗಳು ಮೂರು ಅವುಗಳೆಂದರೆ ಭಂಗಿ, ಮುದ್ರೆ ಮತ್ತು ಆಯುಧಗಳು. ದೇವಾಲಯದ ಮೂಲ ಭೇದಗಳಲ್ಲಿ ಬಿಂಬದ ಸ್ಥಿತಿಯನ್ನು ಗಮನಿಸಿ ಸ್ಥಾನಿಕ, ಆಸೀನ ಮತ್ತು ಶಯನ ಬಿಂಬಗಳೆಂದು ಮೂರು ಬಗೆಯಗಳನ್ನು ಗುರುತಿಸಲಾಗಿದೆ. ಈ ಬಿಂಬಗಳನ್ನು ಅವುಗಳ ಕ್ರಿಯೆಗನುಗುಣವಾಗಿ ಯೋಗಾಮೂರ್ತಿ, ಭೋಗಮೂರ್ತಿ ವೀರ ಮತ್ತು ಅಭಿಚಾರಿಕ ಮೂರ್ತಿಗಳೆನ್ನುವರು. ಈ ಭಂಗಿಗಳನ್ನು ಗುರುತಿಸಲು ಸಹಾಯಕವಾಗುವಂತೆ ಬಿಂಬವು ನಿಶ್ಚಿತ ಭಂಗಿಯಲ್ಲಿದ್ದು, ನಿರ್ದಿಷ್ಟವಾದ ಆಸನ ಮತ್ತು ಮುದ್ರೆಗಳನ್ನು ಹೊಂದಿರುತ್ತವೆ.[೨೩]

ಸ್ಥಾನಿಕ ವಿಷ್ಣು ಶಿಲ್ಪಗಳು :

ಬಾಗುವುದರಿಂದಾಗುವ ದೇಹದ ನಿಲುವನ್ನು ಭಂಗಿ ಎನ್ನುವರು. ದೇಹದ ಅಂಗಾಗಗಳು ನೇರವಾಗಿದ್ದು, ಸಮಸ್ಥಿತಿಯಲ್ಲಿ ದೃಡವಾಗಿ ನಿಂತ ನಿಲುವಿಗೆ ಸಮಭಂಗಿ ಅಥವಾ ಸಮಪಾದ ಭಂಗಿ ಎಂದು ಕರೆಯಲಾಗಿದೆ.

ವಿಷ್ಣುವಿನ ಸ್ಥಾನಿಕ ಶಿಲ್ಪಗಳನ್ನು ಬೃಹತ್ ಸಂಹಿತೆಯಲ್ಲಿ ಈ ರೀತಿಯಾಗಿ ವಿವರಿಸಲಾಗಿದೆ. ವಿಷ್ಣುವು ಎಂಟು ಅಥವಾ ನಾಲ್ಕು ಎರಡು ಕೈಗಳನ್ನು ಹೊಂದಿರಬೇಕು. ವಿಷ್ಣುವಿನ ಎದೆಯ ಎಡಭಾಗದಲ್ಲಿ ಶ್ರೀವತ್ಸ ಚಿಹ್ನೆ ಇರಬೇಕು. ವಿಷ್ಣುಶಿಲ್ಪದ ಮುಖಭಾವವು ಸೌಮ್ಯ ರೂಪದಲ್ಲಿರಬೇಕು. ಕಿವಿಗಳಲ್ಲಿ ಕುಂಡಲಗಳು, ತಲೆಯ ಮೇಲೆ ಕಿರೀಟ ಮಕುಟ, ಕೊರಳಲ್ಲಿ ವನಮಾಲ ಇರಬೇಕೆಂದು ತಿಳಿಸುತ್ತದೆ. ಇಂತಹ ವಿಷ್ಣುವಿನ ಶಿಲ್ಪಗಳು ಅದರಲ್ಲಿ ಮುಖ್ಯವಾಗಿ ವಿಠಲನ ಶಿಲ್ಪಗಳು ಎರಡು ಕೈಗಳನ್ನು ಹೊಂದಿರುತ್ತವೆ. ವಿಷ್ಣುವಿನ ಸ್ಥಾನಿಕ ಶಿಲ್ಪಗಳು ವಿಜಯನಗರದಲ್ಲಿ ಜನಪ್ರಿಯತೆಯನ್ನು ಪಡೆದಿರುತ್ತವೆ.[೨೪]

ಈ ಅಧ್ಯಯನದ ವಸ್ತುಸಂಗ್ರಹಾಲಯದಲ್ಲಿರುವ ಸಮಭಂಗಿಯಲ್ಲಿರುವ ವಿಷ್ಣು ಶಿಲ್ಪವು ಪದ್ಮ ಪೀಠದ ಮೇಲೆ ನಿಂತಿದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಕೆಳಭಾಗದ ಬಲಗೈಯು ಅಭಯ ಹಸ್ತದಲ್ಲಿದೆ. ಕೆಳಭಾಗದ ಎಡಗೈಯು ಗದೆಯ ಮೇಲೆ ಇದೆ. ಮೇಲಿನ ಎಡ, ಬಲ ಕೈಗಳು ಮತ್ತು ತಲೆಯ ಭಾಗವು ಭಗ್ನವಾಗಿದೆ. ವಿಷ್ಣು ಶಿಲ್ಪವು ಕೊರಳಲ್ಲಿ ಕಂಠಹಾರ, ಚನ್ನವೀರ, ತೋಳ್ಬಂದಿ, ಕಂಕಣಗಳನ್ನು ಹೊಂದಿರುತ್ತದೆ. ಈ ಶಿಲ್ಪದಲ್ಲಿರುವ ವಸ್ತ್ರವು ಶಿಲ್ಪದ ಆಭರಣಗಳು ಸುಂದರವಾಗಿ ಮತ್ತು ಸೂಕ್ಷ್ಮ ರೀತಿಯಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ಪ್ರಮಾಣಬದ್ಧತೆಯಿಂದ ಕೆತ್ತಲ್ಪಟ್ಟಿದ್ದು, ಶಿಲ್ಪವು ಶಿಲ್ಪಶಾಸ್ತ್ರಗಳನ್ವಯ ಈ ಶಿಲ್ಪವನ್ನು ಕೆತ್ತಿದ್ದಾನೆ. ಶ್ರೀವತ್ಸ ಚಿಹ್ನೆಯ ವಿಷ್ಣುವಿನ ಎಡಭಾಗದ ಎದೆಯ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯಿಂದ ನಿರ್ಮಿತವಾಗಿದೆ.

ಆಸೀನ ವಿಷ್ಣು ಶಿಲ್ಪಗಳು :

ವಿಜಯನಗರದ ದೇವಾಲಯಗಳಲ್ಲಿ ಎರಡು ರೀತಿಯ ಆಸೀನ ಶಿಲ್ಪಗಳನ್ನು ಗುರುತಿಸಬಹುದು. ಅವುಗಳಲ್ಲಿ ಮುಖ್ಯವಾಗಿ ಗರುಡವಾಹನ ಮೂರ್ತಿ ಮತ್ತು ಪದ್ಮಾಸನ ಅಥವಾ ಅರ್ಧ ಪರ್ಯಂಸಾಂಸನ ಮೂರ್ತಿಗಳು ಮಹಾಭಾರತ ಮತ್ತು ಹರಿವಂಶಗಳಲ್ಲಿ ಈ ನಾಲ್ಕು ಕೈಗಳನ್ನು ಹೊಂದಿರುವ ಗರುಡ ವಾಹನ ಮೂರ್ತಿಯನ್ನು ಕಾಣಬಹುದು.

ಈ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ವಿಷ್ಣುವಿನ ಆಸೀನ ಶಿಲ್ಪವು ವಿಶೇಷವಾದದ್ದಾಗಿದೆ. ಪದ್ಮ ಪೀಠದ ಮೇಲೆ ನಾಲ್ಕು ಕೈಗಳನ್ನು ಹೊಂದಿರುವ ಈ ಶಿಲ್ಪವು ಕೆಳಗೆ ಚಾಚಿರುವ ಬಲಗೈಯಲ್ಲಿ ಅಭಯ ಮುದ್ರೆಯಿದೆ. ಮೇಲಿನ ಹಿಂದಿನ ಬಲಗೈಯಲ್ಲಿ ಚಕ್ರವಿದೆ. ಮೇಲಿನ ಎಡಗೈಯಲ್ಲಿ ಶಂಖವಿದ್ದು, ಕೆಳಗಿನ ಎಡಗೈಯಲ್ಲಿ

ಗದೆಯು ಇರುತ್ತದೆ. ಈ ಶಿಲ್ಪವು ಕಿರೀಟ ಮುಕುಟವನ್ನು ಹೊಂದಿರುತ್ತದೆ. ಹಾರಗಳು, ಕಂಠಹಾರ, ಚನ್ನವೀರ, ಯಜ್ಞೋಪವೀತ ಬೆರಳುಂಗುರ, ಕಂಕಣಗಳು, ಹಣೆಯಲ್ಲಿ ತ್ರಿಪುಂಡ್ರವಿದೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿಯನ್ನು ಹೊಂದಿರುತ್ತದೆ. ಕಿರೀಟ ಮುಕುಟದ ಮಧ್ಯಭಾಗವು ಭಗ್ನವಾಗಿದೆ. ಶಿಲ್ಪದ ದೇಹದ ಮೇಲಿರುವ ಆಭರಣಗಳನ್ನು ಸುಂದರವಾಗಿ ಕೆತ್ತಲ್ಪಟ್ಟಿದೆ.[೨೫]

ಲಕ್ಷ್ಮೀನರಸಿಂಹ ಶಿಲ್ಪವು ದುಂಡು ಶಿಲ್ಪವಾಗಿದ್ದು, ಲಕ್ಷ್ಮೀನರಸಿಂಹ ಶಿಲ್ಪವು ಪೀಠದ ಮೇಲೆ ಕುಳಿತಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಕೈಗಳು ಚಕ್ರ ಮತ್ತು ಶಂಖವನ್ನು ಹೊಂದಿರುತ್ತದೆ. ಕೆಳಗಿನ ಬಲಗೈಯಲ್ಲಿ ಅಭಯ ಹಸ್ತವಾಗಿದ್ದು, ಎಡಗೈಯು ಲಕ್ಷ್ಮೀಯ ಸೊಂಟವನ್ನು ಬಳಸಿದೆ. ನರಸಿಂಹನು ಕಿರೀಟ ಮುಕುಟವನ್ನು ಧರಿಸಿದೆ. ಕೊರಳಲ್ಲಿ ಹಾರಗಳು ಯಜ್ಞೋಪವೀತವಿರುತ್ತದೆ. ದೋತಿಯನ್ನು ಧರಿಸಿದ ಲಕ್ಷ್ಮೀಯು ಎಡ ತೊಡೆಯ ಮೇಲೆ ಕುಳಿತಿದ್ದಾಳೆ. ತನ್ನ ಎಡಗೈಯಲ್ಲಿ ಪದ್ಮವನ್ನು ಹಿಡಿದಿದ್ದಾಳೆ. ಕರಂಡ ಮಕುಟವನ್ನು ಧರಿಸಿದ್ದಾಳೆ. ಕೊರಳಲ್ಲಿ ಹಾರಗಳು, ಸೊಂಟದ ಕೆಳಭಾಗದಲ್ಲಿ ಸೀರೆಯು ನೆರಿಗೆಗಳು ಸ್ಪಷ್ಟವಾಗಿವೆ.

ಶಯನ ಮೂರ್ತಿ :

ಈ ಭಂಗಿಯಲ್ಲಿ ವಿಷ್ಣುವು ಹಾವಿನ ಮೇಲೆ ದೇಹವನ್ನು ಒರಗಿಸಿ ಮಲಗಿರುವಂತೆ ಈ ಶಯನ ಮೂರ್ತಿಗಳಿರುತ್ತವೆ. ಶಯನ ಮೂರ್ತಿಗಳು ವಿಜಯನಗರದಲ್ಲಿ ಜನಪ್ರಿಯತೆಯನ್ನು ಪಡೆದಿದ್ದವು ಎಂಬುದಕ್ಕೆ ಅನೇಕ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ ಅನಂತಶಯನ ದೇವಾಲಯ ಹೊಸಪೇಟೆಯಲ್ಲಿ ಕಾಣಬಹುದು.

ವಿಷ್ಣು ಧರ್ಮೋತ್ತರ ಪುರಾಣದ ಪ್ರಕಾರ ಶಯನ ಮೂರ್ತಿಯಾದ ವಿಷ್ಣುವನ್ನು ಪದ್ಮನಾಭ ಎಂದು ಕರೆಯಲಾಗುವುದು. ಅನಂತನು ನಾಗನ ಮೇಲೆ ಮಲಗಿರುತ್ತಾನೆ. ನಾಲ್ಕು ಕೈಗಳನು ಹೊಂದಿದ್ದು, ಮೇಲಿನ ಕೈಗಳಲ್ಲಿ ಚಕ್ರ ಮತ್ತು ಶಂಖವನ್ನು ಹೊಂದಿದೆ. ಕೆಳಗಿನ ಕೈಯು ತಲೆಗಿಟ್ಟುಕೊಂಡಿರುವಂತೆ ಇರುತ್ತದೆ. ಕೆಳಗಿನ ಕೈಗಳಲ್ಲಿ ಒಂದು ಮೊಣಕಾಲ ಮೇಲೆ ಇರಿಸಿದ್ದಾನೆ. ಶ್ರೀದೇವಿ, ಭೂದೇವಿ ವಿಷ್ಣುವಿನ ಕಾಲನ್ನು ಒತ್ತುತ್ತಿರುವಂತೆ ತೋರಿಸಲಾಗುತ್ತಿದೆ. ಬ್ರಹ್ಮನು ನಾಭಿಯಿಂದ ಹೊರಬಂದ ಕಮಲದಲ್ಲಿ ಕುಳಿತಿರುತ್ತಾನೆ. ಇದೇ ವಿವರಣೆಯು ಪದ್ಮ ಪುರಾಣ ಮತ್ತು ರೂಪಮಂಡನದಲ್ಲಿದೆ.[೨೬]

ಈ ವಸ್ತುಸಂಗ್ರಹಾಲಯದ ವೈಷ್ಣವ ಗ್ಯಾಲರಿಯಲ್ಲಿರುವ ಅನಂತಶಯನ ಶಿಲ್ಪವು ಶೇಷನ ಮೇಲೆ ಮಲಗಿದ್ದು, ನಾಗನ ಹೆಡೆಗಳು ಭಗ್ನವಾಗಿವೆ. ವಿಷ್ಣವು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಕಾಣಬಹುದು. ವಿಷ್ಣು ತಲೆಯನ್ನು ದಿಂಬಿನ ಮೇಲೆ ಇಟ್ಟಿದ್ದಾನೆ. ಕೆಳಗಿನ ಬಲಗೈಯು ತಲೆಯ ಹತ್ತಿರವಿದ್ದು, ಎಡಗೈಯು ತೊಡೆಯ ಮೇಲೆ ಇರುವ ಹಾಗೆ ಉದ್ದವಾಗಿ ಚಾಚಲಾಗಿದೆ.

ವಿಷ್ಣುವು ಕಿರೀಟ ಮುಕುಟವನ್ನು ಧರಿಸಿದ್ದಾನೆ. ಕೊರಳಲ್ಲಿ ಆಭರಣಗಳು, ಹಾರಗಳು, ಚನ್ನವೀರ ಮತ್ತು ವೈಜಯಂತಿಮಾಲಾ ಇದೆ. ಯಜ್ಞೋಪವೀತವಿದೆ. ಶ್ರೀದೇವಿ, ಭೂದೇವಿಯರು ಕಾಲಬಳಿ ಕುಳಿತಿದ್ದಾರೆ. ವಿಷ್ಣುವಿನ ಪಾದಗಳು ಪದ್ಮ ಪೀಠದ ಮೇಲಿವೆ. ಶ್ರೀದೇವಿ, ಭೂದೇವಿಯರು ಕರಂಡ ಮುಕುಟವನ್ನು ಹೊಂದಿದ್ದು, ಕೊರಳ ಆಭರಣಗಳು ಹೊಂದಿದ್ದು, ಬಲಗೈಯಲ್ಲಿ ಪದ್ಮವನ್ನು ಹಿಡಿದಿದ್ದು, ಎಡಗೈಯನ್ನು ವಿಷ್ಣುವಿನ ಕಾಲ ಮೇಲೆ ಇರಿಸಲಾಗಿದೆ.

ವೈಷ್ಣವ ಅಂಕಣದಲ್ಲಿ ವಿಷ್ಣುವಿನ ಅನೇಕ ರೂಪಗಳನ್ನು ಪ್ರತಿಬಿಂಬಿಸುವ ಮೂರ್ತಿಗಳಿದ್ದು, ಇವುಗಳ ಜೊತೆಗೆ ವಿಷ್ಣುವಿನ ಅವತಾರ ಮೂರ್ತಿಗಳಾದ ವರಹ, ನರಸಿಂಹ ಮತ್ತು ಶ್ರೀನಿವಾಸ ಶಿಲ್ಪಿಗಳು ಪ್ರದರ್ಶಿತಗೊಂಡಿವೆ. ವಿಷ್ಣುವಿನ ಭಕ್ತಾಗ್ರೇಸರಲ್ಲಿ ಪ್ರಮುಖರಾದ ಹನುಮಂತ ಮತ್ತು ಗರುಡನ ಆಳೆತ್ತರದ ವಿಗ್ರಹಗಳು ಮನಸೆಳೆಯುತ್ತವೆ. ಇದರ ಜೊತೆಗೆ ವಿಷ್ಣು ಭಕ್ತರಾದ ಆಳ್ವಾರರುಗಳ ವಿಗ್ರಹಗಳನ್ನು ಸಹ ಇಲ್ಲಿ ಕಾಣಬಹುದು.

ಪ್ರಾರಂಭದಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತಲ್ಪಟ್ಟ ಕಂಚಿನ ವಿಗ್ರಹಗಳನ್ನು ನೆನಪಿಗೆ ತರುವ ಶ್ರೀದೇವಿ ಮತ್ತು ಭೂದೇವಿ ಸಹಿತ ಇರುವ ರಂಗನಾಥನ ವಿಗ್ರಹವು ಮನಸೆಳೆಯುತ್ತದೆ ರಂಗನಾಥನ ಪಾದದಡಿಯಲ್ಲಿರುವ ಸುಂದರವಾಗಿ ಕೆತ್ತಲ್ಪಟ್ಟ ಕಮಲದ ಪುಷ್ಪವನ್ನು ಕಾಣಬಹುದು.

ಚತುರ್ಭುಜ ಲಕ್ಷ್ಮಿ, ಆಸೀನ ವಿಷ್ಣು ಮತ್ತು ಲಕ್ಷ್ಮಿ/ನರಸಿಂಹ ಮೂರ್ತಿಗಳು ವಿಜಯನಗರ ಶೈಲಿಯ ಪ್ರಮುಖ ಶಿಲ್ಪಿಗಳಾಗಿವೆ. ವರಾಹ ಶಿಲ್ಪದ ಮುಖಭಾವವು ನೋಡುಗರಿಗೆ ಅಚ್ಚರಿ ಮೂಡಿಸುತ್ತದೆ. ಮೇಲೆ ಹೇಳಿದ ಪ್ರಮುಖ ಶಿಲ್ಪಗಳಲ್ಲದೇ ಅಶೋಕವನದಲ್ಲಿ ಸೀತೆ, ರಥಿಕರಾದ ಕೃಷ್ಣಾರ್ಜುನರು, ವೇಣುಗೋಪಾಲ, ಆಳ್ವಾರರುಗಳ ಮತ್ತು ಕೆಲವು ಶೇಖರಿಸಿದ ಗಾರೆಗಚ್ಚಿನ ಶಿಲ್ಪಗಳಿರುವುದು ಈ ಅಂಕಣದ ವಿಶೇಷ.

೩.೨..೨ : ಈ ಅಂಕಣದ ಶಿಲ್ಪಗಳು

೩.೨.೨.೧) ವಿಷ್ಣು

೩.೨.೨.೨) ಗರುಡ

೩.೨.೨.೩) ನಾಗ ಹಿಡಿದ ಗರುಡ

೩.೨.೨.೪) ಹನುಮಾನ್

೩.೨.೨.೫) ಅಶೋಕ ವನದಲ್ಲಿ ಸೀತೆ

೩.೨.೨.೬) ವೇಣುಗೋಪಾಲ

೩.೨.೨.೭) ವರಾಹ ಅವತಾರ

೩.೨.೨.೮) ಲಕ್ಷ್ಮಿ

೩.೨.೨.೯) ವಿಷ್ಣು

೩.೨.೨.೧೦) ರಾಮ (ಮುಖ)

೩.೨.೨.೧೧) ವಿಷ್ಣು

೩.೨.೨.೧೨) ಲಕ್ಷ್ಮಿ ನರಸಿಂಹ

೩.೨.೨.೧೩) ವೈಷ್ಣವ ದೇವತೆ

೩.೨.೨.೧೪) ಲಕ್ಷ್ಮಣ

೩.೨.೨.೧೫) ರಾಜಮೂರ್ತಿ (ಶಿರ)

೩.೨.೨.೧೬) ವೇಣುಗೋಪಾಲ

೩.೨.೨.೧೭) ಆಳ್ವಾರ್

೩.೨.೨.೧೮) ಮತ್ಸ್ಯ ಮತ್ತು ಕಲ್ಕಿ ಅವತಾರಗಳು

೩.೨.೨.೧೯) ವಿಷ್ಣು

೩.೨.೨.೨೦) ವಿಷ್ಣು-ಶ್ರೀನಿವಾಸ

೩.೨.೨.೨೧) ರಾಮ, ಲಕ್ಷ್ಮಣ ಮತ್ತು ಸೀತೆ

೩.೨.೨.೨೨) ಲಕ್ಷ್ಮೀನಾರಾಯಣ

೩.೨.೨.೨೩) ಪದ್ಮಾಸನ ನರಸಿಂಹ

೩.೨.೨.೨೪) ಗರುಡ ಅಂಜಲಿ ಮುದ್ರೆ

೩.೨.೨.೨೫) ಹನುಮಾನ್

೩.೨.೨.೨೬) ವೈಷ್ಣವ ದೇವತೆ

೩.೨.೨.೨೭) ಅಂಜಲಿ ಮುದ್ರೆಯಲ್ಲಿ ಗರಡು

೩.೨.೨.೨೮) ಹನುಮಾನ್

೩.೨.೨.೨೯) ಪ್ರಸನ್ನ ನರಸಿಂಹ

೩.೨.೨.೩೦) ಲಕ್ಷ್ಮೀ ನರಸಿಂಹ

೩.೨.೨.೩೧) ಗೋಪಿಕಾ ಸ್ತ್ರೀಯರೊಂದಿಗೆ ವೇಣುಗೋಪಾಲ

೩.೨.೨.೩೨) ಕೃಷ್ಣ ಮತ್ತು ಅರ್ಜುನ

೩.೨.೨.೩೩) ವಿಷ್ಣು ರಂಗನಾಥ

೩.೨.೨.೧: ವಿಷ್ಣು :

ಬಳಸಿದ ಕಲ್ಲು : ಕಪ್ಪು ಕಲ್ಲು

ಕಾಲ : ೧೩-೧೪ ನೇ ಶತಮಾನ

ಅಳತೆ : ೮೦ * ೪೫ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಸಾಮ್ರಾಜ್ಯ

ಈ ಶಿಲ್ಪವು ಬಹಳ ಹಳೆಯ ಶಿಲ್ಪವಾಗಿದೆ. ಅದೇ ರೀತಿಯಲ್ಲಿ ಸುಂದರವಾಗಿದೆ. ವಿಷ್ಣು ವಿಗ್ರಹವು ಶಂಖ, ಚಕ್ರ ಮತ್ತು ಅಭಯ ಹಾಗೂ ವರದ ಮುದ್ರೆಯಲ್ಲಿ ಸ್ತಾನಿಕನಾಗಿದ್ದಾನೆಂದು ಹೇಳಬಹುದು. ಇಲ್ಲಿ ವಿಷ್ಣು ಕಿರೀಟ ಧರಿಸಿದ್ದಾನೆ. ಕೊರಳಿಗೆ ಸರಮಾಲೆ. ಕಟಿಸೂತ್ರ ಧರಿಸಿದ್ದಾನೆ. ಅದೇ ರೀತಿಯಲ್ಲಿ ವರದ ಮುದ್ರೆಯಲ್ಲಿ ಮಣಿ ಸರವನ್ನು ಹಿಡಿದುಕೊಂಡಿದ್ದಾನೆ. ಹೀಗೆ ವಿಗ್ರಹವು ಬಹು ಸುಂದರವಾಗಿದೆ ಎಂದು ಹೇಳಬಹುದು.

೩.೨.೨.೨: ಗರುಡ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೩-೧೪ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

ಈ ಮೂರ್ತಿಯು ವೀರಾವೇಶದಲ್ಲಿ ಕಾಲುಗಳನ್ನು ನೆಲಕ್ಕಿಟ್ಟು, ಹಾರಲು ಸಜ್ಜಾಗಿರುವಂತೆ ಕಾಣುವ ಮೂರ್ತಿಯಾಗಿದೆ. ಈ ಮೂರ್ತಿಯೂ ಅಗಲವಾದ ಕಿವಿಗಳನ್ನು ಹೊಂದಿದ್ದು, ಕಿವಿಯಲ್ಲಿ ಕುಂಡಲಗಳಿವೆ, ಕೊರಳಲ್ಲಿ ಅನೇಕ ರೀತಿಯ ಕಂಠಾಭರಣಗಳಿವೆ. ಅಂಜಲಿ ಮುದ್ರೆಯಲ್ಲಿರುವ ಈ ಮೂರ್ತಿಯ ಕೈಗಳು ಖಡ್ಗಗಳಿಂದ ಅಲಂಕಾರಗೊಂಡಿದ್ದು, ಪಕ್ಷಿಯ ರೀತಿಯಲ್ಲಿ ರೆಕ್ಕೆಗಳಿರುವುದನ್ನು ಗಮನಿಸಬಹುದು. ಪಕ್ಷಿಗೆ ಇರುವ ರೆಕ್ಕೆಗಳೇ ಇಲ್ಲಿ ಮೂಲ ಆಧಾರವಾಗಿದೆ. ಬಿಳಿನೀಲಿ ಬಣ್ಣದ ಶಿಲೆಯಿಂದ ಕೆತ್ತಲ್ಪಟ್ಟ ಈ ಶಿಲ್ಪವು ಕೈಮುಗಿದು ನಮಸ್ಕರಿಸುವಂತಿದೆ. ಬಲ ಭಾಗದ ಕಡೆ ಪಾದಗಳು ಮುಖಮಾಡಿವೆ. ಆದರೆ ಗರುಡ ನೇರಕ್ಕೆ ನಿಂತು ಎರಡು ಕೈಗಳಿಂದ ನಮಸ್ಕರಿಸುತ್ತಿದ್ದಾನೆ. ವಿಷ್ಣುವಿನ ಆಕಾರವನ್ನೆ ಹೊಂದಿದ್ದಾನೆ. ಆದರೆ ಅವನಂತೆ ಕಾಣುವುದಿಲ್ಲ. ಹಿಂಬದಿಯ ತಲೆಯ ಅಕ್ಕಪಕ್ಕದಲ್ಲಿ

ಚಕ್ರ ಮತ್ತು ಶಂಖವನ್ನು ಬಿಂಬಿಸಲಾಗಿದೆ. ಉದ್ದನೆಯ ಮೂಗು, ಉದ್ದನೆಯ ಕಣ್ಣುಗಳು, ಉದ್ದನೆಯ ಕಿವಿಗಳಿದ್ದು, ಗರುಡ ಬಲಿಷ್ಠನಾಗಿದ್ದ ಎಂಬುದನ್ನು ಈ ಶಿಲ್ಪ ತೋರಿಸಲ್ಪಟ್ಟಿದೆ.

೩.೨.೨.೩: ನಾಗ ಹಿಡಿದ ಗರುಡ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೩-೧೪ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೧೨೦*೯೦ ಸೆಂ.ಮೀ. ಇರುವ ನಾಗ ಮತ್ತು ಗರಡ ಶಿಲ್ಪವನ್ನು ಶಿಲೆಯಲ್ಲಿ ಕೆತ್ತಲಾಗಿದೆ. ಗರುಡನನ್ನು ಕಂಡ್ರೆ ನಾಗರ ಬೆದರಿ ಬೆಂಡಾಗುತ್ತದೆ. ಎಂಬ ಪುರಾಣದ ಹಿನ್ನೆಲೆಯಲ್ಲಿ ಕೇಳಿದ್ದರೂ, ಇವತ್ತಿಗೂ ಸಹ ಮುಂದುವರಿದಿದೆ. ಅದು ನಿಜವೂ ಕೂಡ, ಹಾವು ಗರುಡದಿಂದ ದೂರ ಇರಲು ಪ್ರಯತ್ನಿಸುತ್ತದೆ. ಹಾವು ಮತ್ತು ಮುಂಗಸಿ ಹೇಗೋ ಹಾಗೆಯೇ ಗರುಡ ಮತ್ತು ನಾಗ ಅಷ್ಟೇ ವೈರಿಗಳು, ಇನ್ನೂ ಗರುಡನಿಗೆ ನಾಗನೇ ಆಹಾರವಾಗುತ್ತಾನೆ. ಇದರ ಹಿನ್ನೆಲೆಯ ಕಥೆಯನ್ನು ತಿಳಿಯಲೇಬೇಕು. ಪ್ರಮುಖವಾಗಿ ಈ ಶಿಲ್ಪದಲ್ಲಿ ಏಳು ಅಡಿ ಎತ್ತರದ ಗರುಡ ಶಿಲ್ಪದ ಕೈಯಲ್ಲಿ ಮೂರಡಿ ಎತ್ತರದ ನಾಗರಹಾವು ಎಡಗೈಯಲ್ಲಿ ಹಿಡಿದಿದೆ. ನಾಗರ ನಾಲಿಗೆಯನ್ನು ಹೊರ ಚಾಚಿ ತನ್ನ ಕೊಪವನ್ನು ಸೂಸುವಂತಿದೆ. ಗರುಡನ ಕೈಯಲ್ಲಿ ಹಾವು ಇಲ್ಲದಿದ್ದಲ್ಲಿ ಬಹುಶಃ ನೋಡಿದ ಸಾಮಾನ್ಯರು ಇವನು ಹನುಮಂತ ಎಂದು ಭಾವಿಸುತ್ತಿದ್ದರೇನೋ ಅಷ್ಟರ ಮಟ್ಟಿಗೆ ಹೋಲಿಕೆಯನ್ನು ಕಾಣಲ್ಪಟ್ಟಿದೆ. ದೇಹವನ್ನು ಸುತ್ತುವರಿದಂತೆ ಕೆತ್ತಿರುವ ನಾಗನನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಗರುಡನ ಬಲಗೈ ಹಸ್ತವನ್ನು ಎತ್ತಿ ತೋರಿಸಲಾಗಿದೆ. ಭುಜದ ಹಿಂಭಾಗದಲ್ಲಿ ರೆಕ್ಕೆಗಳನ್ನು ತೋರಿಸಲಾಗಿದೆ. ಸೊಂಟಕ್ಕೆ ಪಂಚೆ ಸುತ್ತಿದ್ದು, ಬರೀ ಮೈಯಿಂದ ಇರುವ ಎದೆಯಲ್ಲಿ ಆಭರಣವನ್ನು ತೋರಿಸಿದ್ದಾರೆ. ಕಾಲಿಗೆ ಖಡ್ಗ, ಕಿವಿಗೆ ಓಲೆ, ಹಣೆಯಲ್ಲಿ ನಾಮ, ದುಂಡಾದ ಕಣ್ಣುಗಳು, ಉದ್ದನೆಯ ಮೂಗು, ತುಟಿ, ತಲೆಯ ಅಕ್ಕಪಕ್ಕದಲ್ಲಿ ಚಕ್ರ ಮತ್ತು ಶಂಖವನ್ನು ತೋರಿಸಿದ್ದಾರೆ.

೩.೨.೨.೪: ಹನುಮಂತ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೩-೧೪ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೧೨೦*೯೦ ಸೆಂ.ಮೀ ಇರುವ ಹನುಮಂತನ ಶಿಲ್ಪವನ್ನು ಗ್ರಾನೈಟ್ ಶಿಲೆಯಿಂದ ಕೆತ್ತಲ್ಪಟ್ಟಿದೆ. ಇದನ್ನು ಹದಿಮೂರನೆ ಶತಮಾನದ ಶಿಲ್ಪವೆಂದು ಗುರುತಿಸಲಾಗಿದ್ದು, ನಿಂತಿರುವ ವಿವಿಧ ಆಸನವನ್ನೊತ್ತ ಶೈಲಿಯಲ್ಲಿ ವಿಜೃಂಬಿಸಿರುತ್ತಾನೆ ಹನುಮಂತ. ತನ್ನ ಎಡಗಾಲನ್ನು ತನ್ನ ಎಡಮುಖವಾಗಿಟ್ಟು ತನ್ನ ಎಡಗೈಯನ್ನು ಭಾಗಿದ ಸೊಂಟಕ್ಕಿಟ್ಟು, ಬಲಗೈಯನ್ನು ಎತ್ತಿ ತನ್ನ ಅಂಗೈಯನ್ನು ತೋರಿಸಿರುವುದನ್ನು ಹಿಂದೂ ಧರ್ಮದಲ್ಲಿ ಆಗೋಚರ ಶಕ್ತಿಯ ಹಿನ್ನಲೆಯದು ಎಂಬಂತೆ, ಆಶಿರ್ವದಿಸುವ ಭಂಗಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮೈತುಂಭಾ ಆಭರಣಗಳು, ಕಾಲು ಕಡುಗಗಳು, ತೋಳ್ಬಂದಿ, ಡಾಬು ಮತ್ತು ಕಿವಿ ಓಲೆಗಳನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ಘಟ್ಟಿ ಶಿಲೆಯಾದರೂ ಶಿಲ್ಪಿ ತನ್ನದೇ ಶೈಲಿಯಲ್ಲಿ ಕೆತ್ತಲ್ಪಟ್ಟಿದ್ದಾನೆ. ತಕ್ಷಣ ನೋಡಿದರೆ ಶಿಲೆಯಿಂದ ಉದ್ಭವವಾಗಿರುವಂತಹ ಭಾವ ನೋಡುಗನದ್ದಾಗಿರುತ್ತದೆ. ಅಪ್ಸರ ಮಟ್ಟಿನ ಪ್ರಭಾವ ಈ ಶಿಲ್ಪದ್ದಾಗಿದೆ.

೩.೨.೨.೫: ಅಶೋಕ ವನದಲ್ಲಿ ಸೀತೆ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೩-೧೪ನೇ ಶತಮಾನ

ಅಳತೆ : ೯೦ * ೨೧೧ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೯೦*೨೧೧ ಸೆಂ.ಮೀ ಇರುವ ಅಶೋಕ ವನದಲ್ಲಿ ಸೀತೆಯ ಶಿಲ್ಪವನ್ನು ಗ್ರಾನೈಟ್ ಶಿಲೆಯಿಂದ ಕೆತ್ತಲ್ಪಟ್ಟಿದೆ. ಈ ಶಿಲ್ಪವು ಪರಿಪೂರ್ಣವಲ್ಲದಿದ್ದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಘಟ್ಟಿಯಾಗಿ ಅಂಟಿಕೊಂಡಂತಿದೆ. ಅಂದ್ರೇ ರಾಮಾಯಣದ ಕೇಂದ್ರಬಿಂದು ಸೀತಾಮಾತೆಯ ಸನ್ನಿವೇಶದ ದೃಶ್ಯವಿದಾಗಿದೆ. ಇಲ್ಲಿ ಸೀತೆ ಕಾಡಲ್ಲಿ ಕುಳಿತು ಕೈಮುಗಿದು ತನ್ನ ಪತಿಯ ಧ್ಯಾನದಲ್ಲಿ ಮಗ್ನರಾಗಿರುವಂತೆ ಭಾಸವಾಗುತ್ತಿರುವುದು. ಪಕ್ಕದಲ್ಲಿ ನಿಂತು ಧ್ಯಾನಕ್ಕೆ ಭಂಗಭಾರದ ರೀತಿಯಲ್ಲಿ ಕಾವಲುಗಾರನಂತೆ ನಿಂತು ಭಕ್ತಿಯಿಂದ ನಮಿಸುತ್ತಿರುವಂತೆ ಹನುಮಂತನನ್ನು ತೋರಿಸಲಾಗಿದೆ. ಮತ್ತೊಂದು ಬಲಭಾಗದ ಚಿತ್ರದಲ್ಲಿ ಒಂದು ಹೆಂಗಸು ಕೈಮುಂದೆ ಮಾಡಿ ಆಶ್ಚರ್ಯದಿಂದ ದಿಟ್ಟಿಸಿ ಮೇಘರಾಜನ ಕಡೆ ನೋಡುತ್ತಿರುವಂತೆ ಕಂಡುಬರುತ್ತಿದೆ. ರಾಮಾಯಣದ ಆಯ್ದ ಒಂದು ಭಾಗವನ್ನು ಇಲ್ಲಿ ತೋರಿಸಲಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

೩.೨.೨.೬: ವೇಣುಗೋಪಾಲ :

ಬಳಸಿದ ಕಲ್ಲು : ಕಪ್ಪುಗ್ರಾನೈಟ್ ಕಲ್ಲು

ಕಾಲ : ೧೩-೧೪ನೇ ಶತಮಾನ

ಅಳತೆ : ೨೧೦ * ೬೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೨೧೦*೬೦ ಸೆಂ.ಮೀ ಇರುವ ವೇಣುಗೋಪಾಲ ಶಿಲ್ಪವು ಸುಂದರವಾಗಿದೆ. ಈ ಅಂಕಣದ ಕೆಲವೇ ಕೆಲವು ಶಿಲ್ಪಗಳಲ್ಲಿ ಇದೂ ಒಂದು. ಈ ಶಿಲ್ಪವೂ ಪರಿಪೂರ್ಣವಾಗಿಲ್ಲದಿದ್ದರೂ ನೈಜತೆ ತುಂಬಾ ಹತ್ತಿರವಾಗಿದೆ. ಕೊಳಲನ್ನು ಊದುತ್ತಿರುವ ಕೃಷ್ಣ ತನ್ನ ಬಲಗಾಲನ್ನು ಎಡಗಾಲ ಬದಿಗೆ ಸರಿಸಿ, ತನ್ನ ಎಡಗಾಲ ಮೇಲೆಯೇ ಹೆಚ್ಚು ಭಾರವನ್ನು ಹಾಕಿ, ಆರಾಮವಾಗಿ ನಿಂತು ತನ್ನ ಇಷ್ಟದ ಕಲೆಯಲ್ಲಿ ಮಗ್ನವಾಗಿರುವಂತಹ ಸನ್ನಿವೇಶವಿದಾಗಿರುತ್ತದೆ. ಇವನಿಗೆ ನೆರಳಾಗಿ ತಲೆಯ ಮೇಲೆ ಕೊಡೆಯನ್ನು ಹಿಡಲಾಗಿದ್ದು, ಅದರ ಮೇಲೊಂದು ಹಾವಿನ ಎಡೆಯಾಕಾರದಲ್ಲಿ ತೋರಿಸಿರುವುದು ಇದರಲ್ಲಿ ಮತ್ತೊಂದು ವಿಶೇಷವೆನ್ನಬಹುದು. ತಲೆಗೆ ಸುಂದರವಾದ ವಜ್ರದ ಕಿರೀಟ, ಹಿಂಬದಿಯ ಎಡಗೈಯಲ್ಲಿ ಶಂಖವಿದ್ದು, ಬಲಗೈಯಲ್ಲಿನ ವಸ್ತು ನಾಶವಾಗಿದೆ. ವೈಷ್ಣವ ಶಿಲ್ಪವಾಗಿರುವ ಹಿನ್ನಲೆಯಲ್ಲಿ ಚಕ್ರವನ್ನು ಕಾಣಬಹುದು. ಕೈ, ಕಾಲು ಮತ್ತು ಸೊಂಟಕ್ಕೆ ಆಭರಣಗಳನ್ನು ಹಾಕಿ ಸೌಂದರ್ಯವನ್ನು ಹೆಚ್ಚಿಸಲಾಗಿದೆ.

೩.೨.೨.೬: ವರಾಹ ಅವತಾರ :

ಬಳಸಿದ ಕಲ್ಲು : ಕಪ್ಪು ಗ್ರಾನೈಟ್

ಕಾಲ : ೧೩-೧೪ನೇ ಶತಮಾನ

ಅಳತೆ : ೯೦ * ೬೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೯೦*೬೦ ಸೆಂ.ಮೀ ಇರುವ ವರಾಹ ಅವತಾರ ಶಿಲ್ಪವೂ ವಿಷ್ಣುವು ಹಂದಿಯ ಮುಖವನ್ನೊತ್ತು ಧ್ಯಾನಾವಸ್ಥೆ ಕುಳಿತಿರುವ ಶಿಲ್ಪ ಇದಾಗಿರುತ್ತದೆ. ಕಪ್ಪು ಶಿಲೆಯಿಂದ ರಚಿಸಲ್ಪಟ್ಟ ಶಿಲ್ಪಿ ಪುರಾಣದ ಕಥೆಯ ಹಿನ್ನೆಲೆಯನ್ನಿಟ್ಟುಕೊಂಡು ಈ ಕೃತಿಯನ್ನು ರಚಿಸಿದ್ದಾನೆ ಎಂಬಂತಿದೆ. ನಾಲ್ಕು ಕೈಗಳಿದ್ದು, ಬಲಗೈ ಆಶೀರ್ವದಿಸುವ ಸೂಚಕ ತೋರಿಸುವಂತಿದ್ದರೆ, ಎಡಗೈ ಕೆಳಮುಖ ಮುಡಿ ಅಂಗೈಯನ್ನು ಪ್ರದರ್ಶಿಸಿದೆ ಇದು ನುಣುಪಾದ ಶಿಲೆಯಾಗಿದ್ದರಿಂದ ರೇಖೆಗಳನ್ನು ತೋರಿಸಲಾಗಿಲ್ಲ. ಇನ್ನೂ ವಿಷ್ಣುವಿಗೆ ಇರಬೇಕಾದ ಎಲ್ಲಾ ಅಂಶಗಳನ್ನು ಕಾಣಬಹುದಾದರೂ ತಲೆ ಮಾತ್ರ ಹಂದಿಯ

ಒಲಿಕೆ ಇರುತ್ತದೆ. ಹಿಂಬದಿಯ ಕೈಗಳಲ್ಲಿ ಚಕ್ರ ಮತ್ತು ಶಂಖವನ್ನು ಕಾಣಬಹುದು. ಇನ್ನುಳಿದಂತೆ ವಿಷ್ಣು ಧ್ಯಾನದಲ್ಲಿ ಆಸೀನರಾಗಿರುವಂತಹ ಕ್ಷಣ ಇದೆನ್ನಬಹುದು.

೩.೨.೨.೮: ಲಕ್ಷ್ಮೀ :

ಬಳಸಿದ ಕಲ್ಲು : ಕಪ್ಪುನೀಲಿ ಗ್ರಾನೈಟ್

ಕಾಲ : ೧೩-೧೪ನೇ ಶತಮಾನ

ಅಳತೆ : ೯೦ * ೭೫ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೯೦*೭೫ ಸೆಂ.ಮೀ ಇರುವ ಲಕ್ಷ್ಮೀ ಶಿಲ್ಪವು ವೈಭವಪೂರ್ಣವಾಗಿ ಕೆತ್ತಲಾಗಿದೆ. ರೇಖೆಗಳಲ್ಲಿ ಸ್ಪಷ್ಟತೆ, ದೇಹದ ಪ್ರತಿಯೊಂದು ಅಂಗಗಳೂ ಕೂಡ ಕ್ರಮಬದ್ಧತೆಯನ್ನು ಹೊಂದಿದೆ ಎಂದೇಳಬಹುದು. ಸಾಂಪ್ರದಾಯಿಕ ಶಿಲ್ಪ ಎನಿಸಿಕೊಂಡಿರುವ ಈ ಲಕ್ಷ್ಮಿ ಶಿಲ್ಪವು ಅಳತೆ ಮತ್ತು ಪ್ರಮಾಣದಲ್ಲಿ ಸ್ಪಷ್ಟತೆಯನ್ನು ತೋರಿಸಲಾಗಿದೆ. ಕುಳಿತ ಆಸನದಲ್ಲಿರುವ ಲಕ್ಷ್ಮಿಯು ಎಡಗೈ ಕೆಳಗೆ ಬಿಡಲಾಗಿದ್ದು, ಬಲಗೈಯಿಂದ ಆಶೀರ್ವದಿಸುವಂತೆ ಸೂಸಲಾಗಿದೆ. ಇನ್ನುಳಿದ ಎರಡು ಕೈಗಳಲ್ಲಿ ದೊಡ್ಡದಾದ ಶಂಖವನ್ನು ಹಿಡಿಸಲಾಗಿರುತ್ತದೆ. ಸಾಂಪ್ರದಾಯಿಕ ಉಡುಪು ಧರಿಸಿದ್ದು, ಆಭರಣಗಳ ಸರಮಾಲೆಯೇ ಈ ಲಕ್ಷ್ಮಿ ಮೇಲಿದೆ.

೩.೨.೨.೯: ವಿಷ್ಣು :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪು ಶಿಲೆ

ಅಳತೆ: ೯೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

ಪೀಠದ ಮೇಲೆ ಆಸೀನವಾಗಿ ಕುಳಿತ ಮೂರ್ತಿಯಾಗಿದ್ದು. ಅಲಂಕಾರ ಬಳ್ಳಿಯನ್ನು ಹೊಂದಿದೆ. ಬಲಗೈಯಲ್ಲಿ ಪದ್ಮ ಕಿರೀಟಧಾರಿಯಾದ ಈ ಮೂರ್ತಿಯು ಚರ್ತುಭುಜ ಆಕಾರವನ್ನು ಹೊಂದಿದೆ. ವರಹಾ ಮುದ್ರೆ ಎಡಗೈಯಲ್ಲಿ ಶಂಖ, ಬಲಗೈಯಲ್ಲಿ ಚಕ್ರವಿರುವುದನ್ನು ಗಮನಿಸಬಹುದು. ಅಭಯ ಮುದ್ರೆ ಕೆಳಗೆ ಗದೆಯನ್ನು ಇಟ್ಟಿದ್ದು, ಬಲ ಹಸ್ತವನ್ನು ತೋರಿಸಿ ಆಶಿರ್ವದಿಸುವ ಸೂಚನೆಯನ್ನು ಕಾಣಬಹುದು. ತಲೆಗೆ ಕಿರೀಟ, ಮುಖದಲ್ಲಿ ಸ್ಪಷ್ಟತೆಯಿಲ್ಲದಿದ್ದರೂ ಆಯುಧಗಳ ಆಧಾರದ ಮೇಲೆಯೇ ಈ ಶಿಲ್ಪವನ್ನು ವಿಷ್ಣುವೆಂದು ಗುರುತಿಸಬಹುದು.

೩.೨.೨.೧೦: ರಾಮ (ರುಂಡ) :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೩೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೩೦ ಸೆಂ.ಮೀ ಇರುವ ರಾಮನ ತಲೆಯ ಶಿಲ್ಪವು ನೋಡಲು ಸುಂದರವಾಗಿದೆ. ತುರುಬು ಸುತ್ತಿದ ಕೂದಲಿಗೆ ಹೂವಿನಿಂದ ಅಲಂಕರಿಸಲಾಗಿದೆ. ಅರ್ಧಂಬರ್ಧ ಶಿಲ್ಪದಂತೆ ಗೋಚರಿಸಿರುವ ಈ ಶಿಲ್ಪವು, ತಿಳಿನೀಲಿ ಬಣ್ಣದ ಶಿಲೆಯಿಂದ ರಚಿಸಲ್ಪಟ್ಟಿದೆ.

೩.೨.೨.೧೧: ವಿಷ್ಣು :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೬೦*೫೫ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೬೦*೫೫ ಸೆಂ.ಮೀ ಇರುವ ಈ ಶಿಲ್ಪವು ವಿಷ್ಣುವೆಂದು ಗುರುತಿಸಲಾಗಿದೆ. ಅದಕ್ಕೆ ಮುಖ್ಯ ಕಾರಣ ಬಲಗೈಯಲ್ಲಿ ಚಕ್ರ ಮತ್ತು ಎಡಗೈಯಲ್ಲಿ ಶಂಖುವನ್ನು ಎತ್ತಿ ಹಿಡಿಯಲಾಗಿದೆ. ನಿಂತಿರುವ ಭಂಗಿಯೋ, ಕುಳಿತಿರುವ ಭಂಗಿಯೋ ತಿಳಿಯದಾಗಿದೆ. ಯಾಕಂದ್ರೆ, ಸೊಂಟದವರೆಗೆ ಮಾತ್ರ ಶಿಲ್ಪವು ಸಿಕ್ಕಿರುತ್ತದೆ ನಾಲ್ಕು ಕೈಗಳು, ತಲೆಗೆ ಕಿರೀಟ, ಸೌಮ್ಯ ಸ್ವಭಾವದ ಮುಖ, ಕಿವಿಗೆ ದೊಡ್ಡ ಓಲೆಗಳು, ಎದೆಗೆ ಕವಚದಂತಹ ಆಭರಣಗಳನ್ನು ಇಲ್ಲಿ ಕಾಣಬಹುದು.

೩.೨.೨.೧೨: ಭಕ್ತ ಅಂಜಲಿ ಮುದ್ರಾದಲ್ಲಿ :

ಒಂದು ಅಡಿ ಎತ್ತರವಿರುವ ಈ ಭಕ್ತ ಅಂಜಲಿ ಮುದ್ರಾ ಶಿಲ್ಪವು ಬಿಳಿ ಶಿಲೆಯಿಂದ ರಚನೆಯಾಗಿದ್ದು ದೇಹದ ಅರ್ಧ ಮಾತ್ರ ಸಿಕ್ಕಿರುವಂತೆ ಇಲ್ಲಿ ಪ್ರದರ್ಶಿಸಲಾಗಿದೆ. ಮುಗ್ಧ ಮುಖವನ್ನೊತ್ತ ಈ ಶಿಲ್ಪ ಎರಡೂ ಕೈ ಮುಗಿದು ನಮಸ್ಕರಿಸುವಂತಹ ಭಾವಕ್ಕೆ ಪಾತ್ರವಾಗಿರುತ್ತದೆ.

೩.೨.೨.೧೩: ಲಕ್ಷ್ಮೀ ನರಸಿಂಹ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೩೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೬೦ ಸೆಂ.ಮೀ ಇರುವ ಈ ಶಿಲ್ಪವು ದೇಹದ ಅರ್ಧಭಾಗವು ಉಳಿದಿರುತ್ತದೆ. ಲಕ್ಷ್ಮಿ ಮತ್ತು ನರಸಿಂಹನನ್ನು ಒಟ್ಟಿಗೆ ನೋಡುವ ದೃಶ್ಯ ಇದಾಗಿದೆ. ಉಗ್ರವಾದ ಮುಖವನ್ನೊಂದಿದ ನರಸಿಂಹ, ಸೌಮ್ಯ ಸ್ವಭಾವನ್ನೊಂದಿಗೆ ಭಾವನೆಗಳನ್ನು ಮುಖಚರ್ಯೆಯಲ್ಲಿ ಕಾಣಬಹುದು. ನರಸಿಂಹನ ಬಲಹಸ್ತದಲ್ಲಿ ಶಂಖು, ಎಡಹಸ್ತದಲ್ಲಿ ಚಕ್ರವನ್ನು ಗುರುತಿಸಲಾಗಿದೆ.

೩.೨.೨.೧೪: ವೈಷ್ಣವ ದೇವತೆ :

ಒಂದು ಅಡಿಗಿಂತ ಕಡಿಮೆ ಇರುವ ಶಿರ(ರುಂಡ)ವನ್ನು ಇಲ್ಲಿ ಕಾಣಬಹುದು. ಇದನ್ನು ಸಂಶೋಧಕರು ವೈಷ್ಣವ ದೇವತೆ ಎಂದು ಗುರುತಿಸಿದ್ದಾರೆ.

೩.೨.೨.೧೫: ಲಕ್ಷ್ಮಣ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೬೦*೨೮ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೬೦*೨೮ ಸೆಂ.ಮೀ ಇರುವ ಈ ಲಕ್ಷ್ಮಣ ಶಿಲ್ಪವು ಮೊಣಕಾಲಿನವರೆಗೆ ಮಾತ್ರ ಶಿಲ್ಪವನ್ನು ಕಾಣಬಹುದು. ತನ್ನ ಎಡ ತೆಕ್ಕೆಯಲ್ಲಿ ಬಿಲ್ಲನ್ನು ಹಿಡಿದು ನಮಸ್ಕರಿಸುವಂತಹ ಭಾವಕ್ಕೆ ಶಿಲ್ಪ ಎಡೆಮಾಡಿಕೊಟ್ಟಿದೆ. ಮುಖದಲ್ಲಿ ಅಸ್ಪಷ್ಟತೆ, ಕಿರೀಟ, ಕಾಲುಗಳು, ಕೈಗಳು ನಾಶಗೊಂಡಿರುತ್ತವೆ.

೩.೨.೨.೧೬: ರಾಜಮೂರ್ತಿ (ಶಿರ) :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೩೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೩೦ ಸೆಂ.ಮೀ ಇರುವ ಈ ಶಿಲ್ಪವು ರಾಜಮೂರ್ತಿ (ಶಿರ) ಎಂದು ಗುರುತಿಸಲಾಗಿದೆ. ರಾಜ ಎಂದು ಕರೆದಿರುವ ಹಿನ್ನೆಲೆಯಲ್ಲಿಯೇ ತಲೆಗೆ ಕಿರೀಟ, ಮುಖದಲ್ಲಿ ದಪ್ಪ ಮೀಸೆ, ದಪ್ಪನಾದ ಕಣ್ಣುಗಳು ದುಂಡಾದ ಮುಖದಲ್ಲಿ ಉದ್ದನೆಯ ಮೂಗು, ಕಿವಿಗಳು, ಮೌನದ ತುಟಿಗಳನ್ನು

ಹೊಂದಿರುವುದು ವಿಶೇಷವಾಗಿದೆ. ಇದನ್ನು ಗಾಜಿನ ಪೆಟ್ಟಿಗೆಯಲ್ಲಿಟ್ಟು ನೋಡುಗರಿಗೆ ಅವಕಾಶ ಕಲ್ಪಿಸಲಾಗಿದೆ.

೩.೨.೨.೧೭: ವೇಣುಗೋಪಾಲ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೬೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೬೦*೩೦ ಸೆಂ.ಮೀ ಇರುವ ವೇಣುಗೋಪಾಲ ಶಿಲ್ಪವು ಶಿರವನ್ನು ಕಳೆದುಕೊಂಡಿದೆ. ಪ್ರಮುಖ ಭಾಗವಾದ ಶಿರ(ತಲೆ)ವು ಇಲ್ಲದಿರುವುದರಿಂದ ಗುರುತಿಸುವುದಾದರೂ ಹೇಗೆ ಎಂಬ ಪ್ರಶ್ನೆ ಎದುರಾದಾಗ ವಿಷ್ಣುವಿನ ರೂಪವಾದ ಶ್ರೀಕೃಷ್ಣನು ಕೊಳಲನ್ನು ನುಡಿಸುತ್ತಿರುವಂತಹ ಭಂಗಿಗೆ ಈ ಶಿಲ್ಪ ಸಾಕ್ಷಿಯಾಗಿರುತ್ತದೆ. ಈ ಹಿನ್ನೆಲೆಯನ್ನಿಟ್ಟುಕೊಂಡೆ ವೇಣುಗೋಪಾಲ ಮೂರ್ತಿ ಎಂದು ಗುರುತಿಸಲಾಗಿದೆ. ಕಪ್ಪು ಶಿಲೆಯಿಂದ ರಚಿಸಲ್ಪಟ್ಟ ಈ ಶಿಲ್ಪದಲ್ಲಿ ನೈಜತೆ ತುಂಬಾ ಹತ್ತಿರವಿದೆ. ಒಂಟಿಕಾಲಲ್ಲಿ ನಿಂತು, ಬಲ ಪಾದವನ್ನು ಎಡಕ್ಕೆ ಇಟ್ಟು, ತನ್ನ ಎರಡು ಕೈಗಳಿಂದ ಕೊಳಲನ್ನು ಹಿಡಿದು ನುಡಿಸುತ್ತಿರುವಂತೆ ಶಿಲ್ಪ ಭಾಸವಾಗುತ್ತಿದೆ ಈ ಶಿಲ್ಪದಲ್ಲಿ ಒಟ್ಟು ಮೂರು ಹಸ್ತಗಳನ್ನು ಗುರುತಿಸಲಾಗಿದೆ. ಹಿಂಬದಿಯ ಕೆಳಭಾಗದಲ್ಲಿ ಅಕ್ಕ ಪಕ್ಕ ಎರಡು ಹಂದಿಗಳನ್ನು ಕಾಣಬಹುದು. ಕೈಗೆ ಬಳೆಗಳು, ಕಾಲಿಗೆ ಕಡಗ ಮೈಗೆ ಆಭರಣವನ್ನು ಹಾಕಲಾಗಿರುತ್ತದೆ.

೩.೨.೨.೧೮: ಆಳ್ವರು :

ಒಂದು ಅಡಿ ಎತ್ತರವಿರುವ ಈ ಆಳ್ವರು ಶಿಲ್ಪವು ಧ್ಯಾನಸ್ಥ ರೂಪಕವಾಗಿದೆ. ಆಳ್ವಾರ್ ಒಬ್ಬ ವಾಜ್ಞಿಯಾಗಿದ್ದರು. ಅವರು ತಪಸ್ಸು ಮಾಡುತ್ತಿರುವ ಸಂದರ್ಭವನ್ನು ಇಲ್ಲಿ ಶಿಲ್ಪ ರೂಪದಲ್ಲಿ ಕೆತ್ತಲಾಗಿದೆ. ಕಪ್ಪು ಶಿಲೆಯಿಂದ ರಚಿತವಾಗಿರುತ್ತದೆ.

೩.೨.೨.೧೯: ಮತ್ಸ್ಯ ಮತ್ತು ಕಲ್ಕಿ ಅವತಾರ :

ಕಾಲ: ೧೪ ಮತ್ತು ೧೫ ನೇ ಶತಮಾನ

ಶಿಲೆ: ಗ್ರಾನೈಟ್

ಅಳತೆ: ೩೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೬೦ ಸೆಂ.ಮೀ ಇರುವ ಈ ಮತ್ಸ್ಯ ಮತ್ತು ಕಲ್ಕಿ ಅವತಾರವು, ದಶಾವತಾರಗಳಲ್ಲಿ ಬರುವ ಎರಡು ಮಹತ್ತರ ಪಾತ್ರಗಳಾಗಿವೆ. ಮತ್ಸ್ಯ (ಮೀನು) ಮತ್ತು ಕಲ್ಕಿ (ಕುದುರೆ)ಗಳಾಗಿದ್ದು, ಅದೇ ರೀತಿ ಹಳದಿ ಶಿಲೆಯಲ್ಲಿ ಚಿಕ್ಕದಾಗಿ ಮತ್ತು ಸ್ಪಷ್ಟವಾಗಿ ಶಿಲ್ಪ ಕೆತ್ತನೆ ಮಾಡಲಾಗಿದೆ. ಈ ಇಬ್ಬರು ಕೂಡ ವಿಷ್ಣುವಿನ ಅವತಾರಗಳು.

೩.೨.೨.೨೦: ವಿಷ್ಣು :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೩೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೩೦ ಸೆಂ.ಮೀ ಇರುವ ಈ ಶಿಲ್ಪವೂ ವಿಷ್ಣುವಾಗಿ ಪರಿಣಮಿಸಿದೆ ಎಂದೇ ಹೇಳಬಹುದು. ಆಧುನಿಕ ಶಿಲ್ಪದಂತೆ ಪ್ರಜ್ವಲಿಸುವ ಈ ಶಿಲ್ಪವನ್ನು ವಿಷ್ಣು ಎಂದು ಕರೆದಿರುವುದು ಆಶ್ಚರ್ಯ ಎನ್ನಬಹುದು. ಈ ಹಿಂದೆ ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಗಮನಿಸಿದ ವಿಷ್ಣುವಿನ ರೂಪವನ್ನೇ ಇಲ್ಲಿ ಪರಿಗಣನೆಗೆ ತೆಗೆದುಕೊಂಡರೆ ಅಲ್ಲಿನ ಅಂಶಗಳು ಇಲ್ಲಿ ಸೇರ್ಪಡೆಗೊಂಡಿರುತ್ತವೆ. ಆ ಒಂದು ಕಾರಣಕ್ಕೆ ವಿಷ್ಣು ಎಂದು ಗುರುತಿಸಿರಬಹುದು. ದಪ್ಪ ಹೊಟ್ಟೆ, ಹೊಟ್ಟೆಗೆ ಸುತ್ತಿರುವ ಡಾಬು, ತುಂಬಾ ಗಂಭೀರವಾಗಿ ಕುಳಿತಿರುವ ವಿಷ್ಣು, ಹಿಂಬದಿಯ ಹಸ್ತಗಳಲ್ಲಿ ಶಂಖು ಮತ್ತು ಚಕ್ರವನ್ನು ಕಾಣಬಹುದು. ಎಡಹಸ್ತದಲ್ಲಿ ಗದೆಯನ್ನು ಹಿಡಿಯಲಾಗಿದೆ ಆದರೂ ಥಟ್ಟಂತ ಈ ಶಿಲ್ಪವನ್ನು ನೋಡಿದಾಗ ಆಧುನಿಕ ಶಿಲ್ಪದಂತೆಯೇ ಗೋಚರಿಸುತ್ತದೆ.

೩.೨.೨.೨೧: ವಿಷ್ಣು(ಶ್ರೀನಿವಾಸ)

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪು ಶಿಲೆ

ಅಳತೆ: ೧೨೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೧೨೦*೬೦ ಸೆಂ.ಮೀ ಇರುವ ವಿಷ್ಣು ಶಿಲ್ಪವನ್ನು ಕಪ್ಪು ಮತ್ತು ನುಣುಪಾದ ಶಿಲೆಯಲ್ಲಿ ರಚಿಸಲಾಗಿದೆ. ನಿಂತಿರುವ ಭಂಗಿಯಲ್ಲಿರುವ ವಿಷ್ಣು (ಶ್ರೀನಿವಾಸ) ಮೈತುಂಬಾ ಆಭರಣಗಳನ್ನು ಧರಿಸಿದ್ದಾನೆ. ಈ ಶಿಲ್ಪವೂ ತುಸು ನಾಶವಾಗಿದೆ. ವಿಷ್ಣುವಿನ ಬಲ ಕೈ ಕಳೆದುಕೊಂಡಿದೆ. ಎಡಕೈ

ನೀಳವಾಗಿ ಭಾಗಿನಿಂತಿದೆ. ಸಾಂಪ್ರದಾಯಿಕ ಉಡುಪನ್ನು ತೊಡಿಸಿರುವ ರೀತಿ ಅದ್ಭುತ, ತುಂಬಾ ಗಾಂಭೀರ್ಯವನ್ನು ಹೊತ್ತಿರುವ ವಿಷ್ಣು ಶಿಲ್ಪವೆಂದರೆ ಬಹುಶಃ ಇದೇ ಏನೋ ಅನಿಸುತ್ತದೆ ಆ ಮಟ್ಟಕ್ಕೆ ಮೌನಕ್ಕೆ ಶರಣಾಗಿರುವ ವಿಷ್ಣು ಸೌಂದರ್ಯ ಪ್ರಮುಖವೂ ಹೌದು. ಅದೇ ರೀತಿ ಈ ಶಿಲ್ಪದಲ್ಲಿ ಸೌಂದರ್ಯವನ್ನು ಹೆಚ್ಚಿಸಲಾಗಿದೆ.

೩.೨.೨.೨೨: ರಾಮ, ಲಕ್ಷ್ಮಣ ಮತ್ತು ಸೀತೆ :

ಇಲ್ಲಿ ಮೂರು ಶಿಲ್ಪಗಳನ್ನು ಒಟ್ಟಿಗೆ ನಿಲ್ಲಿಸಲಾಗಿದೆ. ಅದರಲ್ಲಿ ಬಹುಮುಖ್ಯವಾಗಿ ರಾಮ, ಲಕ್ಷ್ಮಣ ಮತ್ತು ಸೀತೆ. ಈ ಮೂವರಲ್ಲಿ ಪರಿಪೂರ್ಣ ಶಿಲ್ಪವೆಂದರೆ ರಾಮ ಎಂದೇಳಬಹುದು. ಯಾಕೆಂದರೆ ಉಳಿದ ಎರಡು ಶಿಲ್ಪಗಳು ಹಾಳಾಗಿರುತ್ತವೆ ತನ್ನ ಶಿರವನ್ನು ಕಳೆದುಕೊಂಡು ದುಸ್ಥಿತಿಯನ್ನು ಹೊಂದಿರುತ್ತವೆ. ರಾಮ ಮತ್ತು ಸೀತೆ, ಲಕ್ಷ್ಮಣ ಒಟ್ಟಿಗೆ ಇರುವುದನ್ನು ಅನೇಕ ಚಿತ್ರಕೃತಿಗಳಲ್ಲಿ ನೋಡಿರುತ್ತೇವೆ. ಅದೇ ಮಾರ್ಗದಲ್ಲಿ ಸಾಗಿರುವ ಶಿಲ್ಪಗಾರ ಕಪ್ಪು ಶಿಲೆಯಿಂದ ಮೂವರ ಶಿಲ್ಪವನ್ನು ಅದ್ಭುತವಾಗಿ ರಚನೆ ಮಾಡಿದ್ದಾನೆ. ಈ ಶಿಲ್ಪವನ್ನು ಗಮನಿಸಿದರೆ ರಾಮ, ಲಕ್ಷ್ಮಣರ ಎರಡು ಶಿಲ್ಪಗಳು ಒಂದೇ ಹೋಲಿಕೆಯನ್ನು ಹೊಂದಿವೆ ಅದೇ ರೀತಿಯಲ್ಲಿ ಸೀತೆಯೂ ಕೂಡ ಇದ್ದು ಎದೆಯ ಭಾಗವನ್ನು ಉಬ್ಬಿಸಲಾಗಿದ್ದು, ನೀಳವಾದ ಕೈ ಕಾಲುಗಳು ಮತ್ತು ದೇಹದಲ್ಲಿ ಸ್ತ್ರೀ ಲಕ್ಷಣಗಳನ್ನು ತೋರಿಸಿರುವ ಹಿನ್ನೆಲೆಯಲ್ಲಿ ಹೆಣ್ಣು ಮತ್ತು ಸೀತೆ ಎಂದು ಗುರುತು ಹಚ್ಚಬಹುದು. ಕಿರೀಟ, ಮುಖದ ಭಾವನೆ, ದೇಹದ ಮೇಲಿರುವ ಆಭರಣಗಳು ಉಡುಪು ಎಲ್ಲವೂ ಸಾಂಪ್ರದಾಯಕವಾಗಿಯೇ ಇರುವುದು ಶಿಲ್ಪಗಳಿಗೆ ಮತ್ತಷ್ಟು ಮೆರಗನ್ನು ತಂದುಕೊಟ್ಟಿರುತ್ತವೆ ಈ ಶಿಲ್ಪಗಳು 3 x 1½ ಅಡಿ ಎತ್ತರ ಮತ್ತು ಅಗಲಗಳಿರುತ್ತವೆ.

೩.೨.೨.೨೩: ಲಕ್ಷ್ಮಿ ನಾರಾಯಣ

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೯೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೯೦*೩೦ ಸೆಂ.ಮೀ ಇರುವ ಈ ಶಿಲ್ಪದಲ್ಲಿ ನಾರಾಯಣನು ತನ್ನ ಪತ್ನಿ ಲಕ್ಷ್ಮಿಯನ್ನು ತೊಡೆ ಮೇಲೆ ಕುಳ್ಳಿರಿಸಿಕೊಂಡಿರುತ್ತಾನೆ. ಹಿಂದೂ ಪುರಾಣಗಳ ಪ್ರಕಾರ ಭಗವಂತನಾದ ವಿಷ್ಣುವನ್ನು ಈ

ಜಗತ್ತಿನ ದೇವನೆಂದು ಕರೆಯಲಾಗುತ್ತದೆ. ಅದೇ ರೀತಿಯಲ್ಲಿ ಇಲ್ಲಿ ನಾರಾಯಣನಾಗಿದ್ದಾನೆ. ಕುಳಿತ ಭಂಗಿಯಲ್ಲಿರುವ ಲಕ್ಷ್ಮಿ ಮತ್ತು ನಾರಾಯಣ ಸೌಮ್ಯ ಸ್ವಭಾವದ ಲಕ್ಷಣಗಳಿವೆ.

೩.೨.೨.೨೪: ಪದ್ಮಾಸನ ನರಸಿಂಹ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೬೮*೬೦೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೬೮*೬೦ ಸೆಂ.ಮೀ ಇರುವ ಪದ್ಮಾಸನ ನರಸಿಂಹ ಶಿಲ್ಪವು ನೋಡಲು ಸುಂದರವಾಗಿದೆ. ಧ್ಯಾನಾವಸ್ಥೆಯಲ್ಲಿ ಕುಳಿತ ನರಸಿಂಹನ ಮುಖವು ಸಿಂಹದ್ದಾಗಿದ್ದು, ಕಪ್ಪು ಶಿಲೆಯನ್ನು ಬಳಸಿ ಮೂರ್ತಿಯನ್ನು ಕೆತ್ತಲ್ಪಟ್ಟಿದೆ. ಈ ಶಿಲ್ಪವು ಕೂಡ ಅರ್ಧಂಬರ್ಧ ನಾಶಗೊಂಡಿದೆ. ಅದಕ್ಕೆ ಸಾಕ್ಷಿ ಎಂಬಂತೆ ಕೈಗಳು ಕಾಣಲ್ಪಡುತ್ತಿಲ್ಲ. ಹಿಂಬದಿಯ ಎಡಗೈ ಮುಂಭಾಗದ ಬಲಗೈ ಸ್ಪಷ್ಟತೆ ಇದೆ ಇನ್ನುಳಿದ ಕೈಗಳು ನಾಶಗೊಂಡಿವೆ. ಗಂಭೀರ ಸ್ವರೂಪಿಯಾದ ನರಸಿಂಹನು ಪದ್ಮಾಸನದಲ್ಲಿ ಕುಳಿತು ಧ್ಯಾನ ಮಾಡುತ್ತಿರುವಂತೆ ಶಿಲ್ಪವನ್ನು ರಚಿಸಲಾಗಿದೆ.

೩.೨.೨.೨೫: ಗರುಡ ಅಂಜಲಿ ಮುದ್ರೆ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೩೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೩೦ ಸೆಂ.ಮೀ ಇರುವ ಗರುಡ ಅಂಜಲಿ ಮುದ್ರೆಯ ಶಿಲ್ಪವು ಇದೇ ಅಂಕಣದ ಎರಡನೇ ಚಿತ್ರವನ್ನು ಹೋಲುತ್ತದೆಯಾದರೂ ಅಲ್ಪ ಬದಲಾವಣೆಯನ್ನು ಕಾಣಬಹುದು. ಈ ಅಂಜಲಿ ಮುದ್ರೆಯಲ್ಲಿ ತಟಸ್ಥ ರೀತಿಯಲ್ಲಿ ಗರುಡ ನಿಂತು, ಕೈ ಮುಗಿಯುವಂತಿದೆ. ಅಷ್ಟೆ ಸುಂದರವಾಗಿದೆ. ಒರಟು ಶಿಲೆಯಿಂದ ರಚನೆ ಮಾಡಿರುವ ಶಿಲ್ಪಿ ಸುಂದರವಾಗಿಯೇ ಕೆತ್ತಿದ್ದಾನೆ. ಹತ್ತಿರದಿಂದ ಅಸ್ಪಷ್ಟವಾಗಿ ಕಂಡರೂ ದೂರದಿಂದ ಸ್ಪಷ್ಟತೆಯನ್ನು ಕಾಣಬಹುದು.

೩.೨..೨.೨೬ ಹನುಮಾನ್ :

ಕಾಲ; ೧೪ ಮತ್ತು ೧೫ ನೇ ಶತಮಾನ

ಶಿಲೆ; ಕಪ್ಪುನೀಲಿ ಶಿಲೆ

ಅಳತೆ: ೩೦*೩೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೩೦*೩೦ ಸೆಂ.ಮೀ ಇರುವ ಹನುಮಾನ್ ಶಿಲ್ಪವು ಕಪ್ಪು ಶಿಲೆಯಿಂದ ರಚನೆಯಾಗಿದೆ ಚಿಕ್ಕ ಶಿಲ್ಪವಾದರೂ ಶಿಲ್ಪಕ್ಕೆ ಜೀವ ತುಂಬಿದ್ದಾನೆ. ನಿಂತು ನಮಸ್ಕರಿಸುವಂತೆ ಭಾಸವಾಗುವ ಈ ಶಿಲ್ಪ ಕೃತಿಯಲ್ಲಿ ಕುಬ್ಜನಂತೆ ಹನುಮಾನ್ ಕಂಡರೂ ಅದು ಗೊತ್ತುಸಿಗದ ರೀತಿಯಲ್ಲಿ ಬಿಂಬಿಸಲಾಗಿದೆ. ಅಳತೆ, ಪ್ರಮಾಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೂ ಗೋಚರಿಸಿದವರಾದರೂ ಅದು ಶಿಲ್ಪಕ್ಕೆ ಯಾವುದೇ ಹಾನಿಯುಂಟಾಗಿಲ್ಲ. ತನ್ನ ಬಾಹುಗಳಲ್ಲಿ ಶಕ್ತಿಯನ್ನು ತೋರಿಸಿರುವ ಚಾಣಾಕ್ಷ ಕಲೆಗಾರ, ಇನ್ನು ಇಲ್ಲಿ ಅತಿ ಎತ್ತರವಾದದ್ದೆಂದರೆ ಹನುಮನ ಬಾಲ, ಬೃಹತ್ ಎತ್ತರವಾಗಿ, ದಪ್ಪನಾಗಿ ತೋರಿಸಲ್ಪಟ್ಟಿದ್ದಾರೆ.

೩.೨..೨.೨೭: ವೈಷ್ಣವ ದೇವತೆ :

ಕಾಲ: ೧೪ ಮತ್ತು ೧೫ ನೇ ಶತಮಾನ

ಶಿಲೆ: ಕಪ್ಪುನೀಲಿ ಶಿಲೆ

ಅಳತೆ: ೯೦*೬೦ ಸೆಂ.ಮೀ

ದೊರೆತ ಸ್ಥಳ: ವಿಜಯನಗರ

೯೦*೬೦ ಸೆಂ.ಮೀ ಇರುವ ವೈಷ್ಣವ ದೇವತೆಯ ಶಿಲ್ಪವು ನೋಡಲು ಸುಂದರವಾಗಿದೆ. ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿದ್ದು ಮುಖ ಮತ್ತು ಎದೆ ಭಾಗ ಹಾಳಾಗಿರುತ್ತದೆ. ಉಳಿದಂತೆ ತನ್ನ ಎಡಹಸ್ತದಲ್ಲಿ ಪದ್ಮಪುಷ್ಪವನ್ನು ಹಿಡಿದು ನಿಂತಿರುವುದು. ಹಿಂಬದಿಯ ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಕಾಣಬಹುದು. ಶಾಂತಚಿತ್ತದಿಂದ ಆಶೀರ್ವದಿಸುವಂತೆ ನಿಂತಿರುವ ವೈಷ್ಣವ ದೇವತೆ ಸೌಂದರ್ಯವತಿಯಾಗಿದ್ದಾಳೆ. ಸಾಂಪ್ರದಾಯಕ ವಸ್ತ್ರ ಮತ್ತು ಆಭರಣಗಳನ್ನು ಸೂಕ್ಷ್ಮವಾಗಿ ಕೆತ್ತುವ ಮೂಲಕ ಶಿಲ್ಪಿ ಇಲ್ಲಿ ಮೆರೆದಿದ್ದಾನೆ ಸೌಮ್ಯ ಸ್ವಭಾವದ ಶಿಲ್ಪಿ ಎಂದರೆ ತಪ್ಪಾಗಲಾರದು.

೩.೨.೨೮: ಅಂಜಲಿ ಮುದ್ರೆಯಲ್ಲಿ ಗರುಡ :

ಕಾಲ: ೧೪ ಮತ್ತು ೧೫ ನೇ ಶತಮಾನ

ಶಿಲೆ: ಗ್ರಾನೈಟ್

ಅಳತೆ: ೧೨೦*೬೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೧೨೦*೬೦ ಸೆಂ.ಮೀ ಇರುವ ಗರುಡ ಅಂಜಲಿ ಮುದ್ರೆಯ ಶಿಲ್ಪವು ಇದೇ ಅಂಕಣದ ಎರಡನೇ ಚಿತ್ರವನ್ನು ಹೋಲುತ್ತದೆಯಾದರೂ ಅಲ್ಪ ಬದಲಾವಣೆಯನ್ನು ಕಾಣಬಹುದು. ಈ ಅಂಜಲಿ ಮುದ್ರೆಯಲ್ಲಿ ತಟಸ್ಥ ರೀತಿಯಲ್ಲಿ ಗರುಡ ತನ್ನ ಬಲಮುಖವಾಗಿ ನಿಂತು, ಕೈ ಮುಗಿಯುವಂತಿದೆ. ಅಷ್ಟೆ ಸುಂದರವಾಗಿದೆ. ಒರಟು ಶಿಲೆಯಿಂದ ರಚನೆ ಮಾಡಿರುವ ಶಿಲ್ಪಿ ಸುಂದರವಾಗಿಯೇ ಕೆತ್ತಿದ್ದಾನೆ. ಹತ್ತಿರದಿಂದ ಅಸ್ಪಷ್ಟವಾಗಿ ಕಂಡರೂ ದೂರದಿಂದ ಸ್ಪಷ್ಟತೆಯನ್ನು ಕಾಣಬಹುದು.

೩.೨..೨.೨೯: ಹನುಮಾನ್ :

ಬಳಸಿದ ಕಲ್ಲು : ಗ್ರಾನೈಟ್ ಕಲ್ಲು

ಕಾಲ : ೧೩-೧೪ನೇ ಶತಮಾನ

ಅಳತೆ : ೧೨೦ * ೯೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೧೨೦*೯೦ ಸೆಂ.ಮೀ ಇರುವ ಹನುಮಂತನ ಶಿಲ್ಪವನ್ನು ಗ್ರಾನೈಟ್ ಶಿಲೆಯಿಂದ ಕೆತ್ತಲ್ಪಟ್ಟಿದೆ. ಇದನ್ನು ಹದಿಮೂರನೆ ಶತಮಾನದ ಶಿಲ್ಪವೆಂದು ಗುರುತಿಸಲಾಗಿದ್ದು, ನಿಂತಿರುವ ವಿವಿಧ ಆಸನವನ್ನೊತ್ತ ಶೈಲಿಯಲ್ಲಿ ವಿಜೃಂಬಿಸಿರುತ್ತಾನೆ ಹನುಮಂತ. ತನ್ನ ಎಡಗಾಲನ್ನು ತನ್ನ ಎಡಮುಖವಾಗಿಟ್ಟು ತನ್ನ ಎಡಗೈಯನ್ನು ಭಾಗಿದ ಸೊಂಟಕ್ಕಿಟ್ಟು, ಬಲಗೈಯನ್ನು ಎತ್ತಿ ಅಂಗಲವನ್ನು ತೋರಿಸಿರುವುದನ್ನು ಹಿಂದೂ ಧರ್ಮದಲ್ಲಿ ಅಗೋಚರ ಶಕ್ತಿಯ ಹಿನ್ನಲೆಯದು ಎಂಬಂತೆ, ಆಶಿರ್ವದಿಸುವ ಭಂಗಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮೈತುಂಭಾ ಆಭರಣಗಳು, ಕಾಲು ಕಡುಗಗಳು, ತೋಳಬಂದಿ, ಡಾಬು ಮತ್ತು ಕಿವಿ ಓಲೆಗಳನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ಘಟ್ಟಿ ಶಿಲೆಯಾದರೂ ಶಿಲ್ಪಿ ತನ್ನದೇ ಶೈಲಿಯಲ್ಲಿ ಕೆತ್ತಲ್ಪಟ್ಟಿದ್ದಾನೆ. ತಕ್ಷಣ ನೋಡಿದರೆ ಶಿಲೆಯಿಂದ ಉದ್ಬವವಾಗಿರುವಂತಹ ಭಾವ ನೋಡುಗನದ್ದಾಗಿರುತ್ತದೆ. ಅಷ್ಟರ ಮಟ್ಟಿನ ಪ್ರಭಾವ ಈ ಶಿಲ್ಪದ್ದಾಗಿದೆ.

೩.೨.೨.೩೦: ಪ್ರಸನ್ನ ನರಸಿಂಹ :

ನೋಡಲು ಅಸ್ಪಷ್ಟವಾಗಿರುವ ನರಸಿಂಹ ಶಿಲ್ಪವು ಘಟ್ಟಿ ಬಿಳಿ ಗ್ರಾನೈಟ್ ಕಲ್ಲಿನಿಂದ ತಯಾರಾಗಿದೆ. ದೂರದಿಂದ ಕಲ್ಲಲ್ಲಿರುವ ಆಕೃತಿ ಕಾಣುತ್ತಾದರೂ ಹತ್ತಿರದಿಂದ ಅದು ಅಸ್ಪಷ್ಟ. ಕುಬ್ಜನಂತೆ ಕಾಣಲ್ಪಡುವ ಈ ಶಿಲ್ಪದಲ್ಲಿ ನರಸಿಂಹನ ಹೋಲಿಕೆ ಆ ಹಿನ್ನಲೆಯಲ್ಲಿಯೇ ಈ ಶಿಲ್ಪವನ್ನು ಪ್ರಸನ್ನ ನರಸಿಂಹ ಎಂದು ಗುರುತಿಸಲಾಗಿದೆ. ಶಾಂತಚಿತ್ತದಿಂದ ತನ್ನ ಎರಡು ಕೈಗಳನ್ನು ವಿಶ್ರಾಂತ

ರೀತಿಯಲ್ಲಿ ಇಳಿಬಿಟ್ಟು ನಿಂತಿರುವ ನರಸಿಂಹ, ತುಸು ಗಂಭೀರವಾಗಿದ್ದಾನೆ. ಮೈತುಂಬಾ ಆಭರಣಗಳು, ಹಿಂಬದಿಯ ಕೈಯಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದಾನೆ. ಸಿಂಹನ ಮುಖ ಹೋಲಿಕೆ, ತಲೆಗೆ ಕಿರೀಟ, ಬಲಭಾಗದಲ್ಲಿ ತನ್ನ ಸೇವಕ ಕೈಮುಗಿದು ನಿಂತಿರುವುದು. ಚಿಕ್ಕ ಶಿಲ್ಪವಾದರೂ ಚೊಕ್ಕವಾಗಿದೆ.

೩.೨.೨.೩೧: ಲಕ್ಷ್ಮಿ ನರಸಿಂಹ :

ಶಿಲ್ಪದ ಹೆಸರು : ಲಕ್ಷ್ಮಿ ನರಸಿಂಹ

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೩–೧೪ ನೇ ಶತಮಾನ

ಅಳತೆ : ೧೨೦ * ೧೧೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

ಲಕ್ಷ್ಮಿನರಸಿಂಹ ಶಿಲ್ಪವು ಲಲಿತಾಸನದಂತೆ ಆಸೀನ ಭಂಗಿಯಲ್ಲಿ ಚತುರ್ಭಜಧಾರಿಯಾಗಿದ್ದು. ಹಿಂಭಾಗದಲ್ಲಿ ಶಂಖ, ಪದ್ಮಗಳನ್ನು ಹಿಡಿದಿಟ್ಟು ತನ್ನ ಎಡಭಾಗದ ತೊಡೆಯ ಮೇಲೆ ಲಕ್ಷ್ಮೀಯು ಕುಳಿತಿದ್ದು, ಬಲಗೈ ಮುದ್ರೆಯಲ್ಲಿ ಎಡಗೈ ತನ್ನ ತೊಡೆಯ ಮೇಲೆ ಕುಳಿತ ಲಕ್ಷ್ಮಿಯು ಸೊಂಟವನ್ನು ಬಳಸಿ ಹಿಡಿದಿದೆ. ಲಕ್ಷ್ಮಿಯ ತಲೆಯಲ್ಲಿ ಕಿರೀಟ ಮುಕಟ, ಕೊರಳಲ್ಲಿ ಕಂಠಾಭರಣವನ್ನು ಧರಿಸಿರುವುದನ್ನು ಕಾಣಬಹುದು. ಹಿಂಭಾಗದಲ್ಲಿ ಪ್ರಭಾವಳಿಯ ಕಾಣಬಹುದು. ನರಸಿಂಹನ ಎಡತೊಡೆಯ ಮೇಲೆ ಕುಳಿತು ಲಕ್ಷ್ಮೀಯ ಕುರಂಡ ಮಕುಟ ಧರಿಸಿದ್ದು, ದ್ವಿಭುಜಗಳನ್ನು ಹೊಂದಿದ್ದಾಳೆ. ಕಿವಿಯಲ್ಲಿ ಮಕರ ಕುಂಡಲಗಳು ಮುಕ್ಕಾಗಿದೆ. ತುಂಬಾ ಅರ್ಥ ಗರ್ಭಿತವಾದ ಶಿಲ್ಪ ಇದಾಗಿದೆ.

೩.೨.೨.೩೨: ಗೋಪಿಕಾ ಸ್ತ್ರೀಯರೊಂದಿಗೆ ವೇಣುಗೋಪಾಲ :

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೩–೧೪ ನೇ ಶತಮಾನ

ಅಳತೆ : ೬೦ * ೧೮೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೬೦*೧೮೦ ಸೆಂ.ಮೀ ಇರುವ ಈ ಶಿಲ್ಪದಲ್ಲಿ ಮಧ್ಯ ಶ್ರೀಕೃಷ್ಣನಿದ್ದು, ಅಕ್ಕ ಪಕ್ಕದಲ್ಲಿ ಏಳು ಸ್ತ್ರೀಯರು ನಿಂತಿದ್ದಾರೆ. ಕೃಷ್ಣನ ಕೆಳಗೆ ವಾಹನಗಳು (ಹಂದಿಗಳು) ನಿಂತಿವೆ. ಕೊಳಲನ್ನು ಊದುತ್ತಿರುವಂತೆ ಭಾಸವಾಗುವ ಶಿಲ್ಪವು ಅಸ್ಪಷ್ಟತೆಯಿಂದ ಕೂಡಿದ್ದಾಗಿದೆ.

೩.೨.೨.೩೩: ಕೃಷ್ಣ ಮತ್ತು ಅರ್ಜುನ :

ಶಿಲ್ಪದ ಹೆಸರು : ಲಕ್ಷ್ಮಿ ನರಸಿಂಹ

ಬಳಸಿದ ಕಲ್ಲು : ಬಿಳಿ ಗ್ರಾನೈಟ್

ಕಾಲ : ೧೩-೧೪ ನೇ ಶತಮಾನ

ಅಳತೆ : ೬೦ * ೬೦ ಸೆಂ.ಮೀ.

ದೊರೆತ ಸ್ಥಳ : ವಿಜಯನಗರ ಹಂಪಿ

೬೦*೬೦ ಸೆಂ.ಮೀ ಇರುವ ಈ ಶಿಲ್ಪದಲ್ಲಿ ಮಹಾಭಾರತದ ಯುದ್ಧದ ಸಂದರ್ಭಕ್ಕೆ ಸಂಬಂಧಿಸಿದ ಸನ್ನಿವೇಶವನ್ನು ಕಾಣಬಹುದಾಗಿದೆ. ರಥದಲ್ಲಿ ಸಾರಥಿ ಕೃಷ್ಣನಿದ್ದು, ರಥದಲ್ಲಿ ಬಿಲ್ಲು ಬಾಣವನ್ನು ಹಿಡಿದು ನಿಂತಿರುವ ಅರ್ಜುನನನ್ನು ಕಾಣಬಹುದು. ಬಾಣವನ್ನು ಬಿಡುತ್ತಿರುವ ಸನ್ನಿವೇಶ ಇದಾಗಿದ್ದು, ಅರ್ಜುನನ ಜೊತೆಗೆ ಇಬ್ಬರು ಸೈನಿಕರು ನಿಂತಿದ್ದಾರೆ. ಅಶ್ವಗಳ ಆರ್ಭಟ ಮುಗಿಲು ಮುಟ್ಟಿದ್ದು, ಈ ದೃಶ್ಯವನ್ನು ನೋಡುತ್ತಿದ್ದರೆ ಬಹುಶಃ ನೋಡುಗರಿಗೆ ಯುದ್ದದ ಗಾತ್ರದ ಅರಿವಾಗಬಹುದು.

೩.೨.೨.೩೪: ವಿಷ್ಣು ರಂಗನಾಥ :

ಕಾಲ: ೧೪ ಮತ್ತು ೧೫ ನೇ ಶತಮಾನ

ಶಿಲೆ: ಕಪ್ಪು ಶಿಲೆ

ಅಳತೆ: ೬೦*೧೮೦ ಸೆಂ.ಮೀ

ದೊರೆತ ಸ್ಥಳ; ವಿಜಯನಗರ

೬೦*೧೮೦ ಸೆಂ.ಮೀ ಇರುವ ವಿಷ್ಣು ರಂಗನಾಥನ ಮೂರ್ತಿಯು ಸರ್ಪದ ಮೇಲೆ ಎರಡು ಕಾಲ್ಗಳನ್ನು ಚಾಚಿ ಶಯನನಾಗಿದ್ದಾನೆ, ಕಿರೀಟದಾರಿಯಾದ ವಿಷ್ಣುವೂ ತುಟಿತ ಗೊಂಡಿದ್ದು, ತನ್ನ ಬಲಗೈಯನ್ನು ತಲೆಗೆ ವಾರಿಸಿಕೊಂಡಿದ್ದು, ಸಮಬಂಗಿ ಇದ್ದು, ಕೊರಳಹಾರ, ಕಂಠಿಸೂತ್ರ, ಭುಜಕೀರ್ತಿ ಯಜ್ಞೋಪವೀತ, ವೈಜಯಂತಿಮಾಲೆಗಳನ್ನು ಧರಿಸಿದ್ದು, ವಿಷ್ಣುವಿನ ಕಾಲ್ಬಡಿಯಲ್ಲಿ

ದೇವಿಯೊಬ್ಬಳು ಕುಳಿತಿರುವುದನ್ನು ಕಾಣಬಹುದು. ಕಪ್ಪು ಶಿಲೆಯಿಂದ ರಚಿತವಾದ ಈ ಶಿಲ್ಪವು ಅರ್ಧ ನಾಶಗೊಂಡಿರುತ್ತದೆ.

ಅಂಕಣ: ೩.೩

೩.೩.೧: ವಿಷ್ಣು :

೧೨೦*೯೦ ಸೆಂ.ಮೀ ಇರುವ ಈ ವಿಷ್ಣು ಶಿಲ್ಪವನ್ನು ಕಪ್ಪು ಶಿಲೆಯಿಂದ ರಚನೆ ಮಾಡಲಾಗಿದೆ. ಗದೆಯನ್ನು ನೆಲಕ್ಕಿಟ್ಟು ಅದರ ಮೇಲೆ ತನ್ನ ಎಡ ಹಸ್ತವನ್ನಿಟ್ಟಿರುವ ಶ್ರೀವಿಷ್ಣು ಶಾಂತಚಿತ್ತದಿಂದ ನಿಂತಿರುವಂತೆ ಭಾಸವಾಗುತ್ತದೆ. ಬಲ ಹಸ್ತವನ್ನು ಆಶೀರ್ವದಿಸುವ ರೀತಿಯಲ್ಲಿ ಮುಂದು ಮಾಡಲಾಗಿದೆ. ಉಳಿದ ಎರಡು ಕೈಗಳಲ್ಲಿ ಜಯ ಸಂಕೇತವನ್ನು ತೋರಿಸಲಾಗಿದೆ. ವಿಶೇಷವೆಂದರೆ ಶಂಖ ಮತ್ತು ಚಕ್ರಗಳು ಇಲ್ಲಿ ಕಂಡುಬರುವುದಿಲ್ಲ. ಸಾಂಪ್ರದಾಯಿಕ ಶೈಲಿಯ ಉಡುಪನ್ನು ಧರಿಸಿರುವ ವಿಷ್ಣುಗೆ ಆಭರಣಗಳ ಸರಮಾಲೆಯೇ ಮೈತುಂಬಾವಿದೆ. ಇಷ್ಟೆಲ್ಲದರ ನಡುವೆಯೂ ಶಿರಾ ಇರುವುದಿಲ್ಲ. ಆದ್ದರಿಂದ ಇದೊಂದು ಅಸ್ಪಷ್ಟ ಶಿಲವಾಗಿ ಪರಿಣಮಿಸಿದೆ.

೩.೩.೨: ವಿಷ್ಣು :

೧೨೦*೯೦ ಸೆಂ.ಮೀ ಇರುವ ಈ ವಿಷ್ಣು ಶಿಲ್ಪವು ಸಾವಧಾನವಾಗಿ ನಿಂತಿರುವಂತಹದ್ದಾಗಿದೆ. ಕೈಗಳು ಮತ್ತು ಶಿರಾ ಸಂಪೂರ್ಣ ನಾಶಗೊಂಡಿರುತ್ತದೆ. ಆದ್ದರಿಂದ ಇದನ್ನು ವಿಷ್ಣು ಎಂದೂ ಗುರುರು ಪತ್ತೆ ಹಚ್ಚಿರುವ ಸಂಶೋಧಕರ ವಾದವೇ ಸರಿಯಷ್ಟೆ. ಪ್ರಮಾಣ, ಅಳತೆ, ಶಿಸ್ತು ಬದ್ಧ ಶಿಲ್ಪಕೃತಿಯನ್ನು ನೋಡಿಯೂ, ಪ್ರಮಾಣ ಬದ್ಧ ಪರಿಪೂರ್ಣ ವಿಷ್ಣು ಶಿಲ್ಪವನ್ನು ನೋಡುತ್ತಾ ಈ ಶಿಲ್ಪವನ್ನು ಗಮನಿಸಿದರೆ ಬಹುಶಃ ವಿಷ್ಣು ಎಂಬ ಅರಿವು ಬರಬಹುದು. ತಲೆ, ಕೈಗಳು ಇಲ್ಲದಿದ್ದರೂ ಈ ಕಪ್ಪು ಶಿಲೆಯ ಶಿಲ್ಪ ಮುದ್ದಾಗಿದೆ ಮತ್ತು ಸುಂದರವಾಗಿದೆ. ಆ ಕಾರಣಕ್ಕಾಗಿಯೇ ಇದನ್ನು ವಿಷ್ಣು ಅಂತಾ ಒಪ್ಪಿಕೊಳ್ಳಲೇಬೇಕು. ನಿಂತಿರುವ ಭಂಗಿ, ತೊಟ್ಟಿರುವ ವಸ್ತ್ರ, ಆಭರಣಗಳು, ಭಾವನೆಗಳು ವಿಷ್ಣುವಿನ ಸ್ಪಷ್ಟ ಓಲಿಕೆಗಳು ಇಲ್ಲಿ ಗರಿಗೆದರಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಒಟ್ಟಾರೆ ಈ ಅಂಕಣದಲ್ಲಿನ ಶಿಲೆಯ ಈ ಎರಡು ಶಿಲ್ಪಗಳು ಸುಂದರವಾಗಿರುತ್ತವೆ.

೩.೩.೩: ನಾಗ ಮತ್ತು ತೊಟ್ಟಿಲು :

೬೦*೩೦ ಇರುವ ನಾಗ ಮತ್ತು ತೊಟ್ಟಿಲು ಶಿಲ್ಪವನ್ನು ಕಪ್ಪು ಶಿಲೆಯಿಂದ ಕೆತ್ತಲಾಗಿದೆ. ಸುರಳಿ ಸುತ್ತಿ ಎಡೆ ಎತ್ತಿರುವ ನಾಗರನನ್ನು ಸುಂದರವಾಗಿ ಕೆತ್ತಲಾಗಿದೆ. ನಾಲ್ಕು ಸುರಳಿಯಲ್ಲಿ ನಿಂತಿರುವ

ನಾಗರಹಾವಿನ ತಲೆಯ ಮೇಲೆ ಬಟ್ಟೆಯನ್ನು ರಚಿಸಲಾಗಿದೆ. ಅದು ನೆರಳಿಗಾಗಿ ಇರಬಹುದು. ನಾಗರನ ಪಕ್ಕದಲ್ಲಿ ತೊಟ್ಟಿಲು ಎಡಭಾಗದಲ್ಲಿ ಚಿಕ್ಕ ನಾಗರನನ್ನು ತೋರಿಸಲಾಗಿರುತ್ತದೆ.

೩.೩.೪: ಹಂಸ :

೩೦*೬೦ ಸೆಂ.ಮೀ ಇರುವ ಈ ಹಂಸ ಶಿಲ್ಪವನ್ನು ಕಪ್ಪು ಶಿಲೆಯಿಂದ ರಚಿಸಲಾಗಿದೆ. ಕಲ್ಲಿನ ಒಳಭಾಗದಲ್ಲಿ ರೇಖೆಯನ್ನು ಮುಟ್ಟಿಸಿ ಅದಕ್ಕೆ ಹುಳಿಯ ಪೆಟ್ಟನ್ನು ಬಿಡುತ್ತಾ ಸುಂದರ ವಿನ್ಯಾಸದೊಂದಿಗೆ ಹಂಸವನ್ನು ಶಿಲ್ಪಿ ಕೆತ್ತಿದ್ದಾನೆ. ಹಂಸ ಎಂದರೇನೇ ಒಂದು ಅದ್ಭುತ, ಸುಂದರ ಇನ್ನು ಅದಕ್ಕೆ ವಿನ್ಯಾಸಗಳನ್ನು ತುಂಬಿಸಿದರೆ ಮತ್ತಷ್ಟು ಚೆಂದ ಅನ್ನುತ್ತಾ ಸೂಕ್ಷ್ಮ ರೇಖೆಯೊಂದಿಗೆ ವಿನ್ಯಾಸವನ್ನು ರಚಿಸಲಾಗಿದೆ. ಅಕ್ಕ ಪಕ್ಕದಲ್ಲಿ ಕಂಬಗಳನ್ನು ತೋರಿಸಿರುವುದು ಮತ್ತಷ್ಟು ಮೆರಗನ್ನು ಸೃಷ್ಟಿಸಿದೆ.

೩.೩.೫: ತೀರ್ಥಂಕರರು :

ಒಂದುವರೆ ಅಡಿ ಎತ್ತರವಿರುವ ಈ ತೀರ್ಥಂಕರು ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ರಚನೆ ಮಾಡಲಾಗಿದೆ. ಮೂರು ಅಂಕಣಗಳಾಗಿ ಬಿಂಬಿಸಿರುವ ಕಲಾವಿದರು ಕೆಳಗೆ ಬಾಹುಬಲಿ ನಿಂತಿರುವುದು, ಅವನಿಗೆ ಐದಡಿ ಸರ್ಪ ಆಶ್ರಯ ನೀಡುತ್ತಿದೆ ಎನ್ನುವಂತೆ ಬಿಂಬಿತವಾಗಿದೆ. ಇನ್ನು ಮೇಲಿರುವ ಎರಡು ಅಂಕಣಗಳಲ್ಲಿ ತೀರ್ಥಂಕರರು ಧ್ಯಾನದಲ್ಲಿ ಕುಳಿತಿರುವಂತೆ ತೋರಿಸಲಾಗಿದೆ. ಹಾಗೆಯೇ ವಿಶೇಷವಾದ ಶಿಲ್ಪವೆಂದರೆ ಆಶ್ಚರ್ಯ ಪಡುವ ಆಗಿಲ್ಲ. ತುಂಬಾ ಸುಂದರವಾದ ಕೃತಿಯಾಗಿದ್ದು, ಅಸ್ಪಷ್ಟ ಎನಿಸಿದರೂ ದೂರದಿಂದ ಸ್ಪಷ್ಟವಾಗಿ ಕಾಣಲ್ಪಡುತ್ತದೆ.

ಅಂಕಣ : ೩.೪

೩.೪.೧: ಇಂದ್ರ

೩.೪.೨: ರಾಜಸತಿ

೩.೪.೩: ಯೋಧ

೩.೪.೪: ವೀರಗಲ್ಲು

೩.೪.೫: ವೀರಸ್ಮಾರಕ

೩.೪.೬: ಮಾಸ್ತಿ ಕಲ್ಲು

೩.೪.೭: ವೀರಗಲ್ಲು

೩.೪.೮: ಕುಬೇರ

೩.೪.೯: ಆರಾಧಕ

೩.೪.೧೦: ನಾಗ

೩.೪.೧೧: ನಾಗಿಣಿ

೩.೪.೧೨: ನಾಗಿಣಿ

೩.೪.೧ : ಇಂದ್ರ :

೧೪*೨ ಅಡಿ ಎತ್ತರ ಮತ್ತು ಅಗಲವಿರುವ ಈ ಇಂದ್ರ ಶಿಲ್ಪವನ್ನು ಬಿಳಿ ಶಿಲೆಯಿಂದ ರಚನೆ ಮಾಡಲ್ಪಟ್ಟಿದೆ. ಆನೆಯ ಮೇಲೆ ಕುಳಿತ ರಾಜ ಇಂದ್ರನು ಸಾಗುತ್ತಿರುವಂತೆ ಈ ಶಿಲ್ಪವು ಗೋಚರಿಸುತ್ತಿದೆ. ಈ ಶಿಲ್ಪವು ಅಸ್ಪಷ್ಟವಾಗಿದೆಯಾದರೂ ಆನೆಯನ್ನು ಬಲಿಷ್ಠವಾಗಿಯೂ ಮತ್ತು ದೈತ್ಯಾಕಾರವಾಗಿ ತೋರಿಸಿರುವುದು ಒಂದಿಷ್ಟು ನೈಜತೆಗೆ ಹತ್ತಿರವಾದಂತಿದೆ.

೩.೪. ೨ : ರಾಜಸತಿ :

೪*೨ ಅಡಿ ಎತ್ತರ ಮತ್ತು ಅಗಲವಿರುವ ಈ ರಾಜಸತಿ ಶಿಲ್ಪವು ಬಿಳಿಶಿಲೆಯಿಂದ ರಚಿಸಲ್ಪಟ್ಟಿದೆ. ರಾಜನ ಸತಿಯಾಗಿರುವುದರಿಂದಲೇ ಇಲ್ಲಿ ಸತಿಯನ್ನು ಸರಳವಾಗಿ ಬಿಂಬಿಸಲಾಗಿದೆ. ನೀಳವಾದ ಆಕಾರ ಮತ್ತು ನೋಟವನ್ನು ಬೀರುತ್ತಾ ನಿಂತಿರುವ ಈಕೆಯದ್ದು ಸರಳ ವ್ಯಕ್ತಿತ್ವ ಆ ಹಿನ್ನೆಲೆಯಲ್ಲಿಯೇ ವಸ್ತ್ರವನ್ನು ಧರಿಸಿರುವ ರಾಜನ ಸತಿ ಬಲಗೈ ಹಸ್ತವನ್ನು ತೋರಿಸುತ್ತಾ ನಿಂತಿದ್ದಾನೆ.

೩.೪.೩: ಯೋಧ :

೫*೨ ಅಡಿ ಎತ್ತರ ಮತ್ತು ಅಗಲವಿರುವ ಯೋದ ಶಿಲ್ಪವನ್ನು ಬಿಳಿಶಿಲೆಯಿಂದ ರಚನೆ ಮಾಡಲಾಗಿದೆ. ಬಿಲ್ಲನ್ನು ಹಿಡಿದು ಬಾಣವನ್ನು ಬಿಡುತ್ತಿರುವಂತೆ ಭಾಸವಾಗುವ ಈ ಶಿಲ್ಪದಲ್ಲಿ ರೇಖೆ, ಪ್ರಮಾಣ ಬದ್ದತೆಯಲ್ಲಿ ಕೊರತೆ ಎದ್ದು ಕಾಣುತ್ತಿದೆ ಎಡಮುಖವಾಗಿ ಪಾದಗಳನ್ನು ತಿರುಗಿಸಿ ಬಿಗಿದಪ್ಪಿದ ಬಿಲ್ಲಿನಿಂದ ಬಾಣವನ್ನು ಬಿಡುವ ಸನ್ನಿವೇಶವಾದರೂ, ಮುಖ, ತಲೆ ಚಿಕ್ಕದಾಗಿದೆ ಸೊಂಟದ ಭಾಗ ದಪ್ಪವಾಗಿದೆ. ದೇಹದ ಸುತ್ತಲೂ ಚಕ್ರದಂತೆ ಬಾಣಗಳು ಸುತ್ತುವರಿದಂತೆ ಭಾಸವಾಗುತ್ತಿದೆ. ಆ ರೀತಿಯಲ್ಲಿ ಶಿಲ್ಪ ರಚನೆ ಮಾಡಿರುತ್ತಾನೆ.

೩.೪.೪ : ವೀರಗಲ್ಲು :

೨*೨ ಅಡಿ ಎತ್ತರ ಮತ್ತು ಅಗಲವಿರುವ ಈ ಶಿಲ್ಪದಲ್ಲಿ ಕುದುರೆಯನ್ನೇರುವ ವೀರ ತನ್ನ ಶಸ್ತ್ರಾಸ್ತ್ರವನ್ನು ಹಿಡಿದು ಯುದ್ಧಕ್ಕೆ ಸಜ್ಜಾಗಿದ್ದಾನೆ ಎಂಬುದನ್ನು ತೋರಿಸುವಂತಿದೆ ತನ್ನ ಬಲಗೈಯಲ್ಲಿ

ಭರ್ಚಿಗಳನ್ನು ಹಿಡಿದು ಬೀಸುವ ರಭಸಕ್ಕೆ ಶಿಲ್ಪ ಸಾಕ್ಷಿಯಾಗಿದೆ. ಕುದುರೆಯ ವೇಗವೂ ಕೂಡ ಅಷ್ಟೆ ಬಿರುಸಾಗಿದೆ ಅಸ್ಪಷ್ಟ ರೇಖೆ, ಪ್ರಮಾಣ, ಬದ್ಧತೆಯಿಲ್ಲದ ಶಿಲ್ಪವೆಂದರೆ ತಪ್ಪಾಗಲಿಕ್ಕಿಲ್ಲ.

೩.೪.೫ : ವೀರಸ್ಮಾರಕ :

೨*೨ ಅಡಿ ಎತ್ತರ ಮತ್ತು ಅಗಲವಿರುವ ವೀರಸ್ಮಾರಕ ಶಿಲ್ಪವನ್ನು ಬಿಳಿ ಶಿಲೆಯಿಂದ ರಚನೆ ಮಾಡಲ್ಪಟ್ಟಿದೆ. ಈ ಹಿಂದಿನ ಶಿಲ್ಪದಂತೆಯೇ ಇದು ಕೂಡ, ಆದರೆ ಅಲ್ಪ ಬದಲಾವಣೆಯೆಂದರೆ ಈ ವೀರನ ಜೊತೆ ಸಂಗಡಿಗರ ಸಹ ಬಲವಿರುತ್ತದೆ. ವೇಗದ ಕುದುರೆ, ಅಷ್ಟೇ ವೇಗವಾಗಿ ವೀರ ಹಿಡಿದಿರುವ ಭರ್ಚಿ ಅದಕ್ಕೆ ಬೆನ್ನೆಲುಬಾಗಿ ನಿಂತಿರುವ ಸೇವಕರು, ಹತ್ತಿರದಲ್ಲಿ ಅಸ್ಪಷ್ಟ ಶಿಲ್ಪ ಎನಿಸಿದರೂ, ತುಸು ದೂರದಿಂದ ರೇಖೆ, ಉಬ್ಬು, ತಗ್ಗುಗಳು ಕಾಣುತ್ತವೆ, ಯೋಧನ ಆರ್ಭಟ ಕಾಣಲ್ಪಡುತ್ತದೆ.

೩.೪.೬: ಮಾಸ್ತಿಕಲ್ಲು :

೪*೨ ಅಡಿ ಎತ್ತರ ಮತ್ತು ಅಗಲವಿರುವ ಮಾಸ್ತಿಕಲ್ಲು ಶಿಲ್ಪಕಲೆಯನ್ನು ನೋಡಲು ಸುಂದರವಾಗಿದೆ ಮತ್ತೊಂದು ರೀತಿಯಲ್ಲಿ ನೋಡುವುದಾದರೆ ಇದನ್ನು ರಾಜಸತಿ ಎಂತಲೇ ಕರೆಯಬಹುದು. ಈ ಅಂಕಣದ ಮೊದಲ ಚಿತ್ರದಲ್ಲಿರುವಂತೆಯೇ ರಾಣಿ ನಿಂತಿದ್ದಾಳೆ. ಪಕ್ಕದಲ್ಲಿ ರಾಜ ಕೈ ಮುಗಿದು ನಿಂತಿದ್ದಾನೆ. ಒರಟಾದ ಶಿಲೆಯಲ್ಲಿ ಶಿಲ್ಪ ಕೆತ್ತಿರುವುದರಿಂದ ಪರಿಪೂರ್ಣವಾಗಿ ಕೆತ್ತಲು ಆಗಿಲ್ಲ ಎನ್ನಬಹುದು. ತುಂಬಾ ಹಳೆಯ ಶಿಲ್ಪವಾಗಿರುವುದರಿಂದ ಇದನ್ನು ನೋಡುವ ರೀತಿಯಲ್ಲಿಯೇ ಕಲೆಯನ್ನು ಗುರುತಿಸುವಂತಾಗಿದೆ. ಇವರಿಬ್ಬರ ಮೇಲೆ ಶಿವನಲಿಂಗ ಮತ್ತು ನಂದಿಯನ್ನು ಕಾಣುವುದರ ಜೊತೆಗೆ ಸೂರ್ಯ, ಚಂದ್ರ ಮತ್ತು ಒಂದು ಹೆಣ್ಣು ದೇವತೆಯನ್ನು ಗಮನಿಸಬಹುದು. ಇವರನ್ನೆಲ್ಲಾ ನೋಡುತ್ತಿದ್ದರೆ. ಇದೊಂದು ಶೈವ ಶಿಲ್ಪಿ ಎಂದು ಕೂಡಲೇ ಹೇಳಬಹುದು. ಶಿವ, ಪಾರ್ವತಿ, ನಂದಿ, ಲಿಂಗ ಮತ್ತು ಗಂಗೆ ನಿಂತಿರುವುದನ್ನು ಕಲಾವಿದ ಈ ರೀತಿಯಲ್ಲಿ ತೋರಿಸಿ, ಶಿಲ್ಪವನ್ನು ಶ್ರೀಮಂತಗೊಳಿಸಿದ್ದಾನೆ.

೩.೪.೭: ವೀರಗಲ್ಲು :

೩*೨ ಅಡಿ ಎತ್ತರ ಮತ್ತು ಅಗಲವಿರುವ ಈ ಶಿಲ್ಪದಲ್ಲಿ ಭರ್ಚಿಯನ್ನಿಡಿದ ವೀರ ಎಡಮುಖವಾಗಿ ತಿರುಗಲು ಪ್ರಯತ್ನಿಸಿದಂತಿದೆ. ತನ್ನ ಎಡಹಸ್ತದಲ್ಲಿ ವಿಜಯದ ಸಂಕೇತವನ್ನು ತೋರಿಸುತ್ತಾ ಎದೆಯಲ್ಲಿ ಬಲಹಸ್ತದಲ್ಲಿ ಭರ್ಚಿಯನ್ನು ಹಿಡಿದು ಮುಂದೆ ಸಾಗುವಂತಹ ದೃಶ್ಯ

ಇದಾಗಿದೆ ಶಿವಲಿಂಗ, ಚಂದ್ರ, ಸೂರ್ಯ ಇರುವುದರಿಂದ ಶೈವ ಧರ್ಮಕ್ಕೆ ಸಂಬಂಧಿಸಿದ ವೀರ ಎಂದು ಗುರುತಿಸಬಹುದಾಗಿದೆ.

೩.೪.೮: ಕುಬೇರ :

೨*೨ ಅಡಿ ಎತ್ತರ ಮತ್ತು ಅಗಲವಿರುವ ಕುಬೇರನ ಶಿಲ್ಪವು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿರುತ್ತದೆ. ಥಟ್ ಅಂತಾ ನೋಡಿದಾಕ್ಷಣ ಗಣೇಶನಾಕೃತಿಯಂತೆ ಕಾಣುವ ಈ ಶಿಲ್ಪವು ಕುಬೇರನದ್ದಾಗಿದೆ ಎಂಬ ಮಾಹಿತಿಯಿರುತ್ತದೆ. ಶಿರವಿಲ್ಲದ ದೇಹಕ್ಕೆ ಜೀವವಂತೂ ಇರೋದಿಲ್ಲ. ಅದು ನಿರ್ಜೀವಿಯಾಗಿಯೇ ಉಳಿಯುತ್ತದೆ. ಅದರಂತೆಯೇ ಇಲ್ಲಿರುವ ಕುಬೇರ ಶಿಲ್ಪವು ಅದಕ್ಕೆ ಹೊರತಾಗಿಲ್ಲ. ಯಾಕೆಂದರೆ ಈ ಶಿಲ್ಪಕ್ಕೆ ಶಿರವೇ ಇರುವುದಿಲ್ಲ. ಎಡಗೈಯಲ್ಲಿ ವಜ್ರತುಂಬಿದ ಡಬ್ಬಿಯನ್ನು ಹಿಡಿದಿದ್ದಾನೆ ಬಲಗೈಯಿರುವುದಿಲ್ಲ. ಸುಂದರವಾಗಿ ಕೆತ್ತಲ್ಪಟ್ಟ ಶಿಲ್ಪದ ದೇಹದಲ್ಲಿ ಆಭರಣಗಳ ಅಬ್ಬರ ಹೆಚ್ಚಾಗಿದೆ ಕುಬೇರ ಎನ್ನುವುದನ್ನು ಅದೊಂದರಿಂದ ಅಳೆಯಬಹುದು. ಒಟ್ಟಾರೆ ಅಸ್ಪಷ್ಟ ಶಿಲ್ಪ ಎನಿಸಿದರೂ ಶಿಲೆಗೆ ಹುಳಿ ಏಟು ಮುಟ್ಟಿಸಿದ ಕಲಾವಿದನ ಜೀವ ಇದರಲ್ಲಡಗಿದೆ.

೩.೪.೯: ಆರಾಧಕ :

೩೪*೨೪ ಅಡಿ ಎತ್ತರ ಮತ್ತು ಅಗಲವಿರುವ ಆರಾಧಕ ಶಿಲ್ಪವನ್ನು ಬಿಳಿ ಶಿಲೆಯಿಂದ ಕೆತ್ತಲ್ಪಟ್ಟಿದೆ. ಒರಟಾದ ಕಲ್ಲನ್ನು ಗಟ್ಟಿಗೊಳಿಸಿ ಕಲ್ಪನೆಯಲ್ಲಿಯೇ ಜೀವ ತುಂಬಿದ್ದಾರೆ. ಆರಾಧಕರೆಂದು ಭಕ್ತರನ್ನು ಕರೆಯುತ್ತಾರೆ. ಶಿವನ ಆರಾಧಕರು, ವಿಷ್ಣುವಿನ ಆರಾಧಕರು ಅಂತೆಲ್ಲಾ ಕರೆಯುವುದು ವಾಡಿಕೆಯಾದರೂ ಇಲ್ಲಿರುವ ಆರಾಧಕರು ಯಾರು ? ಎಂಬುದನ್ನು ತಿಳಿಯಬೇಕಲ್ಲವೇ ಹಾಗೆಯೇ ತಕ್ಷಣಕ್ಕೆ ನೋಡಿದರೆ ಮಹಿಷಾಸುರ ಮರ್ದಿನಿ ರೂಪ ಬಂದಿತಾದರೂ, ಪಕ್ಕದಲ್ಲಿರುವ ಹೆಣ್ಣು ಯಾರು ಎಂಬ ಪ್ರಶ್ನೆ ಎದುರಾಗುತ್ತೆ ಆದ್ದರಿಂದ ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮುಖದ ಭಾವಗಳಲ್ಲಿ ರೌದ್ರವತಾರ ಎದ್ದು ಕಾಣುತ್ತಿದೆ ಮತ್ತು ಕೋರೆಹಲ್ಲುಗಳು ಬಂದಿರುತ್ತವೆ. ಆ ಹಿನ್ನೆಲೆಯಲ್ಲಿ ಈ ಆರಾಧಕರನ್ನು ವಿಷ್ಣುವಿನ ಭಕ್ತರು ಎಂದೇ ವಾದಿಸಬಹುದು.

೩.೪.೧೦: ನಾಗ :

೪*೧ ಅಡಿ ಎತ್ತರ ಮತ್ತು ಅಗಲವಿರುವ ನಾಗ ಶಿಲ್ಪವು ಏಳು ಎಡೆಯನ್ನು ಬಿಚ್ಚಿದ ಎರಡು ಹಾವುಗಳ ಸಂಗಮವಿರುವ ಶಿಲ್ಪವಾಗಿ ಪರಿಣಮಿಸಿದೆ. ಸಿಂಬೆ ಸುತ್ತಿದ ಎರಡು ಹಾವುಗಳು ಒಂದನ್ನೊಂದು ಅಪ್ಪಿಕೊಂಡಿವೆ. ಮತ್ತು ತಲೆ ಎತ್ತಿ ನಿಂತ ಪರಿಣಾಮ ಏಳು ತಲೆಗಳು

ವಿಜೃಂಭಿಸುತ್ತವೆ ದಪ್ಪ ಗಟ್ಟಿಯಾದ ಹಂಪಿ ಕಲ್ಲಿನಿಂದ ತಯಾರಾದ ಈ ಶಿಲ್ಪವು ನೋಡಲು ಸುಂದರವಾಗಿರುತ್ತದೆ.

೩.೪.೧೧: ನಾಗಿಣಿ :

೫*೧೪ ಅಡಿ ಎತ್ತರ ಮತ್ತು ಅಗಲವಿರುವ ನಾಗಿಣಿ ಶಿಲ್ಪವು ಸುಂದರವಾಗಿದೆ ಈ ಕಲ್ಲಿನಲ್ಲಿ ಶಿಲ್ಪ ನಾಗಿಣಿಯ ರೂಪವನ್ನು ತೋರಿಸಿ ಹಿಂಭಾಗದಲ್ಲಿ ಎಡೆ ಎತ್ತಿದ ಹಾವನ್ನು ತೋರಿಸಿದ್ದಾನೆ ಮೈ ತುಂಬಿ ಹರಿಯುತ್ತಿರುವ ಹಾವುಗಳು, ಭಯಂಕರವಾದ ಹಿನ್ನೆಲೆಯನ್ನು ಸೂಸುವಂತಿದೆ. ತಲೆಯಿಂದ ಸೊಂಟದವರೆಗೆ ಮಾತ್ರ ಮಾನವ ದೇಹವನ್ನು ಕಾಣಬಹುದು. ಇನ್ನುಳಿದ ಅರ್ಧಭಾಗ ಹಾವಿನ ರೂಪವನ್ನು ತೋರಿಸಲಾಗಿದೆ. ನೈಜತೆಗೆ ತೀರಾ ಹತ್ತಿರವಾದ ನಾಗಿಣಿ ಶಿಲ್ಪ ಇದಾಗಿದೆ.

೩.೪.೧೨: ನಾಗಿಣಿ-೨ :

ಮೇಲೆ ತಿಳಿಸಿರುವ ಶಿಲ್ಪದ ಮಾದರಿಯಲ್ಲಿಯೇ ಇರುವ ಈ ಶಿಲ್ಪವು ಅಷ್ಟೇ ನೈಜತೆ ಮತ್ತು ಸರಳತೆಯಿಂದ ಕೂಡಿದ್ದಾಗಿದೆ. ಈ ಶಿಲ್ಪವು ಕೂಡ ನಾಗಿಣಿಯ ಅವತಾರವಾಗಿರುವುದರಿಂದ ಆಕೆಯ ರೂಪವನ್ನು ಪ್ರದರ್ಶಿಸಲಾಗಿದೆ. ಈ ಅಂಕಣದಲ್ಲಿರುವ ವಿಶೇಷ ಶಿಲ್ಪಗಳೆಂದರೆ ಬಹುಶಃ ತಪ್ಪಾಗಲಾರದು. ಸರಳವಾಗಿ, ಸುಂದರವಾಗಿ ಕೆತ್ತಲ್ಪಟ್ಟಿದೆ. ಕಿರೀಟವನ್ನೊತ್ತ ನಾಗಿಣಿಯ ಎದೆಯಲ್ಲಿ ಆಭರಣ, ಕೈಗೆ ಬಳೆ, ತೋಳ ಬಳೆ, ಕಿವಿಯ ಓಲೆಗಳನ್ನು ತೋರಿಸಿರುವ ಶಿಲ್ಪಿ, ತನ್ನದೇ ಕಲ್ಪನೆಯಲ್ಲಿ ಶೈವ ಧರ್ಮಕ್ಕೆ ಸಂಬಂಧಿಸಿದ ಹಾಗೇ ವಿವರವನ್ನು ಶಿಲೆಯನ್ನು ಕೆತ್ತುವ ಮೂಲಕ ಮಾಹಿತಿಯನ್ನು ಹೆಚ್ಚೆಚ್ಚು ಒದಗಿಸಿದ್ದಾನೆ.

ಟಿಪ್ಪಣಿಗಳು

೧. ಡಾ. ಎಚ್.ಆರ್. ರಘುನಾಥಭಟ್: ಪುರಾತತ್ವ ಪರಿಚಯ, ಪ್ರಸಾರಾಂಗ, ಮೈಸೂರು ವಿ.ವಿ.-೧೯೪೮, ಪು.ಸಂ-೨೯

೨. ಅದೇ ಪು.ಟ-೩೧

೩. ಎಂ.ಹೇಮಾವತಿ ಶಿವಾನಂದ. ಹಂಪಿ ಪರಿಸರದ ಶೈವ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ, ೨೦೧೬, ಪು.ಸ-೫೩

೪. ಅದೇ

೫. ಕಡಪಟ್ಟಿ ಎಂ.ಎನ್. ಪ್ರಾಚೀನ ಕರ್ನಾಟಕದ ಶೈವಧರ್ಮ, ಪು.ಸ-೯

೬. ಎಂ.ಹೇಮಾವತಿ ಶಿವಾನಂದ. ಹಂಪಿ ಪರಿಸರದ ಶೈವ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ, ೨೦೧೬, ಪು.ಸ-೫೪

೭. ಹಂಪಿ ಪ್ರದೇಶದ ಲೋಹಶಾಸ್ತ್ರಕಲೆ, ವಾಸುದೇವ ಬಡಿಗೇರ, ಪುಟ-೨೩, ಇತಿಹಾಸ ಅಕಾಡೆಮಿ, ಬೆಂಗಳೂರು

೮. ವಸಂತ ಲಕ್ಷ್ಮೀ ಕೆ. ಪೂರ್ವೋಕ್ತ, ಪು.ಸ-೭೩

೯. ಎಂ.ಹೇಮಾವತಿ ಶಿವಾನಂದ. ಹಂಪಿ ಪರಿಸರದ ಶೈವ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ, ೨೦೧೬, ಪು.ಸ-೨೦೫

೧೦. ಪಿ.ಆರ್.ತಿಪ್ಪೇಸ್ವಾಮಿ(ಪ್ರ.ಸಂ). ಶಿಲ್ಪಕಲಾ ಪ್ರಪಂಚ, ಪು.ಸ-೧೮೯

೧೧. ಡಿ.ಆರ್.ಸುರೇಂದ್ರನಾಥ, ದಕ್ಷಿಣ ಕರ್ನಾಟಕದ ಭಿತ್ತಿ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ.ಹಂಪಿ,೨೦೧೮

೧೨. ಪದ್ಮಜಾ ದೇಸಾಯಿ, ಹಂಪಿ ಪರಿಸರದ ವೈಷ್ಣವ ಧರ್ಮದ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕವಿವಿ.ಹಂಪಿ,೨೦೧೫,೧೧೬

೧೩. ಅದೇ

೧೪. ಅದೇ

೧೫. ಅದೇ.ಪು-೧೧೭

೧೬. ಸುಧಾಂಕರ್ ಎ.ಎಸ್. ಭಂಡಾರಕರ (ಸಂ), ಮಹಾಭಾರತ, ಬರಿಗುಟಲ್ ಇನ್‌ಸ್ಟಿಟ್ಯೂಟ್, ಪೂಣೆ

೧೭. ಹಜಾರ್ ಆರ್.ಸಿ, ಸ್ಟಡೀಸ್ ಇನ್ ಉಪಪುರಾಣಾಸ್, ಪು.ಸ-೬೯-೭೧

೧೮. ಅದೇ, ಪು ಸ-೭೨-೭೫

೧೯. ಪದ್ಮಜಾ ದೇಸಾಯಿ, ಹಂಪಿ ಪರಿಸರದ ವೈಷ್ಣವ ಧರ್ಮದ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕವಿವಿ.ಹಂಪಿ,೨೦೧೫,ಪು-೧೧೯

೨೦. ಹಜಾರ್ ಆರ್.ಸಿ, ಸ್ಟಡೀಸ್ ಇನ್ ಉಪಪುರಾಣಾಸ್, ಪು.ಸ-೮೦-೮೨

೨೧. ಪದ್ಮಜಾ ದೇಸಾಯಿ, ಹಂಪಿ ಪರಿಸರದ ವೈಷ್ಣವ ಧರ್ಮದ ಶಿಲ್ಪಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕವಿವಿ.ಹಂಪಿ,೨೦೧೫,ಪು-೧೨೦


೨೨. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು-೭

೨೩. ಗೋಪಿನಾಥರಾವ್, ಪೂರ್ವೋಕ್ತ, ಪು-೭೦

೨೪. ಮಿಶ್ರಾ ಎಚ್.ಸಿ(ಸಂ), ಬೃಹತ್ ಸಂಹಿತೆ, ಪು-೩೧-೩೫

೨೫. ಸುಧಾಕರ್ ವಿ.ಎನ್, ಪೂರ್ವೋಕ್ತ, ಪು-೫೪


೨೬. ಸುಧಾಕರ್ ಎ.ಎಸ್. ಭಂಡಾರಕರ (ಸಂ), ಮಹಾಭಾರತ, ಬರಿಗುಟಲ್ ಇನ್‌ಸ್ಟಿಟ್ಯೂಟ್, ಪುಣೆ, ಪು-೧೯೪



೩.೧.೧.ವೀರಭದ್ರ



೩.೧.೨.ಭೈರವ



೩.೧.೩.ಪಾರ್ವತಿ



೩.೧.೪.ಭಿಕ್ಷಾಟನಾ ಮೂರ್ತಿ



೩.೧.೫.ಚತುರ್ಭುಜ ಭೈರವ



೩.೧.೬.ಚತುರ್ಭುಜ ಭದ್ರಕಾಳಿ



೩.೧.೭.ದಶಭುಜ ವೀರಭದ್ರ



೩.೧.೮.ಮಹಿಶಾಸುರ ಮರ್ಧಿನಿ



೩.೧.೯.ಭಕ್ತಮೂರ್ತಿ



೩.೧.೧೦. ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ



೩.೧.೧೧.ನಂದಿ



೩.೧.೧೨.ಶಿವಲಿಂಗ



೩.೧.೧೩.ದುರ್ಗಾ




೩.೧.೧೪.ಉಮಾಮಹೇಶ್ವರ



೩.೧.೧೫.ಚಂದ್ರಮೌಳಿ ಶಿವ




೩.೧.೧೬.ವೀರಭದ್ರ



೩.೧.೧೭.ಅಸೀನ ಕಾಳಿ



೩.೧.೧೮.ಚತುರ್ಭುಜ ಭೈರವ



೩.೧.೧೯.ಆತ್ಮಲಿಂಗದೊಂದಿಗೆ ಶಿವ




೩.೧.೨೦.ಆಸೀನ ಶೈವ ದೇವತೆ



೩.೧.೨೧.ನಾಗಲಿಂಗ



೩.೧.೨೨.ಕೃಷ್ಣದೇವರಾಯ & ತಿರುಮಲದೇವಿ



೩.೧.೨೩.ಹೆಬ್ಬಾಗಿಲು



೩.೧.೨೪.ನಂದಿ



೩.೧.೨೫.ಲಿಂಗ



ಚಿ.೧.೨೬.ಮಹಿಶಾಸುರ ಮರ್ಧಿನಿ



ಚಿ.೧.೨೭.ವಿರೂಪಾಕ್ಷ




ಚಿ.೧.೨೮.ಮಹಿಶಾಸುರ ಮರ್ಧಿನಿ



ಚಿ.೧.೨೯.ಶಕ್ತಿ ಗಣೇಶ

ಅಂಕಣ: ಎರಡು (ವೈಷ್ಣವ ಶಿಲ್ಪಗಳು)



೩.೨.೧.ವಿಷ್ಣು



೩.೨.೨.ಗರುಡ



೩.೨.೩.ನಾಗ ಹಿಡಿದ ಗರುಡ



೩.೨.೪.ಹನುಮಾನ್



೩.೨.೫.ಅಶೋಕ ವನದಲ್ಲಿ ಸೀತೆ



೩.೨.೬.ವೇಣುಗೋಪಾಲ




೩.೨.೭.ವರಹಾ ಅವತಾರ




೩.೨.೮.ಲಕ್ಷ್ಮೀ



ಚಿ.೨.೯.ವಿಷ್ಣು



ಚಿ.೨.೧೦&೧೧.ರಾಮ ಮತ್ತು ವಿಷ್ಣು



ಚಿ.೨.೧೨.ಲಕ್ಷ್ಮೀ ನರಸಿಂಹ



ಚಿ.೨.೧೩.ವೈಷ್ಣವ ದೇವತೆ



ಚಿ.೨.೧೪.ಲಕ್ಷ್ಮಣ




ಚಿ.೨.೧೫.ರಾಜಮೂರ್ತಿ



ಚಿ.೨.೧೬.ವೇಣುಗೋಪಾಲ




ಚಿ.೨.೧೭.ಆಳ್ವಾರ್



...೨.೧೮.ಮತ್ಸ್ಯ ಮತ್ತು ಕಲ್ಕಿ ಅವತಾರ



೩.೨.೧೯.ವಿಷ್ಣು



೩.೨.೨೦.ವಿಷ್ಣು-ಶ್ರೀನಿವಾಸ



೩.೨.೨೧.ರಾಮ, ಲಕ್ಷ್ಮಣ ಮತ್ತು ಸೀತೆ



೩.೨.೨೨.ಲಕ್ಷ್ಮೀ, ನಾರಾಯಣ



೩.೨.೨೩.ಪದ್ಮಾಸನ ನರಸಿಂಹ



೩.೨.೨೪.ಗರುಡ ಅಂಜಲಿ ಮುದ್ರೆ


೩.೨.೨೫.ಹನುಮಾನ್


೩.೨.೨೬.ವೈಷ್ಣವ ದೇವತೆ


೩.೨.೨೭.ಅಂಜಲಿ ಮುದ್ರೆಯಲ್ಲಿ ಗರುಡ



೩.೨.೨೮.ಹನುಮಾನ್


೩.೨.೨೯.ಪ್ರಸನ್ನ ನರಸಿಂಹ


೩.೨.೩೦.ಲಕ್ಷ್ಮೀನರಸಿಂಹ


೩.೨.೩೧.ಗೋಪಿಕಾ ಸ್ತ್ರೀಯರೊಂದಿಗೆ ಕೃಷ್ಣ


೩.೨.೩೩.ವಿಷ್ಣು ರಂಗನಾಥ


೩.೨.೩೨.ಅರ್ಜುನ ಮತ್ತು ಕೃಷ್ಣ



೩.೩.೧.ವಿಷ್ಣು



೩.೩.೨.ವಿಷ್ಣು



೩.೩.೩.ನಾಗ ಮತ್ತು ತೊಟ್ಟಿಲು



೩.೩.೪.ಹಂಸ



೩.೩.೫.ತೀರ್ಥಂಕರರು

ಅಂಕಣ:ನಾಲ್ಕು



೩.೪.೧.ಇಂದ್ರ



೩.೪.೨.ರಾಜಸತಿ



೩.೪.೩.ಯೋಧ



೩.೪.೪.ವೀರಗಲ್ಲು



೩.೪.೫.ವೀರಸ್ಮಾರಕ



೩.೪.೬.ಮಾಸ್ತಿಕಲ್ಲು



೩.೪.೭.ವೀರಗಲ್ಲು



೩.೪.೮.ಕುಬೇರ



೩.೪.೧೦.ನಾಗ



೩.೪.೧೧.ನಾಗಿಣಿ

ಅಧ್ಯಾಯ : ೪

ಕಮಲಾಪುರ ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯಗಳಲ್ಲಿರುವ ಲೋಹ ಮಾಧ್ಯಮದ ಶಿಲ್ಪಗಳು

ಅಧ್ಯಾಯ : ೪

ಕಮಲಾಪುರ ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯಗಳಲ್ಲಿರುವ ಲೋಹ ಮಾಧ್ಯಮದ ಶಿಲ್ಪಗಳು

ಈ ವಸ್ತುಸಂಗ್ರಹಾಲಯದಲ್ಲಿ ಬರೀ ಶಿಲಾಶಿಲ್ಪಗಳದ್ದೇ ರಾಜ್ಯಭಾರ ಅಲ್ಲ, ಲೋಹ ಮಾಧ್ಯಮದ ಕಲಾ ಕೃತಿಗಳು ಇಲ್ಲಿ ತಾಂಡವಾಡುತ್ತಿವೆ. ಗಾಜಿನ ಕಪಾಟಿನೊಳಗೆ ಜನರ ಕಣ್ಮನ ಸೆಳೆಯುತ್ತ ಪ್ರೇಕ್ಷಕರನ್ನು ಆಕರ್ಷಿಸುತ್ತಾ ಮೆರೆದಾಡುತ್ತಿವೆ.

ಕಂಚಿನ ವಿಗ್ರಹಗಳು :

ಎರಡನೇ ಅಂಕಣದಲ್ಲಿ ಪ್ರತ್ಯೇಕವಾದ ಗಾಜಿನ ಕಪಾಟಿನಲ್ಲಿ ಸುರಕ್ಷಿತವಾಗಿ ಆಯೋಜಿಸಲ್ಪಟ್ಟಿವೆ. ಇಲ್ಲಿ ಪ್ರದರ್ಶಿತವಾಗಿರುವ ಶ್ರೀದೇವಿ ಹಾಗೂ ಭೂದೇವಿಯರ ಕಂಚಿನ ವಿಗ್ರಹಗಳು ವಿಜಯನಗರ ಕಾಲದ ಅತ್ಯುತ್ತಮ ಮಾದರಿಯ ಉತ್ಸವ ಮೂರ್ತಿಯ ಶಿಲ್ಪಗಳಾಗಿವೆ.

ಶ್ರೀದೇವಿ ಮತ್ತು ಭೂದೇವಿ ಮೂರ್ತಿ ಶಿಲ್ಪಗಳು ಪದ್ಮಪೀಠದ ಮೇಲೆ ತ್ರಿಭಂಗಿ ಮುದ್ರೆಯಲ್ಲಿ ನಿಂತಿರುವಂತೆ ರೂಪಿಸಲಾಗಿದ್ದು, ಶ್ರೀದೇವಿಯು ತನ್ನ ಎಡ ಹಸ್ತದಲ್ಲಿ ಪುಷ್ಪವನ್ನು ಹಿಡಿದಿದ್ದರೆ, ಭೂದೇವಿ ತನ್ನ ಬಲ ಹಸ್ತದಲ್ಲಿ ನೀಲೋತ್ಪಲ ಪುಷ್ಪವನ್ನು ಧರಿಸಿದೆ.

ಎರಡು ಶಿಲ್ಪಗಳು ಕಿರೀಟ, ವೃತ್ತಕುಂಡಲಗಳು, ವೃಕ್ಷಹಾರ, ಸ್ತನಹಾರ, ಭುಜಕೀರ್ತಿ, ಕೇಯೂರ, ಚನ್ನವೀರ, ಕಟಿಬಂಧ, ಪೀತಾಂಬರ, ನೂಪುರ, ಮತ್ತು ಲಲಾಟ ತಿಲಕಗಳಿಂದ ಅಲಂಕೃತಗೊಂಡಿವೆ. ಶ್ರೀದೇವಿ ಶಿಲ್ಪಕ್ಕೆ ಕುಚ ಬಂಧವನ್ನು ತೋಡಿಸಲಾಗಿದೆ. ಎರಡು ಪ್ರತಿಮೆಗಳನ್ನು ಒಬ್ಬನೇ ಶಿಲ್ಪಿ ರೂಪಿಸಿರಬಹುದೆಂದು ಊಹಿಸಬಹುದಾಗಿದೆ.

ಅಲ್ಲಿಂದ ಮುಂದುವರೆದು ಗಾಜಿನ ಕಪಾಟಿನೊಳಗೆ ಆಯೋಜಿಸಲ್ಪಟ್ಟಿರುವ ವೈಷ್ಣವ ದೇವತೆ, ಲಕ್ಷ್ಮಿನರಸಿಂಹ, ಲಕ್ಷ್ಮಣ, (ತಲೆ) ರಾಜಮೂರ್ತಿ, ಆಳ್ವಾರ್, ಮತ್ಸ್ಯ ಮತ್ತು ಕಲ್ಕಿ ಅವತಾರಗಳು. ವಿಷ್ಣು,

ಶ್ರೀನಿವಾಸ (ರುಂಡವಿಲ್ಲದ) ರಾಮ, ಸೀತೆ, ಲಕ್ಷ್ಮಣ, ಲಕ್ಷ್ಮೀನಾರಾಯಣ, ಪದ್ಮಾಸೀನ ನರಸಿಂಹ, ಬಾಗಿಲು ಚೌಕಟ್ಟು, ತಲೆ, ಅನಭಿಜ್ಞಾತ ವೈಷ್ಣವ ದೇವತೆ ತಲೆ.

ಕಂಚಿನ ಶಸ್ತ್ರಾಸ್ತ್ರಗಳು :

ಕಂಚಿನ ಪ್ರತಿಮೆಗಳಲ್ಲದೇ ಆ ಕಾಲದಲ್ಲಿ ಯುದ್ಧ ಶಸ್ತ್ರಾಸ್ತ್ರಗಳನ್ನು ಇಲ್ಲಿ ಕಾಣಬಹುದು. ಮೂರನೇ ಅಂಕಣದಲ್ಲಿ ಶಸ್ತ್ರಗಳು, ತಾಮ್ರ ಮತ್ತು ಇತರ ಲೋಹದ ಶಾಸನಗಳು, ವಿಜಯನಗರ ಕಾಲದ, ತಾಮ್ರ, ಕಂಚಿನ, ಬೆಳ್ಳಿ, ಚಿನ್ನದ ನಾಣ್ಯಗಳನ್ನು ಆಯೋಜಿಸಿರುವುದನ್ನು ನಾವು ಕಾಣಬಹುದು. ಈ ಅಂಕಣದಲ್ಲಿ ಯುದ್ಧ ಶಸ್ತ್ರಾಸ್ತ್ರಗಳನ್ನು ಸೂಕ್ಷ್ಮ ಮತ್ತು ಕಂಚಿನ ಹಾಗೂ ಲೋಹದ ಪ್ರತಿಮೆಗಳನ್ನು ದಾನಶಾಸನ ತಾಮ್ರ ಫಲಕಗಳನ್ನು, ತಾಳೆಗರಿಯ ಹಸ್ತಪ್ರತಿಗಳನ್ನು ಲೇಖನ ಸಾಮಗ್ರಿಗಳು, ಹಿತ್ತಾಳೆಯ ಹರಿವಾಣಗಳು ಮತ್ತು ಮಡಿಕೆ, ಕುಡಿಕೆಗಳನ್ನು ಪ್ರದರ್ಶಿಸಲಾಗಿದೆ.

ಶಸ್ತ್ರಾಸ್ತಗಳೆಂದರೆ : ಖಡ್ಗ, ಕಠಾರಿ, ಗುರಾಣಿ, ಕಠಾರಿ

ಕಂಚಿನ ವಸ್ತುಗಳು : ಕುದುರೆ, ತಂಬಿಗೆ, ಚಿಕ್ಕ ಚಿಕ್ಕ ವಿಗ್ರಹಗಳು, ನಾಗರವಸ್ತು

ಹಿತ್ತಾಳೆಯ ಕಲಾ ವಸ್ತುಗಳು :

ನಾಗನೊಂದಿಗೆ ನಂದಿ, (೧೬ನೇ ಶತಮಾನ) ದೀಪಸ್ತಂಭದ ಅವಶೇಷ, ನೀಲಾಂಜನದ ಭಾಗ, ರಜ್ಜುಕ, ಅಲಂಕೃತ ಬಟ್ಟಲು, ದೀಪಲಕ್ಷ್ಮೀ ರಜ್ಜುಕ ಅಲಂಕೃತ ಬಟ್ಟಲು ಚತುರ್ಭುಜ, ವೀರಭದ್ರ, ಹಿತ್ತಾಳೆಯ ಬಟ್ಟಲು, ಧೂಪಾರತಿ, ಪೀಠದೊಂದಿಗೆ ಲಿಂಗ.

ವಿಜಯನಗರ ಸಾಮ್ರಾಜ್ಯದ ನಾಣ್ಯಗಳು :

ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿನ ಹಲವು ನಾಣ್ಯಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ವಿದ್ವಾಂಸರುಗಳು ಭಾರತದಲ್ಲಿ ನಾಣ್ಯಗಳ ಪ್ರಾರಂಭ ಕಾಲವನ್ನು ಸುಮಾರು ಕ್ರಿ.ಪೂ.೭ನೇ ಶತಮಾನಕ್ಕೆ ಕೊಂಡೊಯ್ದಿದ್ದಾರೆ. ವೇದ ಕಾಲದ ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ನಿರ್ದಿಷ್ಟ ಆಧಾರ ದೊರಕದಿದ್ದರೂ ಆ ಕಾಲದಲ್ಲಿ ಉಲ್ಲೇಖಗೊಂಡಿರುವ ನಿಷ್ಕ ಮತ್ತು ಶತಮಾನ ಎಂಬುದರಿಂದ ಒಂದು ಅಳತೆಯ ಮಾಪನ ಇದ್ದಿರಬಹುದು ಎಂದು ಊಹಿಸಬಹುದು. ಕ್ರಿ.ಪೂ. ೫–೪ನೇ ಶತಮಾನದಿಂದ ಭಾರತದ ಉದ್ದಗಲಕ್ಕೂ ಒಂದು ಸರ್ವಸಮ್ಮತವಾದ ಮುದ್ರಾಂಕಿತ ನಾಣ್ಯಗಳು ದೊರೆಯಲು ಆರಂಭಿಸುತ್ತದೆ.

ಕರ್ನಾಟಕವನ್ನಾಳಿದ ಅನೇಕ ಅರಸು ಮನೆತನಗಳು ತಮ್ಮದೇ ಆದ ನಾಣ್ಯ ವ್ಯವಸ್ಥೆಯನ್ನು ಹೊಂದಿದ್ದವು. ದಕ್ಷಿಣ ಭಾರತದ ಬಹುಭಾಗವನ್ನು ಆಳಿದ ವಿಜಯನಗರದ ಅರಸರು (೧೩೩೬–

೧೫೭೬೫) ಮೊದಲಿಗೆ ಹೊಯ್ಸಳ ನಾಣ್ಯಗಳ ನಮೂನೆಯನ್ನು ಅನುಸರಿಸಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡರು. ಇದರ ಬಗ್ಗೆ ಸಮಕಾಲೀನರಾದ ವಿದೇಶಿ ಪ್ರವಾಸಿಗರಾದ ಪಾಯೆಸ್, ಅಬ್ದುಲ್ ರಜಾಕ್, ದುರ್ತೆ, ಬಾರ್‌ಬೋಸ್‌ರವರು ತಮ್ಮ ಪ್ರವಾಸ ಕಥನಗಳಲ್ಲಿ ಉಲ್ಲೇಖಿಸಿದ್ದಾರೆ. ನಾಣ್ಯಗಳ ವಿವಿಧ ಹೆಸರುಗಳ ಬಗ್ಗೆ ತಿಳಿದುಕೊಳ್ಳಲು ಸಮಕಾಲೀನ ಶಾಸನಗಳು ಸಹಕಾರಿಯಾಗಿವೆ. ಇವುಗಳಿಂದ ಹಿಡಿತವನ್ನು ಸಾಧಿಸಿದ್ದುದು ಕಂಡುಬರುತ್ತದೆ. ಮೊದಲನೆ ಹರಿಹರನು ಪ್ರಥಮ ಬಾರಿಗೆ ನಾಣ್ಯಗಳ ಟಂಕಸಾಲೆಯ ಮೇಲೆ ಅಧಿಕಾರವನ್ನು ಹೊಂದಿದ್ದು ಮುದ್ರಿತ ನಾಣ್ಯಗಳ ಬಗ್ಗೆ ಮುದ್ರಿಕೆಯಲ್ಲಿ ಬದಲಾಔಣೆ ತಂದು ರಾಜ್ಯದ ಸಂಪದವನ್ನು ಹೆಚ್ಚು ಪಾಲು ಚಿನ್ನದ ನಾಣ್ಯಗಳ ಪರಿಶುದ್ಧತೆಯನ್ನು ಕಾಪಾಡಲು ಟಂಕಸಾಲೆಯಲ್ಲಿ ಯಾವಾಗಲೂ ಒಳ್ಳೆಯ ಅಕ್ಕಸಾಲಿಗನು ತನ್ನ ಸಲಕರಣೆಗಳೊಂದಿಗೆ ಸಿದ್ಧನಾಗುತ್ತಿದ್ದನು ಎಂದು ಬಾರ್‌ಬೋಸ್ ತಿಳಿಸುತ್ತಾನೆ.

ರಾಜಧಾನಿಯಾದ ವಿಜಯನಗರ (ಹಂಪಿ) ಮಂಗಳೂರು ಹಾಗೂ ಬಾರಕೂರುಗಳಲ್ಲಿ ರಾಜಟಂಕಸಾಲೆಗಳಿದ್ದು ಜೊತೆಗೆ ಅನೇಕ ಸ್ಥಳೀಯ ಟಂಕಸಾಲೆಗಳು ಇದ್ದ ಬಗ್ಗೆ ಆ ನಾಣ್ಯಗಳಿಂದ ತಿಳಿದುಬರುತ್ತದೆ. ಗುಂಡಿಕೋಟೆ, ದೇವನೂರು, ಪೆನುಗೊಂಡಾ, ತಿರುಪತಿ, ಗುತ್ತಿ, ಆದೋನಿ, ತಾಡಪತ್ರಿ, ನಲ್ಲೂರು ಸ್ಥಳೀಯ ಟಂಕಸಾಲೆಗಳು ರಾಯಚೂರು, ಜಿಲ್ಲೆಯ ಕದೇಕಲ್ಲಿನಲ್ಲಿ ವಿಜಯನಗರ ನಾಣ್ಯಗಳ ಅಚ್ಚುಗಳು ಹಾಗೂ ನಾಣ್ಯಗಳು ದೊರೆತಿರುವುದಲ್ಲದೇ, ಮಹಾರಾಷ್ಟ್ರ ರಾಜ್ಯದ ಅಕೋಲ ಜಿಲ್ಲೆಯ ಬೆಸೆನ್ ಎಂಬಲ್ಲಿಯೂ ವಿಜಯನಗರ ಕಾಲದ ಚಿನ್ನದ ನಾಣ್ಯಗಳು ದೊರೆತಿವೆ. ೨ನೇ ಹರಿಹರ (ಕ್ರಿ.ಶ.೧೩೭೭-೧೪೦೪) ಸಾಮಂತನಾಗಿದ್ದು ಲಕ್ಕಣ್ಣ ದಂಡಾದೀಶನು ತನ್ನ ಹೆಸರಿನಲ್ಲಿಯೇ ನಾಣ್ಯಗಳನ್ನು ಮುದ್ರಿಸಿರುವುದರಿಂದ ವಿಜಯನಗರದ ಕಾಲದಲ್ಲಿ ಸ್ಥಳೀಯ ಅಧಿಕಾರಿಗಳು ಹಾಗೂ ಸಾಮಂತರು ತಮ್ಮ ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಮುದ್ರಿಸಲು ಅನುಮತಿ ಹೊಂದಿದ್ದಾರೆಂದು ತಿಳಿದುಬರುತ್ತದೆ.

ವಿಜಯನಗರದ ನಾಣ್ಯಗಳಲ್ಲಿ ಗದ್ಯಾಣ, ಪೊನ್, ವರಾಹ, ಪಗೋಡ ಪ್ರತಾಪ, ಕಾಟಿ, ಪಣ (ಬೇಳೆ) ಹಾಗ ಮತ್ತು ರೊಕ ಎಂಬುವು. ಚಿನ್ನದ ನಾಣ್ಯಗಳು, ತಾರ ಎನ್ನುವುದರ ಬೆಳ್ಳಿ ನಾಣ್ಯ, ದುಗ್ಗಣಿ (ಕಾಶಿ) ಜಿಕಲ್ ಮತ್ತು ಕಾಸು ತಾಮ್ರನಾಣ್ಯಗಳು. ನಾಣ್ಯಗಳ ಮುಂಭಾಗದಲ್ಲಿ ಅನೇಕ ಪ್ರಾಣಿಗಳ ಹಿಂದೂ ದೇವತೆಗಳ ಚಿತ್ರವಿದ್ದು, ಹಿಂಭಾಗದಲ್ಲಿ ಟಂಕಿಸಿದ ರಾಜನ ಹೆಸರನ್ನು ಕನ್ನಡ ಮತ್ತು ದೇವನಾಗರಿ ಲಿಪಿಯಲ್ಲಿ ಸೂಚಿಸಿರುತ್ತಾನೆ. ಕೆಲವು ನಾಣ್ಯಗಳು ತೆಲುಗು ಬರಹವನ್ನು ಹೊಂದಿರುತ್ತದೆ. ಕೆಲವು ತೆಲುಗು ಭಾಷೆಯ ಬರಹವನ್ನು ಕೂಡ ಹೊಂದಿರುತ್ತದೆ. ಚಿನ್ನದ ನಾಣ್ಯಗಳು

ಸುಮಾರು ೧೨೦-೧೨೫ ರಿಂದ ೬ ಗುಲಗಂಜಿಗಳ ತೂಕವಿದ್ದು ತಾಮ್ರದ ನಾಣ್ಯಗಳ ತೂಕ ೧೫೮-೧೫ ಗುಲಗಂಜಿಗಳು ತೂಕವಿದ್ದು ಪ್ರಸ್ತುತದಲ್ಲಿ ವಿಜಯನಗರ ಕಾಲದ ಕೆಲವು ಚಿನ್ನದ ಹಾಗೂ ತಾಮ್ರದ ನಾಣ್ಯಗಳು ಪ್ರದರ್ಶಿತವಾಗಿವೆ.

ಇಲ್ಲಿ ವಿಜಯನಗರ ಅರಸರ ಕಾಲದ ಕೆಲವು ಮುಖ್ಯ ನಾಣ್ಯಗಳು ಇಲ್ಲಿವೆ. ಚಿನ್ನ ಹಾಗೂ ತಾಮ್ರದ ನಾಣ್ಯಗಳನ್ನು ಪ್ರದರ್ಶಿಸಲಾಗಿದೆ. ಅವರುಗಳು ಶ್ರೀ ವೀರ ಹರಿಹರ (೧೩೭೭-೧೪೦೪) ಮೊದಲನೇ ದೇವರಾಯ (೧೪೦೬-೧೪೨೨), ೨ನೇ ದೇವರಾಯ (೧೪೩೦-೧೪೪೬) ಶ್ರೀ ಕೃಷ್ಣದೇವರಾಯ (೧೫೦೯-೧೫೨೯), ಅಚ್ಯುತರಾಯ (೧೫೩೦-೧೫೪೨) ಸದಾಶಿವರಾಜ (೧೫೪೨-೧೫೭೦) ರಾಮರಾಯ (೧೫೫೨-೧೫೬೫) ತಿರುಮಲರಾಯ (೧೫೭೦-೧೫೭೧) ಮತ್ತು ೨ನೇ ವೆಂಕಟಪತಿರಾಯ (೧೫೮೬-೧೬೧೪).

ಲೋಹ ವಸ್ತುಗಳ ನಿರ್ವಹಣೆ :

೧) ಪ್ರಾಚೀನ ಕಾಲದಲ್ಲಿ ನಿರ್ಮಾಣವಾದ ಪುರಾತನ ಲೋಹಗಳು, ಕಲಾಕೃತಿಗಳಾಗಲಿ ಅಥವಾ ಕಲಾವಸ್ತುಗಳು ತುಂಬಾ ದುರ್ಬಲವಾಗಿರುವುದರಿಂದ ಅವುಗಳ ಬಗ್ಗೆ ಹೆಚ್ಚು ನಿರ್ವಹಣೆ, ಎಚ್ಚರಿಕೆ ಅಗತ್ಯ.

೨) ಲೋಹದ ಕಲಾವಸ್ತುಗಳನ್ನು ಎಂದೆಂದಿಗೂ ತೆರೆಯಬಾರದು. ೪೦%ಕ್ಕಿಂತ ಕಡಿಮೆ ತೇವಾಂಶಕ್ಕೆ ಸಾಪೇಕ್ಷ ತೇವಾಂಶದಿಂದ ಕೂಡಿದ ಮಳಿಗೆ ಲೋಹ ಪದಾರ್ಥಗಳ ದಾಸ್ತಾನಿಗೆ ಅನುಕೂಲಕರವಾದುದು.

೩) ಇಂತಹ ಮೂರ್ತಿಗಳನ್ನು ಒಂದೆಡೆಯಿಂದ ಮತ್ತೊಂದು ಕಡೆಗೆ ಸಾಗಿಸುವಾಗ ಪೆಟ್ಟಿಗೆಯೊಳಗೆ ಸಾಕಷ್ಟು ಮೆತ್ತೆಯಾದ ಒತ್ತಿಗೆಯನ್ನು ಅಳವಡಿಸಬೇಕು. ಇಲ್ಲದಿದ್ದಲ್ಲಿ ಅವುಗಳು ಮುಚ್ಚಿಹೋಗಬಹುದು.

೪) ಲೋಹದ ಕಲಾವಸ್ತುಗಳನ್ನು ಹಿಡಿದುಕೊಳ್ಳುವಾಗ ಬಿಳಿಯ ಹತ್ತಿಯ ಕೈಚೀಲಗಳನ್ನು ಉಪಯೋಗಿಸುವುದು ಉತ್ತಮ.

೫) ಕಂಚಿನವಸ್ತುಗಳಿಗೆ "ಕಂಚಿನ ರೋಗ" ಬರುವುದರಿಂದ ಅವುಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು.

೬) ಒಂದು ಕಾಲಕ್ಕೆ ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಕೊಂಡೊಯ್ಯಬಾರದು

೧೯೭೨ ರಲ್ಲಿ ಸ್ಥಾಪನೆಯಾದ ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಹಲವಾರು ಪ್ರಾಚ್ಯಾವಶೇಷಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸಿಡಲಾಗಿದೆ. ಅವುಗಳಲ್ಲಿ ಪ್ರಾಗೈತಿಹಾಸಕ ಅವಶೇಷಗಳಾದ ಕೈಕೊಡಲಿ, ಮಡಿಕೆಗಳು ಮತ್ತಿತರ ಪ್ರಾಚ್ಯಾವಶೇಷಗಳು ಹಾಗು ಚಾರಿತ್ರಿಕ ಕಾಲದ ಶಿಲಾ ಮತ್ತು ಕಾಷ್ಟ ಮೂರ್ತಿಗಳು ಮತ್ತು ಶಾಸನಗಳು, ವೀರಗಲ್ಲು ಮತ್ತು ಇತರೆ ಅವಶೇಷಗಳು ಮುಖ್ಯವಾಗಿವೆ.

ಅಸ್ತ್ರ ಶಸ್ತ್ರಗಳನ್ನು ಸೂಕ್ಷ್ಮ ಕಂಚಿನ ಹಾಗೂ ಲೋಹದ ಪ್ರತಿಮೆಗಳನ್ನು ದಾನ ಶಾಸನ ತಾಮ್ರ ಫಲಕಗಳನ್ನು ತಾಳೆ ಗರಿಯ ಹಸ್ತಪ್ರತಿಗಳನ್ನು ಲೇಖನ ಸಾಮಾಗ್ರಿಗಳನ್ನು ಹಿತ್ತಾಳೆಯ ಹರಿವಾಣಗಳನ್ನು ಮತ್ತು ಮಡಕೆ, ಕುಡಿಕೆಗಳನ್ನು ಪ್ರದರ್ಶಿಸಲಾಗಿರುತ್ತದೆ ಬಹುಮುಖ್ಯವಾಗಿ ಪ್ರದರ್ಶಿಸಲ್ಪಟ್ಟಿರುವ ಪ್ರತಾಪದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯ, ವೆಂಕಟರಾಯ, ರಾಮರಾಯ ಮತ್ತು ತಿರುಮಲರಾಯರ ಕಾಲದ ಚಿನ್ನ ಹಾಗೂ ತಾಮ್ರದ ನಾಣ್ಯಗಳು ವಿಜಯನಗರ ಕಾಲದ ನಾಣ್ಯ ಪದ್ಧತಿಯ ಬಗ್ಗೆ ಬೆಳಕು ಚೆಲ್ಲುತ್ತದೆ.

ಕಂಚಿನ ಶಿಲ್ಪಗಳು :

೧: ಸೇವಕಿಯರು :

೨: ಗಣೇಶ (ಸೊಂಡಿಲು) :

೩: ಲಿಂಗ :

೪: ಕುದುರೆ :

೫: ಬಿಂದಿಗೆಗಳು :

೬: ದೀಪ ಹಿಡಿದ ಲಕ್ಷ್ಮೀ :

೭: ನಾಗರ :

೮: ನಾಗರಾಜ :

ಚಿಕ್ಕದಾಗಿರುವ ಕಂಚಿನ ಶಿಲ್ಪಗಳನ್ನು ಕಾಣಬಹುದು. ವಿಜಯನಗರ ಕಾಲದಲ್ಲಿ ರಚಿಸಲಾದ ಶಿಲ್ಪಗಳಿವು. ಸೇವಕಿಯರು, ಗಣೇಶನ ಸೊಂಡಿಲು, ಐದಂಚಿನ ಲಿಂಗ, ಕಾಡುಕುದುರೆ, ಮನೆಯಲ್ಲಿ ಬಳಸಲಾಗುತ್ತಿದ್ದ ವಿವಿಧ ಆಯಾಮದ ಲಿಂಗಗಳು, ಅಲಂಕಾರದಿಂದ ಕೂಡಿದ ದೀಪ, ಎಡೆ ಎತ್ತಿ ನಿಂತಿರುವ ನಾಗರ ಹಾವು ಮತ್ತು ನಾಗರಾಜನ ಶಿರ(ತಲೆ)ವನ್ನು ಮುಖ್ಯವಾಗಿ ಈ ಗಂಜಿನ

ಪಟ್ಟಿಕೆಯಲ್ಲಿ ಕಾಣಬಹುದಾಗಿದೆ. ೧೬ನೇ ಶತಮಾನದಲ್ಲಿ ಸಿಕ್ಕಂತಹ ಅವಶೇಷಗಳಾದರೂ ನಿನ್ನೆ ಮೊನ್ನೆಯ ಥರವೇ ವಿಜೃಂಭಿಸುತ್ತಿವೆ. ನೋಡುಗೆ ಅಷ್ಟೇ ಆನಂದಿಸುತ್ತಾನೆ.

ಕಂಚಿನ ವಿಗ್ರಹಗಳು :

ಶ್ರೀದೇವಿ ಮತ್ತು ಭೂದೇವಿ

ಶಿಲ್ಪದ ಹೆಸರು : ಶ್ರೀದೇವಿ ಮತ್ತು ಭೂದೇವಿ

ಕಾಲ : ೧೬ನೇ ಶತಮಾನ

ಅಳತೆ : ೧೦ * ೬ ಇಂಚು

ದೊರೆತ ಸ್ಥಳ : ಹಂಪಿ

ಶ್ರೀದೇವಿ ಮತ್ತು ಭೂದೇವಿ ಮೂರ್ತಿ ಶಿಲ್ಪಗಳು ಪದ್ಮ ಪೀಠದ ತ್ರಿಭಂಗಿ ಮುದ್ರೆಯಲ್ಲಿ ನಿಂತಿರುವಂತೆ ರೂಪಿಸಲಾಗಿದ್ದು, ಶ್ರೀದೇವಿಯು ತನ್ನ ಎಡ ಹಸ್ತದಲ್ಲಿ ಪುಷ್ಪವನ್ನು ಹಿಡಿದಿದ್ದಾರೆ. ಭೂದೇವಿ ತನ್ನ ಬಲ ಹಸ್ತದಲ್ಲಿ ನೀಲೊತ್ಪಲ ಪುಷ್ಪವನ್ನು ಧರಿಸಿದೆ.

ಎರಡು ಶಿಲ್ಪಗಳು ಕಿರೀಟ, ವೃತ್ತಕುಂಡಲಗಳು, ವೃಕ್ಷಹಾರ, ಸ್ತನಹಾರ, ಭುಜಕೀರ್ತಿ, ಕೇಯೂರ, ಛನ್ನವೀರ, ಕಟಿಬಂಧ, ಪೀತಾಂಬರ, ನೂಪುರ ಮತ್ತು ಲಲಾಟ ತಿಲಕಗಳಿಂದ ಅಲಂಕೃತಗೊಂಡಿವೆ. ಶ್ರೀದೇವಿ ಶಿಲ್ಪಕ್ಕೆ ಕುಚ ಬಂಧವನ್ನು ತೋಡಿಸಲಾಗಿದೆ. ಎರಡು ಪ್ರತಿಮೆಗಳನ್ನು ಒಬ್ಬನೇ ಶಿಲ್ಪಿ ರೂಪಿಸಿರಬಹುದೆಂದು ಊಹಿಸಲಾಗಿದೆ.

ಅಲ್ಲಿಂದ ಮುಂದುವರೆದ ಗಾಜಿನ ಕಪಾಟಿನೊಳಗೆ ಆಯೋಜಿಸಲ್ಪಟ್ಟಿರುವ ವೈಷ್ಣವ ದೇವತೆ, ಲಕ್ಷ್ಮಿನರಸಿಂಹ, ಲಕ್ಷ್ಮಣ, (ತಲೆ) ರಾಜಮೂರ್ತಿ, ಆಳ್ವಾರ್, ಮತ್ಸ್ಯ ಮತ್ತು ಕಲ್ಕಿ ಅವತಾರಗಳು, ವಿಷ್ಣು, ಶ್ರೀನಿವಾಸ (ರುಂಗವಿಲ್ಲದ) ರಾಮ, ಸೀತೆ, ಲಕ್ಷಣ, ಲಕ್ಷ್ಮೀನಾರಾಯಣ, ಪದ್ಮಾಸೀನ ನರಸಿಂಹ, ಬಾಗಿಲು ಚೌಕಟ್ಟು ತಲೆ, ಅನಭಿಜ್ಞಾತ ವೈಷ್ಣವ ದೇವತೆ ತಲೆ.

ನಾಗನೊಂದಿಗೆ ನಂದಿ (ಹಿತ್ತಾಳೆ ಮೂರ್ತಿ)

ಶಿಲ್ಪದ ಹೆಸರು : ನಾಗನೊಂದಿಗೆ ನಂದಿ

ಕಾಲ : ೧೯ನೇ ಶತಮಾನ

ಅಳತೆ : ೪ * ೨ ಇಂಚು

ದೊರೆತ ಸ್ಥಳ : ಹಂಪಿ

ಲೋಹದ ಮೂರ್ತಿಯು ನಾಗದೇವನು ನಂದಿ ವಿಗ್ರಹಕ್ಕೆ ಆಸರೆ ನೀಡಿದೆ ಎಂಬುದನ್ನು ನೋಡಬಹುದು.

ದೀಪದ ಲಕ್ಷ್ಮಿ

ಶಿಲ್ಪದ ಹೆಸರು : ದೀಪಲಕ್ಷ್ಮಿ

ಕಾಲ : ೧೯ನೇ ಶತಮಾನ

ಅಳತೆ : ೬ * ೨ ಇಂಚು

ದೊರೆತ ಸ್ಥಳ : ಹೊಸಪೇಟೆ

ದೀಪಲಕ್ಷ್ಮಿಯು ದೀಪವನ್ನು ಹಿಡಿದುಕೊಂಡು ಸ್ತಾನಿಕ ಭಂಗಿಯಲ್ಲಿ ನಿಂತಿರುವ ಲೋಹದ ಮೂರ್ತಿಯನ್ನು ಕಾಣಬಹುದು. ಅದೇ ರೀತಿ ಧೂಪಾರತಿ ಲೋಹದ ಮೂರ್ತಿಗಳು ಕ್ರಿ.ಶ ೧೯ನೇ ಶತಮಾನದಲ್ಲಿ ದೊರೆತಿವೆ. ದ್ವಿಪ ಸ್ತಂಭದ ಅವಶೇಷಗಳು ಕ್ರಿ.ಶ. ೧೬ನೇ ಶತಮಾನದಲ್ಲಿ ಭೀಮಟಾರದ ಹತ್ತಿರ ದೊರೆತ ಇದೇ ರೀತಿಯ ಸ್ತಾನಿಕ ಭಂಗಿಯ ಮೂರ್ತಿಗಳು ದೊರೆತಿವೆ.

ಪೀಠದೊಂದಿಗೆ ಲಿಂಗ

ಶಿಲ್ಪದ ಹೆಸರು : ಪೀಠದೊಂದಿಗೆ ಲಿಂಗ

ಕಾಲ : ೧೯ನೇ ಶತಮಾನ

ಅಳತೆ : ೬ * ೨ ಇಂಚು

ದೊರೆತ ಸ್ಥಳ : ಹೊಸಪೇಟೆ

ಈ ಪೀಠ ಲಿಂಗವು ಮನಮೋಹಕವಾಗಿದ್ದು, ಒಂದು ಪೀಠದ ಮೇಲೆ ಈ ಲಿಂಗವನ್ನು ಪ್ರತಿಷ್ಠಾಪನೆ ಮಾಡಿರುವುದನ್ನು ನಾವು ನೋಡಬಹುದು. ಇದು ೧೯ನೇ ಶತಮಾನದಲ್ಲಿ ದೊರೆತಿದ್ದಾಗಿದೆ.

ಹಿತ್ತಾಳೆ ಬಟ್ಟಲು

ಶಿಲ್ಪದ ಹೆಸರು : ಹಿತ್ತಾಳೆ ಬಟ್ಟಲು

ಕಾಲ : ೧೯ನೇ ಶತಮಾನ

ಅಳತೆ : ೩ * ೩ ಇಂಚು

ದೊರೆತ ಸ್ಥಳ : ಭೀಮದ್ವಾರದ ಹತ್ತಿರ ಕಮಲಾಪುರ

ಈ ಬಟ್ಟಲು ರಂಜಕ ಅಲಂಕೃತವಾಗಿದ್ದು, ಹೆಚ್ಚಾಗಿ ದೇವಾಲಯದಲ್ಲಿ ಹೆಚ್ಚಾಗಿ ಉಪಯೋಗಿಸುತ್ತಿದ್ದರು ಎಂದು ತಿಳಿಯುತ್ತದೆ.

ಶಿಲಾ ಶಾಸನಗಳು

ಕಲ್ಲಿನ ಮೇಲೆ ಲೋಹದ ಮೇಲೆ ಕೆತ್ತಿಸಿದ ಬರಹಗಳಿಗೆ ಸಾಮಾನ್ಯವಾಗಿ ಶಾಸನ ಎಂದು ಕರೆಯಲಾಗುತ್ತದೆ. ಇದು ರೂಢಾರ್ಥ್ಯವಾಗಿದ್ದರೂ ಅವುಗಳಲ್ಲಿ ತಾತ್ವಿಕವಾದ ಅರ್ಥ ಇನ್ನು ಆಳವಾದುದಾಗಿದೆ. ಹಿಂದಿನ ಕಾಲದಲ್ಲಿ ರಾಜರುಗಳು ಅತ್ಯಂತ ಅಧಿಕಾರವುಳ್ಳಂಥ ಅಧಿಕಾರಿಗಳು ತಮ್ಮ ಅಧಿಕಾರದ ಮುದ್ರೆಯಿಂದ ದೃಢೀಕರಿಸುತ್ತಾ ಕಲ್ಲಿನ ಮೇಲೆ ಅಥವಾ ತಾಮ್ರದ ಲೋಹಗಳ ಮೇಲೆ ಕೆಲವು ಬರಹಗಳನ್ನು ಬರೆಯಿಸುತ್ತಿದ್ದರು. ಅವು ಆಯಾ ವ್ಯಕ್ತಿಗಳ ಶಾಸನಾಯುಕ್ತ ಅಂದರೆ ಶಾಸನಬದ್ಧವಾಗಿರುತ್ತಿದ್ದುದರಿಂದಲೇ ಅಂತಹ ಬರಹಗಳನ್ನು ಶಾಸನ ಗಳೆಂದು ಕರೆಯಲಾಯಿತು.

ಶಾಸನಗಳು ಕೇವಲ ಕಲ್ಲು ಅಥವಾ ತಾಮ್ರದ ಲೋಹಗಳ ಮೇಲೆ ಬರೆದವುಗಳು ಎಂದು ಮೇಲೆ ಹೇಳಿಯಾಗಿದೆ. ಆದರೆ ಅವೆರಡರ ಮೇಲೆಯೇ ಬರೆಯಬೇಕೆಂಬ ಕಟ್ಟು ಪಾಡೇನು ಇಲ್ಲ, ಹಿಂದಿನ ಕೆಲವು ಶಾಸನಗಳು ಗಮನಿಸಿದರೆ ಅವು ಮರದ ಮೇಲಿವೆ, ಮೂಳೆಯ ಮೇಲಿವೆ, ನಾಣ್ಯಗಳ ಮೇಲಿವೆ, ಮಣ್ಣಿನ ಫಲಕಗಳ ಮೇಲಿವೆ, ಸ್ಪಟಿಕದ ಹರಿಳಿನ ಮೇಲಿನ ವಿಗ್ರಹಗಳ ಮೇಲಿವೆ, ಸ್ತಂಭಗಳ ಮೇಲಿವೆ, ದೇವಸ್ಥಾನದ ಗೋಡೆಯ ಮೇಲಿವೆ, ವಿಗ್ರಹಗಳ ಪೀಠಗಳ ಮೇಲಿವೆ, ಪಾತ್ರೆಗಳ ಮೇಲೂ ಇವೆ.

ಕ್ರಿ.ಪೂ. ೨೦೦೦ ವರ್ಷಗಳ ಹಿಂದಕ್ಕೆ ಹೋಗುತ್ತದೆ. ಈಜಿಪ್ಟ ಸಿಕ್ಕಿರುವ ಬಗೆಗೆ ವಿದ್ವಾಂಸರು ಉಲ್ಲೇಖ ಮಾಡಿರುವರು. ಆದರೆ ಭಾರತದಲ್ಲಿ ದೊರೆತ ಶಾಸನಗಳಿಗೆ ಅಷ್ಟು ವರ್ಷಗಳ ಹಳೆಯವಲ್ಲ. ಭಾರತದಲ್ಲಿ ಸಿಕ್ಕರುವ ಅತಿ ಪ್ರಾಚೀನ ಶಾಸನಗಳಲ್ಲಿ ಅಶೋಕನ ಶಾಸನಗಳೇ ಮೊದಲು ನಿಲ್ಲುತ್ತವೆ. ಅಶೋಕನ ಕಾಲ ಕ್ರಿ.ಪೂ. ೩ ನೇ ಶತಮಾನ ಭಾರತದ ದೃಷ್ಟಿಯಿಂದಲ್ಲದೆ ಕನ್ನಡ ನಾಡಿನಲ್ಲೂ ಅಶೋಕನ ಶಾಸನಗಳು ಇವೆ. ಆದುದರಿಂದ ಕನ್ನಡ ನಾಡಿನ ಶಾಸನಗಳ ಅಧ್ಯಯನ ಚರಿತ್ರೆಯ ಕ್ರಿ.ಪೂ. ೩ ನೇಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಕರ್ನಾಟಕದಲ್ಲಿ ಬೇರೆ ಬೇರೆ ಭಾಷೆಯ ಶಾಸನಗಳು ಸಿಕ್ಕುತ್ತವೆ. ಶಿವಮೊಗ್ಗ ಜಿಲ್ಲೆಯಲ್ಲಿ ಮರಾಠಿ ಶಾಸನಗಳು ಸಿಕ್ಕಿವೆ. ಶ್ರವಣಬೆಳಗೊಳದಲ್ಲಿ ಮಲೆಯಾಳಂ ಶಾಸನ ಸಿಕ್ಕಿದೆ. ಎಲ್ಲೆಡೆಯೂ ಎಲ್ಲಾ ಭಾಷೆಯ ಶಾಸನಗಳು ಸಿಕ್ಕಿದ್ದರೂ ಕೋಲಾರ, ಬೆಂಗಳೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಕನ್ನಡದ ಜೊತೆಗೆ ತೆಲುಗು ಭಾಷೆಯ ಶಾಸನಗಳೂ ಕೋಲಾರ, ಬೆಂಗಳೂರು ಮೈಸೂರು ಜಿಲ್ಲೆಗಳಲ್ಲಿ ತಮಿಳು ಭಾಷೆಯ ಶಾಸನಗಳು

ಹೇರಳವಾಗಿ ದೊರೆತಿವೆ. ಶಾಸನವೆಂದರೆ ಕೆಲವು ಕಲ್ಲಿನ ಮೇಲೆ ಲೋಹದ ಮೇಲೆ ಕೆತ್ತಿಸಿದ ಬರಹಗಳಿಗೆ ಸಾಮಾನ್ಯವಾಗಿ 'ಶಾಸನ' ಎಂದು ಕರೆಯುವರು. ಇದು ಕೂಡ ಅರ್ಥವಾಗದಿದ್ದರೂ. ಅವುಗಳು ತಾತ್ವಕವಾದ ಅರ್ಥವನ್ನು ಆಳವಾಗಿದೆ ಎಂಬುದು ಹೇಳಲಾಗಿದೆ.

ತಾಮ್ರ ಶಾಸನ :

ವ್ಯಕ್ತಿಯ ಜೀವನ ಮೌಲ್ಯಗಳಲ್ಲಿ ದಾನವೂ ಪ್ರಮುಖವಾದುದು. ದಾನಶಾಸನಗಳು. ನಮ್ಮ ನಾಡಿನ ಸಂಸ್ಕೃತಿಯ ಒಂದು ಪ್ರಧಾನವಾದ ಅಂಶವನ್ನು ಎತ್ತಿ ತೋರಿಸುತ್ತವಲ್ಲದೆ. ನಾಡಿನ ಜನರು ದಾನಕ್ಕೆ ಪ್ರಪಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪವನ್ನು ಕೂಡ ಪ್ರತಿಬಿಂಬಿಸುತದೆ. ಅನ್ನ, ಸ್ಯಾದಿ ಧರ್ಮಕಾರ್ಯಗಳಿಗಾಗಿ ವಿದ್ಯಾಭ್ಯಾಸಕ್ಕಾಗಿ ಧಾನಗಳನ್ನು ನೂರಕ್ಕೆ ೯೫ ರಷ್ಟು ದೊರೆತಿರುವ ಶಾಸನಗಳೇ ಸಾಕ್ಷಿ.

ವಿಜಯನಗರ ಕಾಲದಲ್ಲಿ ಹರಿಹರನ ಕಾಲದಿಂದ ಕ್ರಿ.ಶ. ೧೩ನೇ ಶತಮಾನದಿಂದ ೧೬ನೇ ಶತಮಾನದವರೆಗೂ ತಾಮ್ರ ಶಾಸನಗಳನ್ನು ಹೊರಡಿಸಿರುವುದನ್ನು ನಾವು ಕಾಣಬಹುದು. ಇದರಲ್ಲಿ ಅನೇಕ ಭಾಷೆಗಳಲ್ಲಿ ತಾಮ್ರ ಶಾಸನಗಳನ್ನು ರಚಿಸಿದ್ದಾರೆ. ಸಂಸ್ಕೃತ, ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಸುಮಾರು ೧೭ಕ್ಕೂ ಹೆಚ್ಚು ಧಾರ್ಮಿಕ ಉದ್ದೇಶವುಳ್ಳ ಶಾಸನಗಳನ್ನು ಈ ವಸ್ತು ಸಂಗ್ರಹಾಲಯದಲ್ಲಿ ನೋಡಬಹುದು.

ಕಂಚಿನ ಶಸ್ತ್ರಾಸ್ತ್ರಗಳು :

ಕಂಚಿನ ಪ್ರತಿಮೆಗಳಲ್ಲದೇ ಆ ಕಾಲದಲ್ಲಿ ಯುದ್ಧ ಶಸ್ತ್ರಾಸ್ತ್ರಗಳನ್ನು ಇಲ್ಲಿ ಕಾಣಬಹುದು.

ಖಡ್ಗ :

ವಿಜಯನಗರ ಕಾಲದಲ್ಲಿ ರಾಜರುಗಳು, ಸೈನಿಕರು ಯುದ್ಧದ ಸಮಯದಲ್ಲಿ ಹೆಚ್ಚಾಗಿ ಖಡ್ಗಗಳನ್ನು ಬಳಸುತ್ತಿದ್ದರು. ಅನೇಕ ರೀತಿಯ ಖಡ್ಗಗಳನ್ನು ಇಲ್ಲಿ ನೋಡಬಹುದು. ಅಳತೆ ಮೂರು ಅಡಿಯ ಉದ್ದದವರೆಗೆ ಖಡ್ಗಗಳನ್ನು ಇಲ್ಲಿ ವೀಕ್ಷಿಸಬಹುದು.

ಗುರಾಣಿ :

ವಿಜಯನಗರ ಕಾಲದಲ್ಲಿ ರಾಜರುಗಳು, ಸೈನಿಕರು ಯುದ್ಧದ ಸಮಯದಲ್ಲಿ ಹೆಚ್ಚಾಗಿ ಗುರಾಣಿಗಳನ್ನು ರಕ್ಷಣೆಗಾಗಿ ಈ ಕಂಚಿನ ಗಿರಣಿಗಳನ್ನು ಬಳಸುತ್ತಿದ್ದರು. ಇವುಗಳನ್ನು ಈ ಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ.

ಕಂಚಿನ ವಸ್ತುಗಳು :

ವಿಜಯನಗರ ಕಾಲದಲ್ಲಿ ದೊಡ್ಡ ದೊಡ್ಡ ಕಂಚಿನ ವಸ್ತುಗಳಾದ ಹರಿವಾಣಗಳನ್ನು ಪೂಜೆಗೆ ಮತ್ತು ಊಟಕ್ಕೆ ಬಳಸುತ್ತಿದ್ದರು. ಇಲ್ಲಿ ೭ ರೀತಿಯ ಹರಿವಾಣಗಳನ್ನು ನೋಡಬಹುದು. ಸುತ್ತಳತೆ ೧ ಅಡಿಯವರೆಗೆ ಇರುವ ಹರಿವಾಣಗಳನ್ನು ಕಾಣಬಹುದು.

ಚಾರಿತ್ರಿಕ ಕಾಲದ ಅವಶೇಷಗಳು.

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಹಲವಾರು ಪ್ರಾಚ್ಯಾವಶೇಷಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸಿಡಲಾಗಿದೆ. ಅವುಗಳಲ್ಲಿ ಶಿಲಾ ಮತ್ತು ಕಾಷ್ಟ ಮೂರ್ತಿಗಳು ಮತ್ತು ಶಾಸನಗಳು,ವೀರಗಲ್ಲು ಮತ್ತು ಇತರೆ ಅವಶೇಷಗಳು ಮುಖ್ಯವಾಗಿವೆ. ಚಾರಿತ್ರಿಕವಾಗಿ ಇವು ಮಹತ್ವ ಪಡೆದಿದ್ದು, ಅವುಗಳನ್ನು ಈ ಮುಂದಿನಂತೆ ಅಂದರೆ ಧರ್ಮಗಳಿಗೆ ಅನುಗುಣವಾಗಿ ವಿಭಾಗಿಸಿಕೊಂಡು ಹೇಳಲಾಗಿದೆ.

ಲೋಹ ಮಾಧ್ಯಮದ ಶಿಲ್ಪಗಳು




ಲಕ್ಷ್ಮೀ




ದೀಪದ ಲಕ್ಷ್ಮೀ



ದೀಪದ ಕಂಬ




ಚಂಬು



ನಾಗರ



ದೀಪದ ಲಕ್ಷ್ಮೀ



ಮಹಿಶಾಸುರಮರ್ಧಿನಿ



ದೀಪ ಹಿಡಿದ ಲಕ್ಷ್ಮೀ



ಲಿಂಗ



ದೀಪದ ಕಂಬ

ಅಧ್ಯಾಯ – ೫

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಸಂಕೀರ್ಣ ಮಾಧ್ಯಮದ ಕಲೆ

ಅಧ್ಯಾಯ – ೫

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಸಂಕೀರ್ಣ ಮಾಧ್ಯಮದ ಕಲೆ

ಭೂಮಿಯ ಮೇಲೆ ಮಾನವ ಜೀವಿ ಉಗಮಗೊಂಡು ಕ್ರಮೇಣ ಆತನ ಕಾರ್ಯ ಚಟುವಟಿಕೆಗಳು ಅಭಿವೃದ್ಧಿ ಹೊಂದುತ್ತಾ ಬಂದವು. ಈ ಕಾರ್ಯದಲ್ಲಿ ಬರವಣಿಗೆಯ ಹಂತಕ್ಕೆ ತಲುಪಿದಾಗ ಅದನ್ನು ಇತಿಹಾಸ ಕಾಲವೆಂದೂ ಕರೆಯಲಾಯಿತು. ಪ್ರಾಗಿತಿಹಾಸ ಕಾಲದಲ್ಲಿ ಮಾನವನು ನದಿ–ಹಳ್ಳಗಳ ಪಕ್ಕದಲ್ಲಿ ಕಾಡು–ಬೆಟ್ಟಗಳಲ್ಲಿ ವಾಸವಾಗಿದ್ದನು. ಆತನ ಜ್ಞಾನ, ಉತ್ಪಾದಿಸುವ ವಸ್ತುಗಳು ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಈ ಸುದೀರ್ಘವಾದ ಅವಧಿಯನ್ನು ಆದಿ ಶಿಲಾಯುಗ, ಮಧ್ಯ ಶಿಲಾಯುಗ, ನವ ಶಿಲಾಯುಗ, ಶಿಲಾ ತಾಮ್ರಯುಗ ಹಾಗೂ ಕಬ್ಬಿಣ ಬೃಹತ್ ಶಿಲಾಯುಗವೆಂದು ವಿಂಗಡಿಸಲಾಯಿತು. ನವಶಿಲಾಯುಗ ಸಂಸ್ಕೃತಿಯಲ್ಲಿ ತಾವು ವಾಸವಾಗಿರುವ ಭೌಗೋಳಿಕ ಲಕ್ಷಣಗಳಿಗೆ ಹೊಂದಿಕೊಂಡಂತೆ ಒಂದು ಗುಂಪಿನವರು ಪಶುಪಾಲನೆಯನ್ನು ಮತ್ತೊಂದು ಗುಂಪಿನವರು ಕೃಷಿಯನ್ನು ಆರಂಭಿಸಿದರು. ಈ ಯುಗದ ಕೊನೆಯ ಹಂತದಲ್ಲಿ ಅದಿರಿನಿಂದ ತಾಮ್ರವನ್ನು ತಯಾರಿಸುವ ಕಲೆಯನ್ನು ಕಂಡುಕೊಂಡರು. ಅನಂತರ ಕಬ್ಬಿಣದ ಉತ್ಪಾದನೆಯು ಆರಂಭವಾಯಿತು. ತಾಮ್ರ, ಕಬ್ಬಿಣದ ತಯಾರಿಕೆಯಿಂದ ಜನಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು.

ಅದಿರನ್ನು ಕರಗಿಸಿ ತಾಮ್ರ, ಚಿನ್ನವನ್ನು ಪಡೆಯುವ ಕಲೆ ಕಬ್ಬಿಣಕ್ಕಿಂತಲೂ ಪ್ರಾಚೀನವಾದುದು. ಇದಕ್ಕೆ ಕಾರಣ ತಾಮ್ರವನ್ನು ೧೨೦೦ ಡಿಗ್ರಿ ಸೆಲ್ಸಿಯಸ್ ಕಡಿಮೆ ಶಾಖದಲ್ಲಿ ಕರಗಿಸಬಹುದು. ಆದರೆ ಕಬ್ಬಿಣವನ್ನು ಕರಗಿಸಲು ೧೮೦೦ ಡಿಗ್ರಿ ಸೆಲ್ಸಿಯಸ್ ಶಾಖ ಬೇಕಾಗುತ್ತದೆ. ಇಷ್ಟೊಂದು ಶಾಖವನ್ನು ಉತ್ಪನ್ನಗೊಳಿಸಬಲ್ಲಂತಹ ತಿದಿಗಳನ್ನು ತಯಾರಿಸುವುದು, ಆ ಜನರಿಗೆ ಸಾಧ್ಯವಿರಲಿಲ್ಲ. ಈ ಕಲೆ ಅನಂತರ ಬಂದುದು.

ಪ್ರಾಗೈತಿಹಾಸಕ ಅವಶೇಷಗಳು :-

ಇಲ್ಲಿ ನವಶಿಲಾಯುಗದ ಅವಶೇಷಗಳನ್ನು ಸಂಗ್ರಹಿಸಿಡಲಾಗಿದ್ದು, ಅವು ಇಂತಿವೆ.

ಮಡಿಕೆಗಳು :

ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿ ಬೃಹತ್ ವಿದ್ವಾಂಸರು ಉತ್ಖನನ ಮಾಡಿ ಸುಮಾರು ೫ ಭಿನ್ನತರಹದ ಮಡಿಕೆ ಚೂರುಗಳನ್ನು ಸಂಗ್ರಹಿಸಿದ್ದಾರೆ. ಆಗಿನ ಕಾಲದಲ್ಲಿ ಮಡಿಕೆಗಳನ್ನು ಆಹಾರ ತಯಾರಿಸಿಕೊಳ್ಳಲು ಬಳಸುತ್ತಿದ್ದರೆಂದು, ದಿನ ಬಳಕೆಯ ವಸ್ತುಗಳನ್ನು ಕೂಡ ನಾವು ಇಲ್ಲಿ ನೋಡಬಹುದು.

ಕೊಡಲಿಗಳು :

ಮೊಸಳಯ್ಯನ ಗುಡ್ಡದಲ್ಲಿ ದೊರೆತಂಥಹ ಕೊಡಲಿಗಳು ನವಶೀಲಾಯುಗದ ಕಾಲದಲ್ಲಿ ದೊರೆತಿವೆ ಎಂದು ಹೇಳಬಹುದು. ಈ ಕೊಡಲಿಗಳು ಕಪ್ಪು ಕಲ್ಲಿನಿಂದ ನಯಗೊಳಿಸಿ ಮಾಡಿದಂತಹ ಕೊಡಲಿಗಳೆ ಆಗಿವೆ. ಭೇಟಿಯಾಡಿದ ಪ್ರಾಣಿಗಳನ್ನು ಚರ್ಮವನ್ನು ಬಿಡಿಸಲು, ಇವುಗಳನ್ನು ಉಪಯೋಗಿಸುತ್ತಿದ್ದರು. ಸುಮಾರು ಇಲ್ಲಿ ೧೦ ಕ್ಕೂ ಅಧಿಕ ಕಪ್ಪು ಕಲ್ಲಿನ ಕೊಡಲಿಗಳನ್ನು ಮತ್ತು ಕೊಡಲಿ ಹೋಲಿಕೆಯಾಗುವಂತಹ ಆಕಾರವಿಲ್ಲದ ಕೊಡಲಿಗಳನ್ನು ಅಥವಾ ಬಾಚಿಗಳನ್ನು ಈ ವಸ್ತು ಸಂಗ್ರಹಾಲಯದಲ್ಲಿ ನಾವು ನೋಡಬಹುದು.

ದಿನ ಉಪಯೋಗಿ ವಸ್ತುಗಳು :

ಕಮಲಾಪುರ ಪುರಾತತ್ವ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ದಿನ ಉಪಯೋಗಿ ವಸ್ತುಗಳನ್ನು ಕೆಲವೊಂದು ರೀತಿಯಲ್ಲಿ ವಿವರಿಸಲಾಗಿದೆ. ಅವುಗಳೆಂದರೆ

- ಮಣ್ಣಿನ ಮಡಿಕೆಗಳು
- ಮಣ್ಣಿನ ಅರಿವೆಗಳು
- ಮಡಿಕೆ ಅವಶೇಷಗಳು

ಮಣ್ಣಿನ ಮಡಿಕೆಗಳು :

ವಿಜಯ ನಗರದ ಕಾಲದಲ್ಲಿ ನದಿಯ ಜೇಡಿಮಣ್ಣನ್ನು ಬಳಸಿ ಮಡಿಕೆಗಳನ್ನು ಸುಟ್ಟು ತಯಾರಿಸುತ್ತಿದ್ದರು. ಅವುಗಳಲ್ಲಿ ಆಹಾರ ಉತ್ಪಾದಿಸಲು ಮಧ್ಯಮ ವರ್ಗದವರು ಈ ಮಡಿಕೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು.

ಮಣ್ಣಿನ ಅರಿವೆಗಳು :

ವಿಜಯ ನಗರದ ಕಾಲದಲ್ಲಿ ನದಿಯ ಜೇಡಿಮಣ್ಣನ್ನು ಬಳಸಿ ಮಡಿಕೆಗಳನ್ನು ಸುಟ್ಟು ತಯಾರಿಸುತ್ತಿದ್ದರು. ಅವುಗಳನ್ನು ಕುಡಿಯುವ ನೀರನ್ನು ತರಲು, ಸಂಗ್ರಹಿಸಲು ಈ ಅರಿವೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರೆಂದು ಹೇಳಬಹುದು.

ಮಡಿಕೆ ಅವಶೇಷಗಳು :

ವಿಜಯ ನಗರದ ಕಾಲದಲ್ಲಿ ನದಿಯ ಜೇಡಿಮಣ್ಣನ್ನು ಬಳಸಿ ಮಡಿಕೆಗಳನ್ನು ಸುಟ್ಟು ತಯಾರಿಸುತ್ತಿದ್ದರು. ಇವುಗಳನ್ನು ಅಡುಗೆ ಮತ್ತು ನೀರಿಗಾಗಿ ಉಪಯೋಗಿಸುತ್ತಿದ್ದರು. ಅಡುಗೆ ಮಾಡಲು ಚಿಕ್ಕ ಗಾತ್ರದ ಮಡಿಕೆಗಳನ್ನು ಉಪಯೋಗಿಸುತ್ತಿದ್ದರು. ನೀರಿಗಾಗಿ ದೊಡ್ಡ ಗಾತ್ರದ ಮಡಿಕೆಗಳನ್ನು ಉಪಯೋಗಿಸುತ್ತಿದ್ದರು. ಇವು ನಮ್ಮ ವಸ್ತುಸಂಗ್ರಹಾಲಯದಲ್ಲಿ ಕಂಡುಬರುತ್ತವೆ.

ಹರಿವಾಣಗಳು

ಈಗಿನ ಕಾಲದ ಹಾಗೇ ಮೆಟಲ್ ತಟ್ಟೆಗಳು ಆಗಿನ ಕಾಲದಲ್ಲಿ ಇರಲಿಲ್ಲ. ಆಗ ರಾಜರೂ ಏನಿದ್ದರೂ ಬೆಳ್ಳಿ ಮತ್ತು ಬಂಗಾರ ಅಥವಾ ಕಂಚು ತಟ್ಟೆ(ಪ್ಲೇಟ್)ಗಳನ್ನೇ ಊಟಕ್ಕೆ ಬಳಸುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿಜಯನಗರ ಪ್ರದೇಶದಲ್ಲಿ ಅವಶೇಷಗಳನ್ನು ಹುಡುಕುತ್ತಿರುವ ಸಂದರ್ಭಗಳಲ್ಲಿ ಸಿಕ್ಕಂತಹ ಹರಿವಾಣ (ತಟ್ಟೆ) ಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಈ ಹರಿವಾಣಗಳನ್ನು ಹೆಚ್ಚು ಪೂಜಾವಿಧಿ ವಿಧಾನಗಳಿಗೆ ಬಳಸುತ್ತಿದ್ದವರಾದರೂ ಅವುಗಳ ಮೌಲ್ಯದ ಬಗ್ಗೆ ತಿಳಿಯಬಹುದು ಇಲ್ಲಿ ಒಟ್ಟು ಐದು ಹರಿವಾಣಗಳಿದ್ದು, ಮಧ್ಯವಿರುವ ಹರಿವಾಣ ಬಿಟ್ಟರೆ ಉಳಿದ ನಾಲ್ಕು ನಾಶಗೊಂಡಿರುತ್ತವೆ.

ಮಡಿಕೆ, ಕುಡಿಕೆಗಳು

ಈ ಗಾಜಿನ ಪಟ್ಟಿಕೆಯಲ್ಲಿ ಸಂಗ್ರಹ ಮಾಡಿದ್ದು ಪ್ರದರ್ಶಿಸಲ್ಪಟ್ಟಿರುವ ಮಡಿಕೆ-ಕುಡಿಕೆಗಳನ್ನು ಮುಖ್ಯವಾಗಿ ಕಾಣಬಹುದು. ಶಿಲ್ಪ ಕಲಾವಿದನಿಂದಲೇ ತಯಾರಾದ ಮಡಿಕೆ-ಕುಡಿಕೆಗಳು ಸರಳವಾಗಿ, ನೈಜವಾಗಿರುತ್ತವೆ.

ವಿಜಯನಗರದ ಮಡಿಕೆ-ಕುಡಿಕೆಗಳು ಕೆಂಪು ಹಾಗೂ ಬೂದು ಬಣ್ಣದಲ್ಲಿ ದೊರೆಯುತ್ತವೆ. ದೈನಂದಿನ ಬಳಕೆಯ ಆಧಾರದ ಮೇಲೆ ಇವುಗಳನ್ನು ಅಡುಗೆ ಮಾಡುವ ಶೇಖರಣಾ ಮತ್ತು ಧಾರ್ಮಿಕ ಉಪಯೋಗಿ ಪಾತ್ರೆಗಳೆಂದು ವಿಂಗಡಿಸಬಹುದು. ಅಡುಗೆ ಮಾಡುವ ಪಾತ್ರೆಗಳು ವಿಶಾಲವಾದ ಬಾಯಿಯನ್ನು ಹೊಂದಿದ್ದು, ಚಿಕ್ಕ ಕಂಠವನ್ನು ಹೊಂದಿರುತ್ತವೆ. ಇದೇ ಅಲ್ಲದೇ ಭುಜ

ಇಳಿಜಾರಾಗಿ ಇರುವ ಈ ಪಾತ್ರೆಗಳು ನಸು ಮೇಲೆತ್ತಿದ ಅಂಚನ್ನು ಹೊಂದಿದ್ದು, ಸಾಧಾರಣವಾಗಿ ಗಾತ್ರಕ್ಕೆ ತಕ್ಕ ಬಾಯಿಯನ್ನು ಹೊಂದಿರುತ್ತದೆ. ನೀರಿನ ಕೊಡಗಳು, ತಟ್ಟೆಗಳು, ವಿವಿಧ ರೀತಿಯ ಮುಚ್ಚಳಗಳು, ಹಾಗೂ ಲೋಟಗಳು ಉಪಯೋಗಿ ಪಾತ್ರೆಗಳ ಪಟ್ಟಿಯಲ್ಲಿ ಸೇರುತ್ತವೆ. ದೀಪಗಳು, ಹಣತೆಗಳು, ದೂಪದಾರತಿಗಳು, ಬಾಗಿನದ ದಾನ ಕುಡಿಕೆಗಳು, ಗೌರಿ, ಕಳಶಗಳು, ಇಲ್ಲಿನ ಧಾರ್ಮಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಮಡಿಕೆ-ಕುಡಿಕೆಗಳಾಗಿವೆ. ಅಷ್ಟ ದಿಕ್ಪಾಲಕರ ವಾಹನಗಳನ್ನು ಒಳಗೊಂಡ ಮಣ್ಣಿನ ದ್ರೋಣಗಳು (ದೊನ್ನೆ) ಇವುಗಳಲ್ಲಿ ಅತ್ಯಂತ ಮುಖ್ಯವಾದವುಗಳಾಗಿವೆ.

ಅಧ್ಯಾಯ : ೬

ಪ್ರವಾಸೋದ್ಯಮ ಕೇಂದ್ರವಾಗಿ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯ

ಅಧ್ಯಾಯ : ೬

ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಸೌಲಭ್ಯ ಮತ್ತು ಸಮಸ್ಯೆಗಳು

ಈ ಆಧುನಿಕ ಜಗತ್ತಿನಲ್ಲಿ ವಸ್ತು ಸಂಗ್ರಹಾಲಯಕ್ಕೆ ಪ್ರವಾಸಿಗರಾಗಿ ವಿದ್ಯಾರ್ಥಿಗಳು, ಜನಸಾಮಾನ್ಯರು ನೋಡಲು ಕುತೂಹಲದಿಂದ ಬರುತ್ತಾರೆ. ಅವರಿಗೆ ಅದೇ ರೀತಿ ಬರಮಾಡಿಕೊಳ್ಳುವ ರೀತಿಯಲ್ಲಿ ಸೌಲಭ್ಯಗಳನ್ನು ಪ್ರವಾಸಿಗರಿಗೆ ಒದಗಿಸಿದೆ. ಪ್ರಸಕ್ತ ವಸ್ತುಸಂಗ್ರಾಲಯದಲ್ಲಿ ಸೌಲಭ್ಯ ಮತ್ತು ಸಮಸ್ಯೆಗಳ ವಿವರ ಈ ಮುಂದಿನಂತೆ ಇದೆ.

ಸೌಲಭ್ಯಗಳು :

- ವೀಡಿಯೋ ಮತ್ತು ಛಾಯಚಿತ್ರಗಳು
- ಟಚ್ ಸ್ಕ್ರೀನ್ ವ್ಯವಸ್ಥೆ
- ವಾಹನಗಳ ನಿಲುಗಡೆ
- ಟಿಕೆಟ್ ಕೊಡುವ ಸ್ಥಳ.
- ಒಳಗಡೆ ಗ್ಯಾಲರಿ ಪದಕಗಳು.
- ಕೊಠಡಿಯೊಳಗೆ ಕುಳಿತುಕೊಳ್ಳಲು ಖುರ್ಚಿಗಳ ವ್ಯವಸ್ಥೆ.
- ಕೊಠಡಿಯೊಳಗೆ ಉತ್ತಮ ಬೆಳಕಿನ ವ್ಯವಸ್ಥೆ.
- ಹಂಪೆಯ ಕಣಿವೆಯ ನಮೂನೆ.
- ಪ್ರವಾಸಿಗರಿಗೆ ವಿಜಯ ನಗರದ ಉಚಿತ ಕೈಪಿಡಿ ವಿತರಣೆ.
- ವಿಶಾಲವಾದ ಆವರಣ.

- ಗ್ರಂಥಾಲಯ ವ್ಯವಸ್ಥೆ.
- ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ವ್ಯವಸ್ಥೆ.

ವಿಡಿಯೋ ಛಾಯ ಚಿತ್ರಗಳು :

೧. ರಾಜ ಪ್ರಾಂಗಣ ವಿಹಂಗಮ ದೃಶ್ಯ (ಉತ್ಖನನಕ್ಕೆ ಮೊದಲು)

೨. ರಾಜ ಪ್ರಾಂಗಣ ವಿಹಂಗಮ ದೃಶ್ಯ (ಉತ್ಖನನದ ನಂತರ)

೩. ಉತ್ತರ ದ್ವಾರ ಹಾಗೂ ಶೌಚಾಲಯ ರಾಜ ಪ್ರಾಂಗಣ (ಉತ್ಖನಕಕೆ ಮೊದಲು)

೪. ಉತ್ತರ ದ್ವಾರ ಹಾಗೂ ಶೌಚಾಲಯ ರಾಜ ಪ್ರಾಂಗಣ (ಉತ್ಖನನದ ನಂತರ)

೫. ಪುಷ್ಕರಣೆ ರಾಜ ಪ್ರಾಂಗಣ (ಉತ್ಖನಕ್ಕೆ ಮೊದಲು)

೬. ಪುಷ್ಕರಣೆ ರಾಜ ಪ್ರಾಂಗಣ (ಉತ್ಖನದ ನಂತರ)

೭. ಮಹಾನವಮಿ ದಿಬ್ಬ

೮. ಬೃಹತ್ ಸಾರ್ವಜನಿಕ ಕೊಳ (ಉತ್ಖನನ ಸಂರಕ್ಷಣಗೆ ಮೊದಲು)

೯. ಬೃಹತ್ ಸಾರ್ವಜನಿಕ ಕೊಳ (ಉತ್ಖನನ ಸಂರಕ್ಷಣಗೆ ನಂತರ)

೧೦. ಆಯತಾಕಾರದ ಕಟ್ಟೆಗಳು ಮತ್ತು ಕೊಳ ರಾಜ ಪ್ರಾಂಗಣ ಮದೃಶ್ಯ (ಉತ್ಖನನದ ಮೊದಲು)

೧೧. ಆಯತಾಕಾರದ ಕಟ್ಟೆಗಳು ಮತ್ತು ಕೊಳ ರಾಜ ಪ್ರಾಂಗಣದೃಶ್ಯ (ಉತ್ಖನನದ ನಂತರ)

೧೨. ನೀರಿನ ಕಾಲುವೆ (ಸಂರಕ್ಷಣೆಗೆ ಮೊದಲು)

೧೩. ನೀರಿನ ಕಾಲುವೆ (ಸಂರಕ್ಷಣೆ ನಂತರ)

೧೪. ದಕ್ಷಿಣವಿಧಿ ಹಜಾರರಾಮ ದೇಗುಲ ಮತ್ತು ರಾಜ ಪ್ರಾಂಗಣ (ಉತ್ಖನನ ಸಂರಕ್ಷಣೆಗೆ ಮೊದಲು)

೧೫. ದಕ್ಷಿಣ ವಿಧಿ ಹಜಾರ ರಾಮ ದೇಗುಲ ಮತ್ತು ರಾಜ ಪ್ರಾಂಗಣ (ಉತ್ಖನನ ಸಂರಕ್ಷಣೆಗೆ ನಂತರ)

೧೬. ರಾಜ ಪ್ರಾಂಗಣ ಉತ್ಖನದಲ್ಲಿ ದೊರೆತ ಭೌದ್ಧ ಚಿತ್ರ ಫಲಕಗಳು.

ಟಚ್ ಸ್ಕ್ರೀನ್ ವ್ಯವಸ್ಥೆ :

ವಿಜಯ ನಗರದ ದೇವಾಲಯಗಳನ್ನು, ಮೂರ್ತಿ ಶಿಲ್ಪಗಳನ್ನು ವಸ್ತು ಸಂಗ್ರಹಾಲಯದಲ್ಲೇ ಕುಳಿತು ನೋಡುವ ವ್ಯವಸ್ಥೆಯನ್ನು ಮತ್ತು ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದ

ದೇವಾಲಯಗಳು, ಪ್ರವಾಸಿ ತಾಣಗಳನ್ನು ನೋಡುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಇದೊಂದು ಅತ್ಯಾಧುನಿಕ ಸೌಲಭ್ಯವಾಗಿದೆ.

ವಾಹನಗಳ ನಿಲುಗಡೆ :

ಹೊಸಪೇಟೆ ತಾಲೂಕಿನ ೧೧ ಕಿ.ಮೀ. ದೂರದಲ್ಲಿರುವ ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯ ವಸ್ತು ಸಂಗ್ರಹಾಲಯವು ಕನ್ನಡ ಹಂಪಿ ವಿಶ್ವವಿದ್ಯಾಲಯ ಮಾರ್ಗದಲ್ಲಿ ಈ ವಸ್ತು ಸಂಗ್ರಹಾಲಯವಿದೆ. ವಸ್ತು ಸಂಗ್ರಹಾಲಯವು ವಿಶಾಲವಾದ ಬಯಲು ಪ್ರದೇಶವು ವಾಹನ ನಿಲುಗಡೆಗೆ ಯೋಗ್ಯವಾದ ಸ್ಥಳವನ್ನು ಕಾಯ್ದಿರಿಸಲಾಗಿದೆ.

ಟಿಕೆಟ್ ಕೊಡುವ ಸ್ಥಳ :

ಕಮಲಾಪುರ ವಸ್ತು ಸಂಗ್ರಹಾಲಯದಲ್ಲಿ ಪ್ರವೇಶಧ್ವಾರದ ಎಡಗಡೆ ಟಿಕೆಟ್ ಕೊಡುವ ಕೊಠಡಿಯಲ್ಲಿ ಬೆಳಿಗ್ಗೆ ೯ ರಿಂದ ೫ ಗಂಟೆಯವರೆಗೆ ಪ್ರವೇಶವಿದೆ. ಸ್ವದೇಶಿ ಪ್ರವಾಸಿಗರಿಗೆ ರೂ. ೧೦ ಗಳನ್ನು ಮತ್ತು ವಿದೇಶಿ ಪ್ರವಾಸಿಗರಿಗೆ ರೂ. ೨೫೦ ಟಿಕೆಟ್ ಧರವನ್ನು ನಿಗದಿಪಡಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ವ್ಯವಸ್ಥೆ ಇದೆ. ಇದನ್ನು ಇನ್ನುಳಿದ ವಿಠಲ ದೇವಾಲಯ, ಕಮಲ್‌ಮಹಲ್ ವೀಕ್ಷಿಸಲು ಇಲ್ಲಿ ಟಿಕೆಟ್ ದೊರೆಯುತ್ತದೆ.

ಒಳಗಡೆ ಗ್ಯಾಲರಿ ಪದಕಗಳು :

ವಸ್ತು ಸಂಗ್ರಹಾಲಯವು ಪ್ರವೇಶ ಧ್ವಾರದಲ್ಲಿ ಅನೇಕ ಸೂಚನ ಫಲಕಗಳನ್ನು ನೋಡಬಹುದು. ವಿಜಯನಗರದ ರಾಜನಾದ ಶ್ರೀ ಕೃಷ್ಣದೇವರಾಯನ ಹೆಂಡತಿ ತಿರುಮಲಾದೇವಿ ಮತ್ತು ಚಿನ್ನಾಮಣಿ ದೇವಿ ಗಾಜಿನ ಗ್ಯಾಲರಿಯಲ್ಲಿ ನೋಡಬಹುದು. ಸಂಗಮ, ತುಳು, ಸಾಳ್ವ ಅರವೀಡು ವಂಶಗಳ ರಾಜಮನೆತನದ ಬಗ್ಗೆ ವಿಜಯನಗರ ಲಾಂಛನದ ಬಗ್ಗೆ ಸಾಮ್ರಾಜ್ಯದ ವಿವರಣೆಯನ್ನು ಹಬ್ಬಿರುವುದು ತಿಳಿಯಬಹುದು.

ಮೊದಲನೆಯ ಅಂಕಣವು ವೈಭವೀಕೃತವಾದ ಶೈವಧಾರವನ್ನು ಹೊಂದಿದೆ. ಈ ಅಂಕಣದಲ್ಲಿ ಶೈವ ಮತ್ತು ಶಾಕ್ತ ಮೂರ್ತಿಗಳು ಪ್ರದರ್ಶಿತಗೊಂಡಿವೆ. ಶೈವಮೂರ್ತಿಗಳಾದ ಶಿವನ ಅನೇಕ ಅವತಾರಗಳನ್ನು ನಾವು ಇಲ್ಲಿ ನೋಡಬಹುದು. ಭೈರವ, ವೀರಭದ್ರ, ದಶಭುಜ ಭೈರವ ಮತ್ತು ನಂದಿ ಚಂದ್ರಮೌಳಿ ಶಿವ, ನಾಗಲಿಂಗ ಮೂರ್ತಿಗಳನ್ನು ಪ್ರತಿಷ್ಠಾಪನೆಗೊಳಿಸಿದ್ದಾರೆ. ಅದೇ ರೀತಿ ಶಾಕ್ತ ದೇವತೆಯಾದ ದುರ್ಗಿ, ಹಸೀನಕಾಳಿ, ಚಿತ್ರಕಾಳಿ ಬಗ್ಗೆ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆ. ಫಲಕಗಳನ್ನು ಅಂಕಣಗಳಲ್ಲಿ ಸೂಚಿಸಲಾಗಿದೆ. ಮೂರ್ತಿಗಳಿಗೂ ಸಹ ಫಲಕಗಳನ್ನು ಸೂಚಿಸಿದ್ದಾರೆ.

ಎರಡನೇ ಅಂಕಣವು ವೈಷ್ಣವ ಅಂಕಣವಾಗಿದೆ. ವಿಷ್ಣುವಿನ ಅನೇಕ ಅವತಾರಗಳನ್ನು ವೈಷ್ಣವ ಧರ್ಮದ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ವರಹ, ನರಸಿಂಹ, ಶ್ರೀನಿವಾಸ ಹನುಮಂತ, ಪ್ರಸನ್ನ ನರಸಿಂಹ, ವಿಷ್ಣು, ಅನೇಕ ಶಿಲ್ಪಗಳನ್ನು ವಿವರಣೆಯನ್ನು ಫಲಕಗಳಲ್ಲಿ ನೀಡಿದ್ದಾರೆ.

ಮೂರನೇಯ ಅಂಕಣದಲ್ಲಿ ಮಧ್ಯ ಭಾರತದ ಇತಿಹಾಸ ಕಾಲದಲ್ಲಿ ವಿಜಯ ನಗರ ಕಾಲದಲ್ಲಿನ ಬಳಸಿದ ಮಡಕೆ, ಕುಡಕೆಗಳು ಹರಿವಾಣಗಳು, ಲೇಖನ ಸಾಮಗ್ರಿಗಳನ್ನು, ಶಾಸನಗಳನ್ನು ತಾಮ್ರ ಶಾಸನಗಳನ್ನು, ಕಂಚಿನ ವಿಗ್ರಹಗಳನ್ನು ಗಾಜಿನ ಕಪಾಡಿನಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಅವಳ ಪಕ್ಕದಲ್ಲಿ ಗ್ಯಾಲರಿ ಫಲಕಗಳನ್ನು ಸೂಚಿಸಿದ್ದಾರೆ. ಅದೇ ರೀತಿ ನಾಣ್ಯಗಳನ್ನು ಸಹ ವಿಜಯನಗರ ಪೂರ್ವ ಕಾಲದ ನಾಣ್ಯಗಳು ಮುದ್ರಿತ ನಾಣ್ಯಗಳನ್ನು ಚಿನ್ನ, ತಾಮ್ರದ ನಾಣ್ಯಗಳು, ಅಕ್ಕ ಬುಕ್ಕರ ಕಾಲದಿಂದ ಹಿಡಿದು ತಿರುಮಲರಾಯರ ಕಾಲದವರೆಗೂ ಅನೇಕ ನಾಣ್ಯಗಳನ್ನು ಫಲಕಗಳನ್ನು ನಾವು ನೋಡಬಹುದು.

ನಾಲ್ಕನೆಯ ಅಂಕಣದಲ್ಲಿ ಇತಿಹಾಸ ಪೂರ್ವ ಕಾಲದಲ್ಲಿ ದೊರೆತಂಥಹ ನೂತನ ಶಿಲಾಯುಗದ ಕೈಗೊಡಲಿಗಳು, ಬಾಚಿಗಳು, ಮಡಿಕೆಯ ಚೂರುಗಳು ಮತ್ತು ಆದಿ ಇತಿಹಾಸ ಕಾಲದಲ್ಲಿ ದೊರೆತಂಥಹ ಗಾರೆ ಮೂರ್ತಿಗಳು, ಕಬ್ಬಿಣದ ಸಾಮಾನುಗಳು, ಕಪಾಟಿನಲ್ಲಿ ಸಂಗ್ರಹಿಸಿಟ್ಟಿರುವುದನ್ನು, ಮಾಹಿತಿ ಫಲಕಗಳನ್ನು ನೋಡಬಹುದು ಮತ್ತು ವಿಡಿಯೋ ಗ್ಯಾಲರಿಗಳಲ್ಲಿ (Before Hampi)ಯನ್ನು ನೋಡಬಹುದು. ಮತ್ತು ಅನೇಕ ವೀರಗಲ್ಲುಗಳನ್ನು ಮಾಸ್ತಿಗಲ್ಲುಗಳು ಮತ್ತು ಶ್ರೀಕೃಷ್ಣದೇವರಾಯರ ಅರಮನೆಯನ್ನು ವಿನ್ಯಾಸದ ಆಕೃತಿಯನ್ನು ಸೃಷ್ಟಿಸಿದ್ದಾರೆ.

ವಿಜಯನಗರದ ಹೊರಗಡೆ ರಾಜರುಗಳ ದಿನಚರಿಗಳನ್ನು ಯುದ್ಧದ ಆಡಳಿತ ಕ್ರಮಗಳನ್ನು ಪ್ರವಾಸಿ ವಿದ್ವಾಂಸರು ಡೈಮಿಗೊ ಪಯಾಜ್, ಪೋರ್ಚುಗೀಸ್ ಪ್ರವಾಸಿಗರು ಕ್ರಿ.ಶ. ೧೫೨೦–೨೧ರಲ್ಲಿ ಪ್ರವಾಸಿ ಕಂಡ ವಿಜಯನಗರ ಎಂಬ ಫಲಕವನ್ನು ಗೋಡೆಗೆ ಗ್ಯಾಲರಿಯಲ್ಲಿ ಅಂಟಿಸಿದ್ದಾರೆ. ಅದೇ ರೀತಿ ವಿಜಯ ನಗರ ಸಾಮ್ರಾಜ್ಯದ ರಾಜನ ದಿನಚರಿಗಳು ಒಳಗೊಂಡಿವೆ. ಮತ್ತು ವಿಜಯ ನಗರದ ರಾಜರ ಸಿಂಹಾಸನದ ವರ್ಣನೆ ಕೂಡ ತಿಳಿಸಿದ ಫಲಕಗಳನ್ನು ಅಂಟಿಸಿದ್ದಾರೆ.

ದೂರ್ತೆ ಬರ್ಬೋಸಾ : ಪ್ರವಾಸಿ ಕಂಡ ವಿಜಯ ನಗರ ಫಲಕವನ್ನು ಅಂಟಿಸಿದ್ದಾರೆ. ಮತ್ತು ಪೋರ್ಚುಗೀಸರ ಚರಿತ್ರಾ ಲೇಖನ ೧೫೦೪–೧೫೧೪ರವರೆಗೂ ಪ್ರವಾಸಿ ಕಂಡ ವಿಜಯನಗರವನ್ನು ವರ್ಣಿಸಿದ ಫಲಕವನ್ನು ಸೂಚಿಸಿದ್ದಾರೆ. ಅದೇ ರೀತಿ ಅಬ್ದುಲ್ ರಜಾಕ್ ವಿಜಯ ನಗರ ಬಜಾರಿನ ವರ್ಣನೆಯನ್ನು ಕ್ರಿ.ಶ. ೧೪೪೨ರಲ್ಲಿ ವಿವರಣೆ ನೀಡಿದ್ದಾನೆ. ಮತ್ತು ಪ್ರವಾಸಿ ಕಂಡ ವಿಜಯನಗರ

ಲೇಖನ ಸಹ ಈ ಪರ್ಶಿಯನ್ ಪ್ರವಾಸಿಗರ ಲೇಖನಗಳನ್ನು ವಸ್ತು ಸಂಗ್ರಹಾಲಯದ ಗೋಡೆಗಳಲ್ಲಿ ಅಂಟಿಸಿದ್ದಾರೆ.

ಅದೇ ರೀತಿ ವಿದೇಶಿ ಪ್ರವಾಸಿಗರಿಗೆ ಈ ವಸ್ತು ಸಂಗ್ರಹಾಲಯದಲ್ಲಿ ಆಂಗ್ಲ ಭಾಷೆಯ ಸೂಚನ ಫಲಕಗಳನ್ನು ನಾವು ನೋಡಬಹುದು.

ಕೊಠಡಿಯೊಳಗೆ ಕುಳಿತುಕೊಳ್ಳಲು ಕುರ್ಚಿಯ ವ್ಯವಸ್ಥೆ :

ಈ ವಸ್ತು ಸಂಗ್ರಹಾಲಯದಲ್ಲಿ ಪ್ರವಾಸಿಗರು ನೋಡಲು ಅಷ್ಟು ಬೇಗನೆ ಆಗದು ಪ್ರತಿಯೊಂದು ಅಂಕಣದಲ್ಲೂ ಖುರ್ಚಿಯ ವ್ಯವಸ್ಥೆಯನ್ನು ವಿಶ್ರಾಂತಿ ತೆಗೆದುಕೊಳ್ಳಲು ಸಾಲು ಖುರ್ಚಿಯ ವ್ಯವಸ್ಥೆಯನ್ನು ನೋಡಬಹುದು.

ಬೆಳಕಿನ ವ್ಯವಸ್ಥೆ :

ಈ ವಸ್ತು ಸಂಗ್ರಹಾಲಯದಲ್ಲಿ ಪ್ರತಿಯೊಂದು ಅಂಕಣದಲ್ಲೂ ಉತ್ತಮವಾದ ಇಂಜಿನಿಯರ್‌ಗಳ ಸಹಾಯದಿಂದ ಪಿಲಿಪ್ಸ್ ಕಲರ್ ೩೪ ಮತ್ತು ಎ.ಇ.ಐ. ಕಲರ್ ಲೈಟ್, ಪೋರಸೆಟ್, ಕಲರ್ ಬಲ್ಪ್‌ಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ಸೂರ್ಯನ ಬೆಳಕಿನಂತೆ ಉತ್ಕೃಷ್ಟವಾದ ಬೆಳಕನ್ನು ಚಲ್ಲುತ್ತದೆ. ಇದರಿಂದ ಈ ಮೂರ್ತಿ ಶಿಲ್ಪಗಳು ಈಗ ತಾನೆ ಪ್ರತಿಷ್ಠಾಪನೆಗೊಳಿಸಿದ್ದಾರೆ ಎಂಬ ರೀತಿಯಲ್ಲಿ ಕಂಗೊಳಿಸುತ್ತವೆ. ಎಲ್ಲಾ ಅಂಕಣದಲ್ಲು ವಸ್ತು ಸಂಗ್ರಹಾಲಯವು ಸಂಪೂರ್ಣವಾಗಿ ಸುವ್ಯವಸ್ಥಿತ ಬೆಳಕಿನ ವ್ಯವಸ್ಥೆಯನ್ನು ನೋಡಬಹುದು.

ಹಂಪಿಯ ಕಣಿವೆಯ ನಮೂನೆ :

ವಸ್ತು ಸಂಗ್ರಹಾಲಯದ ೪ ಅಂಕಣದ ಮಧ್ಯ ಭಾಗದಲ್ಲಿ ಈ ಕಣಿವೆ ನಮೂನೆಯ ಪರಿಸರವನ್ನು ಸೃಷ್ಟಿಸಿದ್ದಾರೆ. ಅದಕ್ಕೆ ಛಾವಡಿಯ ವ್ಯವಸ್ಥೆಯನ್ನು ಮಾಡಿ. ಸಾಲು ಖುರ್ಚಿಗಳನ್ನು ಇಟ್ಟು ಮಧ್ಯದಲ್ಲಿ ೩೦ ಅಡಿ ಸುತ್ತಳತೆಯಲ್ಲಿ ರೇಖಾಂಶ ೧೫-೨೦ ಉತ್ತರ ರೇಖಾಂಶ ೭೬-೩೦ ಕಣಿವೆಯ ಚಿತ್ರಣವನ್ನು ಚಿತ್ರಿಸಿದ್ದಾರೆ. ಕ್ರಿ.ಶ. ೧೩೩೬ ರಿಂದ ೧೫೬೫ರರವರೆಗೂ ದಕ್ಷಿಣ ಭಾರತದಲ್ಲಿ ವೈಭವದಿಂದ ಮೆರೆದ ವಿಜಯ ನಗರ ಸಾಮ್ರಾಜ್ಯವು ನೈರುತ್ಯ ಈಶಾನ್ಯ ದಿಕ್ಕಿನಲ್ಲಿ ವಿಶಾಲವಾದ ಕಣಿವೆಗಳು ನಮೂನೆ ಇದೆ. ತುಂಗಭದ್ರ ನದಿ ಇದೆ, ಮನೋಹರ ಪರ್ವತಗಳಿಗೆ ಅನೇಕ ಶೈಲಿಯ ದೇವಾಲಯಗಳು, ಫಲವತ್ತಾತ ಭೂ ಪ್ರದೇಶ, ಕಾಲುವೆಗಳು, ಸೇತುವೆಗಳು, ವಿಜಯನಗರ ಅರಮನೆಗಳು, ಮಾರುಕಟ್ಟೆಗಳು, ಕಟ್ಟಡಗಳು ವೈಭವವನ್ನುನಾವು ಸಂಪೂರ್ಣವಾಗಿ ಈ ಕಣಿವೆಯ ನಮೂನೆಯಲ್ಲಿ ನೋಡಬಹುದು.

ವಿಜಯನಗರ ಸಾಮ್ರಾಜ್ಯಕ್ಕೆ ಬಂದು ಕ್ರಿ.ಶ. ೧೪೪೭ರಲ್ಲಿ ಪರ್ಶಿಯಾದ ರಾಯಭಾರಿ ಈ ಮಹಾ ಸಾಮ್ರಾಜ್ಯವನ್ನು ಎಲ್ಲಿಯೂ ನೋಡಿಲ್ಲ. ಇದಕ್ಕೆ ಸರಿಸಾಟಿಯಾದ ಸಾಮ್ರಾಜ್ಯವು ಬೇರೊಂದಿಲ್ಲವೆಂದು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಅನೇಕ ಪೋರ್ಚುಗಲ್ ಪ್ರವಾಸಿಗರು. ವಿಜಯನಗರವು ಬಹುಸುಂದರವಾದ ಪ್ರದೇಶವೆಂದು ಕ್ರಿ.ಶ. ೧೫೨೦ರಲ್ಲಿ ಹಾಡಿ ಹೊಗಳಿದ್ದಾರೆ.

ವಿಜಯನಗರ ಹಂಪಿಯು ಸುಮಾರು ೩೨ ಚದರ ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. ೧೯೭೬ರಲ್ಲಿ ಇದನ್ನು ಭಾರತ ಸರ್ವೇಕ್ಷಣಾ ಇಲಾಖೆ, ಡುಂಡುಂ ಕಲ್ಕತ್ತಾ ಮಹಾವಿಶ್ವವಿದ್ಯಾಲಯ ಮೊಟ್ಟ ಮೊದಲ ಬಾರಿಗೆ ಛಾಯ ಚಿತ್ರಣವನ್ನು ಪ್ರೊಫೆಸರ್ ಮತ್ತು ನಿರ್ದೇಶಕರಾದ ವಿ.ಬಿ. ಲಾಲುರವರು ಛಾಯಾಚಿತ್ರವನ್ನು ಮಾಡಿದ್ದಾರೆ. ಇದನ್ನು ಅನೇಕ ವಿದ್ವಾಂಸರು ಸುಮಾರು ೧೬ ತಿಂಗಳುಗಳ ಕಾಲ ಪರಿಶೀಲಿಸಿ ಈ ವಸ್ತುಸಂಗ್ರಹಾಲಯದಲ್ಲಿ ಈ ಕಣಿವೆ ನಮೂನೆಯನ್ನು ಸಂಪೂರ್ಣವಾಗಿ ಚಿತ್ರಿಸಲು ಯಶಸ್ವಿಯಾಗಿದ್ದಾರೆ.

ಪ್ರವಾಸಿಗರಿಗೆ ವಿಜಯ ನಗರದ ಉಚಿತ ಕೈಪಿಡಿ ವಿತರಣೆ :

ಕಮಲಾಪುರ, ಹಂಪಿ, ಕೇಂದ್ರ ಪುರಾತತ್ವ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಬರುವಂತಹ ವಿದೇಶಿ, ಸ್ವದೇಶಿ ಪ್ರವಾಸಿಗರಿಗೆ ಹಂಪಿ ಪ್ರವಾಸಿ ತಾಣಗಳು ದೇವಾಲಯಗಳು ಅರಮನೆಗಳು, ಸಂಪೂರ್ಣ ಚಿತ್ರಣಗಳನ್ನು ಮಾರ್ಗಗಳನ್ನು ಒಳಗೊಂಡ ಕೈಪಿಡಿಯನ್ನು ಉಚಿತವಾಗಿ ಭಾರತೀಯ ಸರ್ವೇಕ್ಷಣಾ ಪುರಾತತ್ವ ಇಲಾಖೆಯ ಬಂದಂತಹ ಎಲ್ಲಾ ಪ್ರವಾಸಿಗರಿಗೂ ಉಚಿತ ಕೈಪಿಡಿ ವಿತರಣೆಯನ್ನು ಮಾಡುತ್ತಿದೆ.

ವಿಶಾಲವಾದ ಆವರಣ. :

ಈ ವಸ್ತು ಸಂಗ್ರಹಾಲಯವು ಉದ್ಯಾನವನ ರೀತಿಯಲ್ಲಿ ಗಿಡಮರಗಳಿಂದ ಸ್ವಚ್ಛತೆಯಿಂದ ಕೂಡಿದೆ. ಈ ಮ್ಯೂಸಿಯಂನಲ್ಲಿ ಹೊರಗಡೆ ಇರುವಂತಹ ಮೂರ್ತಿಗಳನ್ನು ನೋಡುತ್ತಲೆ ಕುಳಿತುಕೊಳ್ಳಬೇಕೆಂಬ ಮನೋಭಾವ ಎಲ್ಲಾ ಪ್ರವಾಸಿಗರಿಗೆ ಆಗುತ್ತದೆ. ಅಚ್ಚ ಹಸಿರಿನಿಂದ ಕೂಡಿದ ಹುಲ್ಲುಗಾವಲು ಮತ್ತು ಗಿಡಮರಗಳು ತಂಪಾದ ಗಾಳಿ ಮತ್ತು ಉದ್ಯಾನವನವಾಗಿದೆ.

ಗ್ರಂಥಾಲಯ ವ್ಯವಸ್ಥೆ :

ವಸ್ತುಸಂಗ್ರಹಾಲಯದ ಗ್ರಂಥಾಲಯದಲ್ಲಿ ಅನೇಕ ಪುಸ್ತಕಗಳನ್ನು ನೋಡಬಹುದು. ಪ್ರಾಚೀನ ಕಾಲದಲ್ಲಿ ಉತ್ಖನನ ಮಾಡಿದಂತಹ ವಿದ್ವಾಂಸರಿಂದ ಹಿಡಿದು ಇಲ್ಲಿಯವರೆಗೂ ಉತ್ಖನನ ಮಾಡುತ್ತಿರುವ ಸಂಶೋಧಕ ಪ್ರಬಂಧಗಳು, ಪುಸ್ತಕಗಳು ವಿಜಯನಗರ ಮಹಾಸಾಮ್ರಾಜ್ಯದ ಬಗ್ಗೆ

ಬರೆದಂತಹ ಅನೇಕ ಪುಸ್ತಕಗಳನ್ನು ನಾವು ಪೂರ್ವ ಕಾಲದಿಂದ ಆಧುನಿಕ ಕಾಲದವರೆಗೂ ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಶಾಸನಶಾಸ್ತ್ರ, ಲಿಪಿಶಾಸ್ತ್ರ ಸೇರಿದಂತೆ ಹಲವಾರು ಲೇಖನಗಳನ್ನು, ಪುಸ್ತಕಗಳನ್ನು ನಾವು ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಈ ಗ್ರಂಥಾಲಯದಲ್ಲಿ ನೋಡಲು ವ್ಯವಸ್ಥೆ ಇದೆ.

ಕುಡಿಯುವ ನೀರಿನ ಮತ್ತು ಶೌಚಾಲಯ ವ್ಯವಸ್ಥೆ :-

ಈ ವಸ್ತುಸಂಗ್ರಹಾಲಯದಲ್ಲಿ ಬಂದಂತಹ ಪ್ರವಾಸಿಗರಿಗೆ ದಣಿವಾದಾಗ, ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಇದೆ. ವಸ್ತು ಸಂಗ್ರಹಾಲಯದ ಅನೇಕ ಅಂಕಣಗಳಲ್ಲಿ ಕುಡಿಯುವ ಶುದ್ದೀಕರಣ ನೀರಿನ ಟ್ಯಾಂಕರುಗಳನ್ನು ಇಟ್ಟಿದ್ದಾರೆ ಮತ್ತು ಪುರುಷರಿಗೂ ಮತ್ತು ಮಹಿಳೆಯರಿಗೂ ಸುಲಭವಾದ ಶೌಚಾಲಯ ಕೊಠಡಿಗಳನ್ನು ವಸ್ತು ಸಂಗ್ರಹಾಲಯದಲ್ಲಿ ಒದಗಿಸಿಕೊಟ್ಟಿದ್ದಾರೆ.

ರಂಗಮಹಲ್ ಶ್ರೀಕೃಷ್ಣದೇವರಾಯನ ಅರಮನೆ

ಭಾರತೀಯ ಪುರಾತತ್ವ ನಿರ್ವಹಣೆ ಇಲಾಖೆ ಹಾಗೂ ರಾಜ್ಯ ಪುರಾತತ್ವ ಇಲಾಖೆ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯವರು ಜಂಟಿಯಾಗಿ ೧೯೮೪ ರಿಂದ ೧೯೮೮ ರ ತನಕ ನಡೆಸಿದ ಉತ್ಖನದಿಂದ ನಾಲ್ಕು ಅರಮನೆಯ ಸಮುಚ್ಚಯ ಮೇಲೆದ್ದು ಅವುಗಳಲ್ಲಿ ಪ್ರತ್ಯೇಕ ಆವರಣವುಳ್ಳ ವಿಶಾಲವಾದ ಮೂರು ಸ್ಥರಗಳ ಪೂರ್ವಭಿಮುಖವುಳ್ಳ ಕಟ್ಟಡವನ್ನು ಶ್ರೀ ಕೃಷ್ಣದೇವರಾಯನ (ಕ್ರಿ.ಶ. ೧೫೦೯-೧೫೩೦) ಅರಮನೆಯೆಂದು ಘೋಶಿಸಿದ್ದಾರೆ. ಇದೇ ಅಲ್ಲದೇ ಉಳಿದ ಇನ್ನು ಮೂರು ಅರಮನೆಗಳನ್ನು ರಾಜನ ಖಾಸಾ ಆಸ್ಥಾನದವರಾದ ತಿರುಮಲದೇವಿ, ಚಿನ್ನಾದೇವಿ ಮತ್ತು ಜಗನ್ ಮೋಹಿನಿಯವರದೆಂದು ಗುರುತಿಸಿದ್ದಾರೆ. ಈ ಎಲ್ಲಾ ಕಟ್ಟಡಗಳಿಗೂ ವ್ಯವಸ್ಥಿತವಾದ ನೀರು ಸರಬರಾಜು ಕಾಲುವೆ ಹಾಗೂ ಕೊಳಗಳಿದ್ದು ಸುರಕ್ಷಿತ ದೃಷ್ಠಿಯಿಂದ ಅನೇಕ ಕಾವಲು ಮಂಟಪವನ್ನು ತಿರುವು ಹಾದಿಗಳನ್ನು ಮತ್ತು ಅನೇಕ ಬಾಗಿಲುಗಳನ್ನು ಹೊಂದಿಸಲಾಗದೆ. ಇಡೀ ಆವರಣದ ತುಸು ಈಶಾನ್ಯಕ್ಕೆ ವಿಶೇಷವಾದ ಇತರೆ ಉಪಕಟ್ಟಡಗಳು ಹಾಗೂ ಉತ್ತರ ಮತ್ತು ಪೂರ್ವ ಮಹಾದ್ವಾರಗಳನ್ನು ಅಳವಡಿಸಿದ್ದು, ಪೂರ್ವ ಮಹಾದ್ವಾರದಲ್ಲಿ ಹಜಾರ ರಾಮಸ್ವಾಮಿ ದೇಗುಲ, ದಕ್ಷಿಣದ ದ್ವಾರ ಬೀದಿಗೆ ತೆರೆದುಕೊಳ್ಳುತವೆ. ಅನೇಕ ಸ್ಥಳಗಳಲ್ಲಿ ಭಗ್ನಗೊಂಡಿದ್ದರು. ಉಳಿದ ಕಟ್ಟಡಗಳು ವಿಜಯನಗರ ಕಾಲದ ಅರಮನೆ ಸಂಕೀರ್ಣ ಬಗ್ಗೆ ವಿಶೇಷ ಮಾಹಿತಿ ನೀಡುತ್ತವೆ.

ಪ್ರಸ್ತುತ ರೂಪಕದಲ್ಲಿ ರಾಜಾಂಗಣ ಹಾಗೂ ಅವರಣದಲ್ಲಿ ಇರುವ ಉತ್ಖನನದಿಂದ ಬೆಳಕಿಗೆ ಬಂದ ಅಲ್ಲಿನ ಕಟ್ಟಡಗಳ ಯಥಸ್ಥಿತಿ ಚಿತ್ರಣವನ್ನು ನೀಡುವ ಪ್ರಯತ್ನ ಮಾಡಿದ್ದು ಪ್ರವಾಸಿಗರಿಗೆ ಅರಮನೆ ಸಂಕೀರ್ಣಗಳ ಪರಿಚಯವನ್ನು ಮಾಡಲಾಗಿದೆ.

ರಾಜ ಪ್ರಾಂಗಣ (ಆಡಳಿತ ಸಮುಚ್ಚಯ) :

ಸುಮಾರು ೫೯೦೦೦ ಚ.ಮೀ ವ್ಯಾಪ್ತಿಯಲ್ಲಿ ಪೂರ್ವ ಪಶ್ಚಿಮಾಭಿಮುಖವಾಗಿ ಎರಡು ವಲಯಗಳು ಸಂರಕ್ಷಣ ಆವರಣ ಗೋಡೆಗಳಿಂದ ಸುತ್ತುವರಿಯಲ್ಪಟ್ಟಿದ್ದು, ಈ ವಿಶಾಲ ಕಟ್ಟಡಗಳ ಸಮುಚ್ಚಯವು ವಿಜಯನಗರದ ಅಂದಿನ ರಾಜಾಡಳಿತ ಕೇಂದ್ರ ಬಿಂದುವಾಗಿದ್ದಿತ್ತು. ಈ ಸಮುಚ್ಚಯದಲ್ಲಿ ಅನೇಕ ಬಗೆಯ ಕಟ್ಟಡಗಳಿದ್ದು, ಅವುಗಳಲ್ಲಿ ರಾಜನ ವಾಸಗೃಹವಾದ ಅರಮನೆ ಆಡಳಿತ ಕಛೇರಿಗಳು, ಗುಪ್ತ ಸಮಾಲೋಚನಾ ಗೃಹ, ರಾಜ ದರ್ಭಾರ ಮತ್ತು ಧಾರ್ಮಿಕ ಕಟ್ಟಡಗಳಾದ ಹದಿನಾರು ಸ್ಥಂಭಗಳುಳ್ಳ ದೇವಾಲಯ ಪುಷ್ಕರಣಿಯ ಟಾಕದ ಏಕಕೋಣೆಯ ಉತ್ಖನದಿಂದ ಬೆಳಕಿಗೆ ಬಂದಿವೆ. ಪ್ರತಿಯೊಂದು ಕಟ್ಟಡಕ್ಕೆ ನಡುವೆ ಸುಣ್ಣದ ಗಾರೆಯಿಂದ ರೂಪಿಸಲ್ಪಟ್ಟ ನದಿ ಹಾದಿಗಳಿದ್ದು ಇದೇ ಸಂಕೀರ್ಣದಾದ್ಯಂತ ಸುಸಜ್ಜಿತವಾಗಿ ತಾಂತ್ರಿಕ ಪರಿಣತರಿಂದ ಅಳವಡಸಲಾಗಿರುವ ನೀರು, ಸರಬರಾಜು ವ್ಯವಸ್ಥೆ, ಇಂದಿಗೂ ನೋಡುವವರಿಗೆ ಅಚ್ಚರಿ ಮೂಡಿಸುತ್ತದೆ. ಈ ಆವರಣದಲ್ಲಿರುವ ಅನೇಕ ಸ್ತರಗಳ ಉನ್ನತ ಮಹಾನವಮಿ ಮಂಟಪ ತನ್ನ ಸೂಕ್ಷ್ಮ ಸಮಕಾಲೀನ ಸಾಮಾಜಿಕ ಜನ ಜೀವನ ಚಿತ್ರಗಳನ್ನು ಹೊಂದಿರುವ ಹೆಸರು ವಾಸಿಯಾದರೆ ನೂರಾರು ಸ್ತಂಭಗಳುಳ್ಳ ಭವನ ವಿಜಯವೆಂಬ ದರ್ಬಾರು ಮಂಟಪ ತನ್ನ ಆಗಾಧತೆಗೆ ವಿಸ್ಮಯಗೊಳಿಸುತ್ತದೆ.

ವ್ಯವಸ್ತಿತವಾಗಿ ರೂಪಿಸಿರುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ೧೯೭೬ ರಿಂದ ೧೯೮೬ ರ ತನಕ ನಡೆಸಿದ ಸುಮಾರು ಹತ್ತು ವರ್ಷಗಳ ಉತ್ಖನದಿಂದ ಭಾರತೀಯ ಪುರಾತನ ಸರ್ವೆ ಅಧಿಕಾರಿಗಳು ಹೊರತೆಗದಿದ್ದಾರೆ. ಈ ಆವರಣವನ್ನು ವಿಜಯನಗರದ ದೈನಂದಿನ ರಾಜಾಡಳಿತದ ಮುಖ್ಯ ಕೇಂದ್ರ ಬಿಂದುವಾಗಿತ್ತೆಂದು ತಿಳಿದು ಬಂದಿದೆ.

ಅಧ್ಯಾಯ–೭

ಸಮಾರೋಪ

ಅಧ್ಯಾಯ-೭

ಸಮಾರೋಪ

ಕಲೆ ಎನ್ನುವುದು ಮಾನವನ ವೈಶಿಷ್ಟ್ಯ ಅಂತೆಯೇ ನಮ್ಮ ಸುತ್ತಲಿನ ನಿಸರ್ಗ ಹಾಗೂ ದೈನಂದಿನ ಜನಜೀವನಗಳು ಜನಸಾಮಾನ್ಯರಲ್ಲಿ ಪ್ರಭಾವ ಬೀರುವಂತೆ ಕಲಾವಿದನ ಮನಸ್ಸಿನ ಮೇಲೂ ಪ್ರಭಾವ ಬೀರುತ್ತದೆ. ಆದರೆ ಕಲಾವಿದನಲ್ಲಿರುವ ಆತನ ಸಂವೇದನೆಯು ಅದ್ಭುತ ಪಾತ್ರವಹಿಸುತ್ತದೆ. ತನ್ನ ಮನಸ್ಸಿನ ಭಾವನೆಗಳನ್ನು ತುಡಿತಗಳನ್ನು ತನ್ನ ಮಾಧ್ಯಮದ ಮೂಲಕ ಹೊರಹಾಕಲು ಪ್ರಯತ್ನಿಸುತ್ತಾನೆ. ಅಲ್ಲದೆ ಮಾನವನಲ್ಲಿರುವ ಚುರುಕಾದ ಸಂವೇದನೆಯು ಹೊರಗಿನ ಈ ಘಟನೆಗಳಿಗೆ ಹಾಗೂ ದೃಶ್ಯಗಳಿಗೆ ಉಳಿದವರಿಗಿಂತ ಭಿನ್ನವಾಗಿ ಹೆಚ್ಚು ತೀವ್ರವಾಗಿ ಸ್ಪಂದಿಸುತ್ತದೆ. ಈ ಸ್ಪಂದನಗಳನ್ನು ಅವರನ ಮಾಧ್ಯಮದ ಮೂಲಕ ಪ್ರಕಟವಾಗಿ ಕಲಾಕೃತಿಯೆನಿಸುತ್ತದೆ. ವಿವಿಧ ಕಲೆಗಳು ಮನುಷ್ಯನ ವಿವಿಧ ಇಂದ್ರಿಯಗಳಿಗೆ ಸಂಬಂಧಿಸಿ ತೃಪ್ತಿಕೊಡುತ್ತವೆ. ಹೀಗೆ ಸಂಗೀತ ಹಾಗೂ ಸಾಹಿತ್ಯಗಳು ಶ್ರವ್ಯಕ್ಕೆ ಸಂಬಂಧಿ ಕಲೆಗಳಾಗಿವೆ. ಹಾಗೆಯೇ ಚಿತ್ರಕಲೆ, ಶಿಲ್ಪಕಲೆ ಮತ್ತು ವಾಸ್ತುಶಿಲ್ಪಗಳಂತಹ ಕಲೆಗಳು ಕಣ್ಣಿಗೆ ಸಂಬಂಧಿಸಿದವು ಎಂದು ಹೇಳಬಹುದು.

ಒಂದರ್ಥದಲ್ಲಿ ಕಲೆ ಎನ್ನುವುದು ಆದಿಮಾನವನ ಕಾಲದಿಂದ ಕಲ್ಮಶವಿಲ್ಲದ ತಿಳಿನೀರಂತೆ ಹರಿದುಬಂದಿದೆ. ಮಾನವನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಕಲೆ-ಸಾಹಿತ್ಯ ಪ್ರಮುಖವಾದ ಭಾಗಗಳು. ಅವನು ಪ್ರಾಗಿತಿಹಾಸ ಕಾಲದಿಂದಲೇ ಕಲಾ ಪ್ರೌಢಿಮೆಯನ್ನು ರೂಢಿಸಿಕೊಂಡು ಬಂದಿದ್ದಾನೆ. ನಿತ್ಯ ಜೀವನಕ್ಕೆ ಬೇಕಾಗುವ ಅನೇಕ ವಸ್ತುಗಳು ಧಾರ್ಮಿಕ ಪರಿಕಲ್ಪನೆಯಲ್ಲಿ ಅನೇಕ ದೇವಾಲಯಗಳ ನಿರ್ಮಾಣ, ಮೂರ್ತಿಶಿಲ್ಪಗಳ ಪ್ರತಿಷ್ಠಾಪನೆ, ಹವ್ಯಾಸಕ್ಕಾಗಿ ಬೆಳೆದ ಸಂಗೀತ, ಚಿತ್ರಕಲೆ, ಸಾಹಿತ್ಯಾಸಕ್ತಿಯಲ್ಲಿ ತಾಳೆಗರಿಗಳು, ಅಜ್ಞಾಪತ್ರಗಳಾಗಿ ಶಿಲಾಶಾಸನಗಳು ತಾಮ್ರಪಟ ಹೀಗೆ ಹಲವಾರು ಅಂಶಗಳು ಕಾಲಾನುಕ್ರಮದಲ್ಲಿ ಬೆಳವಣಿಗೆ ಹೊಂದಿದವು. ಕಾಲಾನಂತರ ಕಾಲನ ಕೈಗೆ ಸಿಲುಕಿ ಎಲ್ಲಾ

ಅಸ್ತವ್ಯಸ್ತವಾಯಿತು. ಅವುಗಳಲ್ಲಿ ಕೆಲವು ಕಾಲಗರ್ಭದಲ್ಲಿ ಅಡಗಿ ಹೋದರೆ ಇನ್ನೂ ಕೆಲವು ಅವಸಾನದತ್ತ ಸಾಗಿದವು. ಉತ್ಖನನ ಸಂಶೋಧನೆಯ ಮೂಲಕ ಬೆಳಕು ಕಂಡ ಇಂತಹ ವಸ್ತುಗಳು, ಇತಿಹಾಸಕಾರರು ಇಂದಿನ ಪೀಳಿಗೆಯ ಯುವಜನತೆ, ಪಂಡಿತರನ್ನು ಅದರ ಬಗ್ಗೆ ಅಂದರೆ ಹಿಂದಿನ ಪೀಳಿಗೆಯ ಅವಶೇಷಗಳ ಬಗ್ಗೆ ಕೂಲಂಕುಶವಾಗಿ ಅಧ್ಯಯನದಲ್ಲಿ ತೊಡಗುವಂತೆ ಮಾಡಿದವು. ಅತ್ಯಂತ ರಹಸ್ಯಗಳನ್ನು ಹೊರಗೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇಂದಿನ ಸಂಶೋಧನಕಾರರು, ಅವರ ಚಾತುರ್ಯ, ಚತುರತೆ, ಮೆಚ್ಚುವಂತಹದ್ದು ಇದಕ್ಕೆ ಕಾರಣವೆಂದರೆ ಇತಿಹಾಸಕಾರರ ಮನಸ್ಸನ್ನು ಕೆರಳಿಸುವಂತಹ ಹಿಂದಿನ ಆದಿಮಾನವ ಸಂಸ್ಕೃತಿಯ ಅವಶೇಷಗಳು ಎಂದರೆ ತಪ್ಪಾಗಲಾರದು. ಮಾನವನ ನಿರಂತರ ಬೆಳವಣಿಗೆಗೆ ಸಂಬಂಧಿಸಿದ ಮತ್ತು ಗತಕಾಲದ ಚರಿತ್ರೆಯನ್ನು ನಿರ್ಮಾಣ ಮಾಡುವಲ್ಲಿ ಪ್ರಮುಖ ಆಕರಗಳಾಗಿ ಗೋಚರಿಸಿದ ಈ ವಸ್ತುಗಳನ್ನು ಸಂಗ್ರಹಿಸಿ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಅಧ್ಯಯನ, ಅಧ್ಯಾಪನೆ, ಮನರಂಜನೆಗಾಗಿ ಕಾಯ್ದಿರಿಸುವ ಕ್ರಮಕ್ಕಾಗಿ ವಸ್ತು ಸಂಗ್ರಹಾಲಯಗಳ ನಿರ್ಮಾಣ ಆರಂಭವಾಯಿತು. ಇದು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳ್ಳದೆ ಸಾಮಾಜಿಕ, ಆರ್ಥಿಕ, ಕಲೆ, ಸಾಹಿತ್ಯ, ವಿಜ್ಞಾನ, ಮೊದಲಾದವುಗಳನ್ನೊಳಗೊಂಡಿದೆ. ಇಂತಹ ವಸ್ತುಗಳನ್ನು ಒಳಗೊಂಡ ವಸ್ತು ಸಂಗ್ರಹಾಲಯಗಳು, ಕೇಂದ್ರಸರ್ಕಾರ, ರಾಜ್ಯಸರ್ಕಾರ, ಸಂಘ ಸಂಸ್ಥೆ, ವಿಶ್ವವಿದ್ಯಾಲಯ, ಅಲ್ಲದೇ ವೈಯಕ್ತಿಕವಾಗಿ ಜಗತ್ತಿನಾದ್ಯಂತ ವಿಭಜನೆಗೊಂಡವು.

ಈ ಪ್ರಬಂಧ ರಚನೆಯ ಮುಖ್ಯ ಉದ್ದೇಶಗಳೆಂದರೆ ಪ್ರಪ್ರಥಮವಾಗಿ ಭೂಮಂಡಲದಲ್ಲಿ ಉಸಿರಾಟ ಮಾಡುವ ಜೀವಕಣ ಕಾಣಿಸಿದಂದಿನಿಂದ ಇಲ್ಲಿಯವರೆಗೂ ಸಾಗುತ್ತಾ ಬಂದಿರುವ ಪ್ರಾಚೀನ ಆದಿಮಾನವನ ' ಸಂಸ್ಕೃತಿಯನ್ನು ಅವರ ನಿತ್ಯ ಜೀವನದ ಬದುಕು, ನಡೆದುಬಂದಿರುವ ದಾರಿಯನ್ನು ನಾವೊಮ್ಮೆ ನೋಡಿಕೊಂಡು ಬರುವ ಉದ್ಧೇಶ ಮತ್ತು ಮರಳಿ ಬರುವಾಗ ದಾರಿಯಲ್ಲಿ ಪ್ರಾಚೀನ ಸಂಸ್ಕೃತಿಯ ಕುರುಹುಗಳನ್ನು ಕಂಡಾಗ ಆಶ್ಚರ್ಯಚಕಿತರಾಗಿ ಅವುಗಳನ್ನು ಒಂದೆಡೆ ಸೇರಿಸಿ ಮುಂದಿನ ಪೀಳಿಗೆಗೆ ಮಾದರಿಯಾಗಿಡುವುದೇ ಇದರ ಉದ್ದೇಶವಾಗಿದೆ.

ವಸ್ತುಸಂಗ್ರಹಾಲಯಗಳು ಹಿಂದಿನ ಮತ್ತು ಇಂದಿನ ಸಂಸ್ಕೃತಿಯನ್ನು ಬಿಂಬಿಸುವ ಕನ್ನಡಿ ಇದ್ದಹಾಗೆ ಇದರ ಮತ್ತೊಂದು ಮೂಲ ಉದ್ದೇಶ ನಮ್ಮ ಹಿಂದಿನ ಸಂಸ್ಕೃತಿಯ ಅವಶೇಷಗಳನ್ನು ಸಂಗ್ರಹಿಸಿ ಅವುಗಳ ಬಗ್ಗೆ ಅಧ್ಯಯನ, ಅಧ್ಯಾಪನಗಳನ್ನು ಮಾಡಿ ಜ್ಞಾನಾರ್ಜನೆ ಬೆಳೆಸುವುದು.

ಭಾರತೀಯ ಸಂಸ್ಕೃತಿ ತನ್ನ ಎಲ್ಲಾ ಅಗತ್ಯ ಲಕ್ಷಣಗಳು ಹಾಗೂ ರೂಪಗಳ ಸಮೇತ ಆಧುನಿಕ ಭಾರತೀಯ ಸಮಾಜದಲ್ಲಿ ಸೂಕ್ತ ಸ್ಥಾನ ಪಡೆಯಬೇಕು. ಮಹತ್ವಪೂರ್ಣ ಭವಿಷ್ಯದ ಪಥವನ್ನು

ಬೆಳಗಿಸುವುದು. ಕಳೆಗುಂದುತ್ತಿರುವ ಪ್ರಾಚೀನ ಸಂಸ್ಕೃತಿಯ ತುಣುಕುಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಉಳಿದಿರುವ ನಮಗೆ ಲಭ್ಯವಿರುವ ಅದ್ಭುತ ಅವಶೇಷಗಳನ್ನು ಸಂರಕ್ಷಣೆ ಮಾಡುವುದು. ಭಾರತೀಯನ ಚಿತ್ರವನ್ನು ರೂಪಿಸುವಲ್ಲಿ ವಸ್ತುಸಂಗ್ರಹಾಲಯಗಳು ನಿರ್ವಹಿಸಬೇಕಾದ ಕ್ಲಿಷ್ಟವಾದ ಪಾತ್ರ ಇರುವುದು ಇಲ್ಲೇ ಎಂದು ಹೇಳಬಹುದು.

ಇಡೀ ಭಾರತ ದೇಶದಲ್ಲಿ ಅತ್ಯಂತ ರಾಜವೈಭವದಿಂದ ಮೆರೆದಾಡಿದ, ಅಲ್ಲದೇ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯವು ಧಾರ್ಮಿಕ ರಕ್ಷಣೆಗೋಸ್ಕರ ಉದಯಿಸಿದ ಸಾಮ್ರಾಜ್ಯವಾಗಿದ್ದು, ಅದು ವಾಸ್ತುಶಿಲ್ಪ ಮತ್ತು ಕಲೆಗೂ ಉದಾರವಾದ ಗಮನ ಹರಿಸಿ ಆ ಮೂಲಕ ಹಿಂದೂ ಸಂಸ್ಕೃತಿಯನ್ನು ಎತ್ತಿಹಿಡಿಯಿತು. ನಂತರ ಮುಂದೆಂದೂ ಕಾಣದಂತಹ ಸಾಮ್ರಾಜ್ಯ, ವಿಜಯನಗರ ಸಾಮ್ರಾಜ್ಯ ಎಲ್ಲಾ ಕ್ಷೇತ್ರಗಳಲ್ಲಿ ತ್ವರಿತ ಗತಿಯ ಅಭಿವೃದ್ಧಿ ಸಾಧಿಸಿ ಬಹುಬೇಗನೆ ವಿನಾಶದ ಅಂಚಿಗೆ ಹೋಗಿ ತನ್ನೆಲ್ಲಾ ಅವಶೇಷಗಳನ್ನು ಚೆಲ್ಲಾಡಿ ಕಣ್ಮರೆಯಾಯಿತು. ಈ ಸಂದರ್ಭದಲ್ಲಿ ಸಂಶೋಧಕರು ಉತ್ಖನನ ಮಾಡುವುದರ ಮೂಲಕ ಈ ಪ್ರದೇಶವನ್ನು ಕಣ್ಣಿಂದ ನೋಡುವ ಭಾಗ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿ ಬಹಳ ಸುಂದರ ತಾಣ. ಹಂಪಿಯು ವೈಭವಪೂರಿತವಾದ ಅನೇಕ ಸೌಂದರ್ಯ ಕಟ್ಟಡಗಳಿಂದಲೂ ಅರಮನೆಗಳಿಂದಲೂ ಭವ್ಯ ಸೌಧಗಳಿಂದಲೂ ಕೂಡಿತ್ತೆಂದು ಹಲವಾರು ವಿದೇಶಿ ಪ್ರವಾಸಿಗರು ಅಭಿಪ್ರಾಯಪಟ್ಟಿದ್ದಾರೆ. ಇದರ ವಿನಾಶ ಕಾಣಲಾಗದ ಕೇಳಲಾಗದ ಸಂಗತಿ, ಆದರೂ ಆ ಸ್ಥಳದಲ್ಲಿನ ಕಲೆ ಮತ್ತು ವಾಸ್ತುಶಿಲ್ಪ, ಸಂಸ್ಕೃತಿಗಳನ್ನು ಉಳಿಸಿಕೊಂಡು ಬರುವುದರಲ್ಲಿ ಮಾತ್ರವಲ್ಲದೆ ಮಾನವನ ಸೃಜನಶೀಲತೆ ಮತ್ತು ಪ್ರಕೃತಿಯ ಮೇಲಣ ನಿಯಂತ್ರಣದ ಬಗ್ಗೆ ಮೂಲಭೂತ ಸಾಕ್ಷ್ಯಗಳನ್ನು ಸಾದರಪಡಿಸುವುದರ ಮೂಲಕ ಮಾನವ ಸಂಸ್ಕೃತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಉತ್ಥಾನಕ್ಕೆ ನೆರವಾಗುವುದರಲ್ಲೂ ಜೀವಂತ ಪಾತ್ರವಹಿಸುವುದು. ಇಂದು ವಸ್ತುಸಂಗ್ರಹಾಲಯಗಳ ಮುಖ್ಯ ಉದ್ದೇಶದಂತೆ ಈ ಅಧ್ಯಾಯನದಲ್ಲಿ ವಿವರಿಸಲಾಗಿದೆ.

ಹಂಪಿಯ ಕಮಲಾಪುರದಲ್ಲಿರುವ ಕೇಂದ್ರ ಭಾರತೀಯ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯವು ಹಂಪಿಯ ಗತವೈಭವವನ್ನು ಪುನಃ ನೆನಪಿಗೆ ತರುವಂತಹ ಕಾರ್ಯ ಹಿಂದಿನಿಂದ ನಿರಂತರವಾಗಿ ಸಾಗುತ್ತಾ ಬಂದಿದೆ. ಇಂತಹ ವಸ್ತುಸಂಗ್ರಹಾಲಯಗಳು ಭಾರತದಲ್ಲಿ ಪುರಾತತ್ವ

ಇಲಾಖೆಗೆ ಸೇರಿದ ಸ್ಮಾರಕಗಳ ಹತ್ತಿರವೇ ಒಂದೊಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗಿರುವುದು ಇನ್ನೂ ವಿಶಿಷ್ಟವೆನಿಸಿದೆ.

ವಿಶ್ವವಿಖ್ಯಾತ 'ಹಂಪಿ'ಯ ಸಮೀಪದಲ್ಲಿರುವ ಕಮಲಾಪುರವು ಪ್ರಾಗೈತಿಹಾಸಕ ಹಾಗೂ ಚಾರಿತ್ರಿಕ ಕಾಲ ಘಟ್ಟಗಳಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಆಡಳಿತ ಕೇಂದ್ರವಾಗಿ ಉಪನಗರವಾಗಿ ಅಲ್ಲದೇ ಸಾಂಸ್ಕೃತಿಕವಾಗಿ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಇಲ್ಲಿನ ಪ್ರಾಚ್ಯ ಅವಶೇಷಗಳು ದೃಢಪಡಿಸಿವೆ. ಇಂದಿನ ಕಮಲಾಪುರದ ವಿವದೆಡೆ ವಿಭಿನ್ನಕಾಲದ ಕೋಟೆ – ಕೊತ್ತಲುಗಳು, ದೇವಾಲಯಗಳು ಮೂರ್ತಿಗಳು, ಭಗ್ನಾವಶೇಷಗಳು ಇದ್ದು, ಇದೊಂದು ಪ್ರಾಚೀನ ನೆಲೆ ಎಂಬುದನ್ನು ಸೂಚಿಸುತ್ತವೆ ಅಲ್ಲದೆ ಅಧ್ಯಯನ ಯೋಗ್ಯವಾಗಿವೆ.

ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿ ಪೂರ್ವ ಇತಿಹಾಸ ಕಾಲದಿಂದ ಹಿಡಿದು ಚಾರಿತ್ರಿಕ ಇತಿಹಾಸ ಕಾಲದವರೆಗೂ ಅನೇಕ ಪ್ರಾಚ್ಯ ಅವಶೇಷಗಳನ್ನು ಕಾಣಬಹುದು. ಶಿಲಾಮೂರ್ತಿಗಳು, ತಾಮ್ರ ಶಾಸನಗಳು, ಮೊದಲಾದ ಪ್ರಾಚ್ಯ ಅವಶೇಷಗಳಿದ್ದು ಅವು ಚರಿತ್ರೆಯ ನೈಜ ಆಕರಗಳಾಗಿವೆ. ಇಲ್ಲಿ ಸುಮಾರು ೩೦೦ ಅಧಿಕ ವಿಗ್ರಹಗಳು ಇಲ್ಲಿದ್ದು ಅವುಗಳಿಗೆ ಚಾವಡಿಯ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಮಾಡದಿದ್ದಲ್ಲಿ ಅವು ಹಾಳಾಗಿ ಮುಂದಿನ ಪೀಳಿಗೆಗೆ ನೋಡುವ ಭಾಗ್ಯ ಇಲ್ಲದಂತಾಗಬವುದು. ಆದ್ದರಿಂದ ಈ ಮೂರ್ತಿಗಳಿಗೆ ಚಾವಡಿಯ ವ್ಯವಸ್ಥೆಯನ್ನು ಮಾಡಿ ಶಿಲಾಮೂರ್ತಿಗಳು ಕಾಪಾಡುವುದು ಮುಖ್ಯ ಜವಾಬ್ದಾರಿಯಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳ ಕುರಿತು ಚರ್ಚಿಸಲಾಗಿದ್ದು, ಈ ಅಧ್ಯಯನದ ಪ್ರಮುಖ ಭಾಗವಾಗಿರುವ ಕಮಲಾಪುರದ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಒಟ್ಟು ಶಿಲ್ಪಗಳ ಕುರಿತು ಚರ್ಚಿಸುವ ಪೂರ್ವದಲ್ಲಿ ಅದರ ಕುರಿತ ಸ್ವರೂಪವೇನು? ಈ ಅಧ್ಯಯನದ ವ್ಯಾಪ್ತಿ ಏನು ಎಂಬುದನ್ನು ಅರಿತು ಅದರ ವ್ಯಾಪ್ತಿಯಲ್ಲಿ ಸಿಗುವಂತಹ ವಸ್ತು ವಿಷಯವನ್ನು ಇಲ್ಲಿ ಸವಿಸ್ತಾರವಾಗಿ ಚರ್ಚಿಸುವುದು ಬಹು ಮುಖ್ಯವಾದ ಸಂಗತಿಯಾಗಿದೆ.

ಅಧ್ಯಾಯ ಎರಡರಲ್ಲಿ ಕಮಲಾಪುರದ ಭೌಗೋಳಿಕ ಹಿನ್ನೆಲೆ, ಕಮಲಾಪುರದ ಹಿನ್ನೆಲೆ, ಪರಿಸರ, ಚಾರಿತ್ರಿಕ ಹಿನ್ನೆಲೆ, ಪ್ರಾಗೈತಿಹಾಸಕ ಹಿನ್ನೆಲೆ, ಹಳೆ ಶಿಲಾಯುಗ (ಪ್ಯಾಲಿಯೋಲಿಥಿಕ್) (೧. ಆದಿ ಹಳೆ ಶಿಲಾಯುಗ – (೭ಲಕ್ಷ ಅಥವಾ ಅದಕ್ಕೂ ಮುಂಚೆ) ೨. ಮದ್ಯ ಹಳೆ ಶಿಲಾಯುಗ –

(ಕಿ.ಪೂ. ೭೦,೦೦೦ ೩೦,೦೦೦) ೩. ಅಂತ್ಯ ಹಳೆ ಶಿಲಾಯುಗ – (ಕ್ರಿ.ಪೂ. ೪೦,೦೦೦ ೧೦,೦೦೦), ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಮೆಸೋಲಿಥಿಕ್ ಕಲ್ಚರ್) – (ಕ್ರಿ.ಪೂ ೭,೦೦೦ ೩,೦೦೦), ನೂತನ ಶಿಲಾಯುಗ ಸಂಸ್ಕೃತಿ (ನಿಯೋಲಿಥಿಕ್ ಕಲ್ಚರ್) : (ಕ್ರಿ.ಪೂ. ೩೦೦೦-೧೫೦೦), ಶಿಲಾ ತಾಮ್ರ ಯುಗ ಸಂಸ್ಕೃತಿ(ಕಿ.ಪೂ. ೨,೨೦೦-೮೦೦), ಕಬ್ಬಿಣ ಯುಗ ಅಥಾವ ಬೃಹತ್ ಶಿಲಾಯುಗ ಸಂಸ್ಕೃತಿ – (ಕ್ರಿ.ಪೂ. ೧೨೦೦-೨೦೦), ಚಾರಿತ್ರಿಕ ಕಾಲ, ಮೌರ್ಯರ ಆಳ್ವಿಕೆ, ಶಾತವಾಹನರ ಆಳ್ವಿಕೆ, ಬಾದಾಮಿ, ಚಾಲುಕ್ಯರು, ಕಲ್ಯಾಣದ ಚಾಲುಕ್ಯರು ಮತ್ತು ಕಳೆಚೂರ್ಯರು, ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಸಂಗಮ ವಂಶ, ವಿಜಯನಗರ(ಕಲೆ) ಮತ್ತು ಪ್ರಾಚ್ಯ ವಸ್ತುಸಂಗ್ರಹಾಲಯಗಳ ಬೆಳವಣಿಗೆಯನ್ನು ವಿವರಿಸಲಾಗಿದೆ. ಅದೇ ರೀತಿ ಈ ವಸ್ತು ಸಂಗ್ರಹಾಲಯಗಳನ್ನು ೭ ವಿಭಾಗಗಳಾಗಿ ವಿಂಗಡಿಸಲಾಗಿದೆ. ರಾಷ್ಟ್ರೀಯ ವಸ್ತು ಸಂಗ್ರಹಾಲಯ, ರಾಜ್ಯ ವಸ್ತುಸಂಗ್ರಹಾಲಯ, ಸ್ಥಳೀಯ ವಸ್ತುಸಂಗ್ರಹಾಲಯ, ವಿಶ್ವವಿದ್ಯಾಲಯ, ವಸ್ತು ಸಂಗ್ರಹಾಲಯ, ವ್ಯಕ್ತಿ ಕೇಂದ್ರಿತ ವಸ್ತುಸಂಗ್ರಹಾಲಯ, ಆಧುನಿಕ ವಸ್ತು ಸಂಗ್ರಹಾಲಯ, ವಿಜ್ಞಾನ & ತಂತ್ರಜ್ಞಾನ ವಸ್ತು ಸಂಗ್ರಹಾಲಯಗಳ ಕುರಿತು ಸರಳವಾಗಿ ಪರಿಚಯಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಪ್ರಾಚೀನತೆ, ಶಿಲೆಯ ಸ್ವರೂಪ, ಕಲ್ಲಿನ ಆಯ್ಕೆ, ಶಿಲ್ಪ ಅಳತೆ, ಕೆತ್ತನೆಯ ರೀತಿ, ಶಿಲ್ಪದ ಭಾವ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಗಿದ್ದು, ಒಟ್ಟು ನಾಲ್ಕು ಅಂಕಣಗಳಿದ್ದು ಅದರಲ್ಲಿ ಅಂಕಣ ಒಂದರಲ್ಲಿ ಶೈವ ಧರ್ಮದ ಕುರಿತ ಶಿಲ್ಪಗಳಿವೆ. ಅವು ವೀರಭದ್ರ, ಭೈರವ, ಪಾರ್ವತಿ, ಭಿಕ್ಷಾಟನಾ ಮೂರ್ತಿ, ಚತುರ್ಭುಜ ಭೈರವ, ಚತುರ್ಭುಜ ಭದ್ರಕಾಳಿ, ದಶಭುಜ ವೀರಭದ್ರ, ಮಹಿಷಾಸುರ ಮರ್ಧಿನಿ, ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ, ಭಕ್ತ ಮೂರ್ತಿ, ನಂದಿ, ಶಿವಲಿಂಗ, ದುರ್ಗಾ, ಉಮಾ ಮಹೇಶ್ವರ, ಚಂದ್ರಮೌಳಿ ಶಿವ, ವೀರಭದ್ರ, ಆಸೀನ ಕಾಳಿ, ಚತುರ್ಭುಜ ಭೈರವ, ಆತ್ಮಲಿಂಗದೊಂದಿಗೆ ಶಿವ, ಆಸೀನ ಶೈವ ದೇವತೆ, ನಾಗಲಿಂಗ. ಇದೇ ಅಂಕಣದ ಮಧ್ಯಭಾಗದಲ್ಲಿರಿಸಿರುವ ಶಿಲ್ಪಗಳು ಕೃಷ್ಣದೇವರಾಯ ಮತ್ತು ತಿರುಮಲದೇವಿ,, ಹೆಬ್ಬಾಗಿಲು, ನಂದಿ, ಲಿಂಗ, ಮಹಿಷಾಸುರ ಮರ್ಧಿನಿ, ವಿರೂಪಾಕ್ಷ (ರುಂಡ), ಮಹಿಷಾಸುರ ಮರ್ದಿನಿ, ಶಕ್ತಿ ಗಣೇಶ ಶಿಲಾ ಶಿಲ್ಪಗಳಿರುವುದನ್ನು ಕಾಣಬಹುದು.

ಇನ್ನು ಎರಡನೇ ಅಂಕಣದಲ್ಲಿ ವೈಷ್ಣವ ಧರ್ಮ ಮತ್ತು ಅದಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾಗಿ ಸ್ಥಾನಿಕ ಮೂರ್ತಿ, ಆಸೀನ ಮೂರ್ತಿ, ಶಯನ ಮೂರ್ತಿಗಳ ಅರ್ಥಗಳನ್ನು ತಿಳಿಸುತ್ತಾ, ಯಾವ ಭಂಗಿಯಲ್ಲಿ ಶಿಲ್ಪಗಳಿವೆ ಅವುಗಳಲ್ಲಿ ಕಾಣುವ ಅಂಶಗಳನ್ನು

ಗುರುತಿಸುವುದು ಆ ಅಧ್ಯಯನದ ಮಹತ್ವವಾಗಿದೆ. ವಿಷ್ಣು, ಗರುಡ, ನಾಗ ಹಿಡಿದ ಗರುಡ, ಹನುಮಾನ್, ಅಶೋಕ ವನದಲ್ಲಿ ಸೀತೆ, ವೇಣುಗೋಪಾಲ, ವರಾಹ ಅವತಾರ, ಲಕ್ಷ್ಮಿ, ವಿಷ್ಣು, ರಾಮ (ಮುಖ), ವಿಷ್ಣು, ಲಕ್ಷ್ಮಿ ನರಸಿಂಹ , ವೈಷ್ಣವ ದೇವತೆ, ಲಕ್ಷ್ಮಣ, ರಾಜಮೂರ್ತಿ (ಶಿರ), ವೇಣುಗೋಪಾಲ, ಆಳ್ವಾರ್, ಮತ್ಸ್ಯ ಮತ್ತು ಕಲ್ಕಿ ಅವತಾರಗಳು, ವಿಷ್ಣು, ವಿಷ್ಣು-ಶ್ರೀನಿವಾಸ, ರಾಮ, ಲಕ್ಷ್ಮಣ ಮತ್ತು ಸೀತೆ, ಲಕ್ಷ್ಮೀನಾರಾಯಣ, ಪದ್ಮಾಸನ ನರಸಿಂಹ, ಗರುಡ, ಅಂಜಲಿ ಮುದ್ರೆ, ಹನುಮಾನ್, ವೈಷ್ಣವ ದೇವತೆ, ಅಂಜಲಿ ಮುದ್ರೆಯಲ್ಲಿ ಗರುಡ, ಹನುಮಾನ್, ಪ್ರಸನ್ನ ನರಸಿಂಹ , ಲಕ್ಷ್ಮೀ ನರಸಿಂಹ, ಗೋಪಿಕಾ ಸ್ತ್ರೀಯರೊಂದಿಗೆ ವೇಣುಗೋಪಾಲ, ಕೃಷ್ಣ ಮತ್ತು ಅರ್ಜುನ, ವಿಷ್ಣು, ರಂಗನಾಥ ಶಿಲ್ಪಗಳಿರುವುದನ್ನು ಗುರುತಿಸಲಾಗಿದೆ. ಇನ್ನೂ ನಾಲ್ಕನೇ ಅಂಕಣದಲ್ಲಿ ಇಂದ್ರ, ರಾಜಸತಿ, ಯೋಧ, ವೀರಗಲ್ಲು, ವೀರಸ್ಮಾರಕ, ಮಾಸ್ತಿ ಕಲ್ಲು, ವೀರಗಲ್ಲು, ಕುಬೇರ, ಆರಾಧಕ, ನಾಗ, ನಾಗಿಣಿ ಮುಂತಾದ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ಅವುಗಳ ಸವಿಸ್ತಾರವಾದ ಶಿಲ್ಪಗಳ ವಿಮರ್ಶೆಯೊಂದಿಗೆ ಅಧ್ಯಾಯವನ್ನು ಪೂರ್ಣಗೊಳಿಸಲಾಗಿರುತ್ತದೆ.

ಅಧ್ಯಾಯ ನಾಲ್ಕರಲ್ಲಿ ಲೋಹ ಮಾಧ್ಯಮದಲ್ಲಿನ ಶಿಲ್ಪಗಳ ಕುರಿತು ಚರ್ಚಿಸಲಾಗಿದ್ದು, ಮುಖ್ಯವಾಗಿ ಮೂರನೇ ಅಂಕಣದಲ್ಲಿಯೇ ಅತಿ ಹೆಚ್ಚು ಲೋಹ ಮಾಧ್ಯಮದ ಶಿಲ್ಪಗಳಿರುವುದನ್ನು ಗುರುತಿಸಲಾಗಿದೆ. ಅವುಗಳೆಂದರೆ ಸೇವಕಿಯರು, ಗಣೇಶ (ಸೊಂಡಿಲು), ಲಿಂಗ, ಕುದುರೆ, ಬಿಂದಿಗೆಗಳು, ದೀಪ ಹಿಡಿದ ಲಕ್ಷ್ಮೀ, ನಾಗರ, ನಾಗರಾಜ ಅಷ್ಟೇ ಅಲ್ಲದೇ ನಾಣ್ಯಗಳು, ಕತ್ತಿಗಳು, ಚಾಕು, ಚಂಬುಗಳು ಮುಂತಾದ ವಸ್ತುಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ಕುರಿತು ಸಿಕ್ಕಷ್ಟು ಮಾಹಿತಿಯನ್ನು ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಕಮಲಾಪುರದ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿನ ಸಂಕೀರ್ಣ ಮಾಧ್ಯಮದ ಶಿಲ್ಪಗಳ ಕುರಿತು ಚರ್ಚಿಸಲಾಗಿದೆ. ಶಿಲೆ, ಲೋಹ ಶಿಲ್ಪಗಳನ್ನು ಹೊರತು ಪಡಿಸಿ ಇಲ್ಲಿ ಸಿಗುವ ಶಿಲ್ಪಗಳನ್ನು ಇಲ್ಲಿ ಸಂಕೀರ್ಣ ಮಾಧ್ಯಮವಾಗಿ ಬಳಸಿಕೊಳ್ಳಲಾಗಿದ್ದು, ಅವುಗಳಲ್ಲಿ ಬಹುಮುಖ್ಯವಾಗಿ ಮಡಕೆಗಳು, ತಾಮ್ರ ಶಾಸನ, ಹಸ್ತಪ್ರತಿ ಲಭ್ಯವಾಗಿದ್ದು ಅವುಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದ ಸೌಲಭ್ಯ ಮತ್ತು ಸಮಸ್ಯೆಗಳು ಕುರಿತಾಗಿದ್ದು, ಬಹು ಮುಖ್ಯವಾಗಿ ವೀಡಿಯೋ ಮತ್ತು ಛಾಯಚಿತ್ರಗಳು, ಟಚ್ ಸ್ಕ್ರೀನ್ ವ್ಯವಸ್ಥೆ, ವಾಹನಗಳ ನಿಲುಗಡೆ, ಟಿಕೆಟ್ ಕೊಡುವ ಸ್ಥಳ, ಒಳಗಡೆ ಗ್ಯಾಲರಿ, ಕೊಠಡಿಯೊಳಗೆ

ಕುಳಿತುಕೊಳ್ಳಲು ಖುರ್ಚಿಗಳ ವ್ಯವಸ್ಥೆ, ಕೊಠಡಿಯೊಳಗೆ ಶಿಲ್ಪಗಳಿಗೆ ಉತ್ತಮ ಬೆಳಕಿನ ವ್ಯವಸ್ಥೆ, ಹಂಪೆಯ ಕಣಿವೆಯ ನಮೂನೆ, ಪ್ರವಾಸಿಗರಿಗೆ ವಿಜಯನಗರದ ಉಚಿತ ಕೈಪಿಡಿ ವಿತರಣೆ, ವಿಶಾಲವಾದ ಆವರಣ ಇವುಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಫಲಿತಗಳು

೧). ವಿಜಯನಗರದ ಗತವೈಭವದ ಐತಿಹಾಸಿಕತೆಯ ಹಿನ್ನಲೆಯನ್ನು ಇಲ್ಲಿಟ್ಟಿರುವ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

೨). ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯವು ಸರ್ಕಾರದ ಒಂದು ಅಂಗಸಂಸ್ಥೆಯಾಗಿರುವುದರಿಂದ ಅದರ ವ್ಯಾಪ್ತಿಯಲ್ಲಿ ಕಲೆ ಭದ್ರವಾಗಿ ಉಳಿದುಕೊಂಡಿರುವುದನ್ನು ಕಂಡುಕೊಳ್ಳಲಾಯಿತು.

೩). ಇಲ್ಲಿ ಒಟ್ಟು ನಾಲ್ಕು ಅಂಕಣಗಳನ್ನು ರಚನೆ ಮಾಡಲಾಗಿದ್ದು, ಒಂದನೆ ಅಂಕಣದಲ್ಲಿ ಶೈವಕ್ಕೆ ಸಂಬಂಧಿಸಿದ ಶಿಲ್ಪಗಳು, ಎರಡನೆ ಅಂಕಣದಲ್ಲಿ ವೈಷ್ಣವಕ್ಕೆ ಸಂಬಂಧಿಸಿದ ಶಿಲ್ಪಗಳು, ಮೂರನೆ ಅಂಕಣದಲ್ಲಿ ಕೆಲವು ಶಿಲೆಯ ಶಿಲ್ಪಗಳ ಜೊತೆ ಭರ್ಚಿ, ಖಡ್ಗ, ಬಿಂದಿಗೆ, ತಾಮ್ರ ಶಾಸನ, ಹಸ್ತಪ್ರತಿ ಮುಂತಾದವುಗಳು, ಇನ್ನೂ ನಾಲ್ಕನೆ ಅಂಕಣದಲ್ಲಿ ಶಿಲೆ ಮತ್ತು ಲೋಹಮಾಧ್ಯಮದ ಶಿಲ್ಪಗಳಿರುವುದನ್ನು ಕಂಡುಕೊಳ್ಳಲಾಯಿತು.

೪). ಈ ವಸ್ತು ಸಂಗ್ರಹಾಲಯವು ಹಂಪಿ ಪರಿಸರದಲ್ಲಿರುವುದರಿಂದ ಇಲ್ಲಿನ ಶಿಲ್ಪಗಳಿಗೆ ಎಲ್ಲಿಲ್ಲದ ಬೇಡಿಕೆ. ಯಾವಾಗಲೂ ಜನಸಂದಣಿಯಿಂದ ಕೂಡಿದ ವಸ್ತು ಸಂಗ್ರಹಾಲಯವು ಎಲ್ಲಾ ವ್ಯವಸ್ಥೆಯನ್ನು ಹೊಂದಿರುತ್ತದೆ.

೫). ಇಲ್ಲಿರುವ ಶಿಲ್ಪಗಳು ಕಪ್ಪು, ಬಿಳಿ ಮತ್ತು ತೆಳುನೀಲಿ ಬಣ್ಣದ ಶಿಲೆಗಳಿಂದ ರಚಿತವಾಗಿದ್ದು, ಕೆಲವು ಶಿಲ್ಪಗಳನ್ನು ಮೃದು ಶಿಲೆಯಿಂದ ಕೆತ್ತಲ್ಪಟ್ಟರೆ ಇನ್ನೂ ಕೆಲವನ್ನು ಘಟ್ಟಿ ಶಿಲೆಯಿಂದ ಕೆತ್ತಲ್ಪಟ್ಟಿರುವುದನ್ನು ಕಾಣಬಹುದು.

೬). ಇಲ್ಲಿನ ಕೆಲವು ಶಿಲ್ಪಗಳಿಗೆ ರುಂಡಗಳಿಲ್ಲ, ಕೆಲವು ಶಿಲ್ಪಗಳಿಗೆ ಕೈಕಾಲುಗಳಿಲ್ಲ ಮತ್ತೆ ಕೆಲವು ಶಿಲ್ಪಗಳು ನಾಶವಾಗುವ ಹಂತಗಳಲ್ಲಿವೆಯಾದರೂ ಅವುಗಳನ್ನು ಭದ್ರವಾಗಿ ಅಂಟಿಸಿ ಇಲ್ಲಿನ ಅಧಿಕಾರಿಗಳು ಸಂರಕ್ಷಣೆ ಮಾಡಿದ್ದಾರೆ.

೭). ಇನ್ನೂ ಅನೇಕ ಶಿಲ್ಪಗಳನ್ನು ಗುರುತಿಸಬೇಕಿದೆ. ಮುಖ್ಯವಾದ ಶಿಲ್ಪಗಳನ್ನು ಗುರುತಿಸಿರುವ ಅಧಿಕಾರಿಗಳು ಹೊರ ಆವರಣದಲ್ಲಿರುವ ಶಿಲ್ಪಗಳಿಗೂ ಹೆಸರು, ಕಾಲ, ಯಾವ ಶಿಲೆ, ಯಾರ

ಕಾಲದ್ದು ಎಂಬುದನ್ನು ತಿಳಿಸಬೇಕಾಗಿದೆ. ಪ್ರತಿ ನಿತ್ಯ ನೂರಾರು ವಿದ್ಯಾರ್ಥಿಗಳ ನೋಡಲು ಬರುವ ಕಾರಣ ಅದರ ವಾಸ್ತವತೆ ಅರಿವಾಗುವ ದೃಷ್ಟಿಯಲ್ಲಿ ಈ ಕಾರ್ಯ ಬೇಗ ಆಗಲಿ ಎಂಬುದು ಶೋಧಕರ ಆಶಯ.

ಅನುಬಂಧಗಳು

೧–ಸಂಕ್ಷೇಪಗಳು

೨– ಗ್ರಂಥಋಣ

೩– ಅಂಕಣಗಳಲ್ಲಿರುವ ಶಿಲ್ಪಗಳ ವಿವರ

ಸಂಕ್ಷೇಪಗಳು:

ಅನು – ಅನುವಾದಕರು

ಕ.ವಿ.ವಿ – ಕನ್ನಡ ವಿಶ್ವ ವಿದ್ಯಾಲಯ

ಪ್ರ – ಪ್ರಸಾರಾಂಗ

ಮೈ.ವಿ.ವಿ – ಮೈಸೂರು ವಿಶ್ವ ವಿದ್ಯಾಲಯ

ಪ್ರಾ.ವ.ಸ – ಪ್ರಾಚ್ಯವಸ್ತು ಸಂಗ್ರಹಾಲಯ

ಪು ವಿ – ಪುರಾತತ್ವ ವಿಭಾಗ

ಶೈ.ಶಿ – ಶೈವ ಶಿಲ್ಪಗಳು

ವೈ ಶಿ – ವೈಷ್ಣವ ಶಿಲ್ಪಗಳು

ಕೃ ದೇ ರಾ – ಕೃಷ್ಣದೇವರಾಯ

ಶಿ.ಶಿ – ಶಿಲಾ ಶಿಲ್ಪಕಲೆ

ಸಂ – ಸಂಪಾದಕರು

ವಿ.ಅ – ವಿಜಯನಗರದ ಅರಸರು

ಮ.ಪ್ರ – ಮಹಾಪ್ರಬಂಧ

ಬೆಂ.ವಿ.ವಿ – ಬೆಂಗಳೂರು ವಿಶ್ವವಿದ್ಯಾಲಯ

ಕ.ರಾ.ಪ್ರಾ.ವ.ಸಂ – ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯ

ಕೇ.ಪು.ಪ್ರಾ.ಸಂ – ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯ

ಸಂ – ಸಂಪಾದಕರು

ಪ್ರ.ಸಂ – ಪ್ರಧಾನ ಸಂಪಾದಕ

ಲೇ – ಲೇಖಕ

ಅ.ಪ್ರ – ಅಪ್ರಕಟಿತ

ಗೌ.ಸಂ – ಗೌರವ ಸಂಪಾದಕ

ಅ.ಗ್ರ – ಅಭಿನಂದನಾ ಗ್ರಂಥ

ಗ್ರಂಥಋಣ:

೧. ಇತಿಹಾಸ ದರ್ಶನ (ಸಂಪುಟ –೧೮) – ಡಾ. ಜಿ. ವಿ. ಕಲ್ಲಾಪುರ
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
೨೦೦೩

೨. ಇತಿಹಾಸ ದರ್ಶನ ಸಂಪುಟ –೨೪ – ಡಾ. ಜ್ಯೋತ್ಸ್ನಾ ಕಾಮತ್
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
೨೦೦೯

೩. ಇತಿಹಾಸ ದರ್ಶನ(ಸಂ–೧೯) – (ಸಂ)ಡಾ.ಎಂ.ಜಿ.ನಾಗರಾಜ್
ಕರ್ನಾಟಕ ಇತಿಹಾಸ ಅಕಾಡೆಮಿ
ಬೆಂಗಳೂರು
೨೦೦೪

೪. ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆ – ಎ.ವಿ. ಪಾಟೀಲ
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೮೦

೫.ಎಂ. ರಾಮನರಸಯ್ಯ – ರಾಮದಾಸ ಅಡ್ಡಂತಾಯ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೨೦೦೦

೬. ಐಹೊಳೆ ಶಿಲ್ಪದರ್ಪಣ – ವಿರೂಪಾಕ್ಷ ಬಡಿಗೇರ
ಕಾಳಿಕಾ ಪ್ರಕಾಶನ
೧೯೮೪

೭.ಕನ್ನಡ ವಿವಿ ಶಾಸನ (ಸಂ.೧) ಬಳ್ಳಾರಿ ಜಿಲ್ಲೆ – ದೇವರ ಕೊಂಡಾರೆಡ್ಡಿ(ಸಂ)
ಪ್ರಸಾರಾಂಗ,
ಕನ್ನಡ ವಿವಿ, ಹಂಪಿ
೧೯೯೮

೮.ಕನ್ನಡ ವಿವಿ ಶಾಸನ (ಸಂ.೨) ಕೊಪ್ಪಳ ಜಿಲ್ಲೆ – ದೇವರ ಕೊಂಡಾರೆಡ್ಡಿ(ಸಂ)
ಪ್ರಸಾರಾಂಗ,
ಕನ್ನಡ ವಿವಿ, ಹಂಪಿ

೧೯೯೯

೯.ಕನ್ನಡ ವಿವಿ ಶಾಸನ ಸಂ.೩ ಹಂಪಿ ಶಾಸನಗಳು – ದೇವರ ಕೊಂಡಾರೆಡ್ಡಿ(ಸಂ)

ಪ್ರಸಾರಾಂಗ,

ಕನ್ನಡ ವಿವಿ, ಹಂಪಿ

೨೦೦೦

೧೦. ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ ಹಂಪಿ-೩ – ದೇವರಕೊಂಡಾರೆಡ್ಡಿ (ಸಂ)

ಪ್ರಸಾರಾಂಗ, ಕವಿವಿ. ಹಂಪಿ

೧೯೯೮

೧೧. ಕರ್ನಾಟಕ ಸಂಸ್ಕೃತಿಯ ಸಂಶೋಧನೆ – ಕಪಟರಾಳ ಕೃಷ್ಣರಾವ್

ಮೈಸೂರು

೧೯೭೦

೧೨. ವಿಜಯನಗರದ ಗಾರೆ ಶಿಲ್ಪಗಳು – ಮಹದೇವ ಸಿ

ಪ್ರಸಾರಾಂಗ,

ಕವಿವಿ.ಹಂಪಿ

೧೩. ಕನ್ನಡ ವಿವಿ ಶಾಸನ (ಸಂ.೧) ಬಳ್ಳಾರಿ ಜಿಲ್ಲೆ – ದೇವರ ಕೊಂಡಾರೆಡ್ಡಿ(ಸಂ)

ಪ್ರಸಾರಾಂಗ,

ಕನ್ನಡ ವಿವಿ, ಹಂಪಿ

೧೯೯೮

೧೪. ಕನ್ನಡ ವಿವಿ ಶಾಸನ (ಸಂ.೨) ಕೊಪ್ಪಳ ಜಿಲ್ಲೆ – ದೇವರ ಕೊಂಡಾರೆಡ್ಡಿ(ಸಂ)

ಪ್ರಸಾರಾಂಗ,

ಕನ್ನಡ ವಿವಿ, ಹಂಪಿ

೧೯೯೯

೧೫. ಕನ್ನಡ ವಿವಿ ಶಾಸನ ಸಂ.೩ ಹಂಪಿ ಶಾಸನಗಳು – ದೇವರ ಕೊಂಡಾರೆಡ್ಡಿ(ಸಂ)

ಪ್ರಸಾರಾಂಗ,

ಕನ್ನಡ ವಿವಿ, ಹಂಪಿ

೨೦೦೦

೧೬.ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ ಹಂಪಿ-೩ – ದೇವರಕೊಂಡಾರೆಡ್ಡಿ (ಸಂ)
ಪ್ರಸಾರಾಂಗ, ಕವಿವಿ. ಹಂಪಿ
೧೯೯೮

೧೭.ಕರ್ನಾಟಕ ಸಂಸ್ಕೃತಿಯ ಸಂಶೋಧನೆ – ಕಪಟರಾಳ ಕೃಷ್ಣರಾವ್
ಪ್ರಸಾರಾಂಗ
ಮೈಸೂರು ವಿ.ವಿ ಮೈಸೂರು
೧೯೭೦
೨೦೦೦

೧೮.ಕರ್ನಾಟಕ ಶಿಲ್ಪಗಳಲ್ಲಿ – ಪಾಟೀಲ್ ಚನ್ನಬಸಪ್ಪ. ಎಸ್.
ಪುರತತ್ವ ಪ್ರಾಚ್ಯ ವಸ್ತು ಸಂಗ್ರಹಾಲಯ
ಮೈಸೂರು,
೧೯೮೪

೧೯. ಕನ್ನಡ ನಾಡಿನ ಧಾರ್ಮಿಕ ಪರಂಪರೆ – ಪ್ರೊ. ಎಸ್.ಕೆ. ರಾಮಚಂದ್ರರಾವ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು
೧೯೮೩

೨೦. ಕರ್ನಾಟಕ ಚರಿತ್ರೆ ಸಂಪುಟ– ೬ – ಸಂ. ಡಾ. ಸೆಬಾಸ್ಟಿಯನ್ ಜೋಸೆಫ್
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೧೯೯೭

೨೧. ಕರ್ನಾಟಕದ ಕಲೆಗಳು ಭಾಗ – ೧ – ಎಸ್. ಕೆ. ರಾಮಚಂದ್ರರಾವ್
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
೧೯೮೧

೨೨. ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ – ಡಾ. ಶಶಿಕಲಾ ಹೂಗಾರ್
ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫

೨೩. ಕರ್ನಾಟಕ ಭಿತ್ತಿಚಿತ್ರ ಪರಂಪರೆ – ಡಾ. ಅ. ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು,
೨೦೦೨

೨೪. ಕರ್ನಾಟಕದ ಕರಕುಶಲ ಕಲೆಗಳು – ಬಿ. ಎಂ. ಚಂದ್ರಶೇಖರಯ್ಯ
ಐ.ಬಿ.ಹೆಚ್. ಪ್ರಕಾಶನ,
ಗಾಂಧೀನಗರ,
ಬೆಂಗಳೂರು
೧೯೭೩

೨೫. ಕರ್ನಾಟಕದ ಕಲೆಗಳು (ಭಾಗ-೧) – ಎಸ್. ಕೆ. ರಾಮಚಂದ್ರರಾವ್
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೮೧

೨೬. ಕರ್ನಾಟಕದ ಕಲೆಗಳು(ಭಾಗ-೩, ಕರಕುಶಲಕಲೆಗಳು) – ಬೆನಕನಹಳ್ಳಿ ಗಿ. ನಾಯಕ
ಕನ್ನಡ ಸಾಹಿತ್ಯ ಪರಿಷತ್
ಬೆಂಗಳೂರು
೧೯೮೬

೨೭. ಕರ್ನಾಟಕದ ಬಿದ್ರಿ ಕಲೆ – ರೆಹಮಾನ್ ಪಟೇಲ್
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ
೨೦೦೯

೨೮.ಕರಕುಶಲ ಕಲೆಗಳು ವಿಶ್ವಕೋಶ-೨ – ಡಾ. ಕರೀಗೌಡ ಬೀಚನಹಳ್ಳಿ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೦

೨೯.ಕರಾವಳಿ ಕರ್ನಾಟಕದ ಕ್ರೈಸ್ಥ ಚಿತ್ರಕಲೆ – ಡಿ.ಆರ್.ಸುರೇಂದ್ರನಾಥ
ಎಂ.ಫಿಲ್ ಸಂಪ್ರಬಂಧ
ಕನ್ನಡ ವಿಶ್ವವಿದ್ಯಾಲಯ.ಹಂಪಿ
೨೦೧೨

೩೦. ಕಲಾಪ್ರಪಂಚ – ಡಾ. ಶಿವರಾಮ
ಕಾರಾಂತ
ವ್ಯಾಸಂಗ ವಿಸ್ತರಣ ಪ್ರಕಟಣೆ
ಧಾರವಾಡ
೧೯೭೮

೩೧. ಕಲಾಕೋಶ – ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೧೯೯೪

೩೨. ಕಲಾತತ್ವ – (ಮೂಲ) ಅಬರಕ್ರಾಂಬಿ
ಸೈಯಾದ್ರಿ ಪ್ರಕಾಶನ, (ಅನು) ಸಿ.ಪಿ.ಕೆ.
ಶ್ರೀಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಮೈಸೂರು
೧೯೭೬

೩೩. ಕಲೆಯ ದರ್ಶನ(ತೃತೀಯ ಮುದ್ರಣ) – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ
ಬಳೇಪೇಟ ಚೌಕ
ಬೆಂಗಳೂರು

೩೪. ಕಲೆಯ ನೆಲೆ – ವಿ. ಕೃ. ಗೋಕಾಕ್
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾಲಯ,
ಮೈಸೂರು,
೧೯೭೮

೩೫. ಕಲೆಗಳು ಮತ್ತು ಮಾನವ – (ಮೂಲ) ಇರ್ವಿನ್ ಎಡ್ವನ್
ಕಾವ್ಯಾಲಯ ಪ್ರಕಾಶನ (ಅನು) ಎನ್. ಬಾಲಸುಬ್ರಹ್ಮಣ್ಯ
ಮೈಸೂರು
೧೯೪೬

೩೬. ಕಲೆ ಮತ್ತು ಸಾಮಾಜಿಕ ಜೀವನ – (ಮೂಲ) ಗಿ. ವಿ. ಪ್ಲೆಖನೋವ್
ನವಕರ್ನಾಟಕ ಪಬ್ಲಿಕೇಶನ್ – (ಅನು) ಹೆಚ್.ಕೆ. ರಾಮಚಂದ್ರಮೂರ್ತಿ
ಸುಬೇದಾರ ಛತ್ರಂ
ಬೆಂಗಳೂರು
೧೯೭೯

೩೭. ಕರ್ನಾಟಕ ಕಲಾದರ್ಶನ ಸಂಪುಟ-೧ – (ಸಂ.) ಪ್ರೊ. ಎಂ.ಎಚ್. ಕೃಷ್ಣಯ್ಯ
ನವಕರ್ನಾಟಕ ಪ್ರಕಾಶನ
ಬೆಂಗಳೂರು
೨೦೧೦

೩೮. ಚಿತ್ರಕಲಾ ಪ್ರಪಂಚ – (ಸಂ.) ಅ. ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ, – ಎನ್. ಮರಿಶಾಮಾಚಾರ್

ಬೆಂಗಳೂರು, ೨೦೦೮

೩೯. ತೌಲನಿಕ ಕಾವ್ಯ ಮೀಮಾಂಸೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ
ಡಿ.ವಿ.ಕೆ. ಮಾರ್ಟ್
ಕೃಷ್ಣಮೂರ್ತಿಪುರಂ
ಮೈಸೂರು
೨೦೦೭

೪೦. ದಖನಿ ಚಿತ್ರಕಲೆ – ಎಸ್. ಕೆ. ಅರುಣಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು
೨೦೦೧

೪೧. ದಕ್ಷಿಣ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ – ಗುರುರತ್ನಬಾಯಿ. ಡಿ.
ಯುವವಾಣಿ ಕ್ರಿಯೇಟಿವ್
ಮಾನಸಗಂಗೋತ್ರಿ
ಮೈಸೂರು
೧೯೯೭

೪೨. ದೃಶ್ಯಸಂಚಲನ – ಡಾ. ಎಸ್. ಸಿ. ಪಾಟೀಲ
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ
ಧಾರವಾಡ, ೨೦೧೦

೪೩. ನವಗ್ರಹಗಳು – ಚಿಕ್ಕೇರೂರು ಧಾರೇಂದ್ರಾಚಾರ್ಯ
ಸಾಧನಾ ಪ್ರಕಾಶನ
ಬೆಂಗಳೂರು
೨೦೦೮

೪೪. ನಿಜದ ನೆಲೆ – (ಸಂ.) ಡಾ. ಎಸ್. ಸಿ. ಪಾಟೀಲ
ಡಾ ಬಿ.ಕೆ. ಹಿರೇಮಠರ ಅಭಿನಂದ ಗ್ರಂಥ – ಸತ್ಯಾನಂದ ಪಾತ್ರೋಟ
ಪು. ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ
ಬಸವೇಶ್ವರ ವಿದ್ಯಾವರ್ಧಕ ಸಂಘ
ಬಾಗಲಕೋಟೆ
೨೦೦೩

೪೫. ಪುರಾಣ ಭಾರತ ಕೋಶ – ಯಜ್ಞನಾರಾಯಣ ಉಡುಪ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ ಜೆ.ಸಿ. ರಸ್ತೆ
ಬೆಂಗಳೂರು
೨೦೦೮

೪೬. ಬಹುಮುಖಿ – (ಸಂ) ಜಿ. ಎಸ್. ಭಟ್ಟ
ಎಸ್. ಎಂ. ಜಂಬುಕೇಶ್ವರ ಅಭಿನಂದನ ಗ್ರಂಥ
ಅಭಿನಂದನ ಸಮಿತಿ, ಮೈಸೂರು, ೨೦೦೯

೪೭. ಬಾರಾಮಾಸ – (ಸಂ.) ಶಾಂತರಸ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೯೯೩

೪೮. ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ – ಡಾ. ಟಿ. ಎಸ್. ರಾಜಗೋಪಾಲ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು
೧೯೮೩

೪೯. ಭಾರತೀಯ ಚಿತ್ರಕಲೆ – ಡಾ. ಶಿವರಾಮ ಕಾರಾಂತ
ಪುತ್ತೂರು
೧೯೯೦

೫೦. ಮಹಾಭಾರತ ಕಥಾ ಸಂಗ್ರಹ – ಡಾ. ಹೆಚ್. ರಾಮಚಂದ್ರಸ್ವಾಮಿ
ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು
೨೦೦೩

೫೧. ಮರೆತುಹೊದ ಮಹಾಸಾಮ್ರಾಜ್ಯ ವಿಜಯನಗರ – (ಮೂಲ) ರಾಬರ್ಟ್ ಸೆವಿಲ್
(ಅನು) ಸದಾನಂದ ಕನವಳ್ಳಿ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
೨೦೦೬

೫೨. ಮರೆಯಲಾಗದ ಮಹಾಸಾಮ್ರಾಜ್ಯ – (ಮೂಲ) ಸೂರ್ಯನಾರಾಯಣರಾವ್
(ಅನು) ಬಾಲಸುಬ್ರಮಣ್ಯ ಕನ್ನಡ
ಪ್ರಸರಾಂಗ
ವಿಶ್ವವಿದ್ಯಾಲಯ,ಹಂಪಿ,
೨೦೦೦

೫೩. ಡಿ.ವಿ.ಜಿ.ಯವರು – ಶ್ರೀಕಾಂತ
ಮಂಕುತಿಮ್ಮ ಕಗ್ಗ ತಾತ್ಪರ್ಯ
ಶ್ರೀ ಎಚ್. ವಿ. ಶ್ರೀಕಂದನ್
ರಾಜಾಜಿನಗರ, ಬೆಂಗಳೂರು. ೨೦೦೯

೫೪. ವರ್ಣಸಂಚಯ – ಡಾ. ಎಸ್.ಸಿ.ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಳಕಲ್
೨೦೦೧

೫೫. ವಿಷ್ಣು ಧರ್ಮೋತ್ತರ ಪುರಾಣ – ಗಾಯಕ್ವಾಡ್
ಒರಿಯಂಟಲ್ ಸಿರೀಸ್,
ಬರೋಡ, ೧೯೫೮

೫೬. ವಿಜಯನಗರ ಶಿಲ್ಪಕಲೆ – ಅ.ಲ. ನರಸಿಂಹನ್
ಸಾಹಿತ್ಯ ಅಕಾಡೆಮಿ,
ಬೆಂಗಳೂರು,
೨೦೦೮

೫೭. ಸೌಂದರ್ಯ ಸಮೀಕ್ಷೆ – ಡಾ. ಜಿ. ಎಸ್. ಶಿವರುದ್ರಪ್ಪ
ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು
೧೯೬೫

೫೮. ಜ್ಞಾನಗಂಗೋತ್ರಿ(ಕಲೆ. ಸಾಹಿತ್ಯ) – ಪ್ರ.ಸಂ. ನಿರಂಜನ
ಕಿರಿಯರ ವಿಶ್ವಕೋಶ ಸಂಪುಟ – ೫
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ
ಬೆಂಗಳೂರು
೧೯೭೩

೦೨. ಇಂಗ್ಲೀಷ್ ಗ್ರಂಥಗಳು

01. **Arts and Crafts of Tamilnadu** - **Nandita Krishna**
Photographed by **V.K. Rajamani**
Ashok Leyland Ltd
In Association with Maphin
Publishing Private Ltd.

02. **Japan** - **Yamaguchi Hikoichi**
National Book Trust, India
2007

03. **Museum of India** - **Jothin Jain**, **Arati Agarawal**
National Handicraft and Handlooms
Museum , Delhi.

04. **Mugal Art** - **Shanti Swarup**
A study in Handicrafts

05. **Mysore Chitramala** - **Prof. S K Ramachandra Rao**

Traditional Paintings

06. **Manjusha Art Centre** - **Dr. Chudamani Nandagopal**
Published by S. Prabhakar
SDM Publication Trust (R)
Ujire.
2000

07. **Rasidency to Rajabhavan** - **M S Surazvi**, **C. M. Gamapathi**
Bangalore Editional Committee
Published by : Govt of Karnataka
Stationery and Publication
1999

08. **The encyclopedia of Visual Art Vol-4** - **M. L. Nigam**
The tradional Jewellary of Karnataka in
Decorative Art of India,
Solar Jung Museum, Hyderabad
1987

09. **Mughal And Deccani** - **Dr.Daljeet**
Prakash Book Depot
M-86, Connaught Circus
New Delhi-01-1999

ಕಮಲಾಪುರ ಕೇಂದ್ರ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಶಿಲ್ಪಗಳ ವಿವರ

ಅಂಕಣ–೧

೧) ವೀರಭದ್ರ

೨) ಭೈರವ

೩) ಪಾರ್ವತಿ

೪) ಭಿಕ್ಷಾಟನಾ ಮೂರ್ತಿ

೫) ಚತುರ್ಭುಜ ಭೈರವ

೬) ಚತುರ್ಭುಜ ಭದ್ರಕಾಳಿ

೭) ದಶಭುಜ ವೀರಭದ್ರ

೮) ಮಹಿಷಾಸುರ ಮರ್ಧಿನಿ

೯) ವಳ್ಳಿ ಮತ್ತು ದೇವಸೇನೆಯರೊಂದಿಗೆ ಕಾರ್ತಿಕೇಯ

೧೦) ಭಕ್ತ ಮೂರ್ತಿ

೧೧) ನಂದಿ

೧೨) ಶಿವಲಿಂಗ

೧೩) ದುರ್ಗಾ

೧೪) ಉಮಾಮಹೇಶ್ವರ

೧೫) ಚಂದ್ರಮೌಳಿ ಶಿವ

೧೬) ವೀರಭದ್ರ

೧೭) ಆಸೀನ ಕಾಳಿ

೧೮) ಚತುರ್ಭುಜ ಭೈರವ

೧೯) ಆತ್ಮಲಿಂಗದೊಂದಿಗೆ ಶಿವ

೨೦) ಆಸೀನ ಶೈವ ದೇವತೆ

೨೧) ನಾಗಲಿಂಗ

೨೨) ಕೃಷ್ಣದೇವರಾಯ ಮತ್ತು ತಿರುಮಲದೇವಿ

೨೩) ಹೆಬ್ಬಾಗಿಲು

೨೪) ನಂದಿ

೨೫) ಲಿಂಗ

೨೬) ಮಹಿಷಾಸುರ ಮರ್ಧಿನಿ

೨೭) ವಿರೂಪಾಕ್ಷ(ರುಂಡ)

೨೮) ಮಹಿಷಾಸುರ ಮರ್ದಿನಿ

೨೯) ಶಕ್ತಿ ಗಣೇಶ

ಅಂಕಣ–೨

೩೦) ವಿಷ್ಣು

೩೧) ಗರುಡ

೩೨) ನಾಗ ಹಿಡಿದ ಗರುಡ

೩೩) ಹನುಮಾನ್

೩೪) ಅಶೋಕ ವನದಲ್ಲಿ ಸೀತೆ

೩೫) ವೇಣುಗೋಪಾಲ

೩೬) ವರಾಹ ಅವತಾರ

೩೭) ಲಕ್ಷ್ಮಿ

೩೮) ವಿಷ್ಣು

೩೯) ರಾಮ(ಮುಖ)

೪೦) ವಿಷ್ಣು

೪೧) ಲಕ್ಷ್ಮಿ ನರಸಿಂಹ

೪೨) ವೈಷ್ಣವ ದೇವತೆ

೪೩) ಲಕ್ಷ್ಮಣ

೪೪) ರಾಜಮೂರ್ತಿ(ಶಿರ)

೪೫) ವೇಣುಗೋಪಾಲ

೪೬) ಆಳ್ವಾರ್

೪೭) ಮತ್ಸ್ಯ ಮತ್ತು ಕಲ್ಕಿ ಅವತಾರಗಳು

೪೮) ವಿಷ್ಣು

೪೯) ವಿಷ್ಣು-ಶ್ರೀನಿವಾಸ

೫೦) ರಾಮ, ಲಕ್ಷ್ಮಣ ಮತ್ತು ಸೀತೆ

೫೧) ಲಕ್ಷ್ಮೀನಾರಾಯಣ

೫೨) ಪದ್ಮಾಸನ ನರಸಿಂಹ

೫೩) ಗರುಡ ಅಂಜಲಿ ಮುದ್ರೆ

೫೪) ಹನುಮಾನ್

೫೫) ವೈಷ್ಣವ ದೇವತೆ

೫೬) ಅಂಜಲಿ ಮುದ್ರೆಯಲ್ಲಿ ಗರಡು

೫೭) ಹನುಮಾನ್

೫೮) ಪ್ರಸನ್ನ ನರಸಿಂಹ

೫೯) ಲಕ್ಷ್ಮೀ ನರಸಿಂಹ

೬೦) ಗೋಪಿಕಾ ಸ್ತ್ರೀಯರೊಂದಿಗೆ ವೇಣುಗೋಪಾಲ

೬೧) ಕೃಷ್ಣ ಮತ್ತು ಅರ್ಜುನ

೬೨) ವಿಷ್ಣು ರಂಗನಾಥ

ಕಂಚಿನ ಶಿಲ್ಪಗಳು :

೬೩) ಸೇವಕಿಯರು

೬೪) ಗಣೇಶ (ಸೊಂಡಿಲು)

೬೫) ಲಿಂಗ

೬೬) ಕುದುರೆ

೬೭) ಬಿಂದಿಗೆಗಳು

೬೮) ದೀಪ

೬೯) ನಾಗರ

೭೦) ನಾಗರಾಜ

ಕಂಚಿನ ಶಿಲ್ಪಗಳು ಮತ್ತು ವಸ್ತುಗಳು

೧) ನಾಗನೊಂದಿಗೆ ನಂದಿ

೨) ದೀಪ ಲಕ್ಷ್ಮಿ

೩) ಪೀಟದೊಂದಿಗೆ ಲಿಂಗ

೪) ದೇವಸ್ತಂಭದ ಅವಶೇಷ

೫) ಚತುರ್ಭುಜ ವೀರಭದ್ರ

೬) ದೂಪಾರತಿ

೭) ನಿಲಾಂಜನದ ಭಾಗ

೮) ನಂದಿ

೯) ಹಿತ್ತಾಳೆ ಬಟ್ಟಲು

೧೦) ರಜ್ಜುಕ ಅಲಂಕೃತ ಬಟ್ಟಲು

ಅಂಕಣ – ೪

೧) ಇಂದ್ರ

೨) ರಾಜಸತಿ

೩) ಯೋಧ

೪) ವೀರಗಲ್ಲು

೫) ವೀರಸ್ಮಾರಕ

೬) ಮಾಸ್ತಿ ಕಲ್ಲು

೭) ವೀರಗಲ್ಲು

೮) ಕುಬೇರ

೯) ಆರಾಧಕ

೧೦) ನಾಗ

೧೧) ನಾಗಿಣಿ

೧೨) ನಾಗಿಣಿ

